ಶಾಶ್ವತ ಅರ್ಥಶಾಸ್ತ್ರ

ಡಾ|| ಜೆ. ಸಿ. ಕುಮಾರಪ್ಪ

ಶಾಶ್ವತ ಅರ್ಥಶಾಸ್ತ್ರ

ಡಾ॥ ಜೆ. ಸಿ. ಕುಮಾರಪ್ಪ

ಜನಪದ ಸೇವಾ ಟ್ರಸ್ಟ್ ಪ್ರಕಾಶನ,
ಮೇಲುಕೋಟೆ–೫೭೧ ೪೩೧

Shashvata Arthashastra – A Kannada translation of Dr. J. C. Kumarappa's Economy Of Permanance By Siddavanahlli Krishna Sharma with a short biography of Dr. Kumarappa By Sri K. S. Narayanaswamy.

Pages VI + 163; Year Of Publication : First Edition December 1991.

Second Edition 1997

Price Rs. 35/=

ಪ್ರಕಟಣಾ ವರ್ಷ : ಮೊದಲನೇ ಆವೃತ್ತಿ ಡಿಸೆಂಬರ್ ೧೯೯೧

ಎರಡನೇ ಆವೃತ್ತಿ : ಅಕ್ಟೋಬರ್ ೧೯೯೭

ಬೆಲೆ : 35/=

ಪ್ರಕಾಶಕರು : ಜಪನದ ಪ್ರಕಾಶನ,

ಜನಪದ ಸೇವಾ ಟ್ರಸ್ಟ್, ಮೇಲುಕೋಟೆ–೫೭೧ ೪೩೧

ಮುದ್ರಕರು : ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ, ಮೇಲುಕೋಟೆ.

ಪರಿವಿಡಿ

I.	ಕುಮಾರಪ್ಪನವರ ಜೀವನ ಚರಿತ್ರೆ	೧
II.	ಮಹಾತ್ಮಾಗಾಂಧೀಜಿಯವರ ಮುನ್ನುಡಿ	೨೩
III.	ಮೊದಲ ಮಾತು	೨೪
IV.	ಪ್ರಾಸ್ತಾವಿಕ	೨೬
೧.	ಪ್ರಕೃತಿ	೨೭
೨.	ಕೆಲಸ–ಕೂಲಿ	೨೮
೩.	ಪ್ರಕೃತಿಯ ವಿವಿಧ ಆರ್ಥಿಕವಿಧಾನಗಳು	೩೦
೪.	ಮನುಷ್ಯ–ವ್ಯಕ್ತಿ	೩೨
೫.	ಇಚ್ಛಾಬಲದ ಉಪಯೋಗ–ದುರುಪಯೋಗ	೩೪
೬.	ಮಾನವ ವಿಕಾಸದ ಹಂತಗಳು	೩೮
೭.	ಸಮೂಹ ಅಥವಾ ರಾಷ್ಟ್ರಗಳಲ್ಲಿ ವಿಕಾಸ	೪೩
೮.	ವಿವಿಧ ರೀತಿಯ ಮೌಲ್ಯಗಳು	೪೭
೯.	ಬೆಲೆ ಕಟ್ಟುವಿಕೆ	೫೧
೧೦.	ಜೀವನ ಮತ್ತು ಬದುಕು	೫೮
೧೧.	ಜೀವನದ ಮಟ್ಟಗಳು	೭೧
೧೨.	ಕೆಲಸ	೭೯
೧೩.	ಶ್ರಮವಿಭಾಗ	೮೪

ಭಾಗ ೨

1. ಪ್ರಸ್ತಾವನೆ ೯೬

೧೪. ಯೋಜನೆಯ ಅಗತ್ಯತೆ ಹಾಗೂ ಸ್ವರೂಪ ೯೯

೧೫. ವ್ಯವಸಾಯ ೧೦೪

೧೬. ವಿನಿಮಯ ೧೦೯

೧೭, ಸಹಕಾರ ೧೧೧

೧೮. ಗ್ರಾಮೋದ್ಯೋಗಗಳು ೧೧೭

೧೯. ಪ್ರಜಾತಂತ್ರ ೧೨೫

೨೦. ರಾಷ್ಟ್ರೀಯ ಉದ್ಯೋಗಗಳು ೧೩೨

೨೧. ಆಡಳಿತದ ಕೆಲಸ ೧೩೭

೨೨, ಜೀವನ ಶಿಕ್ಷಣ ೧೪೧

೨೩. ಸಂಘ ಜೀವನ–ಸಹಜೀವನ ೧೫೧

೨೪ ಒಂದು ಯೋಜನೆ ೧೫೯

ವಾಚಕರಲ್ಲಿ.....................

ಡಾ॥ ಜೆ. ಸಿ. ಕುಮಾರಪ್ಪನವರ "ಶಾಶ್ವತ ಅರ್ಥಶಾಸ್ತ್ರ" ವನ್ನು ಪ್ರಕಟಿಸಲು ಸಂತೋಷವೆನಿಸುತ್ತದೆ. ಅಶಾಶ್ವತ ಆರ್ಥಿಕ ಮೌಲ್ಯಗಳು ಹಾಗೂ ಅತಿ ತಾತ್ಕಾಲಿಕ ಆರ್ಥಿಕ ನೀತಿಗಳಿಂದಾಗಿ ನಮ್ಮ ದೇಶದ ಜನಜೀವನದಲ್ಲಿ ತುಮುಲ ಉಂಟಾಗಿರುವ ಇಂದಿನ ಪರಿಸ್ಥಿತಿಯಲ್ಲಿ "ಶಾಶ್ವತ ಅರ್ಥಶಾಸ್ತ್ರ" ಒಂದು ನೆಲೆಯನ್ನು ದೊರಕಿಸಿಕೊಡಲು ಪ್ರಯತ್ನಿಸುತ್ತದೆ. ಬದಲಾವಣೆಯನ್ನು ಕುರಿತು ಎಷ್ಟೇ ಮಾತನಾಡಿದರೂ, ಎಷ್ಟೇ ವಿವಿಧ ಬಗೆಯ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಇವೆಲ್ಲವುಗಳಿಗೆ ಆಧಾರವಾಗಿ ಶಾಶ್ವತವಾಗಿ ನಿಲ್ಲುವ ಕೆಲ ಮೌಲ್ಯಗಳು ಇದ್ದೇ ತೀರಬೇಕಾಗುತ್ತದೆ. ಅದನ್ನು ಮರೆತು ಬೇರೆ ಯಾವುದೇ ಪ್ರಕಾರದ ಆರ್ಥಿಕ ನೀತಿಯನ್ನು ರೂಪಿಸಲು ಪ್ರಯತ್ನಿಸುವುದೆಂದರೆ ಮರಳುಗಾಡಿನಲ್ಲಿ ಮನೆ ಕಟ್ಟಿದಂತೆ. ಕುಮಾರಪ್ಪನವರಿಂದ ಪ್ರತಿಪಾದಿಸಲ್ಪಟ್ಟಿರುವ ಶಾಶ್ವತ ಅರ್ಥಶಾಸ್ತ್ರದ ಸೂತ್ರಗಳು ಪ್ರಕೃತಿ ನಿಯಮಗಳನ್ನು ಆಧರಿಸಿರುವಂಥವು. ಪ್ರಕೃತಿಯೊಂದಿಗೆ ಸಮರಸವಾಗುವ ರೀತಿಯಲ್ಲಿ ಆರ್ಥಿಕ ಚಟುವಟಿಕೆಗಳಿರಬೇಕು ಮತ್ತು ಪ್ರಕೃತಿಯನ್ನು ಪೋಷಿಸುವಂತಿರಬೇಕು ಎಂದು ಇಚ್ಛೆಪಡುತ್ತಾರೆ ಡಾ॥ ಕುಮಾರಪ್ಪ. ಪರಿಸರದ ರಕ್ಷಣೆಯ ಬಗ್ಗೆ ಜನ ಜಾಗೃತಿ ಉಂಟಾಗುತ್ತಿರುವಾಗ, ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ದೇಶದಲ್ಲಿ ಮುಕ್ತದ್ವಾರ ದೊರೆತು ದೇಶೀಯ ಉದ್ಯೋಗಗಳು ನಾಶ ಹೊಂದುವ ಪರಿಸ್ಥಿತಿ ಬಂದಿರುವಾಗ, ಸಹಜಕೃಷಿ ಜನಪ್ರಿಯಗೊಳ್ಳುತ್ತಿರುವಾಗ

"ಶಾಶ್ವತ ಅರ್ಥಶಾಸ್ತ್ರ" ಬಹಳ ಉಪಯುಕ್ತವೂ, ಮಾರ್ಗದರ್ಶಕವೂ ಆಗಿ ಒದಗಿಬರುತ್ತದೆ. ೧೯೪೫ ರಷ್ಟು ಹಿಂದೆಯೇ ಈ ಪುಸ್ತಕ ಪ್ರಕಟವಾಗಿತ್ತು. ಅಂದು ಡಾ॥ ಕುಮಾರಪ್ಪ ಹೇಳಿದ ಮಾತುಗಳು ಇಂದು ಅಂದಿಗಿಂತ ಹೆಚ್ಚಾಗಿ ಅನ್ವಯಿಸುತ್ತವೆಂಬ ಕಾರಣಕ್ಕಾಗಿ ಅವರ "ಅರ್ಥಶಾಸ್ತ್ರ" ನಮಗೆ ಅಗತ್ಯವೆನಿಸುತ್ತದೆ.

ಈ ಪುಸ್ತಕದ ಪ್ರಕಟಣೆಗೆ ಅನುಮತಿ ಕೊಟ್ಟು ಸಹಕಸಿರುವ ಬೆಂಗಳೂರಿನ ಗಾಂಧೀ ಸಾಹಿತ್ಯ ಸಂಘದವರಿಗೂ ಮತ್ತು ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿಯುವರಿಗೂ ನಾವು ಬಹಳ ಆಭಾರಿ ಯಾಗಿದ್ದೇವೆ.

ಡಾ॥ ಕುಮಾರಪ್ಪನವರ ಸಂಕ್ಷಿಪ್ತ ಜೀವನಚರಿತ್ರೆಯನ್ನು ಬರೆದು ಕೊಟ್ಟು ಪುಸ್ತಕದ ಮಹತ್ವವನ್ನು ಹೆಚ್ಚಿಸಿರುವ ಹಾಗೂ ಅನೇಕ ಉಪ ಯುಕ್ತ ಸಲಹೆಗಳನ್ನು ಕೊಟ್ಟಿರುವ ಶ್ರೀ ಕೆ. ಎಸ್. ನಾರಾಯಣಸ್ವಾಮಿ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಡಾ॥ ಕುಮಾರಪ್ಪನವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಈ ಪುಸ್ತಕ ಮೊದಲು ಪ್ರಕಟಗೊಂಡಿತ್ತು. ಈಗ ಅದರ ಎರಡನೇ ಮುದ್ರಣ ಪ್ರಕಟಗೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ.

—ಪ್ರಕಾಶಕರು

ಜೋಸೆಫ್ ಕಾರ್ನಿಲಿಯಸ್ ಕುಮಾರಪ್ಪ:

ಸಂಕ್ಷಿಪ್ತ ಜೀವನ ಚರಿತ್ರೆ

ತಮಿಳುನಾಡಿನ ತಂಜಾವೂರಿನಲ್ಲಿ ೧೮೯೨ ಜನವರಿ ೪ ರಂದು ಡಾ. ಜೆ. ಸಿ. ಕುಮಾರಪ್ಪ ಜನಿಸಿದರು. ತಂದೆ ಎಸ್. ಡಿ. ಕಾರ್ನಿಲಿಯಸ್ ಅಲ್ಲಿನ ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿ ನೌಕರರಾಗಿದ್ದರು. ಸಾಧಾರಣ ಮಧ್ಯ ವರ್ಗದ ಭಾರತೀಯ ಕ್ರಿಶ್ಚಿಯನ್ ಮನೆತನ ಅವರದು. ದೊಡ್ಡ ಸಂಸಾರದಲ್ಲಿ ಕುಮಾರಪ್ಪ ಒಂಭತ್ತನೆಯ ಮಗು. ಮನೆಯಲ್ಲಿ 'ಚೆಲ್ಲದೊರೆ' ಎಂದು ಕರೆಯುತ್ತಿದ್ದರು. ತಾಯಿ ತುಂಬ ವಾತ್ಸಲ್ಯಮಯಿ, ದೈವಭಕ್ತೆ. ಕ್ರೈಸ್ತಧರ್ಮದ ಸೇವಾ ನಿಷ್ಠೆಯಲ್ಲಿ ಆಕೆಗೆ ಅಪಾರ ಶ್ರದ್ಧೆ. ಮಕ್ಕಳನ್ನು ಅದೇ ನೀತಿಮಾರ್ಗದಲ್ಲಿ ಬೆಳೆಸಿದರು. ಮಾತೃವಾತ್ಸಲ್ಯದ ಮೊದಲ ಶಿಕ್ಷಣದಲ್ಲಿ ತಾವು ಕಲಿತ ಮಾನವೀಯತೆಯನ್ನು ಕುಮಾರಪ್ಪ ಕೃತಜ್ಞತೆಯಿಂದ ನೆನೆದಿದ್ದಾರೆ: "ಯಾವ ಧಾರ್ಮಿಕ ಗ್ರಂಥವೂ ಮಾಡಲಾರದಷ್ಟು ಪ್ರಭಾವ ಅವರಿಂದ ನನ್ನ ಮೇಲೆ ಆಯಿತು. ನನ್ನ ಹೃದಯವನ್ನು ಹಸನು ಮಾಡಿದ ತಾಯಿ ಆಕೆ."

ಕ್ರೈಸ್ತಮತ ಸಂಪ್ರದಾಯದಲ್ಲಿ ತನ್ನ ಸಂಪಾದನೆಯ ಹತ್ತನೆ ಒಂದು ಭಾಗವನ್ನು ಪರೋಪಕಾರ ಕಾರ್ಯಕ್ಕೆ ಮೀಸಲಾಗಿಡುವ ಪದ್ಧತಿಗೆ 'ಟೈದ್' ಎಂದು ಹೇಳುತ್ತಾರೆ. ತಾಯಿ ಎಸ್ತರ್ ರಾಜನಾಯಕಮ್ ತನಗಾಗಿ ಆದಷ್ಟು ಕಡಮೆ ವೆಚ್ಚ, ಇತರರಿಗಾಗಿ ಆದಷ್ಟು ಉದಾರ ಸಹಾಯ ಎಂದು ಈ ತತ್ವವನ್ನು ಹಿಗ್ಗಿಸಿ ಮಕ್ಕಳನ್ನು ಕ್ರಿಸ್ತ ಕರುಣೆಯ ವ್ಯಾವಹಾರಿಕ ಅಭ್ಯಾಸಕ್ಕೆ ತೊಡಗಿಸುತ್ತಿದ್ದರು. ಒಂದು ಭಾನುವಾರ ಚರ್ಚಿನ ಪ್ರಾರ್ಥನಾ ಸಭೆಯಲ್ಲಿ ಚೀಣಾ ದೇಶದಲ್ಲಿನ ದೊಡ್ಡ ಕ್ಷಾಮದಿಂದ ನರಳುತ್ತಿದ್ದ ಜನರಿಗೆ ಸಹಾಯ ಮಾಡಿ ಎಂಬ ಬೇಡಿಕೆ ಬಂತು. ಮನೆಗೆ ಬಂದು ಎಸ್ತರ್ ಎಲ್ಲರಿಗೂ ಊಟ ಬಡಿಸಿ ಕೂಡಿಸಿ, "ಚೀಣಾದಲ್ಲಿ ಸೋದರರು ಹಸಿವಿನಿಂದ ಸಾಯುತ್ತಿದ್ದಾರೆ. ನಾವಿಲ್ಲಿ ಬಿರಿಯ ಉಂಡು ಮೋಜು ಮಾಡುತ್ತೇವೆ. ಕರುಣೆಯ ಕರುಳು ಬತ್ತಿ ಹೋಗಿದೆಯೋ? ಕ್ರಿಸ್ತನ ಮಾತು ಮರೆತಿರಾ? ಈ ಚಂದಾಪಟ್ಟಿಗೆ ನೀವು ಕೊಡಿಟ್ಟ ಹಣವನ್ನೆಲ್ಲಾ ಬರೆಯಿರಿ" ಎಂದರು. ಮಕ್ಕಳು ನಾಚಿ ತಮ್ಮೆಲ್ಲ ಪುಡಿಕಾಸುಗಳನ್ನು ಸೇರಿಸಿದ್ದಲ್ಲದೆ ಸ್ವಯಂ ಸೇವಕರಾಗಿ ಮನೆಮನೆಗೆ ಹೋಗಿ ಸಹಾಯ ಧನ ಕೂಡಿಸಿ ಕಳುಹಿಸಿದರು. "ಮಾತೃಪ್ರೇಮದ ಅಧಿಕಾರದಿಂದ ನಮಗೆ ದೊರೆತ ಗೃಹಶಿಕ್ಷಣ ಅತ್ಯಮೌಲ್ಯ" ಎಂದಿದ್ದಾರೆ ಚೆಲ್ಲದೊರೈ.

ತಾಯಿ ಅಧ್ಯಾತ್ಮಿಕತೆಯನ್ನು ಕಲಿಸಿದರೆ ತಂದೆ ದಿನಚರಿಯಲ್ಲಿ ನಿಷ್ಠುರ ನಿಯಮಬದ್ಧ ಶಿಸ್ತನ್ನು ಕಲಿಸಿದರು. ಕರ್ತವ್ಯನಿಷ್ಠ ಪ್ರಾಮಾಣಿಕ ಅಧಿಕಾರಿ ಯಾಗಿದ್ದ ಕಾರ್ನಿಲಿಯಸ್ ಬೆಳಗಿನ ಐದು ಗಂಟೆಗೇ ಮಕ್ಕಳನ್ನೆಲ್ಲ ಎಬ್ಬಿಸಿ ಸ್ವಚ್ಛ ತೆಯೂ ಹೇಗೆ ಅವರ ಜವಾಬ್ದಾರಿ ಎಂದು ಕಲಿಸಿದರು. ಶಾಲಾಶಿಕ್ಷಣವನ್ನು ಹೆಣ್ಣುಮಕ್ಕಳಿಗೂ ಕಡ್ಡಾಯ ಮಾಡಿದರು. "ನಮ್ಮ ಮನೆಯಿಂದ ನಮ್ಮ ಕಲಿಕೆ ನಿಜವಾಗಿ ಪೂರ್ಣವಾಯಿತು" ಎಂದು ಎಲ್ಲ ಸೋದರ ಸೋದರಿಯರೂ ಜ್ಞಾಪಿಸಿ ಕೊಂಡಿದ್ದಾರೆ. ಎಲ್ಲರೂ ಅತ್ಯುನ್ನತ ಪದವಿಗಳನ್ನು ಪಡೆದು, ವಿದೇಶಗಳಲ್ಲಿ ತಜ್ಞತೆಯನ್ನು ಸಂಪಾದಿಸಿ ಸ್ವದೇಶದ ಸೇವೆಗೆ ಮರಳಿದರು. ವೈದ್ಯರಾದರು, ಪ್ರಾಧ್ಯಾಪಕರಾದರು, ಸೇವಾಕ್ಷೇತ್ರಗಳ ವ್ಯವಸ್ಥಾಪಕರಾದರು, ಸಮಾಜದಲ್ಲಿ ಎಲ್ಲರೂ ಗಣ್ಯಸ್ಥಾನ ಗಳಿಸಿದರು. ಎಲ್ಲರಿಗಿಂತ ಹೆಚ್ಚಾಗಿ ರಾಷ್ಟ್ರಸೇವೆಯ ತಪಸ್ವಿ ಎನಿಸಿಕೊಂಡವರು ಜೋಸೆಫ್ ಕುಮಾರಪ್ಪ.

೨

ಕಡಲೂರಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ಓದಿ ಮುಂದೆ ಮದರಾಸಿನ ಡೋವ್‌ಟನ್ ಯುರೋಪಿಯನ್ ಸ್ಕೂಲು ಸೇರಿದರು. ಆ ವೇಳೆಗೆ ತಂದೆಗೆ ಮದ್ರಾಸಿಗೆ ವರ್ಗವಾಗಿತ್ತು. ಮುಂದೆ ವೆಸ್ಲೈನ್ ಮಿಷನ್ ಕಾಲೇಜು ಜೆ. ಸಿ. ಕುಮಾರಪ್ಪನವರ ಸಾಧನಾ ಕ್ಷೇತ್ರವಾಯಿತು. ಅತ್ಯುತ್ತಮ ವಿದ್ಯಾರ್ಥಿ ಎನಿಸಿ ದರು. ಆ ವೇಳೆಗೆ ಅಣ್ಣಂದಿರಿಬ್ಬರೂ ಅಮೆರಿಕೆಯಲ್ಲಿ ಉನ್ನತ ವ್ಯಾಸಂಗದಲ್ಲಿದ್ದರು. ಅವರು ಹಿಂತಿರುಗಿ ಬಂದು ಸಂಪಾದನೆ ಮಾಡಿ ತಾವು ಶಿಕ್ಷಣಕ್ಕಾಗಿ ಪಡೆದ ಹಣ ವನ್ನೆಲ್ಲ ಮತ್ತೆ ಸೋದರ ಸೋದರಿಯರ ಅಭ್ಯುದಯಕ್ಕೆಂದು ತಂದೆಗೆ ಹಿಂತಿರುಗಿಸಿ ದರು. ಚೆಲ್ಲದೊರೆಗೆ ಒಳ್ಳೆಯ ಪಾಠಸಿಕ್ಕಿತು. ಅವರೂ ಅವರ ತಮ್ಮ ಭಾರತನ್ ಕುಮಾರಪ್ಪನವರೂ ಇಂಗ್ಲೆಂಡಿಗೆ ಉನ್ನತ ವ್ಯಾಸಂಗಕ್ಕೆ ಹೋದರು. ೧೯೧೩ ರಲ್ಲಿ ಲಂಡನ್ನಿನ ಅಕೌಂಟೆನ್ಸಿ ಶಿಕ್ಷಣದಲ್ಲಿ ಐದು ವರ್ಷ ವ್ಯಾಸಂಗ ಮಾಡಿ ಪದವಿ ಪಡೆದರು. ಅವರ ವ್ಯಾಸಂಗಕ್ಕೆ ಸಹಾಯ ಮಾಡಿದ್ದ ದೊಡ್ಡ ವ್ಯಾಪಾರೀ ಸಂಸ್ಥೆಯೊಂದು ಲಂಡನ್ನಿನಲ್ಲೆ ದೊಡ್ಡ ಹುದ್ದೆಗೆ ನೇಮಿಸಿತು, ಕುಮಾರಪ್ಪನವ ರಿಗೂ ಇಂಗ್ಲಿಷ್ ಜೀವನಶೈಲಿ ಅಭ್ಯಾಸವಾಗಿ ಅವರಂತೆಯೇ ತಮ್ಮ ದಿನಚರಿ ಗಳನ್ನು ರೂಢಿಸಿಕೊಂಡು ಬಿಟ್ಟಿದ್ದರು. ಭಾರತದ ಶೈಲಿಗಿಂತ ಅದು ಉನ್ನತ ವಾದುದು ಎಂದು ಮಾರುಹೋಗಿದ್ದರು.

ತಾಯಿ ಎಸ್ತರ್‌ಗೆ ಮಗ ಎಲ್ಲಿ ಲಂಡನ್ನಿನಲ್ಲೆ ನೆಲೆಸಿಬಿಡುವನೋ ಎಂಬ ಭಯ. ಆ ಲಂಡನ್ ಕಂಪನಿಯವರಿಗೇ ಬರೆದು ಕುಮಾರಪ್ಪನವರನ್ನು ಹಿಂದಕ್ಕೆ ಕರೆಸಿದರು. ಮುಂಬಯಿಯಲ್ಲಿ ನಿಂತು ಲೆಕ್ಕ ಪರಿಶೋಧಕ ವೃತ್ತಿಯಲ್ಲಿ ನಿರತ

ರಾದರು. ಗಣಿತಶಾಸ್ತ್ರ, ಅರ್ಥಶಾಸ್ತ್ರಎರಡರಲ್ಲೂ ಉನ್ನತ ಪದವಿ ಪಡೆದಿದ್ದರಿಂದ ಡಾವರ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಆದರೆ ಇನ್ನೂ ಹೆಚ್ಚು ವ್ಯಾಸಂಗದ ಹಂಬಲ ಬೆಳೆಯುತ್ತಲೇ ಇತ್ತು.

೧೯೨೭ ರಲ್ಲಿ ಅಣ್ಣ ಜಗದೀಶ್ ಮೋಹನದಾಸ್ ಕುಮಾರಪ್ಪ ಅಮೆರಿಕದ ಕೊಲಂಬಿಯಾ ವಿಶ್ವ ವಿದ್ಯಾನಿಲಯದಲ್ಲಿದ್ದರು. ಇವರು ಕೆಲವು ಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ ಬೊಂಬಾಯಿನ ಪ್ರಸಿದ್ಧ 'ಟಾಟಾ ಸ್ಕೂಲ್ ಆಫ್ ಸೋಷಲ್ ಸೈನ್ಸ್'ನ ನಿರ್ದೇಶಕ ರಾಗಿ ಬಹುಕಾಲ ಸೇವೆ ಸಲ್ಲಿಸಿದರು. ಕಿರು ಸಹೋದರ ಜೆ. ಸಿ. ಕುಮಾರಪ್ಪನವ ರನ್ನೂ ಅಮೆರಿಕಕ್ಕೆ ಕರೆಸಿಕೊಂಡರು. ಅಲ್ಲಿ ಮತ್ತೆ ವ್ಯಾಸಂಗ ಪ್ರಾರಂಭಿಸಿ ಸಿರಾಕ್ಯೂಸ್ ವಿಶ್ವವಿದ್ಯಾನಿಲಯದಲ್ಲಿ ಸಾರ್ವಜನಿಕ ಆಡಳಿತ (ಪಬ್ಲಿಕ್ ಅಡ್ಮಿನಿ ಸ್ಟ್ರೇಷನ್) ದಲ್ಲಿ ಪದವಿ ಪಡೆದರು. ಕೊಲಂಬಿಯಾದ ಡಾ॥ ವಿಲಿಯಂ ಷೆಕ್ ಎಂಬ ವಿದ್ವಾಂಸರಲ್ಲಿ ಸಾರ್ವಜನಿಕ ಹಣಕಾಸು ವಿಷಯ ಅಧ್ಯಯನ ಮಾಡಿದರು. ಸಾಮ್ರಾಜ್ಯಶಾಹಿ ಬ್ರಿಟನ್ನಿನ ಬಂಡವಾಳಶಾಹಿಗಳ ಪರವಾಗಿ ಭಾರತದ ಹಳ್ಳಿಗಳನ್ನು ತೀವ್ರ ಶೋಷಣೆಗೆ ಗುರಿಮಾಡಿ ಹೇಗೆ ಬಡತನವನ್ನೂ ನಿರುದ್ಯೋಗವನ್ನೂ ಬೆಳೆಸಿ ಅಪಾರ ಹಾನಿ ಮಾಡುತ್ತಿದೆ ಎಂಬ ಬಗ್ಗೆ ಆಳವಾಗಿ ಸಂಶೋಧನೆ ನಡೆಸಿದರು. ಪುಸ್ತಕಗಳು, ಲೇಖನಗಳು, ಉಪನ್ಯಾಸಗಳು, ಸರ್ಕಾರದ ಸರ್ವೇಕ್ಷಣ ವರದಿಗಳು ಇವುಗಳನ್ನೆಲ್ಲ ಸ್ವತಂತ್ರ ದೃಷ್ಟಿಯಿಂದ ವಿವೇಚಿಸಿ "ಭಾರತದ ಬಡತನ ಮತ್ತು ಅದರ ಹಣಕಾಸು ವ್ಯವಸ್ಥೆ" (ಪಬ್ಲಿಕ್ ಫೈನಾನ್ಸ್ ಅಂಡ್ ಅವರ್ ಪಾವರ್ಟಿ) ಎಂಬ ಉತ್ಕೃಷ್ಟ ಪ್ರಬಂಧ ಬರೆದರು. ಬೌದ್ಧಿಕ ತೀಕ್ಷ್ಣತೆ, ಸಂಶೋಧಕನ ದಕ್ಷತೆ, ಒಂದು ಪ್ರಚಲಿತ ಸಮಸ್ಯೆ ಕುರಿತು ವಿಶ್ಲೇಷಣೆಗಳಿಗೆ ಕುಮಾರಪ್ಪ ಪ್ರಸಿದ್ಧರಾದರು. ಭಾರತದ ಆರ್ಥಿಕ ದಾಸ್ಯ ಅವರ ಕಣ್ಣಿಗೆ ಕಟ್ಟಿತು. ಆದರೆ ಅದರ ಪ್ರತ್ಯಕ್ಷ ದರ್ಶನವಾಗಿರಲಿಲ್ಲ. ಮುಂದೆ ಈ ಪ್ರಬಂಧ ಗಾಂಧೀಜಿಯ ಗಮನ ಸೆಳೆದು ಪ್ರೊ. ಜೆ. ಸಿ. ಕುಮಾರಪ್ಪನವರ ಬಾಳಬಟ್ಟೆಯೇ ಕ್ರಾಂತಿಕಾರಕವಾಗಿ ಬದಲಾಗುವ ಘಟನೆ ರೋಮಾಂಚಕಾರಿಯಾಗಿ ನಡೆದುಹೋಯಿತು.

೩

೧೯೨೯ ರಲ್ಲಿ ಬೊಂಬಾಯಿಗೆ ಹಿಂತಿರುಗಿದಾಗ ಕುಮಾರಪ್ಪನವರಿಗೆ ಅನೇಕ ಪ್ರತಿಷ್ಠಿತ ಹುದ್ದೆಗಳು ದೊರೆತವು. ಉದ್ಯೋಗಪತಿಗಳಿಗೆ ತಜ್ಞ ಸಲಹೆಗಾರರಾ ದರು.. ಜೀವನವನ್ನು ಮೇಲ್ವರ್ಗದ ಸ್ತರಗಳಲ್ಲಿ ಪ್ರಾರಂಭಿಸಿದರು. ಇಂಗ್ಲಿಷ್ ಸಂಸ್ಕೃತಿಯ ಭಾರತೀಯರಂತೆ ನಡೆದುಕೊಳ್ಳುತ್ತಿದ್ದರು.

ಶಾಶ್ವತ ಅರ್ಥಶಾಸ್ತ್ರ

ಆ ವೇಳೆಗೆ ಮಹಾತ್ಮ ಗಾಂಧಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಮಹಾ ನಾಯಕರು ಬಡ ಭಾರತೀಯರ ಪ್ರತಿನಿಧಿಯಾಗಿ ದೇಶದ ರಾಜಕೀಯ ಆರ್ಥಿಕ ಮತ್ತು ಸಾಂಸ್ಕೃತಿಕ ದಾಸ್ಯವನ್ನು ಬೇರು ಸಹಿತ ತೊಡೆದು ಹಾಕಲು ಹೊಸ ಅಹಿಂಸಾ ಸಂಸ್ಕೃತಿಯ ಅಧ್ವರ್ಯು ಎನಿಸಿದ್ದರು. ಅವರ ಜೀವನ, ಚಿಂತನ, ಅಧ್ಯಯನ, ಪ್ರಥಮ ಗಮನ ಎಲ್ಲವೂ ಗ್ರಾಮಾಭಿಮುಖ. ನಗರಗಳು ಸಾಮ್ರಾಜ್ಯ ಶಾಹಿಯ ದಳ್ಳಾಳಿಗಳಾಗಿ ಬಹುಸಂಖ್ಯಾತರಾದ ಭಾರತೀಯ ಗ್ರಾಮವಾಸಿಗಳನ್ನು ತುಳಿಯುತ್ತಿವೆ ಎಂದು ಗಾಂಧೀಜಿ ರಚನಾತ್ಮಕ ಕ್ರಾಂತಿ ಪಥದೆಡೆಗೆ ಯುವ ಜನರ ಮನಸ್ಸನ್ನು ಪ್ರಬಲವಾಗಿ ಸೆಳೆದಿದ್ದರು. ಪ್ರಚಂಡ ಬಿರುಗಾಳಿಯಂತೆ ವೈಚಾರಿಕ ತರಂಗಗಳೆದ್ದಿದ್ದವು. ಕುಮಾರಪ್ಪ ಸಹಜವಾಗಿಯೇ ಆಕರ್ಷಿತರಾಗಿ ತಮ್ಮ ಪ್ರಸಿದ್ಧ ಪ್ರಬಂಧವನ್ನು ಗಾಂಧೀಜಿಗೆ ತೋರಿಸಬೇಕು ಎಂದು ಹಂಬಲಿಸಿದರು. ಆಗ ಅಹಮದಾಬಾದಿನ ಬಳಿ ಸಬರ್ಮತಿ ಆಶ್ರಮದಲ್ಲಿ ಗಾಂಧೀಜಿ ನೆಲೆಸಿದ್ದರು.

ಒಮ್ಮೆ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಗೆ ಗಾಂಧೀಜಿ ಬೊಂಬಾಯಿಗೆ ಬಂದರು. ಕುಮಾರಪ್ಪ ಕುತೂಹಲದಿಂದ ಅವರನ್ನು ಭೇಟಿಯಾಗ ಬೇಕೆಂದು 'ಮಣಿಭವನ'ಕ್ಕೆ ಹೋದರು. ದೇಶದ ಮಹಾನಾಯಕರೊಡನೆ ಅತ್ಯಂತ ತೀಕ್ಷ್ಣ ಸಮಾಲೋಚನೆಗಳಲ್ಲಿ ಗಾಂಧೀಜಿ ಮಗ್ನರಾಗಿದ್ದರು. ಆಂಗ್ಲ ಶೈಲಿಯಲ್ಲಿದ್ದ ಈ ಆಧುನಿಕ ಯುವಕನಿಗೆ ಅವರನ್ನು ಸುಮ್ಮನೆ ಭೇಟಿಯಾಗುವ ಅವಕಾಶ ದೊರೆಯಲಿಲ್ಲ. ಕಾರ್ಯದರ್ಶಿ ಪ್ಯಾರೆಲಾಲರನ್ನು ಕಂಡು ತಮ್ಮ ಪ್ರಬಂಧ ಕೊಟ್ಟು 'ಇದನ್ನು ಗಾಂಧೀಜಿಗೆ ದಯಮಾಡಿ ತೋರಿಸಿ' ಎಂದು ಕೇಳಿಕೊಂಡರು. ತಮ್ಮ ವಿಳಾಸದ ಕಾರ್ಡನ್ನೂ ಅದರಲ್ಲಿಟ್ಟಿದ್ದರು. ಸಂಗ್ರಾಮದ ತುಮುಲದ ಮಧ್ಯೆ ಅತ್ಯಂತ ದೊಡ್ಡ ಜವಾಬ್ದಾರಿ ಹೊತ್ತ ಮಹಾನಾಯಕನಿಗೆ ಗೊತ್ತಿಲ್ಲದ ಪ್ರೊಫೆಸರನೊಬ್ಬನ ಪ್ರಬಂಧ ಓದಲು ಸಮಯವಾಗಲೀ, ಇಚ್ಛೆಯಾಗಲೀ ಇರ ಲಾರದು ಎಂದುಕೊಂಡು ಸುಮ್ಮನಾದರು.

ಆದರೆ ಆಶ್ಚರ್ಯ ಕಾದಿತ್ತು. ಕುಮಾರಪ್ಪನವರು ಒಬ್ಬ ಆರ್ಥಿಕ ತಜ್ಞ. ಭಾರತೀಯ ಗ್ರಾಮಗಳ ಆರ್ಥಿಕ ದಿವಾಳಿತನವನ್ನು ಇಷ್ಟು ಆಳವಾಗಿ ಅಧ್ಯಯನ ಮಾಡಿ ಬರೆದ ಬರಹ ಗಾಂಧೀಜಿಯ ಮನಸ್ಸನ್ನು ಆಕರ್ಷಿಸಿತ್ತು. ಪ್ಯಾರೆಲಾಲರಿಂದ ಪತ್ರ ಬಂತು. ಕುಮಾರಪ್ಪ ಸಬರ್ಮತಿ ಆಶ್ರಮಕ್ಕೆ ೧೯೨೯ ರ ಮೇ ೯ ರಂದು ಮಧ್ಯಾಹ್ನ ೨-೩೦ ಕ್ಕೆ ಬಂದು ಗಾಂಧೀಜಿಯನ್ನು ಭೇಟಿಯಾಗಲು ತಿಳಿಸಿದ್ದರು. ಇಷ್ಟು ಸರಳವಾಗಿ ಇಷ್ಟು ಚಿಕ್ಕವನಿಗೆ ಗಾಂಧೀಜಿ ತೋರಿದ ಮನ್ನಣೆ ಕಂಡು ಬೆರಗಾದರು.

ಆ ದಿನ ಸಮಯಕ್ಕೆ ಸರಿಯಾಗಿ ಆಶ್ರಮ ತಲುಪಿ ಕುಮಾರಪ್ಪ ಅತಿಥಿ

ಗೃಹದಲ್ಲಿ ತಂಗಿದರು. ಇಂಗ್ಲಿಷ್ ನಡವಳಿಕೆಗಳ ರೀವಿಯ ಈ ಆಧುನಿಕ ಪದವೀಧರನಿಗೆ ಆಶ್ರಮದ ಗುಡಿಸಲುಗಳು ಸಹ್ಯವೆನಿಸಲಿಲ್ಲ. ಅಲ್ಲಿ ಎಲ್ಲವೂ ತೀರ ಸರಳ. ಆದರೆ ತುಂಬ ಸ್ವಚ್ಛ ಪರಿಸರ. ಕುರ್ಚಿ-ಮೇಜುಗಳಿಲ್ಲ. ಸಾದಾ ಒಚ್ಚುಲುಮನೆ, ನೆಲಕ್ಕೆ ಒಂದು ಚಾಪೆ. ಇಲ್ಲಿ ಒಂದು ದಿನವೂ ಇರಲು ಸಾಧ್ಯವಿಲ್ಲ ಎಂದುಕೊಂಡರು. ಕೈಪೆಟ್ಟಿಗೆ ಅಲ್ಲಿಟ್ಟು ಹೊರಗೆ ಬಂದರು. ಭೇಟಿಗೆ ಇನ್ನೂ ಸಮಯವಿತ್ತು. ಆಶ್ರಮದ ಸುತ್ತ ನಡೆದಾಡಿದರು. ಒಂದು ಹೊಸ ಮಂದ ಮಾರುತ ಅವರ ಒಳ ಹೊರಗನ್ನು ತುಂಬಿ ನಿಂತಂತಾಯಿತು, ಮುಂದೆ ಅವರ ಮಾತುಗಳಲ್ಲೇ ಗಾಂಧೀ ದರ್ಶನದ ವಿವರ ಕೇಳಿ:-

"ಆಶ್ರಮದ ಮರದ ಕೆಳಗೆ ಒಂದು ಕಟ್ಟೆ. ಸಗಣಿಯಿಂದ ಸ್ವಚ್ಛವಾಗಿ ಸಾರಿಸಿದ ನೆಲದ ಮೇಲೆ ಮುದಕನೊಬ್ಬ ಕುಳಿತು ಚರಕದಿಂದ ನೂಲುತ್ತಿದ್ದ. ನಾನು ಚರಕವನ್ನೇ ನೋಡಿರಲಿಲ್ಲ. ಕುತೂಹಲವಾಯಿತು. ಎದುರಿಗೆ ನನ್ನ ಊರುಗೋಲಿನ ಮೇಲೆ ಬಗ್ಗಿ ನಿಂತು ನೋಡುತ್ತಿದ್ದೆ. ಆ ಮುದುಕ ಗಮನಿಸಲೇ ಇಲ್ಲ, ಸರಿಯಾಗಿ ಎರಡೂವರೆ ಗಂಟೆ ಆಯಿತು. ಆತನ ಸೊಂಟದಲ್ಲಿ ತೂಗುತ್ತಿದ್ದ ಗಡಿಯಾರ ನೋಡಿ ಕಣ್ಣೆತ್ತಿದ. ಮಂದ ಹಾಸ ಬೀರಿ, "ನೀವೇ ಕುಮಾರಪ್ಪನೇ?" ಎಂದಾಗ ನನಗೆ ಗರ ಬಡಿದಂತಾಯಿತು. ಇವರೇ ಗಾಂಧೀಜಿ ಎಂಬ ಕಲ್ಪನೆಯೇ ನನಗಿರಲಿಲ್ಲ. ತಕ್ಷಣ ನನ್ನ ಸಿಲ್ಕ್ ಸೂಟನ್ನೂ ಗಮನಿಸದೇ ನೆಲದಲ್ಲಿ ಕೂರಲು ಪ್ರಯತ್ನ ಪಟ್ಟೆ. ಕಾಲನ್ನು ಹೊರಕ್ಕೆ ಚಾಚಿ ಕಷ್ಟಪಟ್ಟು ಕುಳಿತೆ. ಇದನ್ನು ಕಂಡ ಒಬ್ಬ ಆಶ್ರಮವಾಸಿ ಕುರ್ಚಿ ತಂದ. "ಮೇಲೆಯೇ ಕುಳಿತುಕೊಳ್ಳಿ" ಎಂದರು ಗಾಂಧೀ. 'ಉಂಟೇ! ನೀವು ಕೆಳಗೆ ಕುಳಿತು ನಾನು ಮೇಲೆ ಕೂರಲೇ ಎಂದೂ ಆಗದು!' ಎಂದೆ. ಮಾತು ಪ್ರಾರಂಭಿಸಿ 'ನಿಮ್ಮ ಪ್ರಬಂಧ ಓದಿದೆ. ತುಂಬಾ ಚನ್ನಾಗಿದೆ' ಎಂದರು, ನನಗೆ ಸ್ವರ್ಗವೇ ಸಿಕ್ಕತಾಯಿತು. ನಂತರ ಅವರ ಸಹಜ ನಗುವಿನೊಡನೆ, "ನಮ್ಮ ವಿದ್ಯಾಪೀಠದ ಕುಲಪತಿಗಳನ್ನು ಭೇಟಿಯಾಗಿ. ಅವರಾರು ಗೊತ್ತೇ? ಇದೀಗ ಕುರ್ಚಿ ತಂದಿರಿಸಿದ ಮಹನೀಯರು, ಕಾಕಾ ಕಾಲೇಲ್ಕರ್" ಎಂದರು. ನನ್ನ ಮನಸ್ಸು ಕೃತಜ್ಞತೆಯಿಂದ ನಮಿಸಿತು.

ಈ ಆತ್ಮೀಯತೆ, ಸರಳತೆ, ನೇರ ಸತ್ಯನಿಷ್ಠ ಮನೋಧರ್ಮ ಕುಮಾರಪ್ಪನವರನ್ನು ಸೂರೆಗೊಂಡವು. ಈ ಮಹಾನುಭಾವನ ನೆರಳಿನಲ್ಲೇ ಕೆಲಸಮಾಡಬೇಕು, ಗ್ರಾಮಗಳ ಅಧ್ಯಯನ ಮುಂದುವರಿಸಬೇಕು ಎಂದುಕೊಂಡರು. ಅಲ್ಲಿಂದಾಚೆ ಅವರ ಬಾಳಿನ ರೀತಿಯೇ ಬದಲಾಗಿ ಬಿಟ್ಟಿತು.

ಗುಜರಾತಿನ ಹಳ್ಳಿಗಳ ಸಮೀಕ್ಷೆ ನಡೆಸಿಕೊಡಲು ಗಾಂಧೀಜಿಯೇ ಸೂಚಿಸಿದರು. ಕಾಕಾ ಕಾಲೇಲರ್ಕರಿಗೆ ಈ ಆಧುನಿಕ ನಗರವಾಸಿ ಪ್ರೊಫೆಸರ್ ಹೇಗೆ ಹಳ್ಳಿಗರೊಡನೆ ಬೆರೆತು ಕೆಲಸ ಮಾಡುವರು ಎಂಬ ಅನುಮಾನ. "ಭಾಷೆಯು

ಪರಿಚಯವೂ ಇಲ್ಲವಲ್ಲ!" ಎಂದರು. ಕುಮಾರಪ್ಪನವರಿಗೆ ಈ ಸಂಶಯ ದೃಷ್ಟಿ ಹಿಡಿಸಲಿಲ್ಲ. ಗಾಂಧೀಜಿಗೂ ಹೇಳದೆ ಮುಂಬಯಿಗೆ ಹಿಂತಿರುಗಿಬಿಟ್ಟರು. ಗಾಂಧೀಜಿ ಬಿಟ್ಟಾರೇ! ಮತ್ತೆ ಪತ್ರ ಬರೆದು. "ಸಬರ್ಮತಿಗೆ ಬಂದು ನೀವೇ ಸ್ವತಂತ್ರವಾಗಿ ಸಮೀಕ್ಷೆ ಕೈಗೊಳ್ಳಿ" ಎಂದು ಆಜ್ಞಾಪಿಸಿದರು. ಕುಮಾರಪ್ಪನವರ ಸಾಮರ್ಥ್ಯದಲ್ಲಿ ಗಾಂಧೀಜಿಗೆ ಅಪಾರ ಭರವಸೆ ಮೂಡಿತ್ತು. ಪ್ರೊ. ಕುಮಾರಪ್ಪ ಆಶ್ರಮವಾಸಿಗಳಾದರು. ಒರಟು ಖಾದಿ ತೊಟ್ಟರು. ಬಾಳಿನ ಕಗ್ಗಂಟುಗಳನ್ನೆಲ್ಲಾ ನಿವಾರಿಸಿಕೊಂಡು ಆದರ್ಶ ಸತ್ಯಾಗ್ರಹ ಜೀವನದ ವ್ರತ ತೊಟ್ಟರು. ಅವರ ವ್ಯಕ್ತಿತ್ವ ಬಹು ಕ್ಷಿಪ್ರವಾಗಿ ಉನ್ನತ ಶ್ರೇಣಿಗೇರಿತು. ಗಾಂಧೀಜಿ ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಗೆ ಅವರ ಬರಹಗಳನ್ನಾಹ್ವಾನಿಸಿದರು. ತಮಗೆ ಬಿಡುವು ಬೇಕಾದಾಗ ಕುಮಾರಪ್ಪನವರನ್ನೇ ಸಂಪಾದಕರನ್ನಾಗಿ ನೇಮಿಸಿದರು. ಗುಜರಾತು ವಿದ್ಯಾಪೀಠದ ಮಹತ್ವದ ಪ್ರಾಧ್ಯಾಪಕರಾಗಿ ಕೇವಲ ಮೂವತ್ತು ರೂಪಾಯಿಗಳ ಸಂಭಾವನೆ ಸ್ವೀಕರಿಸಿ ತಪಸ್ವಿಯಂತೆ ಜೀವಿಸತೊಡಗಿದರು. ಗಾಂಧೀ ಪ್ರಭಾವದ ಮೋಡಿ ಸೃಷ್ಟಿಸಿಕೊಟ್ಟ ಮೇಧಾವೀ ರಾಷ್ಟ್ರನಾಯಕರಲ್ಲಿ ಕುಮಾರಪ್ಪ ಅಗ್ರಪಂಕ್ತಿಗೆ ಸೇರಿದರು.

೪

ಬ್ರಿಟಿಷ್ ಸಾಮ್ರಾಜ್ಯವಾದಿಗಳ ಆಶ್ರಯದಲ್ಲಿ ಶಿಕ್ಷಣವೆಲ್ಲವೂ ಬಂಡವಾಳಶಾಹೀ ಹಣಪ್ರಧಾನ ಅರ್ಥವ್ಯವಸ್ಥೆಯನ್ನು ವೈಭವೀಕರಿಸಿತ್ತು. ಸಾಮಾಜಿಕ ಮತ್ತು ನೈತಿಕ ಪರಿಣಾಮಗಳನ್ನು ಕಡೆಗಣಿಸಿ ಲಾಭಬಡಕತನವನ್ನು ಏಕಮಾತ್ರ ಗುರಿ ಎಂದು ಭಾವಿಸಿತ್ತು. ಅಮೆರಿಕ ಈ ದಿಸೆಯಲ್ಲಿ ಇನ್ನೂ ಮುಂದೆ ಹೋಗಿ ವ್ಯಕ್ತಿಗತ ಲಾಭವೊಂದೇ ಅರ್ಥಶಾಸ್ತ್ರದಲ್ಲಿ ಪ್ರಗತಿಯ ಮೂಲ ಪ್ರೇರಣೆ ಎಂದು ಸಾರಿತು. ಮಾನವೀಯ ಮತ್ತು ನೈತಿಕ ಪ್ರಭಾವಗಳಿಂದ ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸಬಾರದು, ಬದಲಾಗಿ ಶೋಷಿತ ದುಡಿಮೆಗಾರರ ಲೋಕವನ್ನು ನಿರ್ದಯವಾಗಿ ನಿಯಂತ್ರಿಸಿ ಔದ್ಯೋಗೀಕರಣದ ಸಿಂಹಪಾಲು ಶ್ರೀಮಂತವರ್ಗದ ಕೈಯಲ್ಲಿ ಕೇಂದ್ರೀಕೃತವಾಗಬೇಕು ಎಂಬ ತತ್ವ ಸಾರ್ವತ್ರಿಕವಾಯಿತು. ಭಾರತೀಯ ಆರ್ಥಿಕ ದೃಷ್ಟಿಯೂ ಇದನ್ನೇ ಎತ್ತಿಹಿಡಿಯುವ ಸಾಮಂತ ತಜ್ಞ ಪ್ರಾಧ್ಯಾಪಕರಿಂದ ಅನುಕರಣೆಯ ದಾರಿ ಹಿಡಿದಿತ್ತು. ಈ ಎಲ್ಲ ಬೆಳವಣಿಗೆಗಳು ಹೇಗೆ ರಾಷ್ಟ್ರರಾಷ್ಟ್ರಗಳ ಮಧ್ಯೆ ವಸಾಹತುಗಳ ಸ್ವಾಮ್ಯಕ್ಕಾಗಿ ಯುದ್ಧಗಳ ಸರಣಿಯಲ್ಲಿ ಪರ್ಯವಸಾನವಾಯಿತು ಎಂದು ಕುಮಾರಪ್ಪನವರಂತಹ ಚಿಂತಕರು ಯೋಚಿಸತೊಡಗಿದರು.

ಅಮೆರಿಕದಲ್ಲಿದ್ದಾಗ ಕುಮಾರಪ್ಪ ಕೊಲಂಬಿಯಾ ವಿಶ್ವವಿದ್ಯಾನಿಲಯದ

ಪ್ರಾಧ್ಯಾಪಕ ಡಾ||ಡಾವನ್ ಪೋರ್ಟ್ ಅವರ "ಲಾಭ ದೃಷ್ಟಿಯೇ ಎಲ್ಲ ಅರ್ಥ ಶಾಸ್ತ್ರದ ಮೂಲ ಸಿದ್ಧಾಂತ" ಎಂಬ ವಾದವನ್ನು ಪ್ರಬಲವಾಗಿ ವಿರೋಧಿಸಿದ್ದರು. ವಿಚಾರಗೋಷ್ಠಿಗಳಲ್ಲಿ ನಿರ್ಭಯವಾಗಿ ವಾದಿಸಿದರು. ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕ ಪ್ರಜ್ಞೆಗಳಿಗೆ ತಿಲಾಂಜಲಿಯಿತ್ತು ಭಯಂಕರ ಶೋಷಣೆ ಮತ್ತು ಹಿಂಸಾಚಾರಗಳಿಂದ ಶ್ರೀಮಂತಿಕೆ ಸಾಧಿಸುವ ಪ್ರಯತ್ನ ಅತ್ಯಂತ ಘೋರ ಅಪರಾಧ ಎಂದರು. ಪ್ರಾಧ್ಯಾಪಕರು ಕಿಡಿಕಿಡಿಯಾಗಿ ಪ್ರತಿಭಟಿಸಿದರೂ ಕೊನೆಗೆ ತಮ್ಮ ನಿಲುವನ್ನೇ ಬದಲಾಯಿಸಿಕೊಂಡರು. ಈ ಮೇಧಾವೀ ಶಿಷ್ಯನನ್ನು ಕೊಂಡಾಡಿ ಮೊದಲ ಸ್ಥಾನವಿತ್ತರು. ಕೇವಲ ಸಂಪತ್ಸಮೃದ್ಧಿಗಾಗಿ ದುಡಿಯುವ ಯಂತ್ರವಾಗುವ ಮಾನವನು ರಾಕ್ಷಸ ಗುಣಗಳಿಗೆ ಬಲಿಯಾಗಿ ಲೋಕ ಕಂಟಕನಾಗುತ್ತಾನೆ ಎಂಬ ಅರಿವು ಕುಮಾರಪ್ಪನವರಿಗೆ ಸಹಜವಾಗಿಯೇ ರೂಢಿ ಮೂಲವಾಯಿತು. ಅರ್ಥಶಾಸ್ತ್ರದ ಬೆಳವಣಿಗೆ ಪಾಶ್ಚಾತ್ಯರ ಹಣ ಮತ್ತು ಅಧಿಕಾರ ದಾಹಗಳಿಂದಾಗಿ ಎಷ್ಟು ಭಯಂಕರ ಹಿಂಸೆಗೆ ಲೋಕವನ್ನು ಗುರಿ ಮಾಡಿದೆ ಎಂದು ವಿವರಿಸಿದರು.

ಒಮ್ಮೆ ಪಂಡಿತ ಮದನಮೋಹನ ಮಾಳವೀಯರು ಪ್ರೊ. ಕುಮಾರಪ್ಪನವರ ಮೇಧಾಶಕ್ತಿಗೆ ಬೆರಗಾಗಿ ಗಾಂಧೀಜಿ ಇಂಥ ಉತ್ತಮ ಕಾರ್ಯಕರ್ತನನ್ನು ಸಿದ್ಧಮಾಡಿದ್ದಕ್ಕಾಗಿ ಶ್ಲಾಘಿಸಿದರು. ಕೂಡಲೇ ಗಾಂಧೀಜಿ ಉತ್ತರಿಸಿದರು, "ಕುಮಾರಪ್ಪನಿಗೆ ನಾನಾವ ಶಿಕ್ಷಣವನ್ನೂ ಕೊಡಲೇ ಇಲ್ಲ. ನನ್ನಲ್ಲಿ ಬರುವ ವೇಳೆಗೆ ಸಿದ್ಧಹಸ್ತರಾಗಿಯೇ ಬಂದರು." ಆ ಬಾಂಧವ್ಯದ ಮಧುರ ಅನುಭವ ಈ ಗುರುಶಿಷ್ಯರನ್ನು ಆಜೀವನ ಪರ್ಯಂತರವೂ ಒಗ್ಗೂಡಿಸಿ ಅಹಿಂಸಾ ಸಂಸ್ಕೃತಿಯ ರೂಪರೇಷೆಗಳನ್ನು ಜಗತ್ತಿಗೆ ಬಿತ್ತರಿಸುವುದರಲ್ಲಿ ಯಶಸ್ವಿಯಾಯಿತು.

ಪ್ರಸಿದ್ಧ ದಂಡಯಾತ್ರೆಯ ಸಂದರ್ಭದಲ್ಲಿ ಗಾಂಧೀಜಿ ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯನ್ನು ನಡೆಸಿಕೊಡಲು ಕುಮಾರಪ್ಪನವರನ್ನೇ ಕೋರಿದರು. ಆ ವೇಳೆಗೆ ಅವರ ಪ್ರಬಂಧ "ಹಣಕಾಸು ವ್ಯವಸ್ಥೆ ಮತ್ತು ನಮ್ಮ ಬಡತನ" ಭಾಗಭಾಗವಾಗಿ ಪ್ರಕಟವಾಗಿತ್ತು. ಸಬರ್ಮತಿಗೆ ಬಂದು ಒಂದೆರಡು ವರ್ಷಗಳಲ್ಲೇ ಕುಮಾರಪ್ಪನವರು ಗಾಂಧೀವಾದದ ಅಧಿಕೃತ ವ್ಯಾಖ್ಯಾನಕಾರರೆನಿಸಿಬಿಟ್ಟರು. ಅವರ ಯಾವ ಬರಹವನ್ನೂ ಗಾಂಧೀಜಿ ಅಲ್ಲಗಳೆಯಲಿಲ್ಲ. ಅನೇಕ ಸಾರಿ ಗಾಂಧೀಜಿಗಿಂತಲೂ ಕಟುವಾಗಿ ಬ್ರಿಟಿಷ್ ಆಡಳಿತವನ್ನು ಕುಮಾರಪ್ಪ ನಿರ್ಭಯವಾಗಿ ಟೀಕಿಸುತ್ತಿದ್ದರು. ಸಹಕಾರ್ಯಕರ್ತರು ಗಾಂಧೀಜಿಯ ಬಳಿ ಇದನ್ನು ಹೇಳಿದಾಗ, "ಕುಮಾರಪ್ಪ ತಮಿಳುನಾಡಿನವರು. ಮೆಣಸಿನಕಾಯಿ ಅವರಿಗೆ ಪ್ರಿಯ. ಅವರ ಭಾಷೆ ಖಾರವಾಗಿದ್ದೀತು. ಆದರೆ ಯಾವ ಅಸತ್ಯವೂ ಅವರ ಬರವಣಿಗೆಯಲ್ಲಿ ಸುಳಿಯುವುದಿಲ್ಲ" ಎಂದರು.

ಗುಜರಾತಿನ ಮಾಥಲ್ ತಾಲ್ಲೂಕಿನ ಹಳ್ಳಿಗಳ ಆರ್ಥಿಕ ಸರ್ವೇಕ್ಷಣೆ ಯೊಂದನ್ನು ನಡೆಸಿ ಕುಮಾರಪ್ಪ ನಿಖರವಾದ ಅಂಕಿ ಅಂಶಗಳಿಂದ ಗ್ರಾಮೀಣ ಆರ್ಥಿಕ ದುಃಸ್ಥಿತಿಯನ್ನು ದೇಶದ ಮುಂದೆ ಇಟ್ಟರು. ಇದರ ಆಧಾರದ ಮೇಲೆ ಗಾಂಧೀಜಿ ಔದ್ಯೋಗೀಕರಣ ಯೋಜನೆಗಳಿಂದ ಹೇಗೆ ಬಡವರು ಬಡವರಾಗುತ್ತಲೇ ಸಾಗುತ್ತಾರೆ ಎಂಬುದನ್ನು ವಿವರಿಸುತ್ತಿದ್ದರು. ಬ್ರಿಟಿಷ್ ಸರ್ಕಾರದ ಅನೀತಿ ಕ್ರಮಗಳೆಲ್ಲವನ್ನೂ ಬಯಲಿಗೆಳೆಯುತ್ತಾ ಬಂದರು. ಖಾದಿ ಗ್ರಾಮೋದ್ಯೋಗಗಳ ಪರ್ಯಾಯ ಅರ್ಥಶಾಸ್ತ್ರ ಕ್ರಮಕ್ರಮವಾಗಿ ದೇಶದ ಪೂರ್ಣಗಮನವನ್ನು ಆಕರ್ಷಿ ಸುವಂತಾಯಿತು. ಪಾಶ್ಚಾತ್ಯ ಅನುಕರಣೆಯ ಭಾರತೀಯ ಅರ್ಥಶಾಸ್ತ್ರ ತಜ್ಞರ ನೇಕರು ಗಾಂಧೀ ಕುಮಾರಪ್ಪ ಇವರ ಅಹಿಂಸಕ ರಚನೆಯ ಬಗ್ಗೆ ತೀವ್ರವಾಗಿ ಆಲೋಚನೆ ಮಾಡುವಂತಾಯಿತು. ಅಮೆರಿಕದ ಅರ್ಥಶಾಸ್ತ್ರ ವಿದ್ವಾಂಸ ರಿಚರ್ಡ್ ಗ್ರೆಗ್ ಗಾಂಧೀವಾದದ ಪ್ರಭಾವಯುತ ಪ್ರತಿಪಾದಕರಾದರು. ಸ್ವದೇಶೀ ಚಳು ವಳಿಗೆ ಅತ್ಯಂತ ವ್ಯಾಪಕವಾದ ವೈಜ್ಞಾನಿಕ ತಳಹದಿ ನಿರ್ಮಾಣವಾಯಿತು. ಗ್ರೆಗ್ ಅವರ 'ಎ ಕಂಪಾಸ್ ಫಾರ್ ಸಿವಿಲಿಸೇಷನ್' (ನಾಗರಿಕತೆಗೆ ಒಂದು ದಿಕ್ಸೂಚಿ) ಎಂಬ ಗ್ರಂಥ ಈ ನಿಟ್ಟಿನಲ್ಲಿ ತಾತ್ವಿಕ ಚಿಂತನೆಗೆ ಅಮೂಲ್ಯ ಕಾಣಿಕೆ.

೫

೧೯೩೦ ರಿಂದಲೂ ಕುಮಾರಪ್ಪ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಸತ್ಯಾಗ್ರಹ ಚಳುವಳಿಗಳಲ್ಲಿ ಭಾಗವಹಿಸುತ್ತಲೇ ಬಂದರು. ದಂಡೀ ಸತ್ಯಾಗ್ರಹದ ಕಾಲಕ್ಕೆ 'ಯಂಗ್ ಇಂಡಿಯಾ' ದಲ್ಲಿ ಪ್ರಕಟಿಸಿದ ಲೇಖನಗಳಿಂದ ಬ್ರಿಟಿಷ್ ಸರ್ಕಾರ ಕೆರಳಿತು. "ಜನರನ್ನು ದಂಗೆ ಏಳಲು ಪ್ರೇರೇಪಿಸುತ್ತಿದ್ದೀರಿ" ಎಂದು ಆಪಾದಿಸಿ ಒಂದೂವರೆ ವರ್ಷ ಕಠಿಣ ಸಜಾ ವಿಧಿಸಿದರು. ನ್ಯಾಯಾಲಯಕ್ಕೆ ಹೇಳಿಕೆ ಕೊಡುತ್ತಾ ಕುಮಾರಪ್ಪ, "ದಾಸ್ಯದಲ್ಲಿರುವ ಭಾರತದ ಜನ ಅಗತ್ಯವಾಗಿ ವಿದೇಶೀ ಆಳ್ವಿಕೆಯನ್ನು ಪ್ರತಿಭಟಿಸಲೇಬೇಕು. ನಾವು ಅಹಿಂಸಾವಾದಿಗಳು. ದೇಶ ಕ್ಕಾಗಿ ಸರ್ವ ವಿಧ ಶಿಕ್ಷೆಗಳನ್ನೂ ಸಂತೋಷದಿಂದ ಸ್ವಾಗತಿಸುತ್ತೇವೆ. ಅದೇ ಸತ್ಯಾಗ್ರಹಿಯ ಅಂಗೀಕೃತಧರ್ಮ" ಅಂದರು. ದೇಶದಲ್ಲೆಲ್ಲ ಈ ಧೀರ ನಾಯಕನ ಧ್ವನಿ ಪ್ರತಿಧ್ವನಿತವಾಗಿ ಸಂಗ್ರಾಮ ಹೊಸ ಮಜಲನ್ನು ತಲುಪಿತು. ಗಾಂಧೀ-ಇರ್ವಿನ್ ಒಪ್ಪಂದದ ಮೇರೆಗೆ ಕುಮಾರಪ್ಪ ತಮ್ಮ ಅವಧಿಗೆ ಮುನ್ನವೇ ಬಿಡುಗಡೆ ಯಾದರು.

ಆ ವರ್ಷ ಕರಾಚಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಭಾರತ ಮತ್ತು ಇಂಗ್ಲೆಂಡುಗಳ ಹಣಕಾಸು ವ್ಯವಹಾರ ವಿಮರ್ಶಿಸಿ ವರದಿ ಮಾಡಲು ಕುಮಾರಪ್ಪನವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ನೇಮಿಸಿತು. ಗಾಂಧೀಜಿಯೇ

ಸಭೆಗೆ ಅವರ ಪರಿಚಯ ಮಾಡಿಕೊಟ್ಟರು. ಈಸ್ಟ್ ಇಂಡಿಯಾ ಕಂಪೆನೀಯ ಏಕ ಪಕ್ಷೀಯ ಲಾಭಕೋರರ ವ್ಯವಹಾರಗಳಿಂದ ಭಾರತದ ದರೋಡೆ ಪ್ರಾರಂಭ ವಾಯಿತು. ಮೊದಲನೇ ಮಹಾಯುದ್ಧ ಈ ವ್ಯಾಪಾರೀ ಸಾಮ್ರಾಜ್ಯದ ರಕ್ಷಣೆ ಗಾಗಿ ಭಾರತದ ಅಪಾರ ಸಂಪತ್ತನ್ನೆಲ್ಲ ಬಳಸಿಕೊಂಡಿತು. ಭಾರತದ ಗ್ರಾಮೀಣ ಜನತೆಯ ಉದ್ಯೋಗಗಳನ್ನೆಲ್ಲ ನಾಶಮಾಡಿ ದಾರಿದ್ರ್ಯ ಮತ್ತು ನಿರುದ್ಯೋಗ ಗಳನ್ನು ಹರಡಿತು. ಈ ಅಪಾರ ನಷ್ಟವನ್ನು ಬ್ರಿಟಿಷ್ ಸರ್ಕಾರ ತುಂಬಿಕೊಡುವ ನೈತಿಕ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲಾಗದು – ಎಂದು ಕುಮಾರಪ್ಪ ಕೂಲಂ ಕುಷ ವರದಿಯನ್ನು ದೇಶದ ಮುಂದಿಟ್ಟರು.

ಗಾಂಧೀಜಿ ಮತ್ತು ಮಹಾದೇವ ದೇಸಾಯಿಯವರು ೧೯೩೨ ರಲ್ಲಿ ದುಂಡು ಮೇಜಿನ ಪರಿಷತ್ತಿಗಾಗಿ ಲಂಡನ್ನಿಗೆ ಹೋದರು. ಯಂಗ್ ಇಂಡಿಯಾ ಪತ್ರಿಕೆಗೆ ಕುಮಾರಪ್ಪ ಸಂಪಾದಕರಾದರು. ನಿರ್ಭಯವಾಗಿ ಭಾರತದ ಸ್ವಾತಂತ್ರ್ಯಬೇಡಿಕೆ ಯನ್ನು ಮಂಡಿಸುತ್ತಿದ್ದರು. ಬ್ರಿಟಿಷರ ಒಡೆದು ಆಳುವ ಕುಟಿಲ ನೀತಿಯಿಂದ ಹೇಗೆ ಸಂಧಾನದ ಮಾರ್ಗಗಳನ್ನೆಲ್ಲ ಅಡ್ಡದಾರಿಗೆಳೆದು ದೇಶಪ್ರೇಮಿಗಳ ಮುಖಕ್ಕೆ ಮಸಿ ಬಳಿಯುತ್ತಿದ್ದಾರೆ ಎಂದು ತೋರಿಸಿದರು. ಗಾಂಧೀವಾದವನ್ನು ವಿಶದ ವಾಗಿ ವಿವರಿಸುತ್ತಿದ್ದರು. ಬ್ರಿಟಿಷ್ ಸರ್ಕಾರ ಕಿಡಿಕಿಡಿಯಾಯಿತು. ಮತ್ತೆ ರಾಜದ್ರೋಹದ ಆಪಾದನೆ ಹೊರಿಸಿ ಎರಡೂವರೆ ವರ್ಷ ಕಠಿಣ ಶಿಕ್ಷೆ ವಿಧಿಸಿ ನಾಸಿಕ್ ಜೈಲಿನಲ್ಲಿಟ್ಟರು. ಈ ಸಾರಿ ಅವರ ದೇಹಾರೋಗ್ಯಕ್ಕೆ ಅಪಾರ ಹಾನಿ ಯಾಯಿತು. ೧೯೩೪ ರಲ್ಲಿ ಬಿಡುಗಡೆಯಾಯಿತು. ವರ್ಧಾಕ್ಕೆ ಹಿಂತಿರುಗಿದರು.

ಬಿಹಾರಿನಲ್ಲಿ ಅದೇ ವರ್ಷ ಭೀಕರ ಭೂಕಂಪ ಸಂಭವಿಸಿತು. ಅತ್ಯಗಾಧ ಸಂಖ್ಯೆಯಲ್ಲಿ ಜನ ಸತ್ತರು. ಊರು ಊರುಗಳೇ ನಾಶವಾದವು. ಅಸಂಖ್ಯಾತ ಮಕ್ಕಳು ಅನಾಥರಾದರು. ದೇಶಕ್ಕೆ ದೇಶವೇ ದುಃಖದಲ್ಲಿ ಮುಳುಗಿತು. ಗಾಂಧೀಜಿ ತಮ್ಮ ಎಲ್ಲ ಕಾರ್ಯಕ್ರಮಗಳನ್ನೂ ನಿಲ್ಲಿಸಿ ಬಿಹಾರಕ್ಕೆ ಧಾವಿಸಿದರು. ಬಾಬು ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಸ್ವಯಂ ಸೇವಾ ತಂಡಗಳ ಸೈನ್ಯವೇ ಸೇವೆಗೆ ಸಿದ್ಧವಾಯಿತು. ಸರ್ಕಾರದ ಅಸಡ್ಡೆಗೆ ಸವಾಲಾಗಿ ಜನತೆಯ ಸಹಾಯ, ಸಹಕಾರ, ಸಹಾನುಭೂತಿಗಳು ರಾಷ್ಟ್ರೀಯ ನಾಯಕರ ಪರಿಹಾರ ಪ್ರಯತ್ನಗಳಿಗೆ ಪ್ರವಾಹ ವಾಗಿ ಹರಿದು ಬಂದವು. ಸೇಠ್ ಜಮ್ನಲಾಲ ಬಜಾಜರನ್ನೂ, ಪ್ರೊ. ಜೆ. ಸಿ. ಕುಮಾರಪ್ಪನವರನ್ನೂ ಗಾಂಧೀಜಿ ಈ ಕಾರ್ಯದ ಮುಖ್ಯ ನಿರ್ದೇಶಕರನ್ನಾಗಿ ಕಳುಹಿಸಿ ಕೊಟ್ಟರು. ಧನಸಹಾಯ, ಬಟ್ಟೆಬರೆಗಳು, ಧಾನ್ಯ, ಔಷಧಿ ಇತರ ಸಾಮಗ್ರಿಗಳು ಹೇರಳವಾಗಿ ಸಂಗ್ರಹವಾಯಿತು. ದೇಶದ ಮೂಲೆ ಮೂಲೆಗಳಿಂದ ಸ್ವಯಂ ಸೇವಕರು ಬಂದರು. ಇಷ್ಟು ಅಗಾಧವಾದ ಖಾಸಗಿ ಸಂಘಟನೆ ಹಿಂದೆಂದೂ ಆಗಿರಲಿಲ್ಲ, ಸರ್ಕಾರ ಬೆರಗಾಗಿ ನೋಡುತ್ತಿತ್ತು.

ಡಾ॥ ರಾಜೇಂದ್ರ ಪ್ರಸಾದರು ತಮ್ಮ ಆತ್ಮಕಥೆಯಲ್ಲಿ ಕುಮಾರಪ್ಪನವರ ಬಿಹಾರ ಭೂಕಂಪ ಪರಿಹಾರ ಕಾರ್ಯದಲ್ಲಿ ಇತ್ತ ಅಮೂಲ್ಯ ನೆರವನ್ನು ಮುಕ್ತಕಂಠ ದಿಂದ ಹೊಗಳಿದ್ದಾರೆ. ಅವರಂತೆ ಸತ್ಯನಿಷ್ಠ ನಿಖರ ಲೆಕ್ಕಪತ್ರಗಳನ್ನು ಜಾಗರೂ ಕತೆಯಿಂದ ದಾಖಲಿಸುತ್ತಿದ್ದ ತಜ್ಞ ಲೆಕ್ಕ ಪರೀಕ್ಷಕ ಇಲ್ಲದಿದ್ದಲ್ಲಿ ನಮಗೆ ಬಹಳ ಕಷ್ಟವಾಗುತ್ತಿತ್ತು. ೧೨ ಜಿಲ್ಲೆಗಳಲ್ಲಿ ಎರಡು ಸಾವಿರ ಕಾರ್ಯಕರ್ತರು ಹಗಲಿರುಳು ದುಡಿಯುತ್ತಿದ್ದರು. ಪ್ರತಿದಿನ ಸಾವಿರಾರು ರೂಪಾಯಿಗಳ ಧನಸಹಾಯ ದೇಶದ ಮೂಲೆಮೂಲೆಗಳಿಂದ ಬರುತ್ತಿತ್ತು. ಅಲ್ಲದೆ,ಬಟ್ಟೆ, ಔಷಧಿ ಇತರ ಸಾಮಗ್ರಿಗಳ ಲೆಕ್ಕ ಇಡಬೇಕಾಗಿತ್ತು. ಎಲ್ಲವನ್ನೂ ಸಂಗ್ರಹಿಸಿ ವಿಚಕ್ಷಣೆಯಿಂದ ವಿತರಣೆ ಮಾಡಲು ನಿಷ್ಠುರ ದಕ್ಷ ನಾಯಕರಾಗಿ ಕುಮಾರಪ್ಪನವರು ದೊರೆತದ್ದರಿಂದ ಬಿಹಾರದ ಪ್ರಾಣರಕ್ಷಣೆಯೂ ಆಯಿತು, ಮಾನರಕ್ಷಣೆಯೂ ಆಯಿತು" ಎಂದಿದ್ದಾರೆ ಬಾಬು ರಾಜೇಂದ್ರಪ್ರಸಾದರು. ಸಾರ್ವಜನಿಕ ನಿಧಿಗಳ ಜವಾಬ್ದಾರಿ ವಹಿಸಿಕೊಂಡವರು ಕಾಸುಕಾಸಿಗೂ ಹೇಗೆ ಪ್ರಾಮಾಣಿಕ ಲೆಕ್ಕಪತ್ರಗಳನ್ನೊಪ್ಪಿಸಬೇಕು ಎಂಬುದಕ್ಕೆ ಕುಮಾರಪ್ಪ ಮಾದರಿ ಎನಿಸಿದರು. ಆ ಕಾಲಕ್ಕೆ ನೇರವಾಗಿ ಜನತೆಯಿಂದಲೇ ೩೬ ಲಕ್ಷರೂಪಾಯಿಗಳು ದಾನವಾಗಿ ಬಂದಿತ್ತು. ಒಂದು ಬಿಡಿಕಾಸೂ ಅನಾವಶ್ಯಕ ವಾಗಿ ವೆಚ್ಚವಾಗಬಾರದು ಎಂದು ಎಚ್ಚರವಹಿಸಿದ್ದರು. ಒಮ್ಮೆ ಗಾಂಧೀಜಿ ಈ ಪರಿಹಾರ ಕಾರ್ಯ ನೋಡಲು ಬಿಹಾರಿಗೆ ಬಂದರು. ಅವರ ಸಿಬ್ಬಂದಿಯವರು ನೇರವಾಗಿ ಸ್ವಲ್ಪ ಹಣ ಬಳಸಿದರೆಂದು ಕುಮಾರಪ್ಪ ಅದನ್ನು ಕೊಡಲು ನಿರಾಕರಿಸಿ ಬಿಟ್ಟರು. ಗಾಂಧೀಜೀಗೆ ದೂರು ಹೋಯಿತು. ಅವರು ನಕ್ಕು "ಕುಮಾರಪ್ಪ ನಮಗೂ ಒಳ್ಳೆಯ ಪಾಠಕಲಿಸಿದ್ದಾರೆ. ಆ ವೆಚ್ಚವನ್ನು ಸಂತೋಷ ದಿಂದ ಭರಿಸುತ್ತೇನೆ" ಎಂದರು. ಈ ಪರಿಹಾರ ಕಾರ್ಯದ ಸಮಯಕ್ಕೆ ಅಲ್ಲಿನ ಗ್ರಾಮ ಪುನರ್ರಚನೆಗೆ ರಚನಾತ್ಮಕ ಕಾರ್ಯಗಳನ್ನೂ ಕುಮಾರಪ್ಪ ಪ್ರಾರಂಭಿಸಿದರು. ಅದಕ್ಕಾಗಿ ಮುಂದೆ ಒಂದು ಸಂಘವನ್ನೇ ಕಟ್ಟಿದರು.

೬

ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಸ್ಥಾಪಿಸುವ ನಿರ್ಣಯವನ್ನು ಗಾಂಧೀಜಿ ೧೯೩೪ ರಲ್ಲಿ ಬೊಂಬಾಯಿನಲ್ಲಿ ಸೇರಿದ್ದ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಂದೆ ಮಂಡಿಸಿದರು. ಚರ್ಚೆಯಾಗಿ ಆ ಮಹಾಧಿವೇಶನದಲ್ಲಿ ಅಂಗೀಕೃತ ವಾದ ನಿರ್ಣಯ ಹೀಗಿತ್ತು:-

"ಸ್ವದೇಶೀ ಚಳುವಳಿಯೆಂದರೆ ಪ್ರಗತಿಪರವಾಗಿ ಭಾರತದ ಜನಕೋಟಿ ಯೊಡನೆ ತಾದಾತ್ಮ್ಯವನ್ನು ಸಾಧಿಸುವುದು ಎಂದೇ ಕಾಂಗ್ರೆಸ್ ಭಾವಿಸಿದೆ. ಗ್ರಾಮ ಗಳ ಪುನರ್ನಿರ್ಮಾಣ ಮತ್ತು ಪುನರ್‌ಸ್ಸಂಘಟನೆಗೆ ಗ್ರಾಮ ಕೈಗಾರಿಕೆಗಳನ್ನು

ಪುನರ್ಜೀವನಗೊಳಿಸಿ ಪ್ರೋತ್ಸಾಹ ನೀಡುವುದು ಅಗತ್ಯ, ಚರಕದಿಂದ ನೂಲುವ ಕೈಗಾರಿಕೆಯನ್ನು ಕೇಂದ್ರವಾಗಿಟ್ಟು ಮಿಕ್ಕೆಲ್ಲ ನಶಿಸುತ್ತಿರುವ ಅಥವಾ ನಾಶವಾಗಿರುವ ಗ್ರಾಮೀಣ ಕೈಗಾರಿಕೆಗಳನ್ನೆಲ್ಲ ಪುನಹ ಅಭಿವೃದ್ಧಿಗೊಳಿಸಿ ಜೀವಂತವಾಗಿ ನಡೆಸು ವಂತಾಗಬೇಕು. ಈ ರಚನಾತ್ಮಕ ಮಹಾಕಾರ್ಯಕ್ಕೆ ತೀವ್ರವಾದ ಮತ್ತು ವಿಶೇಷವಾದ ಪ್ರಯತ್ನ ನಡೆಯಬೇಕು. ಕಾಂಗ್ರೆಸ್ಸಿನ ರಾಜಕೀಯ ಚಟುವಟಿಕೆ ಗಳಿಂದ ಪ್ರತ್ಯೇಕವಾದ, ಸ್ವತಂತ್ರವಾದ ದಕ್ಷ ಕಾರ್ಯಕ್ರಮವಾಗಿ ನಡೆಯಬೇಕಾಗಿದೆ. ಇದಕ್ಕಾಗಿ ಗಾಂಧೀಜಿಯ ನೇತೃತ್ವದಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘ ವನ್ನು ಕಾಂಗ್ರೆಸ್ಸಿನ ಪ್ರಮುಖ ಅಂಗವಾಗಿ ಸ್ಥಾಪಿಸಿ ನಡೆಸಲು ಶ್ರೀ ಜೆ. ಸಿ. ಕುಮಾರಪ್ಪನವರಿಗೆ ಪೂರ್ಣವಾದ ಅಧಿಕಾರವನ್ನು ನೀಡಲಾಗಿದೆ"– ಕುಮಾರಪ್ಪ ನವರನ್ನು ಈ ಸಂಘದ ಸಂಘಟಕರು ಮತ್ತು ಕಾರ್ಯದರ್ಶಿಗಳನ್ನಾಗಿ ಆ ಕೂಡಲೇ ನೇಮಿಸಲಾಯಿತು. ಅವರು ಆ ಸಭೆಯಲ್ಲಿ ಹಾಜರಿರಲಿಲ್ಲ. ಪತ್ರಿಕೆಗಳಲ್ಲಿ ಸುದ್ದಿಯನ್ನೋದಿದ ಕೂಡಲೇ , "ನನ್ನ ಅನುಮತಿ ಇಲ್ಲದೆ ಹೀಗೆ ಮಾಡಿದ್ದೀರಲ್ಲ!" ಎಂದು ಗಾಂಧೀಜಿಗೆ ಬರೆದರು, "ಔಪಚಾರಿಕ ಅನುಮತಿ ಪಡೆಯದೆ ತಪ್ಪು ಮಾಡಿದೆ. ಆದರೆ ಈಗ ಮಾಡಿದ್ದಾಗಿದೆ. ಮರೆತು ಅಂಗೀಕರಿಸು. ಇದಕ್ಕಾಗಿ ಹಣದ ಚಿಂತೆಮಾಡಬೇಕಾಗಿಲ್ಲ. ಕಾರ್ಯಕರ್ತನಾಗಿ ನೀನೇ ಪ್ರಥಮ ಸ್ವಯಂಸೇವಕ. ಅಲ್ಲಿಂದಲೇ ಪ್ರಾರಂಭಿಸಿ ಬಿಡು" ಎಂದು ಗಾಂಧೀಜಿ ಆಗ್ರಹಪೂರ್ವಕ ಒತ್ತಾಯಿಸಿ ದರು. ಕುಮಾರಪ್ಪ ಬಿಹಾರಿನಿಂದ ಹಿಂತಿರುಗಿದರು. ೧೯೩೪ ನೇ ಡಿಸೆಂಬರ್ ೧೪ ರಂದು ವರ್ಧಾದ ಮಹಿಳಾಶ್ರಮದಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಸ್ಥಾಪಿತವಾಯಿತು. "ಗ್ರಾಮೋದ್ಧಾರ ಚಳುವಳಿ ಏಕೆ?" (ವೈ ದಿ ವಿಲೇಜ್ ಮೂವ್‌ಮೆಂಟ?) ಎಂಬ ಪುಸ್ತಕದಲ್ಲಿ ಕುಮಾರಪ್ಪ ಈ ಸಂಘದ ಮುಖ್ಯ ಧ್ಯೆಯೋದ್ದೇಶಗಳನ್ನು ವಿವರಿಸಿದ್ದಾರೆ. ಗಾಂಧೀಜಿಯೇ ಅದಕ್ಕೆ ಮುನ್ನುಡಿ ಬರೆದಿದ್ದಾರೆ.

ಮಗನವಾಡಿಯಲ್ಲಿ ಜಮುನಲಾಲ ಬಜಾಜರು ದಾನ ಮಾಡಿದ ವಿಶಾಲ ನಿವೇಶನದಲ್ಲಿ ಕುಮಾರಪ್ಪ ಒಂದು ನಮ್ರ ಗುಡಿಸಲನ್ನು ನಿರ್ಮಿಸಿ ವಾಸಿಸ ತೊಡಗಿದರು. ಗಾಂಧೀಜಿ ೧೯೩೪ರಲ್ಲಿ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮ ನೀಡಿ ಗ್ರಾಮ ಪುನರ್ರಚನೆಯ ಕಾರ್ಯದಲ್ಲಿ ಮಗ್ನರಾದರು. ಆ ವೇಳೆಗೆ ಅಖಿಲ ಭಾರದ ನೂಲುವವರ ಸಂಘ ವ್ಯಾಪಕವಾಗಿ ಕೆಲಸಮಾಡುತ್ತಿತ್ತು. ಖಾದಿ ಚಳುವಳಿ ತೀವ್ರವಾಗಿ ನಡೆದಿತ್ತು. ಈ ಬಗ್ಗೆ 'ಹರಿಜನ' ಪತ್ರಿಕೆಯಲ್ಲಿ ಹೀಗೆ ಬರೆದರು, "೫೩೦೦ ಗ್ರಾಮಗಳಲ್ಲಿ ಹರಡಿ ಎರಡು ಲಕ್ಷ ಇಪ್ಪತ್ತು ಸಾವಿರ ನೂಲುವವರಿಗೆ ಉದ್ಯೋಗ ಕೊಟ್ಟು ಎರಡೂಕಾಲು ಕೋಟಿ ರೂಪಾಯಿಗಳ ಸಂಭಾವನೆಯನ್ನು ಹಳ್ಳಿಗರಿಗೆ ಈ ಸಂಘ ಹಂಚಿದೆ. ಯಾವ ಉದ್ಯೋಗ

ವನ್ನೂ ನಾಶಮಾಡದೆ ರೈತರ ಬಿಡುವಿನ ವೇಳೆಯನ್ನು ಬಳಸಿ ರಾಷ್ಟ್ರೀಯ ಉತ್ಪನ್ನವನ್ನು ಸರಳವಾಗಿ ಹೆಚ್ಚಿಸಿ ರಾಷ್ಟ್ರದಲ್ಲೇ ಅಷ್ಟು ಉತ್ಪಾದನೆಯೂ ಉಳಿಯುವಂತೆ ಮಾಡಿದೆ. ರೈತನ ಗುಡಿಸಿಲಿಗೇ ಉದ್ಯೋಗಾವಕಾಶಗಳನ್ನೂ ತಂದಿದೆ"

ಈಗ ಗ್ರಾಮೋದ್ಯೋಗ ಸಂಘ ಈ ಕಾರ್ಯಕ್ಕೆ ಮತ್ತಷ್ಟು ವ್ಯಾಪಕ ವಾದ ಗ್ರಾಮೀಣ ಪುನರ್ರಚನೆಯ .ಯೋಜನೆಗಳನ್ನು ಸೇರಿಸಿ ಪುಷ್ಟಿಕೊಟ್ಟಿತು. "ಯಾವ ಬಳಕೆಯ ವಸ್ತುಗಳನ್ನು ಗ್ರಾಮಸ್ತರು ಸ್ಥಳೀಯ ಸಾಮಗ್ರಿಗಳಿಂದ ಉತ್ಪಾದಿಸುವರೋ ಅದನ್ನು ಬಳಸುವುದೇ ಸ್ವದೇಶೀ ಧರ್ಮ. ಬೇರೆ ಕಾರ್ಖಾನೆ ಗಳು ವಿದೇಶಗಳಿಂದ ಬರುವ ಮೆರುಗಿನ ವಸ್ತುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು. ಹಾಗಲ್ಲದೆ ನಮ್ಮ ಸ್ವಾತಂತ್ರ್ಯಕ್ಕೆ ಯಾವ ಘನವಾದ ಗುರಿಯೂ ಇರುವುದಿಲ್ಲ. ಆರ್ಥಿಕ ಸ್ವಾತಂತ್ರ್ಯ ಎಂದರೆ ಗ್ರಾಮಗಳ ಸ್ವಾವಲಂಬನೆ, ಸ್ವಪರಿಪೂರ್ಣತೆ, ಗ್ರಾಮಸ್ತರ ಸ್ವಾಭಿಮಾನ, ಅಭಿಕ್ರಮಶಕ್ತಿಗಳನ್ನು ಸತತವಾಗಿ ಹೆಚ್ಚಿಸುತ್ತಾ ಹೋಗುವುದು" ಎಂದು ಗಾಂಧೀಜಿ ಪದೇ ಪದೇ ಬರೆದರು. ಭೂಹೀನ ರೈತಕಾರ್ಮಿಕರಲ್ಲಿ ಮುಕ್ಕಾಲು ಭಾಗ ಹರಿಜನರು. ಅವರಿಗೆ ವರ್ಷ ದಲ್ಲಿ ಆರೇ ತಿಂಗಳು ಕೆಲಸ ಸಿಗುವುದು. ಮಿಕ್ಕ ಹಾಗೆ ಅವರ ಆರ್ಥಿಕ ಸ್ಥಿತಿ ಯನ್ನು ಉತ್ತಮಪಡಿಸಲು ಗ್ರಾಮೋದ್ಯೋಗಗಳನ್ನು ಪ್ರಾರಂಭಿಸಿ ಅವರ ಸ್ಥಳ ದಲ್ಲೇ ಅವರಿಗೆ ಮತ್ತೊಂದು ಉತ್ಪಾದನಾ ಉಪಕರಣವನ್ನು ಒದಗಿಸುವುದು ನಿಜವಾದ ಆರ್ಥಿಕ ಪುನರ್ರಚನೆ ಎಂಬ ಭಾವನೆ ಹರಡಿತು. ಸಾವಿರಾರು ಕಾರ್ಯ ಕರ್ತರಿಗೆ ಈ ಶಿಕ್ಷಣ ಕೊಡಲು ಗ್ರಾಮೋದ್ಯೋಗ ಸಂಘ ಕುಮಾರಪ್ಪನವರ ನೇತೃತ್ವದಲ್ಲಿ ಕೆಲಸ ಮಾಡುತ್ತಿತ್ತು.

ವರ್ಧಾದ ಈ ಕೇಂದ್ರದಲ್ಲಿ ಐದು ವಿಭಾಗಗಳಿದ್ದವು: ೧) ಸಂಶೋಧನೆ ೨) ಉತ್ಪಾದನೆ ೩) ಶಿಕ್ಷಣ ೪) ವಿಸ್ತರಣೆ ಮತ್ತು ಸಂಘಟನೆ ೫) ಪ್ರಚಾರ ಮತ್ತು ಪ್ರಕಟಣೆಗಳು. ಕ್ರಮೇಣ ಒಂದು ಗ್ರಾಮೋದ್ಯೋಗ ವಸ್ತುಸಂಗ್ರಹಾಲಯ ಮತ್ತು ಒಂದು ವೈಜ್ಞಾನಿಕ ಪ್ರಯೋಗಶಾಲೆಗಳನ್ನು ಸೇರಿಸಲಾಯಿತು. ಈ ಮಹಾ ಸಂಸ್ಥೆಯ ಮೊದಲ ಕಾರ್ಯಕಾರಿಣಿಗೆ ಗಾಂಧೀಜಿಯ ಆಹ್ವಾನದ ಮೇಲೆ ಡಾ. ಪ್ರಫುಲ್ಲ ಘೋಷ್, ಶ್ರೀ ಶಂಕರಲಾಲ್ ಬ್ಯಾಂಕರ್ ಮತ್ತು ದಾಖಾನ್ ಸಾಹೇಬ್ ಸೇರಿದರು. ತಜ್ಞರ ಸಮಿತಿಯಲ್ಲಿ ಕವಿ ರವೀಂದ್ರನಾಥ ಠಾಕೂರರು, ಸರ್ ಜೆ. ಸಿ. ಬೋಸ್, ಸರ್ ಪಿ.ಸಿ. ರೇ, ಸರ್ ಸಿ.ವಿ. ರಾಮನ್, ಡಾ. ಅನ್ಸಾರಿ ಸೇವೆ ಸಲ್ಲಿಸಲು ಒಪ್ಪಿದರು. ಈ ಸಂಸ್ಥೆ ಯಾವ ರಾಜಕೀಯ ಚಟುವಟಿಕೆಗಳಲ್ಲೂ ನೇರವಾಗಿ ಭಾಗವಹಿಸುತ್ತಿರಲಿಲ್ಲ. ಸರ್ವತಂತ್ರ ಸ್ವತಂತ್ರ ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿತ್ತು. ಒಂದು ವಿಶ್ವಸ್ತಮಂಡಲಿ ಅದರ ಹಣಕಾಸಿನ ವ್ಯವಸ್ಥೆಗೆ

ಜವಾಬ್ದಾರವಾಯಿತು. ಪ್ರತಿಯೊಂದು ಗ್ರಾಮದಲ್ಲೂ ಈ ಸಂಘದ ಚಟುವಟಿಕೆ ಗಳ ಬಗ್ಗೆ ಮಾಹಿತಿಗಳನ್ನೊದಗಿಸುವುದು ಲಕ್ಷಾಂತರ ದೇಶಭಕ್ತ ಸತ್ಯಾಗ್ರಹಿಗಳ ಹೊಣೆಯೆಂದು ಅಂಗೀಕರಿಸಲ್ಪಟ್ಟಿತ್ತು. ಸತ್ಯಾಗ್ರಹ ಸಮರಕ್ಕೆ ಪೋಷಕವಾಗಿ ಈ ಎಲ್ಲ ರಚನಾತ್ಮಕ ಕಾರ್ಯಕ್ರಮಗಳನ್ನೂ ಗಾಂಧೀಜಿ ಕಡ್ಡಾಯ ನಿಯಮ ಎಂದಿದ್ದರು.

ತಡಿಕೆಗಳ ಮೇಲೆ ಜೇಡಿಮಣ್ಣು ಮೆತ್ತಿದ ಹೊಳಪು ಗೋಡೆ ಮೇಲೆ ನಾಡ ಹಂಚಿನ ಛಾವಣಿ, ಸಗಣಿಯಿಂದ ಸಾರಿಸಿದ ನೆಲ. ಸುತ್ತಲೂ ಗ್ರಾಮ ಕೈಗಾರಿಕೆಗಳ ಸಲಕರಣೆಗಳು: ನೇಗಿಲು, ರಾಟೆ, ಗಾಣ, ಬೀಸುವಕಲ್ಲು, ಕಮ್ಮಾರನ ತಿದಿ, ಚಮ್ಮಾರನ ಬಾಚುಗತ್ತಿ. ಇವುಗಳ ಮಧ್ಯೆ ಸದಾ ಕೆಲಸ, ಸಂಶೋಧನೆ, ಶಿಕ್ಷಣ. ಅಲ್ಲೇ ಒಂದು ಕೋಣೆಯಲ್ಲಿ ಪುಸ್ತಕ ಭಂಡಾರ, ನೆಲಕ್ಕೆ ಚಾಪೆ, ಒಂದು ಓಟ ಮೇಜು. ಶುಭ್ರವಾದ ಖಾದಿ ಉಡುಪು. ಕಚ್ಚೆ ಪಂಚೆಗೂ ಪಾಯಿಜಾಮಕ್ಕೂ ಮಧ್ಯದ ಕಡಿಮೆ ಬಟ್ಟೆಯ ಲಾಡಿಹಾಕಿದ 'ಧೋತಿಜಾಮ'. ಗ್ರಾಮೀಣ ಚಪ್ಪಲಿ. ಇದು ಕುಮಾರಪ್ಪನವರು ಮೂವತ್ತು ವರ್ಷಗಳು ಬದುಕಿದ ರೀತಿ. ಗಾಂಧೀ ಬಳಗದಲ್ಲಿ ಅವರೊಬ್ಬ ಸೀಮಾ ಪುರುಷ. ಅಮೂಲ್ಯ ಕಾರ್ಯಕರ್ತ. ಸರ್ವತಂತ್ರ ಸ್ವತಂತ್ರ ಸ್ವಾವಲಂಬೀ ಗ್ರಾಮರಾಜ್ಯದ ಕನಸು ಕಂಡ ಆಧುನಿಕ ಅರ್ಥಶಾಸ್ತ್ರಜ್ಞ. ಮಗನವಾಡಿಯ ಅವರ ಕುಟೀರ ಇಂದಿಗೂ ಅಹಿಂಸಾ ಸಂಸ್ಕೃತಿಯ ಸಾಧಕರ ಯಾತ್ರಾಸ್ಥಳ.

ಗ್ರಾಮೋದ್ಯೋಗ ಚಳುವಳಿ ಸ್ವದೇಶೀ ಆಂದೋಲನದ ಕೇಂದ್ರ ಶಕ್ತಿ ಯಾಗಿ ಪರಿಣಮಿಸಿತ್ತು. ೧೯೩೭ ರಲ್ಲಿ ಸೀಮಿತ ಸ್ವಯಮಾಡಳಿತವನ್ನಂಗೀಕಾರ ಮಾಡಿ ಕಾಂಗ್ರೆಸ್ ಹನ್ನೊಂದು ಬ್ರಿಟಿಷ್ ಪ್ರಾಂತಗಳಲ್ಲಿ ಸರ್ಕಾರಗಳನ್ನು ರಚಿಸಿತು. ನೇತಾಜಿ ಸುಭಾಷಚಂದ್ರಬೋಸರು ಅಧ್ಯಕ್ಷರಾಗಿದ್ದಾಗ ಜವಹರಲಾಲರ ನೇತೃತ್ವ ದಲ್ಲಿ ರಾಷ್ಟ್ರೀಯ ಯೋಜನಾ ಸಮಿತಿ ರಚಿತವಾಯಿತು. ಕುಮಾರಪ್ಪನವರನ್ನು ಸದಸ್ಯರಾಗಲು ಕೋರಿದರು. ದೊಡ್ಡ ದೊಡ್ಡ ಉದ್ಯೋಗಪತಿಗಳು, ಕೇಂದ್ರಿತ ಬಂಡವಾಳ ಸಿದ್ಧಾಂತದ ಆರ್ಥಿಕತಜ್ಞರು, ಮಾರುಕಟ್ಟೆಯ ಧುರೀಣರು ಹೆಚ್ಚಾ ಗಿದ್ದ ಆ ಸಮಿತಿಯಲ್ಲಿ ಗ್ರಾಮೋದ್ಯೋಗ ಸಿದ್ಧಾಂತಕ್ಕೆ ಬೆಲೆ ಬರಲಾರದು ಎಂದು ಕುಮಾರಪ್ಪ ವಿನಯವಾಗಿ ಹಿಂದುಳಿದರು. ನೆಹರು ಅವರು ಗಾಂಧೀಜಿಗೆ ಪತ್ರ ಬರೆದು, "ಹೇಗಾದರೂ ಮಾಡಿ ಕುಮಾರಪ್ಪನವರನ್ನು ಒಪ್ಪಿಸಿ" ಎಂದು ಬೇಡಿ ದರು. "ತನ್ನ ಖಚಿತಾಭಿಪ್ರಾಯಗಳನ್ನು ತಿಳಿಸುವುದು ಸತ್ಯಾಗ್ರಹಿಯ ಧರ್ಮ. ಅಹಿಂಸಾಮಾರ್ಗದಲ್ಲಿ ನಿರಾಶೆಗೆ ಸ್ಥಳವಿಲ್ಲ. ಎದುರಾಳಿಯೂ ಅರ್ಥಮಾಡಿ

ಕೊಂಡು ಪರಿವರ್ತಿತನಾಗಬಹುದು ಎಂಬ ನಂಬಿಕೆಯಿಟ್ಟು ನಿಲುವನ್ನು ಸಮಿತಿಯಲ್ಲಿ ವಿವರಿಸಿ ಅದು ನಿಮ್ಮ ಕರ್ತವ್ಯ" ಎಂದು ಗಾಂಧೀಜಿ ಹೇಳಿ ಕುಮಾರಪ್ಪನವರನ್ನು ಒಪ್ಪಿಸಿದರು. ಮುಂದೆ ಆ ಸಮಿತಿ ಕೇಂದ್ರಿತ ವ್ಯವಸ್ಥೆ, ಯುದ್ಧ ನೌಕೆಗಳು, ವಿಮಾನಗಳು, ಶಸ್ತ್ರಾಸ್ತ್ರಗಳು ಮುಂತಾದ ಉತ್ಪಾದನೆಗಳನ್ನೇ ಚರ್ಚೆಗೆ ತೆಗೆದುಕೊಂಡುದರಿಂದ ಕುಮಾರಪ್ಪ ಮೂರು ತಿಂಗಳು ಸಮಿತಿ ಕಾರ್ಯಗಳಲ್ಲಿ ಭಾಗವಹಿಸಿ ರಾಜಿನಾಮೆ ಕೊಟ್ಟುಬಿಟ್ಟರು. ಕಾಂಗ್ರೆಸ್ಸಿನ ಧ್ಯೇಯಗಳೇ ಅಲ್ಲಿ ಮುಸುಕಾಯಿತು ಎಂದರು. ಗಾಂಧೀಜಿಯೂ ಅದನ್ನೊಪ್ಪಿದರು.

ಗ್ರಾಮ ಸಂಸ್ಕೃತಿ ಎಂದರೆ 'ಸರಳ ಜೀವನ ಮತ್ತು ಉದಾತ್ತ ಚಿಂತನೆ'. ಶೋಷಣೆ ರಹಿತ ಅಹಿಂಸಕ ಸಮಾಜದ ರಚನೆ. ಜಗತ್ತು ಶಾಂತಿಯುತ ಸಹ ಬಾಳ್ವೆಯ ಕಡೆಗೆ ಸಾಗಲು ಇದು ತಾರಕ– ಇದು ಕುಮಾರಪ್ಪನವರ ಸಿದ್ಧಾಂತ. ದೈಹಿಕ ಕಾಯಕದಲ್ಲಿ ಬುದ್ಧಿಜೀವಿಗಳೂ ಪಾಲ್ಗೊಳ್ಳಲೇಬೇಕು. ಇಲ್ಲದೇ ಹೋದಲ್ಲಿ ಸಮಾಜ ಎರಡು ಪರಸ್ಪರ ವಿರೋಧೀ ಹಿತಗಳ ರಣರಂಗವಾಗುತ್ತದೆ. ಹಿಂಸೆ, ಯುದ್ಧ, ಘರ್ಷಣೆ, ಸಾಮಾಜಿಕ ತಾರತಮ್ಯಗಳು ಅನಿವಾರ್ಯವಾಗಿಬಿಡುತ್ತವೆ ಎನ್ನುತ್ತಿದ್ದರು. ಅವರ ಶಾಶ್ವತ ಅರ್ಥಶಾಸ್ತ್ರ ಗ್ರಂಥ ಈ ಎಲ್ಲ ಅಂಶಗಳನ್ನೂ ವಿಷದವಾಗಿ ವಿವರಿಸುತ್ತದೆ.

ಮಗನವಾಡಿಗೆ ಒಮ್ಮೆ ಗಾಂಧೀಜಿ ಬಂದು ತಂಗಿದ್ದರು. ಈ ಸಂಸ್ಥೆಯಲ್ಲಿ ಎಲ್ಲರೂ ಮನೆಗೆಲಸಗಳಲ್ಲಿ ಸಮಾನವಾಗಿ ಪಾಲ್ಗೊಳ್ಳುವ ನಿಯಮ. ಮುಸುರೆ ಪಾತ್ರೆಗಳನ್ನು ತಿಕ್ಕುವ ಸರದಿ ಗಾಂಧೀಜಿ ಮತ್ತು ಕುಮಾರಪ್ಪನವರಿಗೆ ಬಂತು. ಈ ಕಾರ್ಯದಲ್ಲಿ ಮಗ್ನರಾಗಿ ಇಬ್ಬರ ಕೈಯ್ಯಿಗಳೆಲ್ಲಾ ಮಸಿಯಾಗಿತ್ತು. ಅಷ್ಟರಲ್ಲಿ ಕಸ್ತೂರಬಾ ಅವಸರದ ಕರೆ ಬಂದಿದೆ ಎಂದು ಗಾಂಧೀಜಿಗೆ ಬಂದು ತಿಳಿಸಿ 'ಬೇಗ ಹೊರಡಿ' ಎಂದು ಕೋಪಗೊಂಡೇ ಚೀರಿದರು. 'ನೀವು ಹೊರಡಿ ನಾನು ಪಾತ್ರೆ ತಿಕ್ಕುತ್ತೇನೆ' ಎಂದರು. ಗಾಂಧಿಜಿಗೆ ಹಿಡಿಸಲಾಗದ ನಗು. ಕುಮಾರಪ್ಪನವರನ್ನು ನೋಡಿ, "ನೀವು ಅದೃಷ್ಟವಂತರು. ನಿಮ್ಮ ಮೇಲೆ ಅಧಿಕಾರ ಮಾಡಲು ನಿಮಗೆ ಹೆಂಡತಿಯೇ ಇಲ್ಲ. ನನ್ನ ಸಂಸಾರದ ಶಾಂತಿಯನ್ನುಳಿಸಕೊಳ್ಳಲು ನನ್ನ ಹೆಂಡತಿಯ ಮಾತನ್ನು ಕೇಳಲೇಬೇಕು. ನಾನು ಹೊರಡುತ್ತೇನೆ. ಕಸ್ತೂರಬಾ ಮಿಕ್ಕ ಕೆಲಸ ಮುಗಿಸುತ್ತಾಳೆ" ಎಂದರು. "ನಿಮಗೆ ಅರ್ಧಾಂಗಿಯಿದ್ದಾರೆ. ಅವರು ಮುಗಿಸಿದರೆ ಏನೂ ಅಡ್ಡಿಯಿಲ್ಲ" ಎಂದು ಕುಮಾರಪ್ಪ ಚಟಾಕಿ ಹಾರಿಸಿದರು. ಕಾಯಕದ ಮಹತ್ವವನ್ನೆಲ್ಲರೂ ಗೌರವಿಸುತ್ತಿದ್ದರು. ಆ ಬಾಂಧವ್ಯಗಳ ಮಧುರ ಘಳಿಗೆಗಳೂ ಅನೇಕ ವೇಳೆ ಅನುಭವವಾಗುತ್ತಿತ್ತು. ಶ್ರಮಜೀವಿಗಳದೇ ಸಮಾಜದಲ್ಲಿ ಬಹುಸಂಖ್ಯೆ, ಅವರೇ ಬಾಳಿನ ಮುಖ್ಯ ಆಧಾರ. ಅವರೊಡನೆ ನಮ್ಮ ಜೀವನ ಸುಮಧುರವಾಗಿ

ಬೆರೆತು ಹೋಗಬೇಕು. ಬುದ್ಧಿಜೀವಿಗಳು ಪ್ರತ್ಯೇಕವಾಗಿ ಬಿಡಬಾರದು. ಶ್ರಮಿಕರ ಬೆನ್ನಿನ ಮೇಲೆ ಸವಾರಿ ಮಾಡುವ ನಾಗರಿಕತೆ ಮಾನವನಿಗೆ ಭೂಷಣವಾಗಲಾರದು. ಶ್ರಮಜೀವಿಗಳು ಕೂಡ ಬೌದ್ಧಿಕ ಬಲ ಬೆಳೆಸಿಕೊಳ್ಳಬೇಕು. ಜ್ಞಾನ ಮತ್ತು ಕೆಲಸಗಳನ್ನು ಪ್ರತ್ಯೇಕಿಸಬಾರದು. ಕುಮಾರಪ್ಪ ತಮ್ಮ 'ಕಾಯಕದ ತತ್ವಜ್ಞಾನ' (ಫಿಲಾಸಫಿ ಆಫ್ ವರ್ಕ್) ಎಂಬ ಪುಸ್ತಕದಲ್ಲಿ ಇದರ ವ್ಯಾಖ್ಯಾನ ಮಾಡಿದ್ದಾರೆ. ಉದ್ಯೋಗವನ್ನೆಲ್ಲ ಹಣದ ಅಳತೆಯಿಂದ ಅಳೆಯುವುದು ಒಳ್ಳೆಯ ಸಂಸ್ಕೃತಿ ಅಲ್ಲ. ಯೋಗ, ಉದ್ಯೋಗ, ಸಹಯೋಗ – ಇದು ಭಾರತೀಯ ಗ್ರಾಮ ಸಂಸ್ಕೃತಿಯ ಬಾಳ ಸೂತ್ರ. ಗ್ರಾಮರಾಜ್ಯದಲ್ಲಿ ಇದೇ ಪ್ರತಿಫಲಿಸಬೇಕು ಎಂದು ಗಾಂಧೀ ಚಿಂತನೆಗೆ ಕುಮಾರಪ್ಪ ಪುಷ್ಟಿಕೊಟ್ಟರು.

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕುಮಾರಪ್ಪನವರನ್ನು ಯಾವ ಕಾರಣವೂ ಇಲ್ಲದೆ ದಸ್ತಗಿರಿ ಮಾಡಿ ಒಂದೂವರೆ ವರ್ಷ ಜೈಲಿನಲ್ಲಿಟ್ಟರು. ಬಿಡುಗಡೆಯ ನಂತರ ತಮ್ಮ ಗ್ರಾಮೋದ್ಯೋಗ ಪತ್ರಿಕೆಯಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ಕ್ರೂರ ದಬ್ಬಾಳಿಕೆಗಳನ್ನು ಖಂಡಿಸಿದರು. ಎರಡನೇ ಮಹಾಯುದ್ಧಕ್ಕೆ ಭಾರತವನ್ನು ಬಲಾತ್ಕಾರವಾಗಿ ತಳ್ಳಿ ಹೇಗೆ ದೇಶದ ಆರ್ಥಿಕ ಸಂಪತ್ತನ್ನೆಲ್ಲಾ ನಿರ್ನಾಮ ಮಾಡುತ್ತಿದ್ದಾರೆ ಎಂದು ಅನೇಕ ಲೇಖನಗಳಲ್ಲಿ ಅಂಕಿ ಅಂಶಗಳಿಂದ ವಿವರಿಸಿದರು. ಅವರು ಬರೆದ 'ಅನ್ನದ ಬದಲು ಕಲ್ಲು' (ಸ್ಟೋನ್ಸ್ ಫಾರ್ ಬ್ರೆಡ್) ಲೇಖನದಲ್ಲಿ ಹೇಗೆ ಇಂಗ್ಲೆಂಡ್ ತನ್ನ ದಿವಾಳಿತನವನ್ನು ತಡೆಗಟ್ಟಲು ಭಾರತದಿಂದ ಬಂಗಾರ, ದವಸಧಾನ್ಯಗಳು, ಖನಿಜಗಳು ಇತರ ಬೆಲೆಯುಳ್ಳ ಉತ್ಪಾದನೆಗಳನ್ನೆಲ್ಲಾ ವಿದೇಶೀ ಮಾರುಕಟ್ಟೆಗಳಿಗೆ ಸಾಗಿಸಿ ದಾರಿದ್ರ್ಯ ಹರಡುತ್ತದೆ ಎಂದು ತಿಳಿಸಿದ್ದರು. ಯುದ್ಧ ಕಾಲದ ಉಬ್ಬರದ ಹಣಕ್ಕೆ ಏನೂ ಬೆಲೆಯಿರಲಿಲ್ಲ. ರೂಪಾಯಿನ ಬೆಲೆ ಒಂದೂ ಕಾಲಾಣೆಗೆ ಇಳಿದು ಹೋಗಿತ್ತು. ಹಳ್ಳಿಹಳ್ಳಿಗಳಿಗೆ ನುಗ್ಗಿ ಈ ಅಗ್ಗದ ನೋಟನ್ನು ತುಂಬಿ ರೈತರ ದವಸಧಾನ್ಯಗಳನ್ನೆಲ್ಲಾ ಯುದ್ಧ ಕ್ಷೇತ್ರದ ಅವಶ್ಯಕತೆಗಳಿಗೆ ಸಾಗಿಸಿಬಿಟ್ಟರು. ಧಾನ್ಯ ಮಾರಬೇಡಿ ಎಂದು ಕುಮಾರಪ್ಪ ಮೊರೆಯಿಟ್ಟರು. ಯುದ್ಧೋದ್ಯಮಕ್ಕೆ ವಿರೋಧ ಮಾಡಿದ್ದರಿಂದ ಅವರನ್ನೆಲ್ಲಾ ದಸ್ತಗಿರಿ ಮಾಡಿ ಎರಡೂವರೆ ವರ್ಷ ಕಠಿಣ ಶಿಕ್ಷೆ ವಿಧಿಸಿದರು, ನ್ಯಾಯಾಲಯದಲ್ಲಿ ಬ್ರಿಟಿಷ್ ನ್ಯಾಯಾಧೀಶರಿಗೆ ಉತ್ತರಿಸುತ್ತಾ, "ನನ್ನ ಬುದ್ಧಿವಾದವನ್ನು ಬಂಗಾಳದ ರೈತರು ಕೇಳಿದ್ದರೆ ೧೯೪೧ ರ ಕೃತಕ ಕ್ಷಾಮದಲ್ಲಿ ಮೂರು ಲಕ್ಷ ನಿರಪರಾಧಿ ಗ್ರಾಮಸ್ಥರು ಸಾಯುತ್ತಿರಲಿಲ್ಲ" ಎಂದರು. ದೇಶದಲ್ಲಿ ಬ್ರಿಟಿಷರ ಆಳ್ವಿಕೆ ತೊಲಗಲು ಕುಮಾರಪ್ಪನವರ ಧೀರವಾಣಿ ಒಂದು ಪ್ರಬಲ ಶಕ್ತಿಯಾಗಿ ಪರಿಣಮಿಸಿತ್ತು. ೧೯೪೩ ರಿಂದ ೪೫ ರವರೆಗೆ ಜಬ್ಬಲ್‌ಪುರ ಸೆರೆಮನೆಯಲ್ಲಿ ಶಿಕ್ಷೆ ಅನುಭವಿಸಿದರು. ಅಲ್ಲಿ ಅವರಿಗೆ ಆರೋಗ್ಯ ಕೆಟ್ಟಿತು.

ದೇಹಸ್ಥಿತಿ ತುಂಬ ಗಂಭೀರ ರೋಗಕ್ಕೆ ತುತ್ತಾದಾಗ ಅಧಿಕಾರಿಗಳು ಹೆದರಿ ಬಿಡು ಗಡೆ ಮಾಡಿಬಿಟ್ಟರು. "ವೈದ್ಯರ ಭವಿಷ್ಯವನ್ನು ಸುಳ್ಳಾಗಿಸಿದಿರಿ" ಎಂದರು ಗಾಂಧೀಜಿ.

೧೯೪೭ ರಲ್ಲಿ ಸ್ವಾತಂತ್ರ್ಯಕ್ಕಾಗಿ ಸಂಧಾನಗಳು ನಡೆದು ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ನಿರ್ಮಾಣವಾಯಿತು. ಆ ಕಾಲಕ್ಕೆ ದೇಶದಲ್ಲಿ ದುರ್ಭಿಕ್ಷ, ದಾರಿದ್ರ್ಯ, ನಿರುದ್ಯೋಗ ಅತಿದಾರುಣ ಸ್ವರೂಪದಲ್ಲಿ ತಾಂಡವವಾಡುತ್ತಿದ್ದವು. ಆರ್ಥಿಕ ಪುನರುತ್ಥಾನಕ್ಕಾಗಿ ನಡೆದ ನಾಯಕರ ಸಮಾವೇಶದಲ್ಲಿ ಕುಮಾರಪ್ಪ ಒಂದು ಸಮಗ್ರ ಗ್ರಾಮ ಪುನರ್ರಚನಾ ಯೋಜನೆ ಸಿದ್ಧಮಾಡಿಕೊಟ್ಟರು. ಅತ್ಯಂತ ಅಧಿಕೃತ ಅಂಕಿ ಅಂಶಗಳನ್ನು ಶೇಖರಿಸಿ ಭಾರತದ ಸಂದರ್ಭಕ್ಕೆ ಅನುಗುಣವಾಗಿ ತಯಾರಿಸಿದ ಈ ತಜ್ಞರ ವರದಿ ಇಂದಿಗೂ ಮಾರ್ಗ ದರ್ಶಕವಾಗಿದೆ.

ಎರಡು ಪ್ರಮುಖ ಅಂಶಗಳನ್ನು ಕುಮಾರಪ್ಪ ಅತ್ಯಂತ ಪ್ರಭಾವಯುತ ವಾಗಿ ಪ್ರತಿಪಾದಿಸಿದರು:–

೧) ದೇಶದಲ್ಲಿ ಅದರಲ್ಲೂ ಬಹುಸಂಖ್ಯಾತ ಸಾಮಾನ್ಯರಿರುವ ಗ್ರಾಮಗಳಲ್ಲಿ ಜೀವನದ ಪ್ರಾಥಮಿಕ ಆವಶ್ಯಕತೆಗಳಾದ ಆಹಾರ, ಬಟ್ಟೆ ಮತ್ತು ಉದ್ಯೋಗಗಳ ಅಭಾವ ವಿಪರೀತವಾಗಿ ಆವರಿಸಿದೆ. ಆ ಕಾರಣದಿಂದ ಎಲ್ಲ ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನೂ ವ್ಯವಸಾಯ ಮತ್ತು ರೈತಜೀವನಗಳನ್ನೇ ಕೇಂದ್ರವಾಗಿಟ್ಟು ಕೊಂಡು ಯೋಜಿಸಬೇಕು. ಮಾನವಶಕ್ತಿ ಮತ್ತು ನಿಸರ್ಗ ಎರಡೇ ನಮ್ಮ ನಿಜ ವಾದ ಬಂಡವಾಳ. ಇವುಗಳ ವಿವೇಕಯುತ ಬಳಕೆ ಭಾರತೀಯ ನೆಲೆಗಟ್ಟುಗಳ ಆಧಾರದ ಮೇಲೆ ರೂಪಿತವಾಗುವುದು ಅಗತ್ಯ.

೨) ನಿಜವಾದ ಪ್ರಜಾರಾಜ್ಯ ಸ್ಥಾಪಿತವಾಗಲು ಗ್ರಾಮಸಮುದಾಯಗಳಿಗೆ ಸ್ವಾಯತ್ತ ಅಧಿಕಾರಗಳನ್ನು ನೀಡಿ, ಸ್ವಪರಿಪೂರ್ಣತೆಗೆ ಪ್ರೋತ್ಸಾಹ ನೀಡಲು ವಿವಿಧೋದ್ದೇಶ ಸಹಕಾರೀ ಸಂಸ್ಥೆಗಳನ್ನೂ, ಧಾನ್ಯಭಂಡಾರಗಳನ್ನೂ, ಗ್ರಾಮ ಕೈಗಾರಿಕೆಗಳನ್ನೂ ವ್ಯವಸ್ಥೆಮಾಡಿ 'ಬಳಕೆಗಾಗಿ ಉತ್ಪಾದನೆ' ಎಂಬ ತತ್ವದ ಆಧಾರದ ಮೇಲೆ ಹಣದ ಪ್ರಾಬಲ್ಯವನ್ನು ಕಡಿಮೆ ಮಾಡಬೇಕು. ಉತ್ಪಾದನೆ ಯಲ್ಲಿ ಹೆಚ್ಚುವರಿ ಎಂದು ಪ್ರಮಾಣಿತವಾದುದನ್ನು ಮಾತ್ರ ಮಾರಾಟ ಮಾಡುವಂತಾಗಬೇಕು.

ಅನೇಕ ಪ್ರಾಂತ ಸರ್ಕಾರಗಳು ಆ ಕಾಲಕ್ಕೆ ಈ ಮಾರ್ಗದರ್ಶನದಂತೆ ವ್ಯಾಪಕ ಅಭಿವೃದ್ಧಿ ಕಾರ್ಯಗಳನ್ನು ಯೋಚಿಸಲಾರಂಭಿಸಿದ್ದವು. ಆದರೆ ಕ್ರಮೇಣ ಕೇಂದ್ರಿತ ಬಂಡವಾಳ, ಯಂತ್ರೋದ್ಯಮ ವಿಸ್ತರಣೆ, ಪಾಶ್ಚಾತ್ಯ ರೀತಿಯ ಯೋಜನಾ ವಿಧಾನಗಳು ಭಾರತ ಸರ್ಕಾರಕ್ಕೆ ಹೆಚ್ಚು ಪ್ರಿಯವೆನಿಸಿ ಗಾಂಧೀವಾದದ ರಚನಾ

ತ್ಮಕ ಅರ್ಥವಿಚಾರಕ್ಕೆ ಅಧಿಕಾರಶಾಹಿಯ ಮತ್ತು ಅರ್ಥಶಾಸ್ತ್ರ ಪಂಡಿತರ ಬೆಂಬಲ ಕಡಿಮೆಯಾಯಿತು. ಗ್ರಾಮೋದ್ಯೋಗಗಳಿಗೆ ಕೇವಲ ಜೀವನಾಂಶದ ಆರ್ಥಿಕ ದಾನಗಳ ವಿತರಣೆ ಪ್ರಾರಂಭವಾಗಿ ಅವುಗಳು ಬದುಕಲೂ ಆಗದೆ ಸಾಯಲೂ ಆಗದೆ ತ್ರಿಶಂಕು ಸ್ಥಿತಿಯಲ್ಲಿ ಕಾಲ ನೂಕಬೇಕಾಯಿತು.

೧೯೪೬ ರಲ್ಲಿ ಬ್ರಿಟನ್ನಿನ ಸಂಸದೀಯ ನಿಯೋಗವೊಂದು ಭಾರತಕ್ಕೆ ಬಂದು ಮದ್ರಾಸಿನಲ್ಲಿ ಗಾಂಧೀಜಿಯೊಡನೆ ಆರ್ಥಿಕ ಸಂಬಂಧಗಳನ್ನು ಚರ್ಚಿಸಿತು. ಹೊರಡುವ ಮುನ್ನ ಕುಮಾರಪ್ಪನವರೊಡನೆ ಮಾತನಾಡಿ ಎಂದು ಗಾಂಧೀಜಿ ಸೂಚಿಸಿದರು. ಈ ನಿಯೋಗ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿಂದಾದ ಅನೇಕ ಅನುಗ್ರಹ ಸೌಲಭ್ಯಗಳ ಬಗ್ಗೆ ಹೊಗಳಿಕೊಂಡರು. ಕುಮಾರಪ್ಪನವರು ಅಷ್ಟೇ ಬಿರುಸಾಗಿ ಅವರಿಂದಾದ ದಾರುಣ ಅನಿಷ್ಟಗಳನ್ನು ವಿವರಿಸಿ, "ನಿಮ್ಮ ಗುಲಾಮರನ್ನು ತಯಾರಿಸಿ, ಅವರ ಸ್ವಾರ್ಥಕ್ಕೆ ಪ್ರೋತ್ಸಾಹ ನೀಡಿ, ದೇಶದ ಸಂಪತ್ತನ್ನೆಲ್ಲ ದರೋಡೆ ಮಾಡಿಬಿಟ್ಟಿರಿ" ಎಂದರು. "ಬ್ರಿಟಿಷ್ ಸೈನ್ಯದಿಂದ ಭಾರತದಲ್ಲಿ ಶಾಂತಿ ಕಾಪಾಡಿದೆವು" ಎಂದಾಗ "ಹಣಕ್ಕಾಗಿ ದೇಶಹಿತವನ್ನು ಮಾರಿಕೊಂಡ ಗುಲಾಮೀ ಸೈನಿಕರು ನೀಚಕೊಲೆಗಾರರಾದರು. ಅವರ ಮೇಲಿನ ಅಧಿಕಾರಿಗಳು ಖಳನಾಯಕರಾಗಿ ರಕ್ತ ಹೀರಿದರು. ಇದು ರಕ್ಷಣೆಯ ಮಾರ್ಗವೇ?" ಎಂದು ಗುಡುಗಿದರು. ಕೋಪದಿಂದ ಕೆಂಪಾಗಿ ನಿಯೋಗದ ಸದಸ್ಯರು ಹಿಂತಿರುಗಿದರು. ಕುಮಾರಪ್ಪನವರ ಸೋದರಿ ಅಲ್ಲಿದ್ದರು. ಮದ್ರಾಸಿನ ಅವರ ಮನೆಯಲ್ಲಿ ಈ ಸಂವಾದ ನಡೆಯಿತು. ಆಕೆ ಕುಮಾರಪ್ಪನವರನ್ನು ಕುರಿತು, "ಅವರೆಲ್ಲಿ ಈ ಸಂಭಾಷಣೆಯಿಂದ ಕೋಪಗೊಂಡು ರಿವಾಲ್ವರಿನಿಂದ ನಿಮ್ಮನ್ನು ಕೊಂದುಬಿಡುವರೋ ಎಂದು ಹೆದರಿದ್ದೆ" ಎಂದರು. ನಗುತ್ತಾ ಕುಮಾರಪ್ಪ, "ಆಗ ಏನಾಗುತ್ತಿತ್ತು? ನಾನು ಸತ್ತು ಪರಲೋಕಕ್ಕೆ ಹೋಗುತ್ತಿದ್ದೆ! ಅವರೂ ಕೊಲೆಗಾರರೆಂದು ಮರಣ ದಂಡನೆಗೆ ಗುರಿಯಾಗಿ ಅಲ್ಲಿಗೇ ಬರುತ್ತಿದ್ದರು. ಅಲ್ಲಿ ನಾವಿಬ್ಬರೂ ಈ ವಾಗ್ವಾದವನ್ನು ಅನಂತಕಾಲದವರೆಗೆ ಮುಂದುವರಿಸಬಹುದಾಗಿತ್ತಲ್ಲವೇ?" ಎಂದು ಹಾಸ್ಯ ಮಾಡಿದರು. ಇಂಥ ನಿಷ್ಠುರವಾದ ವಿವಾದಗಳಿಗೆ ಕುಮಾರಪ್ಪ ಹೆಸರಾಗಿದ್ದರು.

೮

೧೯೪೮ ರಲ್ಲಿ ಗಾಂಧೀಜಿಯ ನಿಧನಕ್ಕೆ ಮುಂಚೆ ಅವರು ಮುಂದೆ ಭಾರತದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯ ಮಾರ್ಗಗಳನ್ನು ಚಿಂತಿಸುತ್ತಿದ್ದರು. ಕುಮಾರಪ್ಪ ಆ ವೇಳೆಗೆ ಸಮಗ್ರ ಗ್ರಾಮ ಸೇವಾ ಕಾರ್ಯಕ್ರಮದ ಪ್ರಯೋಗ ಮಾಡಲು ವರ್ಧಾ ಬಳಿ ಸೇಲ್ದಾ ಎಂಬ ಗ್ರಾಮದಲ್ಲಿ ಕೃಷಿ ಭೂಮಿ ಪಡೆದು 'ಪನ್ನೈ' ಆಶ್ರಮ' ಸ್ಥಾಪಿಸಿದ್ದರು. ಆರೋಗ್ಯ ಸುಧಾರಣೆಗಾಗಿ ಅವರು ಮಗನ

ವಾಡಿಯಿಂದ ದೂರವಾಗಬೇಕಾಯಿತು. ಗಾಂಧೀಜಿ ಪ್ರಾರಂಭಿಸಿದ್ದ ಅಖಿಲ ಭಾರತ ರಚನಾತ್ಮಕ ಸಂಸ್ಥೆಗಳಾದ ನೂಲುವವರ ಸಂಘ, ಗೋ ಸೇವಾ ಸಂಘ, ಹರಿಜನ ಸೇವಾ ಸಂಘ, ಜೀವನ ಶಿಕ್ಷಣ ಸಮಿತಿ, ಮಹಿಳಾಶ್ರಮ, ಗ್ರಾಮೋದ್ಯೋಗ ಸಂಘ ಮುಂತಾದ ಎಲ್ಲ ಸಂಘಗಳನ್ನು ಒಟ್ಟುಗೂಡಿಸಿ 'ಲೋಕ ಸೇವಾ ಸಂಘ' ಎಂಬ ಬೃಹತ್ ಸಂಸ್ಥೆ ಸ್ಥಾಪಿಸುವ ಯೋಜನೆ ಮಾಡಲು ಕುಮಾರಪ್ಪನವರಿಗೆ ಸೂಚಿಸಲಾಗಿತ್ತು. ಅದೇ ವರ್ಷ ಫೆಬ್ರುವರಿ ಎರಡರಂದು ಸೇವಾ ಗ್ರಾಮದಲ್ಲಿ ಎಲ್ಲ ದೇಶ ನಾಯಕರ, ರಚನಾತ್ಮಕ ಕಾರ್ಯಕರ್ತರ ಸಮ್ಮೇಳನ ಕರೆಯಲು ಕುಮಾರಪ್ಪನವರನ್ನು ಸಂಘಟಕರನ್ನಾಗಿ ನೇಮಿಸಲಾಗಿತ್ತು. ದೈವ ಚಿತ್ರ ಬೇರೆಯೇ ಆಯಿತು. ೧೯೪೮ ನೇ ಜನವರಿ ೩೦ ರಂದೇ ಗಾಂಧೀಜಿಯ ಬಲಿದಾನವಾಯಿತು. ಲೋಕ ಸೇವಾ ಸಂಘದ ರೂಪರೇಷೆಗಳನ್ನು ಗಾಂಧೀಜಿ ತಮ್ಮ ಮರಣ ಶಾಸನವಾಗಿ ಹರಿಜನ ಪತ್ರಿಕೆಯಲ್ಲಿ ಬರೆದಿದ್ದರು. ಮುಂದೆ ಬರಲಿರುವ ಅಖಿಲಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ಒಂದು ನಿರ್ಣಯ ತಂದು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಸಂಘಟಿತವಾದ ಬೃಹದ್ ಕಾಂಗ್ರೆಸ್ ಸಂಸ್ಥೆ ವಿಸರ್ಜಿಸಿ ಲೋಕಸೇವಾ ಸಂಘವನ್ನಾಗಿ ಪರಿವರ್ತಿಸಲು ಸೂಚನೆ ಮಾಡಿದ್ದರು. ಸಂಸದೀಯ ಕ್ಷೇತ್ರಕ್ಕಿಂತ ಮಿಗಿಲಾಗಿ ಗ್ರಾಮ ಸೇವಾ ಕ್ಷೇತ್ರದಲ್ಲಿ ದೇಶಭಕ್ತ ಸ್ವಯಂ ಸೇವಕರು ನೆಲಸಿ ಆರ್ಥಿಕ ಸ್ವರಾಜ್ಯ ಸ್ಥಾಪಿಸಲು ಜನಮಾನಸವನ್ನು ಸಿದ್ಧಗೊಳಿಸಬೇಕು ಎಂದು ಆಶಿಸಿದ್ದರು. ಅದು ಕನಸಾಗಿಯೇ ಉಳಿದುಬಿಟ್ಟಿತು. ಕುಮಾರಪ್ಪ ಖಿನ್ನರಾಗಿ ಮುಂದೆ ತಮಿಳುನಾಡಿನ ಕಲ್ಲುಪಟ್ಟಿಯಲ್ಲಿದ್ದ ಗಾಂಧೀ ನಿಕೇತನ ಆಶ್ರಮಕ್ಕೆ ಬಂದು ನೆಲೆಸಿದರು.

೧೯೪೮ ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಒಂದು ಕೃಷಿ ಸುಧಾರಣಾ ಸಮಿತಿಯನ್ನು ಶ್ರೀ ಕುಮಾರಪ್ಪನವರ ಅಧ್ಯಕ್ಷತೆಯಲ್ಲಿ ರಚಿಸಿತು. ದೇಶದ ಎಲ್ಲ ರಾಜ್ಯಗಳಲ್ಲಿ ಸಂಚರಿಸಿ ಕೃಷಿ ಮತ್ತು ಕೃಷಿಕರ ವಾಸ್ತವ ಸ್ಥಿತಿಗತಿಗಳನ್ನರಿತು ಒಂದು ವ್ಯಾಪಕವಾದ ವಿಚಾರಯೋಗ್ಯವಾದ ವರದಿ ಸಲ್ಲಿಸಿತು. ಅಲ್ಲಿವರೆಗೆ ಇದ್ದ ಕಾಂಗ್ರೆಸ್ಸಿನ ಪ್ರಧಾನ ಧೋರಣೆ ಗ್ರಾಮ ಸ್ವರಾಜ್ಯ, ಗ್ರಾಮ ಕೇಂದ್ರಿತ ಅರ್ಥವ್ಯವಸ್ಥೆ– ಸಂಪೂರ್ಣ ವಿಕೇಂದ್ರೀಕೃತ ಉತ್ಪಾದನೆ ಮತ್ತು ವಿತರಣೆ. ಇದನ್ನನುಸರಿಸಿ ಆ ಸಮಿತಿ ಅಮೂಲ್ಯ ಸಲಹೆಗಳನ್ನಿತ್ತಿತು:–

೧) ಭೂಸ್ವಾಮ್ಯವನ್ನು ಸಮಾಜೀಕರಣಗೊಳಿಸುವುದು;

೨) ವ್ಯವಸಾಯ ಕ್ಷೇತ್ರವನ್ನು ವ್ಯಾವಹಾರಿಕ ಅರ್ಥರಚನೆಯ ಮಾದರಿಯಲ್ಲಿ ಸುಧಾರಿಸಿ ಬೇನಾಮಿ ಪಾಲುಗಾರಿಕೆಯನ್ನು ರದ್ದು ಮಾಡುವುದು;

೩) ಬೇಸಾಯದ ಹಕ್ಕು ರೈತನಿಗೆ ಸೇರಬೇಕು ಮತ್ತು ಉತ್ಪಾದನೆ

ಅವನದಾಗಬೇಕು;

೪) ವ್ಯವಸಾಯದಲ್ಲಿಯ ಕನಿಷ್ಟ ಕೂಲಿ ಇತರ ಉದ್ಯೋಗಗಳ ಕಾರ್ಮಿಕ ರಿಗೆ ಸಮಾನವಾಗಿರಬೇಕು;

೫) ಹಣದ ಬಳಕೆ ಕಡಮೆ ಮಾಡಿ ಆದಷ್ಟು ಹೆಚ್ಚು ಪದಾರ್ಥ ವಿನಿಮಯ ಪದ್ಧತಿಯಲ್ಲಿ ವರ್ಷಪೂರ್ತಿ ಜೀವನಕ್ಕೆ ಸಾಕಾಗುವ ರೀತಿಯಲ್ಲಿ ಗ್ರಾಮೋದ್ಯೋಗಗಳನ್ನು ಅಳವಡಿಸಬೇಕು.

ಸಹಜವಾಗಿಯೇ ಈ ಸಲಹೆಗಳನ್ನು ಬಂಡವಾಳ ವರ್ಗ, ಅಧಿಕಾರಿ ವರ್ಗ ಮತ್ತು ಪಾಶ್ಚಾತ್ಯ ಅರ್ಥಪಂಡಿತರ ವರ್ಗ ತಿರಸ್ಕರಿಸಿತು. ಗಾಂಧೀ ಮಾರ್ಗದಲ್ಲಿ ನಂಬಿಕೆಯಿದ್ದ ಅನೇಕ ಕಾರ್ಯಕರ್ತರು ಅಲ್ಲಲ್ಲಿ ಸಮಗ್ರ ಗ್ರಾಮ ಸೇವಾ ಕೇಂದ್ರ ಗಳನ್ನು ಪ್ರಾರಂಭಿಸಿ ಈ ಸಲಹೆಗಳಿಗೆ ಚಾಲನೆ ಕೊಡಲು ಪ್ರಯತ್ನಿಸಿದರು. ಕುಮಾರಪ್ಪನವರ 'ಪನ್ನೈ' ಆಶ್ರಮ ಒಂದು ಮಾದರಿಯಾಗಿತ್ತು. ಮುಂದೆ ಇದೇ ಕ್ರಾಂತಿಕಾರಕ ವಿಚಾರಗಳನ್ನು ವಿಸ್ತರಿಸಿ ಆಚಾರ್ಯ ವಿನೋಬಾ ಭೂದಾನ–ಗ್ರಾಮ ದಾನ ಆಂದೋಲನಗಳನ್ನು ನಡೆಸಿ ಭೂಸಮಸ್ಯೆಯ ಪರಿಹಾರಕ್ಕೆ ಅಗಾಧ ಕೊಡುಗೆ ನೀಡಿದರು. ಆರೋಗ್ಯ ಹದಗೆಟ್ಟಿದ್ದರಿಂದ ಮತ್ತು ದೇಶದಲ್ಲಿ ರಾಜಕೀಯ ನಾಯಕರಿಗೂ ರಚನಾತ್ಮಕ ಕಾರ್ಯಕರ್ತರಿಗೂ ಅಂತರ ಅಗಾಧವಾಗಿ ಹೆಚ್ಚುತ್ತಾ ಹೋದುದ ರಿಂದ ಕುಮಾರಪ್ಪನವರು ತಟಸ್ಥರಾದರು. ಶಾಸನಶಕ್ತಿ ಯಾವಾಗ ಅಹಿಂಸಕ ಜನಾಂದೋಳನಗಳನ್ನು ಪೋಷಿಸದೆ ಪಟ್ಟಭದ್ರ ಹಿತಗಳ ಕಡೆಗೆ ವಾಲಿತೋ ಆಗ ಸರ್ವೋದಯ ಚಳುವಳಿ ಶಿಥಿಲವಾಗತೊಡಗಿತು. ಕುಮಾರಪ್ಪನವರು ಕಲ್ಲು ಪಟ್ಟಿಯ ಗಾಂಧಿ ನಿಕೇತನದಲ್ಲಿ ತಮ್ಮದೇ ಆದ ರೀತಿಯಲ್ಲಿ ಗ್ರಾಮ ಸುಧಾರಣಾ ಕಾರ್ಯಗಳಲ್ಲಿ ನಿರತರಾದರು.

ಗಾಂಧೀಜಿ ನಿಧನರಾದಮೇಲೆ ಒಂದು ನಿಧಿ ಕೂಡಿಸಿ ಸೂಕ್ತ ಸ್ಮಾರಕ ನಿರ್ಮಿ ಸಲು ಅತ್ಯುನ್ನತ ರಾಷ್ಟ್ರಮಟ್ಟದ ನಾಯಕ ರಾಜೇಂದ್ರಪ್ರಸಾದರ ಅಧ್ಯಕ್ಷತೆಯಲ್ಲಿ ಸಮಿತಿ ಏರ್ಪಟ್ಟಿತು. ಹತ್ತು ಹದಿನೈದು ಜನರ ಈ ಸಮಿತಿಯ ಸಭೆಗೆ ಕುಮಾರಪ್ಪ ಹೋದರು. ಅವರ ವಿಶಿಷ್ಟ ವಿಚಾರಗಳನ್ನು ನಿಸ್ಸಂಕೋಚವಾಗಿ ತಿಳಿಸಿದರು. "ಗಾಂಧಿ ಹೆಸರಿನಲ್ಲಿ ಹಣ ಕೂಡಿಸಬೇಡಿ. ಬದಲಾಗಿ ಗಾಂಧಿ ಮಾರ್ಗದಲ್ಲಿ ನಿಷ್ಠೆ ಇರುವುದಾದರೆ ದೇಶದಲ್ಲೆಲ್ಲಾ ಸಂಚರಿಸಿ ಒಂದು ಲಕ್ಷ ಗ್ರಾಮ ಸೇವಕರನ್ನು ಕೂಡಿಸಿ. ರಾಜಕೀಯ ತುಮುಲಗಳಲ್ಲಿ ಸೇರದೆ ಏಕಸಂಕಲ್ಪದಿಂದ ರಾಷ್ಟ್ರಪುನರ್ರಚನೆಗೆ ತೊಡಗೋಣ. ಇದಕ್ಕಾಗಿ ಜವಹರಲಾಲರು, ಸರ್ದಾರ್ ಪಟೇಲರು, ರಾಜಕುಮಾರಿ ಅಮೃತಕೌರ್, ಮೌಲಾನಾ ಆಜಾದ್ (ಇವರು ಆಗ ಕೇಂದ್ರದ ಮಂತ್ರಿಗಳು) ರಾಜೀನಾಮೆ ನೀಡಿ ಜನತೆಯ ಮಧ್ಯೆ ನಿಂತು ಗಾಂಧೀಮಾರ್ಗದ ಸಾಮಾಜಿಕ,

ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗೆ ಶ್ರಮಿಸಿದರೆ ಮಾತ್ರನಿಜವಾದ ಗಾಂಧಿ ಸ್ಮಾರಕವಾದೀತು ಎಂದು ಕುಮಾರಪ್ಪ ನುಡಿದರು. ಎಲ್ಲರಲ್ಲೂ ವೈಚಾರಿಕ ತುಮುಲ ಉಂಟಾಯಿತು. ತತ್ವಶಹ ಈ ಮಾರ್ಗ ಒಪ್ಪಬಹುದು ಎಂದು ಹೇಳಿದರೂ ಸಹ ಸಹಮತವಿಲ್ಲದೆ ಆ ಸಲಹೆ ಬಿದ್ದುಹೋಯಿತು. ಕೊನೆಗೆ ರಾಷ್ಟ್ರೀಯ ಗಾಂಧೀ ಸ್ಮಾರಕ ನಿಧಿ ಸ್ಥಾಪನೆಯಾಗಿ ಮಿಕ್ಕೆಲ್ಲ ಸ್ಮಾರಕಗಳ ದಾರಿಯನ್ನೇ ಹಿಡಿಯಿತು. ಶಾಸನ ಶಕ್ತಿ, ಧನಶಕ್ತಿಗಳನ್ನಾಶ್ರಯಿಸಿದ ಕಾಂಗ್ರೆಸ್ ಕ್ರಮೇಣ ಗಾಂಧೀ ಪ್ರಣೀತ ಗ್ರಾಮ ರಾಜ್ಯ ಕಲ್ಪನೆಯಿಂದ ದೂರವಾಗುತ್ತಲೇ ಸಾಗಿತು. ಅಂತೆಯೇ ಗಾಂಧೀಜಿ ಎಚ್ಚರಿಸಿದ್ದ ಜಾಗೃತಿಯೂ ಮಾಯವಾಯಿತು.

ಸಾರ್ವಜನಿಕ ಕಾರ್ಯಕ್ಷೇತ್ರದಿಂದ ನಿವೃತ್ತರಾಗಿ ಕುಮಾರಪ್ಪ ತಮ್ಮ ಆಶ್ರಮದಲ್ಲೇ ನಿಂತರು. ವಿಶ್ವಶಾಂತಿಯ ಬಗ್ಗೆ ಆಳವಾಗಿ ಆಲೋಚಿಸತೊಡಗಿದರು. ೨ನೇ ಮಹಾಯುದ್ಧದನಂತರ ೩೦ ವರ್ಷಗಳಕಾಲ ಅಂತರಾಷ್ಟ್ರೀಯ ವ್ಯವಹಾರಗಳೆಲ್ಲ ಅಮೆರಿಕದ ಬಂಡವಾಳಶಾಹಿ ಮತ್ತು ರಷ್ಯದ ಸಾಮ್ಯವಾದೀ ಸರ್ವಾಧಿಕಾರಿಗಳ ಮಧ್ಯದ ಭಯಾನಕ ಘರ್ಷಣೆಯಲ್ಲಿ ಸಿಕ್ಕಿತು. ಶಾಂತಿಪ್ರಿಯರು ವಿಶ್ವದಲ್ಲೆಲ್ಲಭಯಂಕರ ಮಾರಕ ಶಸ್ತ್ರಾಸ್ತ್ರಗಳ ಹೆಚ್ಚಳವನ್ನು ಕಂಡು ವಿಹ್ವಲರಾದರು. "ಯುದ್ಧರಹಿತ ಮಾನವ ಸಮಾಜ ಸಾಧ್ಯವೆ?" ಎಂಬ ಪ್ರಶ್ನೆ ಸಾಮಾನ್ಯ ಜನತೆಯಲ್ಲಿ ಧುಮು ಧುಮಿಸುತ್ತಿತ್ತು. ಆದರೆ ಹಿಂಸಾತ್ಮಕ ಶೋಷಣೆಗಳಿಂದ ಬೆಳೆದು ನಿಂತಿದ್ದ ರಾಷ್ಟ್ರಾಡಳಿತ ಶಕ್ತಿಗಳು ಕೇಂದ್ರಿತ ಉತ್ಪಾದನಾ ರಚನೆ ಮತ್ತು ಮಾರುಕಟ್ಟೆಗಳ ಸ್ಪರ್ಧೆಯಲ್ಲಿ ದ್ವೇಷ, ಸೇಡು, ಪ್ರತೀಕಾರ, ಏಕಸ್ವಾಮ್ಯದ ಬಂಡವಾಳಶಾಹಿ ಇವುಗಳನ್ನೇ ಬೆಳೆಸಿತು. ವಾಮಪಂಥೀಯ ಸಾಮ್ಯವಾದಿ ರಾಷ್ಟ್ರಗಳೂ ಮಾರಕಶಸ್ತ್ರಗಳ ಬಲದ ಆಶ್ರಯ ಪಡೆದು ವರ್ಗ ಸಂಘರ್ಷವನ್ನು ಹೆಚ್ಚಿಸಿದವು. ಕುಮಾರಪ್ಪ ಈ ವಿದ್ಯಮಾನಗಳನ್ನೆಲ್ಲಾ ಗಾಂಧೀವಿಚಾರಪರ್ಗದ ಮಾನದಂಡದಿಂದ ನೋಡತೊಡಗಿದರು. ಯುದ್ಧರಹಿತ ವಿಶ್ವಕ್ಕೆ ಇರುವುದು ಒಂದೇ ದಾರಿ: ಅದು ಗಾಂಧೀ ಪ್ರಣೀತ ಅಹಿಂಸಾತ್ಮಕ ಸತ್ಯಾಗ್ರಹ ಎಂದು ಎಲ್ಲ ವಿಶ್ವಶಾಂತಿ ಸಮ್ಮೇಳನಗಳಲ್ಲಿ ಪ್ರಭಾವಯುತವಾಗಿ ಪ್ರತಿಪಾದಿಸಿದರು.

೧೯೪೮ ಲಂಡನ್ನಿನಲ್ಲಾದ ಅಂತರಾಷ್ಟ್ರೀಯ ಯುದ್ಧ ವಿರೋಧಿ ಸಮ್ಮೇಳನ (ವಾರ್ ರೆಸಿಸ್ಟರ್ಸ್ ಇಂಟರ್ ನ್ಯಾಷನಲ್), ೧೯೫೧ ರಲ್ಲಿ ಜಪಾನ್ ಸಮ್ಮೇಳನ, ಅದೇ ವರ್ಷ ಬರ್ಲಿನ್‌ನಲ್ಲಿ ನಡೆದ ವಿಶ್ವಶಾಂತಿ ಸಮ್ಮೇಳನ (ವರ್ಲ್ಡ್ ಪೀಸ್ ಕೌನ್ಸಿಲ್) ಮತ್ತು ರಷ್ಯದಲ್ಲಿ ನಡೆದ ವಿಶ್ವಶಾಂತಿ ಸಭೆ (ವರ್ಲ್ಡ್ ಕಾಂಗ್ರೆಸ್ ಫಾರ್ ಪೀಸ್) ಮತ್ತೆ ಇದೇ ಸಂಸ್ಥೆಗಳು ಬಲ್ಗೇರಿಯಾ, ಬ್ರಿಟನ್, ಜರ್ಮನಿಗಳಲ್ಲಿ ನಡೆಸಿದ ಸಮ್ಮೇಳನಗಳಿಗೆ ಕುಮಾರಪ್ಪ ಆಹ್ವಾನಿತ ಪ್ರತಿನಿಧಿಯಾಗಿ

ಹೋಗಿ ಭಾಗವಹಿಸಿದರು. ಅಂತರಾಷ್ಟ್ರೀಯ ಸೌಹಾರ್ದ ನಿಯೋಗದಲ್ಲಿ ೧೯೫೧ ರಲ್ಲಿ ಚೀಣಾದೇಶಕ್ಕೆ ಹೋಗಿ ಮಾವೋತ್ಸೆಂಗ್ ಅವರ ವ್ಯಾಪಕ ಆರ್ಥಿಕ ಕ್ರಾಂತಿ ಕಂಡು ಶ್ಲಾಘಿಸಿದರು. ಎಲ್ಲಕಡೆಯೂ ತಮ್ಮ ಅಹಿಂಸಾತ್ಮಕ ಜನತಾ ಆಂದೋಲನದ ಮೂಲಕ ಸಣ್ಣ ಸಣ್ಣ ಸ್ವಾವಲಂಬೀ ಆರ್ಥಿಕ ಘಟಕಗಳನ್ನು ನಿರ್ಮಾಣ ಮಾಡುವ ಗಾಂಧೀ ನೀತಿಯನ್ನು ಸಮರ್ಥವಾಗಿ ಪ್ರತಿಪಾದಿಸುತ್ತಾ ಬಂದರು. ಇವೆಲ್ಲ ಸಮ್ಮೇಳನಗಳಲ್ಲಿ ವಾಮಪಂಥೀಯ ರಾಜಕಾರಣಿಗಳೇ ಹೆಚ್ಚು ಭಾಗ ವಹಿಸುತ್ತಿದ್ದರಿಂದ ಭಾರತದಲ್ಲಿ ಕುಮಾರಪ್ಪನವರನ್ನು ಸಾಮ್ಯವಾದಿಗಳ ಸಹ ಯಾತ್ರಿಕ ಎಂದು ದೂರಲಾಯಿತು. ಅವರ ಮೇಲೆ ನಿರ್ಬಂಧಗಳನ್ನು ಹೊರಿಸ ಲಾಯಿತು. ಅಮೇರಿಕದ ಅಪಾರ ಸಾಲದ ಹಣದಿಂದ ಯೋಜನೆಗಳನ್ನು ಪ್ರಾರಂಭಿಸಿದ್ದ ಭಾರತ ಸರ್ಕಾರಕ್ಕೆ ಕುಮಾರಪ್ಪನವರು ಅಮೇರಿಕದ ರೀತಿನೀತಿ ಗಳನ್ನು ಟೀಕಿಸುತ್ತಿದ್ದುದು ಅಪರಾಧವೆನಿಸುತ್ತಿತು. ಆದರೆ ಈ ಶಾಂತಿದೂತನ ಅದಮ್ಯ ಚೇತನ ಎಂದೂ ಅಧಿಕಾರಶಾಹಿಗೆ ಮಣಿದು ತನ್ನ ಆಂತರಿಕ ನಿಷ್ಠೆ ಗಳನ್ನು ಬಿಟ್ಟುಕೊಡಲಿಲ್ಲ.

ನೆಹರೂ ರಚಿಸಿದ ಮೊದಲ ಯೋಜನಾ ಆಯೋಗದ ಉಪ ಸಮಿತಿ ಗಳಲ್ಲಿ ಎಡೆಬಿಡದೆ ಗ್ರಾಮರಾಜ್ಯದ ಆರ್ಥಿಕವಾದವನ್ನು ಮಂಡಿಸುತ್ತಿದ್ದರು. ಮತ್ತೆ ಮತ್ತೆ ಸಾಮ್ರಾಜ್ಯವಾದಿಗಳಿಂದ ಬಳುವಳಿಯಾಗಿ ಬಂದ ಭಾರತದ ಅಧಿಕಾರ ಶಾಹಿಯದೇ ಮೇಲುಗೈಯಾದಾಗ, ರಾಷ್ಟ್ರೀಯ ನಾಯಕರಿಗೂ ಪ್ರಗತಿ ಎಂದರೆ ಯಂತ್ರ ನಾಗರೀಕತೆ ಎಂದು ನಂಬಿಕೆ ಹೆಚ್ಚಾದಾಗ ಕುಮಾರಪ್ಪನವರ ಗ್ರಾಮಾಭಿ ಮುಖ ಅಭಿವೃದ್ಧಿ ಯೋಜನೆಗಳು ಹಿಂದೆ ಬಿದ್ದವು. ನಿರಾಶರಾಗದೆ, ಎಡಬಿಡದೆ ಕುಮಾರಪ್ಪನವರು ತಮ್ಮ ಕ್ಷೇತ್ರದಲ್ಲಿ ಗ್ರಾಮ ಪುನರುಜ್ಜೀವನದ ಕಾರ್ಯದಲ್ಲಿ ಮಗ್ನರಾದರು – ಆಸಕ್ತರಿಗೆ ಸಲಹೆ ನೀಡಿದರು, ವಿಪುಲವಾಗಿ ಲೇಖನಗಳನ್ನು ಬರೆದರು. ಅಂದಿನ ರಾಷ್ಟ್ರಾಧ್ಯಕ್ಷಬಾಬು ರಾಜೇಂದ್ರಪ್ರಸಾದರು ಕುಮಾರಪ್ಪನವರ ಗಾಂಧೀ ನಿಕೇತನ ಗುಡಿಸಿಲಿಗೆ ಬಂದರು. ತಮ್ಮ ಅಧಿಕಾರ ಸ್ಥಾನದ ರಕ್ಷಣಾ ವ್ಯವಸ್ಥೆಗಳನ್ನೆಲ್ಲ ಆಚೆಯಿಟ್ಟು ಸ್ನೇಹಿತರಾಗಿ ಬಂದರು. ಕುಮಾರಪ್ಪನವರು ಅನಾರೋಗ್ಯದಿಂದ ಬಳಲಿದ್ದರು. "ಗಾಂಧೀಮಾರ್ಗ ಭಾರತದಲ್ಲೇ ಮರೆ ಯಾಗುತ್ತಿದೆ. ಸುತ್ತಲಿನ ಪ್ರಪಂಚ ವಿಶ್ವಶಾಂತಿಗಿರುವ ಏಕಮಾತ್ರ ಆಶಾಕಿರಣ ಅದೊಂದೇ ಎಂದು ಕ್ರಮೇಣ ಅರಿಯುತ್ತಿದೆ. ಆ ಕಡೆ ಭರವಸೆ ನಾಶವಾಗದಂತೆ ಭಾರತವನ್ನು ನಡೆಸಿಕೊಳ್ಳಿ" ಎಂದು ರಾಜೇಂದ್ರಪ್ರಸಾದರಲ್ಲಿ ಮೊರೆಯಿಟ್ಟರು.

೧೯೬೦ ರಲ್ಲಿ ಅವರ ಅನಾರೋಗ್ಯ ಉಲ್ಬಣಿಸಿತು. ಮದರಾಸಿಗೆ ಚಿಕಿತ್ಸೆಗಾಗಿ ಹೋದರು. ಆಸ್ಪತ್ರೆ ಸೇರಬೇಕಾಯಿತು. ಅದೇ ವರ್ಷ ಜನವರಿ ૩೦ ರಂದು ತಮ್ಮ ಗುರು ಗಾಂಧೀಜಿಯ ಹನ್ನೆರಡನೇ ಪುಣ್ಯತಿಥಿಯಂದು ಜೋಸೆಫ್ ಕಾರ್ನಿಲಿಯಸ್ ಕುಮಾರಪ್ಪನವರು ಸ್ವರ್ಗಸ್ಥರಾದರು. ಅವರ ನೆನಪು ಅಹಿಂಸಾ ಪ್ರೇಮಿಗಳ ವಿಶ್ವ ಕುಟುಂಬವರ್ಗದಲ್ಲಿ ಶಾಶ್ವತವಾಗಿ ನೆಲೆಸಿತು. ★

– ಕೆ.ಎಸ್. ನಾರಾಯಣಸ್ವಾಮಿ

ಮುನ್ನುಡಿ

ಸೇವಾಗ್ರಾಮ
ವರ್ಧಾ

'ಜೀಸಸ್ಸನ ಉಪದೇಶ ಮತ್ತು ಆಚರಣೆ' ಪುಸ್ತಕದಂತೆಯೇ ಈ "ಶಾಶ್ವತ ಅರ್ಥಶಾಸ್ತ್ರ" ಗ್ರಂಥವನ್ನು ಡಾ. ಕುಮಾರಪ್ಪ ಜೈಲಿನಲ್ಲಿ ಬರೆದರು. ಮೊದಲಿನದರಂತೆಯೇ ಮೊದಲ ಓದಿಗೆ ಅರ್ಥವಾಗದ ಪುಸ್ತಕ. ಎರಡು ಮೂರು ಸಲ ಗಮನವಿಟ್ಟು ಓದಿದಾಗಲೇ ಅದರ ಸ್ವಾರಸ್ಯ ಗ್ರಹಿಸಬಲ್ಲೆವು. ಹಸ್ತಪ್ರತಿಯನ್ನು ಕೈಗೆ ತೆಗೆದುಕೊಂಡಾಗ ಇದರಲ್ಲಿ ಏನಿದೆಯೋ ಎಂದು ಕುತೂಹಲವಾಯಿತು. ಮೊದಲನೆ ಪ್ರಕರಣವೇ ನನಗೆ ಸಮಾಧಾನ ತಂದಿತು. ಅನಾಯಾಸವಾಗಿ ಕೊನೆಯುವರೆಗೂ ಓದಿದೆ. ಲಾಭವೇ ಆಯಿತು. ಈಗ ನಮ್ಮ ಸುತ್ತಲೂ ಕಾಣುವ ಅಶಾಶ್ವತ, ಕ್ಷಣಿಕ ಆರ್ಥಿಕ ವಿಧಾನದ ಬದಲು ಶಾಶ್ವತ ಆರ್ಥಿಕ ವ್ಯವಸ್ಥೆ ಬರಬೇಕಾದರೆ ಗ್ರಾಮೋದ್ಯೋಗಗಳು ಒಂದೇ ಮಾರ್ಗ ಎನ್ನುತ್ತಾರೆ ಈ ತಜ್ಞ ಡಾಕ್ಟರ್. ಈ ದೇಹವು ಒಳಗಿನ ಆತ್ಮವನ್ನು ಅದುಮಿ ಅಟ್ಟಹಾಸದಿಂದ ಮೆರೆಯಬೇಕೋ ಅಥವ ಆತ್ಮಶಕ್ತಿಯು ಈ ದೇಹವನ್ನು ಗೆದ್ದು, ದೇಹಕ್ಕೆ ಅಗತ್ಯವಾದ ಆರೋಗ್ಯಕರವಾದುದಷ್ಟನ್ನು ಮಾತ್ರ ಕೊಟ್ಟು, ಪಳಗಿಸಿ, ನಾಶವಂತವಾದ ದೇಹದ ಮೂಲಕವೇ ತನ್ನ ಕಾರ್ಯ ಸಾಧಿಸಬೇಕೋ – ಈ ಪ್ರಶ್ನೆಯನ್ನು ಬಿಡಿಸಿದ್ದಾರೆ. ಇದೇ 'ಉದಾತ್ತ ವಿಚಾರ – ಸರಳ ಜೀವನ' ಎಂಬ ತತ್ವ.

ಬೊಂಬಾಯಿಗೆ ಹೋಗುವ ರೈಲಿನಲ್ಲಿ,
೨೦-೮-೧೯೪೫

ಮೋ. ಕ. ಗಾಂಧಿ

ಮೊದಲ ಮಾತು

"ಗ್ರಾಮ ಚಳುವಳಿ ಏಕೆ?" ಎಂಬ ನನ್ನ ಮೊದಲ ಪುಸ್ತಕದಲ್ಲಿ ಭಾರತದ ಹಾಗೂ ಪಾಶ್ಚಾತ್ಯ ದೇಶಗಳಲ್ಲಿನ ಪರಿಸ್ಥಿತಿಗಳನ್ನು ತುಲನಾತ್ಮಕವಾಗಿ ಹೋಲಿಸಿದ್ದೆ. ಈ ಗ್ರಂಥದಲ್ಲಿ ನಮ್ಮ ದೇಶದ ಜನರ ಪ್ರತಿಭೆಗನುಗುಣವಾಗಿ ಒಂದು ರಚನಾತ್ಮಕ ದೃಷ್ಟಿಯನ್ನು ಪ್ರತಿಪಾದಿಸುವ ಪ್ರಯತ್ನ ಮಾಡಿದ್ದೇನೆ.

ಧರ್ಮ ಅನ್ನುವುದು ಈಗ ಸಂಸ್ಥಾಬದ್ಧವೂ ಗೊಡ್ಡು ಆಚಾರವೂ ಆಗಿಬಿಟ್ಟಿದೆ. ಜನತೆಯ ನಿತ್ಯಜೀವನದ ಮೇಲೆ ತನ್ನ ಪ್ರಭಾವವನ್ನು ಕಳೆದುಕೊಂಡಿದೆ. ಅದೊಂದು ಮೂಢನಂಬಿಕೆ ಎಂದು ಅನೇಕರು ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ, ವರ್ಜಿಸಿಬಿಟ್ಟಿದ್ದಾರೆ. ಜೀವನದಿಂದ ಧರ್ಮವನ್ನು ಪ್ರತ್ಯೇಕಿಸಿದ ಪರಿಣಾಮವಾಗಿ ಆರ್ಥಿಕ ವ್ಯವಹಾರಗಳಲ್ಲಿ ನೈತಿಕ ದೃಷ್ಟಿ ಮಾಯವಾಗಿದೆ. ವ್ಯಾಪಾರ ಅಂದರೆ ಅನೀತಿ ಎನ್ನುತ್ತಾರೆ. ಸಾಂಪ್ರದಾಯಿಕ ಜ್ಞಾನ ಭಂಡಾರಗಳಲ್ಲಿ ಧರ್ಮ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಇವುಗಳನ್ನು ಸಂಪೂರ್ಣವಾಗಿ ಪ್ರತ್ಯೇಕ ಭದ್ರಕೋಟೆಯ ವಲಯಗಳನ್ನಾಗಿ ಮಾಡಲಾಗಿದೆ. ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಆಗಿದೆ. ಆದರೆ ಪ್ರಕೃತಿ ಹೀಗೆ ಭೇದಮಾಡಿಲ್ಲ. ಅಲ್ಲಿ ಪ್ರತ್ಯೇಕತೆ ಅಂಗೀಕೃತವಲ್ಲ. ಸಮಗ್ರ ದೃಷ್ಟಿಯಿಂದಲೇ ಜೀವನವನ್ನು ಪರಿಗಣಿಸುತ್ತದೆ. ಆದ್ದರಿಂದ ಈ ಚಿಕ್ಕ ಪುಸ್ತಕದಲ್ಲಿ ವಿವಿಧ ಜ್ಞಾನ ವಲಯಗಳನ್ನೆಲ್ಲ ಸಮನ್ವಯಗೊಳಿಸಿ, ಮಾನವನ ನಿತ್ಯ ಜೀವನದ ಅನೇಕ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿ, ಅವೆಲ್ಲವೂ ಒಂದೇ ಸಮಗ್ರ ಘಟಕವಾಗಿರುವ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸುವ ಪ್ರಯತ್ನ ಮಾಡಲಾಗಿದೆ.

ಈ ಪುಸ್ತಕದ ಉದ್ದೇಶ ಇದು: ನಮ್ಮ ಒಳಗಿನ ಆಧ್ಯಾತ್ಮಿಕ ಮತ್ತು ನೈತಿಕ ಪ್ರಜ್ಞೆಯನ್ನು ನಿತ್ಯಜೀವನಕ್ಕೆ ಅನ್ವಯಿಸಿ ಅದರಿಂದ ಇಹಲೋಕದ ಬದುಕಿನ ವ್ಯವಹಾರಗಳಲ್ಲಿ ನಮ್ಮ ಆತ್ಮಸಾಕ್ಷಿಗನುಗುಣವಾಗಿ ನಿಯಮ ಬದ್ಧವಾಗಿ ನಡೆದು, ಈ ಜೀವನಕ್ಕೊಂದು ಅರ್ಥಪೂರ್ಣ ಗುರಿಯನ್ನು ತಂದುಕೊಡುವುದು. ನಿತ್ಯಜೀವನದ ಜಂಜಟದಿಂದ ಪ್ರತ್ಯೇಕಿಸಿ ಪರಲೋಕ ದೃಷ್ಟಿಗೇ ಅಂಟಿಕೊಂಡಿರುವ ಇಂದಿನ ಸಾಂಪ್ರದಾಯಿಕ ಧರ್ಮದಲ್ಲಿ ನಿರಾಶರಾಗಿರುವವರಿಗೆ ಹೊಸ ಜೀವನ ದಾರಿಯನ್ನು ತೋರಿಸಿಕೊಡುವುದು. ವಿಶ್ವನಿಯಮದೊಂದಿಗೆ ಬಾಳಿನ ಎಲ್ಲ ವ್ಯಾವಹಾರಿಕ ಕ್ಷೇತ್ರಗಳನ್ನೂ ಸಮನ್ವಯಗೊಳಿಸಲು ಇಲ್ಲಿ ಪ್ರಯತ್ನ ಮಾಡ

ಲಾಗಿದೆ. 'ಶಾಶ್ವತ ಜೀವನ' ಅಥವ 'ದೈವ ಸಾಕ್ಷಾತ್ಕಾರ' ಎಂದು ಧಾರ್ಮಿಕರು ಏನನ್ನು ಬಗೆಯುತ್ತಾರೋ ಅದನ್ನು ಮಾನವನ ನಿತ್ಯಜೀವನ ದೃಷ್ಟಿಯಿಂದ ವಿವೇಚಿಸಲಾಗಿರುವುದರಿಂದ ಈ ಪುಸಕ್ತದ ಶೀರ್ಷಿಕೆ 'ಶಾಶ್ವತ ಅರ್ಥಶಾಸ್ತ್ರ.'

ಈ ನಿಲುವು ಹೊಸದುದಾಗಿರಬಹುದು, ಅದರ ಗುರಿಗಳನ್ನು ಸಾಧಿಸುವ ಮಾರ್ಗಗಳನ್ನು ಯೋಚಿಸುವಂತೆ ಓದುಗರನ್ನು ಇದು ಪ್ರೇರಣೆ ಮಾಡುವುದಾದರೆ ಈ ಕಾರ್ಯವನ್ನು ಕೈಗೊಂಡುದುದು ಅತ್ಯಂತ ಯೋಗ್ಯವೆನಿಸೀತು.

ಪುಸ್ತಕದ ಮೊದಲ ಭಾಗ ನಾನು ಜಬ್ಬಲಪುರದ ಜೈಲಿನಲ್ಲಿದ್ದಾಗ ಬರೆದುದು. ಎರಡನೇ ಭಾಗ ಮುಗಿಸುವ ಮುನ್ನ ಅನಾರೋಗ್ಯದ ಕಾರಣವಾಗಿ ನನ್ನ ಬಿಡುಗಡೆಯಾಗಿತ್ತು.

ಈ ಕಾರ್ಯದಲ್ಲಿ ತಮ್ಮ ವಿಮರ್ಶೆಗಳನ್ನೂ ಸಲಹೆಗಳನ್ನೂ ನೀಡಿ ಪುಸ್ತಕಕ್ಕೆ ಮುನ್ನುಡಿ ಬರೆದುದಕ್ಕಾಗಿ ಗಾಂಧೀಜಿಗೆ ನನ್ನ ಕೃತಜ್ಞತೆಗಳು. ಚಿತ್ರಗಳನ್ನು ಬರೆದುಕೊಟ್ಟ ಕಲೆಗಾರ ಮಾಧವ ಸತ್ವಾಳೇಕರ್ ಅವರಿಗೆ ನಾನು ಋಣಿ.

ಮಗನವಾಡಿ:ವಾರ್ಧಾ   ಜೆ.ಸಿ. ಕುಮಾರಪ್ಪ
೨೪-೮-೧೯೪೫

ಎರಡನೇ ಮುದ್ರಣ

ಭಾಗ ೨ ರಲ್ಲಿ 'ಸಂಘ ಜೀವಿಯಾದ ಮಾನವ' ಎಂಬುದನ್ನು ಪ್ರತ್ಯೇಕ ಸಂಪುಟವನ್ನಾಗಿ ಸೇರಿಸಲಾಗಿದೆ. ದೇಶದ ಸಮಗ್ರ ಅಭಿವೃದ್ಧಿಗೆ ಅಹಿಂಸೆಯ ಆಧಾರದ ಮೇಲೆ ಒಂದು ಆರ್ಥಿಕ ಯೋಜನೆ ಕೊಡಲಾಗಿದೆ.

೪-೧-೧೯೪೬   ಜೆ.ಸಿ. ಕುಮಾರಪ್ಪ

ಪ್ರಾಸ್ತಾವಿಕ

ಯಾವುದು ಶಾಶ್ವತ? ಯಾವುದು ಕ್ಷಣಿಕ?

ಭಗವಂತನೊಬ್ಬನಲ್ಲದೆ ಬೇರಾವುದೂ ಶಾಶ್ವತವೆನ್ನಲಾಗುವುದಿಲ್ಲ. ದೇವರೊಬ್ಬನೇ ಅನಾದಿ, ಅನಂತ. ಪೂರ್ಣಾರ್ಥದಲ್ಲಿ ಅನಂತದ ಕಲ್ಪನೆ ಮಾನವನ ಬುದ್ಧಿಗೆ ಅಸಾಧ್ಯ. ಅದು ಪರಿಮಿತವಾದುದು. ಕಾಲದೇಶಾತೀತವಾದ ಕಲ್ಪನೆ ಅದು. ಆದರೆ ದೈವ ನಿಯಮಗಳಾದ ಸತ್ಯ ಮತ್ತು ಪ್ರೇಮ ಮಾತ್ರ ಅತ್ಯಂತ ಸೂಕ್ಷ್ಮ ಪರಿಶೀಲನೆಗೂ ಶಾಶ್ವತ ತತ್ವಗಳು. ಅವು ಅಪರಿವರ್ತನೀಯ.

ಕಾಲ ದೇಶಗಳ ಪರಿಮಿತಿಯಲ್ಲಿ ಸಂಪೂರ್ಣ ಶಾಶ್ವತತೆ ಎಂಬುದಿರುವುದಿಲ್ಲ. ಎಲ್ಲೊ ಮೊದಲಾಗಿ ಎಲ್ಲವೂ ಎಲ್ಲೊ ಕೊನೆಗಾಣುತ್ತವೆ. ಈ ಎರಡರ ನಡುವಿನ ಕಾಲ ಬೇರೆ ಪ್ರಮಾಣದ್ದು. ಅದು ಅತ್ಯಲ್ಪವಾಗಬಹುದು ಅಥವ ಅತಿದೀರ್ಘ. ಒಂದು ಹೂ ಒಂದೇ ದಿನದಲ್ಲಿ ಅರಳಿ ಬಾಡಿಬಿಡುತ್ತದೆ. ಆಮೆಗಳು ನೂರಾರು ವರ್ಷ ಬದುಕಿರುತ್ತವಂತೆ. ಜಗತ್ತಿನ ಆಯುಸ್ಸನ್ನು ಕೋಟಿ ಕೋಟಿ ವರ್ಷಗಳೆಂದು ಅಳೆಯುತ್ತಾರೆ. ಒಂದಕ್ಕಿಂತ ಒಂದು ಹೆಚ್ಚು ಶಾಶ್ವತ. ಇವೆಲ್ಲವೂ ಸಾಪೇಕ್ಷವಾದುದು. ಪರಸ್ಪರ ಹೋಲಿಕೆಯೆ ಅಳತೆ.

ಪ್ರಕೃತಿ– ಅದನ್ನು ದೇವರೊಡನೆ ಸಮಾವೇಶ ಮಾಡದಿದ್ದರೆ– ಕಾಲ ದೇಶಾಧೀನ. ಯಾವಾಗಲೋ ಹುಟ್ಟಿತು, ಮುಂದೆ ಎಂದೋ ಇಲ್ಲವಾದೀತು. ಅದರ ಆಯುಸ್ಸು ಮನುಷ್ಯನ ನೂರು ವರ್ಷ ಬಾಳಿಗೆ ಹೋಲಿಸಿದರೆ ಶಾಶ್ವತ. ಪ್ರಕೃತಿಯ ಎದುರಿನಲ್ಲಿ ಮಾನವನ ಜೀವನ ಕ್ಷಣಿಕ. ಇಂಥ ಪರಸ್ಪರ ಹೋಲಿಕೆಯ ಅರ್ಥದಲ್ಲಿ ಅಂದರೆ ಸಾಪೇಕ್ಷಾರ್ಥದಲ್ಲಿ 'ಶಾಶ್ವತ ಅರ್ಥಶಾಸ್ತ್ರ' ಎಂದು ಇದನ್ನು ಸಂಬೋಧಿಸಲಾಗಿದೆ.

–ಜೆ.ಸಿ.ಕೆ.

೧. ಪ್ರಕೃತಿ

ನಿರ್ಜೀವವಾಗಿ ಕಾಣುವ ಪದಾರ್ಥಗಳು ಪ್ರಕೃತಿಯಲ್ಲಿವೆ. ಅವು ಬೆಳೆಯು ವುದೂ ಇಲ್ಲ ಹೆಚ್ಚುವುದೂ ಇಲ್ಲ, ಇದ್ದಷ್ಟೇ ಇರುತ್ತವೆ. ಅವನ್ನು ಬಳಸಿದಂ ತೆಲ್ಲ ಕ್ಷೀಣವಾಗುತ್ತವೆ : ಕಲ್ಲಿದ್ದಲು, ಕಬ್ಬಿಣ, ಪೆಟ್ರೋಲ್, ತಾಮ್ರ, ಬಂಗಾರ ಇತರ ಲೋಹಗಳು ಇತ್ಯಾದಿ. ಇವನ್ನು ಕ್ಷಣಿಕ ಎನ್ನುತ್ತಾರೆ. ಅದೇ ಹರಿಯುವ ನದಿಯ ನೀರನ್ನೂ ದಿನದಿನವೂ ಬೆಳೆಯುವ ಅಡವಿಯನ್ನೂ "ಶಾಶ್ವತ" ಎನ್ನುತ್ತಾರೆ ಏಕೆಂದರೆ ಮನುಷ್ಯ ಅದರ ಪ್ರವಾಹವನ್ನಾಗಲಿ, ಇತರ ಹೆಚ್ಚುವರಿಯನ್ನಾಗಲಿ ಬಳಸಿಕೊಂಡರೆ ಅವುಗಳ ರಾಶಿ ಕ್ಷೀಣವಾಗದು.

ಜೀವ ವರ್ತುಲವೇ ಪ್ರಕೃತಿಯ ಪ್ರಾಣಿಕೋಟಿಯಲ್ಲಿನ ಶಾಶ್ವತಾಂಶದ ರಹಸ್ಯ. ಹಲವಾರು ಅಂಶಗಳು ಸೇರಿ ಪರಸ್ಪರ ಸಹಕರಿಸಿ ಅಖಂಡ ಪ್ರಾಣ ಪ್ರವಾಹ ನಿರಂ ತರವಾಗಿ ಸಾಗುತ್ತಿದೆ.

ತಾಯಿ ಗಿಡದಿಂದ ಒಂದು ಬೀಜ ನೆಲಕ್ಕೆ ಬೀಳುತ್ತದೆ. ಅದು ಮಣ್ಣಲ್ಲಿ ಬೆರೆತು. ಬೇರುಬಿಟ್ಟು ಆ ಬೇರಿನ ಮೂಲಕ ಸೂರ್ಯನ ಶಾಖ, ಗಾಳಿಯ ತಂಪು-ತೇವ ಗಳ ನೆರವು ಪಡೆದು ಆ ಪುಷ್ಟಿಕರ ಪದಾರ್ಥಗಳನ್ನು ಹೀರಿಕೊಳ್ಳುತ್ತದೆ. ಮೊಳಕೆ ಯಾಗಿ ಎಲೆ ಚಿಗುರುತ್ತದೆ. ಬೇರಿನ ಮೂಲಕ, ಎಲೆಗಳ ಮೂಲಕ ಆಹಾರ ಹೀರಿ ಕೊಳ್ಳುತ್ತದೆ. ಈ ಎಲೆ ಉದುರಿ ನೆಲಕ್ಕೆ ಬಿದ್ದು ತಾಯಿ ಗಿಡ ಯಾವ ಪದಾರ್ಥ ಗಳನ್ನು ನೆಲದಿಂದ, ಗಾಳಿ-ಬೆಳಕಿನಿಂದ ಮೊದಲು ಪಡೆದಿತ್ತೋ ಅದೇ ಪದಾರ್ಥ ಗಳಾಗಿ ಪರಿಣಮಿಸಿ ಮತ್ತೆ ಹೊಸ ಗಿಡಕ್ಕೆ ಅನ್ನವಾಗುತ್ತದೆ. ಹೂವುಗಳ ಮಕರಂದ ವನ್ನು ಹೀರಿ ಬದುಕುವ ದುಂಬಿಗಳು ಫಲೋತ್ಪತ್ತಿಗೂ ಕಾರಣವಾಗುತ್ತವೆ. ಮತ್ತೆ ಬೀಜ, ಮತ್ತೆ ವೃಕ್ಷ. ಹೀಗೆ ಜನ್ಮಚಕ್ರ ತಿರುಗುತ್ತಿರುತ್ತದೆ. ಏನೂ ಅಡ್ಡಿ ಆತಂಕ ಬಾರದಿರುವವರೆಗೆ ಪ್ರಕೃತಿಯ ಈ ನಿರಂತರ ಕೆಲಸ ಅದನ್ನು ಶಾಶ್ವತಗೊಳಿ ಸುತ್ತದೆ. ಈ ಜನ್ಮಚಕ್ರದ-ಪ್ರಾಣ ಪ್ರವಾಹದ-ಭಾವವನ್ನು ಹಿಂದಿನ ಕಾಲದ ಶ್ಲೋಕವೊಂದು ಬಹಳ ಸುಲಭವಾಗಿಯೂ ರಮ್ಯವಾಗಿಯೂ ತಿಳಿಸುತ್ತದೆ.

ಪುನರಪಿ ಜನನಂ ಪುನರಪಿ ಮರಣಂ।
ಪುರರಪಿ ಜನನೀ ಜಠರೇ ಶಯನಂ॥

೨. ಕೆಲಸ - ಕೂಲಿ

ಈ ಪ್ರಾಣ ಪ್ರವಾಹವನ್ನು ನಿರಂತರವಾಗಿ ಹರಿಸಲು ಈ ಜೀವನಚಕ್ರ ತಿರುಗುವಂತೆ ಮಾಡಲು ನೆರವಾಗುವಂತೆ ಸಜೀವ ಮತ್ತು ನಿರ್ಜೀವ ಸಮಸ್ತ ವಸ್ತುಗಳೂ ಮಾಡುವ ಪ್ರಯತ್ನ ಅಥವಾ ಕೃಷಿ ಎನ್ನುವುದೇ ಕೆಲಸ, ತಿಳಿದೋ ತಿಳಿಯದೆಯೋ ಈ ಸಂತತ ಪ್ರವಾಹವನ್ನು ಯಾವ ಸ್ಥಿತಿಯಲ್ಲಾದರೂ ಅಡ್ಡಗಟ್ಟಿದರೆ, ಈ ಜೀವನಚಕ್ರ ತಿರುಗದಂತೆ ನಿಲ್ಲಿಸಿದರೆ ಅದರ ಪರಿಣಾಮ ಹಿಂಸೆ. ಈ ಹಿಂಸೆಯಿಂದ ಬೆಳವಣಿಗೆ ನಿಂತು ಎಲ್ಲವೂ ನಾಶವಾಗುತ್ತದೆ, ವ್ಯರ್ಥವಾಗುತ್ತದೆ. ಪ್ರಕೃತಿ ಬಹು ಕಠೋರವಾಗಿ ಪ್ರತಿಕ್ರಿಯಿಸುತ್ತದೆ. ಕ್ಷಮಾಶೂನ್ಯವಾಗುತ್ತದೆ. ಆದ್ದರಿಂದಲೇ ಆತ್ಮಹಿತ–ಆತ್ಮರಕ್ಷಣೆಗಳಿಗಾಗಿ ಪೂರ್ಣ ಅಹಿಂಸೆ, ಸಹಕಾರ, ಪ್ರಕೃತಿ ನಿಯಮಾನುಸರಣೆ ಇವು ಅತ್ಯಗತ್ಯ. ಆಗ ಮಾತ್ರವೇ ಪ್ರಾಣ ಪ್ರವಾಹ ಅಬಾಧಿತವಾಗಿ ಸಾಗುತ್ತಿರುತ್ತದೆ. ಜೀವನದ ತೊರೆ ಬತ್ತದೆ ಹರಿಯುತ್ತದೆ. ಇಲ್ಲದಿದ್ದರೆ ವಿದ್ಯುತ್ ಸಂವಹನೆಯಲ್ಲಿ ಅಡ್ಡಿಯಾಗುವ ಹ್ರಸ್ವಚಕ್ರ–ಷಾರ್ಟ್ ಸರ್ಕ್ಯೂಟದಂತೆ- ಜೀವನಚಕ್ರದಲ್ಲೂ ಅಡ್ಡಿ ಬಂದರೆ ನಾಶವಾಗುತ್ತದೆ. ಬದುಕಬೇಕು ಎಂದರೆ ಸಜೀವ ಪ್ರಾಣಿಗಳೆಲ್ಲವೂ ಪ್ರಕೃತಿ ನಿಯಮಗಳಿಗಧೀನವಾಗಿ ತಮ್ಮ ತಮ್ಮ ಜೀವನ ಕ್ಷೇತ್ರಗಳಲ್ಲಿ ಸರಿಯಾಗಿ ನಡೆದುಕೊಳ್ಳಲೇಬೇಕಾಗುತ್ತದೆ. ಎಲ್ಲ ಕೆಲಸವೂ ಈ ನಿಯಮಗಳಿಗನುಗುಣವಾಗಿಯೇ ಇರಬೇಕಾದುದು ಅಗತ್ಯವಾಗುತ್ತದೆ.

ಈ ಕೆಲಸಕ್ಕೆ ಪ್ರತಿಫಲ ಜೀವದಾಯಕವಾದ ಅನ್ನ. ಪ್ರಕೃತಿ ಬಹಳ ಪ್ರಾಮಾಣಿಕವಾಗಿ ವರ್ತಿಸುತ್ತದೆ. ಅದು ಸಜೀವ ಮತ್ತು ನಿರ್ಜೀವ ಸೃಷ್ಟಿಯೊಳಗೆ ಸಾಮರಸ್ಯ ತರಲು ಗಾಳಿ ಮತ್ತು ನೀರುಗಳ ರೂಪದಲ್ಲಿ ಪ್ರಾಣಿಗಳ ಪ್ರತಿಯೊಂದು ಕ್ರಿಯೆಗೂ ಸ್ಪಂದಿಸಿ ಆಯಾ ಪ್ರಾಣಿಗಳಿಗೆ ಅಗತ್ಯವಾದ ಅನ್ನದ ರೂಪದಲ್ಲಿ ಪ್ರಾಮಾಣಿಕವಾಗಿ 'ಕೂಲಿ' ಸಲ್ಲಿಸುತ್ತದೆ.

ಪ್ರಕೃತಿ ತನ್ನ ವಿವಿಧ ಅಂಗಾಂಶಗಳಾದ ಚರ–ಅಚರ, ಜೀವಿತ–ನಿರ್ಜೀವ ಸೃಷ್ಟಿಯನ್ನೆಲ್ಲ ಪರಸ್ಪರ ಸಹಕಾರಕ್ಕಾಗಿಯೇ ಅಣಿಮಾಡಿಕೊಳ್ಳುತ್ತದೆ. ಹಕ್ಕಿಗಳು ಹಣ್ಣನ್ನು ತಿಂದು ಬೀಜವನ್ನು ಹರಡಿ ಬಿತ್ತುತ್ತವೆ. ಈ ಸಮೀಕರಣ ಕಾರ್ಯ ತಾನು ಬದುಕಲು ಮಾಡಿದ ಕೆಲಸ. ತನ್ನ ಹಸಿವನ್ನು ನೀಗಿಸಿಕೊಳ್ಳುವ ಕಾರ್ಯದಲ್ಲಿ ಪ್ರಕೃತಿಯ ಜೀವನಚಕ್ರ ಪ್ರವರ್ತನೆಯನ್ನೂ ನೆರವೇರಿಸುತ್ತದೆ. ಹೀಗೆ

ಒಂದೇ ಉದ್ದೇಶದ ಸಾಧನೆಗಾಗಿ ಪ್ರಕೃತಿಯೆಲ್ಲವೂ ಹಾಸುಹೊಕ್ಕಾಗಿ ಹೆಣೆಹು ಕೊಂಡಿದೆ. ಇದರಲ್ಲಿ ಯಾವುದೂ ಕೇವಲ ತನಗಾಗಿಯೇ ಬದುಕುತ್ತಿಲ್ಲ. ಈ ಚಕ್ರ ಸರಾಗವಾಗಿ, ಸಮರಸವಾಗಿ ತಿರುಗಿದರೆ, ಈ ಪ್ರವರ್ತನೆಯುನ್ನು ಹಿಂಸೆ ಮುರಿಯು ದಿದ್ದರೆ ಶಾಶ್ವತ ಅರ್ಥವ್ಯವಸ್ಥೆ ಲಭಿಸುತ್ತದೆ, ಪುರುಷಾರ್ಥಸಾಧನೆಯಾಗುತ್ತದೆ.

೩. ಪ್ರಕೃತಿಯ ವಿವಿಧ ಆರ್ಥಿಕ ವಿಧಾನಗಳು

ಸಂಪೂರ್ಣ ಅಹಿಂಸಾತ್ಮಕ ಸಹಕಾರ ಎಲ್ಲ ಜೀವರಾಶಿಗಳಲ್ಲಿಯೂ ಸದಾ ಕಾಲವೂ ಕಾಣುವುದು ಸಾಧ್ಯವಿಲ್ಲ. ಮೂಲ ಧಾತುಗಳಿಂದಲೂ ಅಚೇತನ ಪ್ರಕೃತಿಯಿಂದಲೂ ಯಥಾಕ್ರಮವಾಗಿ ತಮ್ಮ ಅನ್ನವನ್ನು ಗಳಿಸುವ ಬದಲು ಇತರ ಪ್ರಾಣಿಗಳನ್ನು ಕೊಂದು ತಿನ್ನುವ ಪ್ರಾಣಿಗಳೂ ಉಂಟು. ಇವು ದೀರ್ಘ ಕ್ರಮವನ್ನು ಮೊಟಕಿಸುವುದರಿಂದ ಹಿಂಸೆ ತಲೆಹಾಕಿ ವಿನಾಶಕ್ಕೂ ಕಾರಣ ವಾಗುತ್ತದೆ.

ಪರೋಪಜೀವಿ : (ಪ್ಯಾರಸಿಟಿಕ್ ಎಕಾನಮಿ)

ಆಶ್ರಯ ಕೊಟ್ಟ ಮೂಲಜೀವಿಗೆ ಸಾವನ್ನು ತರುವ ಸಸ್ಯಗಳೂ ಉಂಟು, ಪ್ರಾಣಿಗಳೂ ಉಂಟು. ಕುರಿ ಹುಲ್ಲುತಿಂದು, ನೀರುಕುಡಿದು, ಅಹಿಂಸೆಯಿಂದ ಬಾಳುತ್ತದೆ. ಆದರೆ ಹುಲಿ ಕುರಿಯನ್ನು ತಿಂದು ಪ್ರಕೃತಿಯ ಕ್ರಮವನ್ನು ಮೊಟಕಿಸುತ್ತದೆ. ಹುಲಿಯ ಬದುಕಿಗೆ ಹಿಂಸೆಯೇ ಮುಖ್ಯಾಧಾರ.

ಪರಾಪಹಾರ ವರ್ಗ : (ಪ್ರಿಡೇಟರಿ ಎಕಾನಮಿ)

ಪ್ರಕೃತಿಯಲ್ಲಿ ಒಂದು ಭಾಗ ಇನ್ನೊಂದು ಭಾಗಕ್ಕೆ ಏನೂ ಪ್ರತ್ಯುಪಕಾರ ಮಾಡದೆ ತನ್ನ ಲಾಭವನ್ನು ಮಾತ್ರ ನೋಡಿಕೊಂಡರೆ ಅದು ಪರಾ ಪಹಾರ. ಪರರ ಕೆಲಸದ ಪ್ರತಿಫಲವನ್ನು ಅಪಹರಿಸುವ ಕ್ರಮ. ಉದಾಹರಣೆಗೆ ಮಾವಿನ ಹಣ್ಣನ್ನು ಬೆಳೆಸಲು ಯಾವ ವಿಧದಲ್ಲೂ ನೆರವಾಗದ ಕೋತಿ ಅದನ್ನು ಕಿತ್ತುತಿನ್ನುತ್ತದೆ. ಹಾಗೆಯೇ ಹಕ್ಕಿಗಳು ಕಾಳನ್ನು ತಿಂದು ಹೋಗುತ್ತವೆ. ದುಡಿಯದೆ ಫಲ ಉಣ್ಣುವ ಸ್ವಾರ್ಥ ಇದು. ಇಲ್ಲಿ ಹುಲಿಗಿಂತ ಕಡಿಮೆ ಹಿಂಸೆ ಇರಬಹುದು. ಆದರೆ ಇದೂ ವಿಧ್ವಂಸಕ ರೀತಿಯೇ.

ಪ್ರಯತ್ನಶೀಲ ವರ್ಗ : (ಎಕಾನಮಿ ಆಫ್ ಎಂಟರ್‌ಪ್ರೈಸ್)

ಕೆಲವು ಪ್ರಾಣಿಗಳು ಪರರಿಗೆ ಏನಾದರೂ ಪ್ರಯೋಜನ ಮಾಡಿಕೊಡುತ್ತಾ ಆ ಕೆಲಸದಲ್ಲಿಯೇ ತಮಗೆ ಬೇಕಾದುದನ್ನು ಪಡೆದುಕೊಳ್ಳುತ್ತವೆ. ಹೊಸ ದೊಂದನ್ನು ರಚನೆಮಾಡಿ ತಮ್ಮ ರಚನಾ ಪ್ರಯತ್ನಗಳ ಫಲವನ್ನು ಅನುಭವಿಸು ತ್ತವೆ. ಇದಕ್ಕೆ ಉದಾಹರಣೆ ಜೇನುಹುಳು. ಹೂವುಗಳಿಂದ ಜೇನನ್ನೂ ಪರಾಗ ವನ್ನೂ ಪಡೆದುಕೊಳ್ಳುವಾಗ ಆ ಹೂವು ಹಣ್ಣಾಗಲು ಪರಾಗಸ್ಪರ್ಶ ಮಾಡುತ್ತದೆ.

ತನ್ನ ಒಡಲಿನಿಂದ ಮೇಣವಮಾಡಿ ಗೂಡುಕಟ್ಟಿ ಜೇನುತುಪ್ಪ ಶೇಖರಿಸುತ್ತದೆ. ಆನಂತರ ಕೂಡಿ ಬದುಕುತ್ತದೆ. ತನ್ನ ಪ್ರಯತ್ನಶೀಲತೆಯ ಫಲ ಭೋಗಿಸುತ್ತದೆ. ಇದರದು ರಚನಾತ್ಮಕ ಕ್ರಿಯಾಶೀಲತೆ.

ಸಂಘಜೀವಿ ವರ್ಗ : (ಎಕಾನಮಿ ಆಫ್ ಗ್ರಿಗೇಷನ್)

ತನ್ನ ಲಾಭವೊಂದನ್ನೇ ಗಮನಿಸದೆ ಇಡೀ ಸಮೂಹಕ್ಕಾಗಿ, ಅದರ ಪ್ರಯೋಜನಕ್ಕಾಗಿ ದುಡಿಯುವ ಸೃಷ್ಟಿಯೂ ಪ್ರಕೃತಿಯಲ್ಲುಂಟು. ಮುಂದಿನ ದಿನಗಳಿಗೂ ಗಳಿಸಿಡುವ ಭವಿಷ್ಯತ್ - ಯೋಜನಾ ಬುದ್ಧಿಯೂ ಕಾಣುತ್ತದೆ. ಜೇನುದುಂಬಿ ಇದಕ್ಕೂ ಒಂದು ಉದಾಹರಣೆ.

ಪರಹಿತಕಾರಿ ವರ್ಗ : (ಎಕಾನಮಿ ಆಫ್ ಸರ್ವಿಸ್)

ಇದು ಸೇವಾ ಪ್ರಧಾನವಾದ, ಅತ್ಯುತ್ತಮ ಆರ್ಥಿಕ ವಿಧಾನ. ಶ್ರೇಷ್ಠತಮ ವ್ಯವಸ್ಥೆ. ತಾಯಿಪ್ರಾಣಿ ಮತ್ತು ಮರಿಗಳ ಸಂಬಂಧ ಇದಕ್ಕೆ ಉತ್ತಮ ಉದಾಹರಣೆ. ಕಾಡನ್ನೆಲ್ಲ ಅಲೆದು ತನ್ನ ಮರಿಗೆ ಆಹಾರ ತರುತ್ತದೆ ತಾಯಿಹಕ್ಕಿ ಮರಿಗಳನ್ನು ರಕ್ಷಿಸಲು ತನ್ನ ಪ್ರಾಣವನ್ನೂ ಪಣವಾಗಿಸುತ್ತದೆ. ತಾಯ್ತನದ ವೃತ್ತಿಯೇ ಹೀಗೆ. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವುದು. ಸ್ವಾರ್ಥವಿಲ್ಲದೆ, ಸ್ವಪ್ರಯೋಜನವನ್ನು ಮುಂದೆ ಮಾಡದೆ ತನ್ನ ಕರ್ಮ ಮಾಡುವ ಒಂದು ಪ್ರಕೃತಿ ಸಹಜ ಸ್ವಭಾವವೂ ಉಂಟು. ಶಾಶ್ವತ ಮತ್ತು ಅಹಿಂಸಕ ಅರ್ಥ ರಚನೆಗೆ ಈ ವಿಧಾನ ಎಲ್ಲಕ್ಕಿಂತ ಹತ್ತಿರವಾದುದು.

ಈ ಐದು ವಿವಿಧ ವಿಧಾನ ಮತ್ತು ರೀತಿಗಳಲ್ಲಿ ಪ್ರಕೃತಿ ಹೇಗೆ ಶಾಶ್ವತತೆ ಮತ್ತು ಅಹಿಂಸೆಗಳ ವೃದ್ಧಿಕ್ರಮವನ್ನು ಪೋಷಿಸಿದೆ ಎಂದು ನಿರೂಪಿಸಲಾಗಿದೆ. ಈ ಐದು ಲಕ್ಷಣಗಳೂ ಬೆರೆತು ಜೊತೆಗೂಡಿ ಬೇರೆ ಬೇರೆ ಸಂಕೀರ್ಣ ವಿಧಾನಗಳು ಏರ್ಪಡುತ್ತವೆ.

೪. ಮನುಷ್ಯ – ವ್ಯಕ್ತಿ

ಪ್ರಕೃತಿಯ ವ್ಯವಸ್ಥಾ ಕ್ರಮವನ್ನು ನಡೆಸಲೂ ಬಲ್ಲ ಅಥವ ಮುರಿಯಲೂ ಬಲ್ಲ ಮಾನವ ಪ್ರಾಣಿಯ ಜೀವನ ಕ್ರಮವನ್ನು ಪರಿಶೀಲಿಸಬೇಕು. ಇತರ ಜೀವ ರಾಶಿಗಳ ವ್ಯವಸ್ಥೆ ಪ್ರಕೃತಿ ನಿಯಮಗಳಿಗೆ ಅನುಗುಣವಾಗಿ ನಡೆಯುತ್ತದೆ. ಸ್ವಭಾವ ಅವಕ್ಕೆ ಪ್ರಕೃತಿಯ ಮಾರ್ಗವನ್ನು ತಿಳಿಸುತ್ತದೆ. ಇಚ್ಛಾಶಕ್ತಿ ಅವುಗಳಿಗೆ ಇಲ್ಲ. ರೈಲು ತನ್ನ ಕಂಬಿಗಳ ಮೇಲೆ ಓಡಿದಂತೆ ಅವುಗಳ ಜೀವನ ಕ್ರಮ. ಇಂದ್ರಿಯಗಳಿಗೆ ತೃಪ್ತಿ ಬೇಕು ಎಂದು ಅವುಗಳು ಸುಖ ವನ್ನು ಅರಸಿಕೊಂಡು ಹೋಗುವುದಿಲ್ಲ. ಹಸಿವನ್ನು ಹಿಂಗಿಸಿಕೊಳ್ಳಲು ಸ್ವಭಾವಾ ಧೀನವಾಗಿ ಪ್ರಯತ್ನಿಸುತ್ತವೆ. ಅವಕ್ಕೆ ಸಂಕಲ್ಪಶಕ್ತಿ, ಇಚ್ಛಾಶಕ್ತಿ ಇಲ್ಲ. ಮೊಟ್ಟೆಯೊಡೆದು ಹೊರಗೆ ಬಂದ ಕೂಡಲೆ ಕೋಳಿಮರಿ ತನ್ನ ಆಹಾರಕ್ಕಾಗಿ ಓಡುತ್ತದೆ. ಅಪಾಯ ಬಂದರೆ ಅದಕ್ಕೆ ಸಹಜವಾಗಿ ತಿಳಿದು ತಾಯಿಯ ನೆರಳಿಗೆ ಓಡುತ್ತವೆ. ಇವು ಅವುಗಳ ಸ್ವಭಾವದ ಲಕ್ಷಣ.

ಪ್ರಕೃತಿಗನುಸಾರ ಬಾಳುವ ಪ್ರಾಣಿಗಳಿಗೆ ಸಾಧಾರಣವಾಗಿ ರೋಗ ಬರುವುದೇ ಇಲ್ಲ. ಯಾವಾಗಲಾದರೂ ಅಜೀರ್ಣ ಸಂಬಂಧ ವ್ಯಾಧಿ ಬಂದರೂ ಯಾವುದೋ ಸೊಪ್ಪೋ, ಬೇರೋ ತಿಂದು ವಾಂತಿಮಾಡಿಯೋ, ಭೇದಿ ಮಾಡಿ ಕೊಂಡೋ ಗುಣಮಾಡಿಕೊಳ್ಳುತ್ತವೆ.

ಮನುಷ್ಯ ಮಾತ್ರ ಹಾಗಲ್ಲ. ಅವನಿಗಿರುವ ಮುಖ್ಯ ತೊಂದರೆ ಅವನ ಇಚ್ಛಾಬಲ, ಸಂಕಲ್ಪಶಕ್ತಿ. ಇದನ್ನು ಪುರುಷ ಪ್ರಯತ್ನ ಎನ್ನುತ್ತಾರೆ. ಈ ಶಕ್ತಿಯನ್ನು ಸರಿಯಾಗಿ ಉಪಯೋಗಿಸಿದರೆ ಪ್ರಕೃತಿಯ ಬೇರೆ ಬೇರೆ ಭಾಗ ಗಳನ್ನು, ಅಂಗಗಳನ್ನು ಮೇಳಯಿಸಿ ಒಂದಕ್ಕೊಂದು ನೆರವಾಗುವಂತೆ ಮನುಷ್ಯ ಮಾಡಬಲ್ಲಷ್ಟು ಕೆಲಸವನ್ನು ಮತ್ತಾವ ಪ್ರಾಣಿಯೂ ಮಾಡಲಾರದು. ಆ ಶಕ್ತಿ ಯನ್ನು ತಪ್ಪಾಗಿ ಬಳಸಿದರೆ ಪ್ರಕೃತಿಯ ವ್ಯವಸ್ಥೆಯನ್ನು ಧ್ವಂಸಮಾಡಿ ಕಡೆಯಲ್ಲಿ ತಾನೂ ನಾಶವಾಗುತ್ತಾನೆ.

ಮನುಷ್ಯ ತನ್ನ 'ಇಚ್ಛಾಬಲ' ವನ್ನು ಯೋಗ್ಯ ಕ್ಷೇತ್ರದಲ್ಲಿ ಉಪಯೋಗಿಸಿ

ದರೆ, ತನ್ನ ಭಾವನೆ ಬಯಕೆಗಳ ಹಿಂದೆ, ಇಂದ್ರಿಯ ಲಾಲಸೆಗಳ ಹಿಂದೆ ಓಡಲು ಬಿಡದಂತೆ ಆತ್ಮ ಸಂಯಮವನ್ನು ಕಲಿತರೆ ಮಾತ್ರ ಸ್ವಭಾವಾಧೀನವಾದ ಇತರ ಪ್ರಾಣಿಗಳಿಗಿಂತ ಹೆಚ್ಚಿನದು ಏನನ್ನಾದರೂ ಸಾಧಿಸಬಲ್ಲ. ತನ್ನೊಳಗಣ ಸ್ವಾಭಾವಿಕ ಬುದ್ಧಿಶಕ್ತಿಯ ಬೆಳಕನ್ನು ಅದರೊಡನೆ ಒಳಗಣ ಆತ್ಮಪ್ರಜ್ಞೆಯ ಜ್ಯೋತಿಯನ್ನು ಬಳಸಿ ತನ್ನ ಭವಿಷ್ಯ ರೂಪಿಸಿಕೊಳ್ಳಬಲ್ಲ. ಅದರಲ್ಲಿ ಸಫಲತೆ ಯನ್ನೂ ಪಡೆದಾನು. ನಾಶದ ಕಡೆಗೂ ಕೊಂಡೊಯ್ಯಬಲ್ಲ. ಪ್ರಕೃತಿಗೂ, ತನ್ನ ಅಂತರಾತ್ಮ ಪ್ರೇರಣೆಗೂ ವಿರುದ್ಧವಾಗಿ ನಡೆದರೆ ಅದರ ಕಹಿ ಫಲಗಳನ್ನು ಉಣ್ಣಬೇಕಾದೀತು. ಇಚ್ಛಾ ಸ್ವಾತಂತ್ರ್ಯದಿಂದ ಪ್ರಕೃತಿಯ ನಿಯಮಗಳನ್ನು ಉಲ್ಲಂಘಿಸಿ ಅದರ ಅಗತ್ಯತೆಗಳನ್ನು ಅಸಡ್ಡೆ ಮಾಡಿದಲ್ಲಿ ಅದರ ಪ್ರತಿಯಾಗಿ ಪ್ರಕೃತಿ ಅತ್ಯಂತ ನಿಷ್ಠುರ ನ್ಯಾಯದೇವತೆಯಂತೆ ಅಂಥ ಪಾಪ ಕೃತ್ಯಗಳಿಗೆ ಶಿಕ್ಷೆನೀಡಿ ಹಿಂಸೆಗೂ ಸರ್ವನಾಶಕ್ಕೂ ಗುರಿ ಮಾಡುತ್ತದೆ. ತನ್ನನ್ನು ಗೌರವದಿಂದ ಕಾಣುವವರಿಗೆ ಮಾತ್ರ ಪ್ರಕೃತಿದೇವಿ ಪ್ರಸನ್ನಳಾದಾಳು.

೫. ಇಚ್ಛಾಬಲದ ಉಪಯೋಗ-ದುರುಪಯೋಗ

ಮನುಷ್ಯನ ಬಾಳು ಈಗ ಬಹಳ ತೊಡಕಿನ ಬಲೆಯಾಗಿ ಹೋಗಿದೆ. ಇಚ್ಛಾಬಲದ ಮೂಲಕ ಮನುಷ್ಯನು ಮಾಡುವ ಕಾರ್ಯ ಕಲಾಪಗಳನ್ನೆಲ್ಲಾ ವಿಸ್ತಾರವಾಗಿ ಪರಿಶೀಲಿಸಲು ಇಲ್ಲಿ ಸಾಧ್ಯವಿಲ್ಲ. ಮನುಷ್ಯನ ಪ್ರಾಥಮಿಕ ಅವಶ್ಯಕತೆಗಳಾದ ಹಸಿವು, ನೀರಡಿಕೆ ಮುಂತಾದವುಗಳಿಂದ ಹುಟ್ಟುವ ಕೆಲವು ಮುಖ್ಯ ಕಾರ್ಯಕಲಾಪಗಳನ್ನು ಮಾತ್ರ ಸ್ಥೂಲವಾಗಿ ಪರಿಶೀಲಿಸಲು ಸಾಧ್ಯ. ಇನ್ನುಳಿದ ಪ್ರಸಂಗಗಳಲ್ಲಿ ಇಚ್ಛಾಶಕ್ತಿಯನ್ನು ಹೇಗೆ ಉಪಯೋಗಿಸಬೇಕು, ದುರುಪಯೋಗ ಮಾಡಿದರೆ ಏನು ಪರಿಣಾಮವಾದೀತು ಎಂಬುದು ಓದುಗರ ಊಹೆಗೆ ಸೇರಿದ್ದು.

ಹಸಿವು : ಅತ್ಯಂತ ಪ್ರಾಥಮಿಕವಾದ, ಪ್ರಾಣಿ ಸಹಜವಾದ, ತೀವ್ರ ಬೇಡಿಕೆ ಹಸಿವಿನ ತೃಪ್ತಿ. ದೇಹ ಒಂದು ಯಂತ್ರದ ಹಾಗೆ. ಅದಕ್ಕೆ ಉರುವಲು ಅಗತ್ಯ. ಆಗಾಗ ದುರಸ್ತಿ ಅವಶ್ಯಕ. ಪದೇ ಪದೇ ಈ ಯಂತ್ರಕ್ಕೆ ಎಣ್ಣೆ ಸುರಿದು ಸಡಿಲಗೊಳಿಸಲೂಬೇಕು. ಈ ಕ್ರಿಯೆಗಳು ಆಗಬೇಕು ಎಂದು ತಿಳಿಸಲು ಹಸಿವು ಸಾಧನ. ದೇಹವೆಂಬ ಯಂತ್ರಕ್ಕೆ ಉರುವಲು ಆಹಾರ. ಯಾವ ಪದಾರ್ಥ ಕೊಟ್ಟರೆ ದೇಹ ಆರೋಗ್ಯವಾಗಿದ್ದು ತನ್ನ ಕೆಲಸ ಸರಾಗವಾಗಿ ಮಾಡಬಲ್ಲದು ಎಂದು ತಿಳಿಸುವುದು ವಾಸನೆ ಮತ್ತು ರುಚಿ.

ಪ್ರಾಣಿಗಳು ಸ್ವಭಾವಾನುಸಾರ ಪ್ರಕೃತಿ ನಿಯಮದಂತೆ ತಿಂದು ಬದುಕುತ್ತವೆ. ಮನುಷ್ಯನೂ ಹಾಗೆಯೇ ಪ್ರಜಾಪೂರ್ವಕವಾಗಿ ಮಾಡಬಹುದು. ಆದರೆ ಹಸಿವನ್ನು ಹಿಂಗಿಸುವ ಕ್ರಿಯೆಯಲ್ಲಿ ನಾಲಗೆಯ ರುಚಿಯೇ ಪ್ರಧಾನವಾಗಿ ಬಿಡುತ್ತದೆ. ಇಚ್ಛಾಶಕ್ತಿಯನ್ನು ದುರುಪಯೋಗಪಡಿಸಿ ಮನುಷ್ಯನು ಚಪಲಕ್ಕಾಗಿಯೇ ತಿನ್ನಲು ಅಭ್ಯಾಸ ಮಾಡುತ್ತಾನೆ. ಇದರಿಂದ ನಾನಾ ಬಾಧೆಗಳಿಗೆ ಗುರಿಯಾಗುತ್ತಾನೆ. ಆಹಾರವೇ ದೇಹಕ್ಕೆ ವಿಷವಾಗಿ ಪರಿಣಮಿಸಲೂಬಹುದು. ಇದು ವಿಕೃತಿ.

ನೀರಡಿಕೆ : ಅನ್ನ ಅರಗಿದರೆ ದ್ರವವಾಗುತ್ತದೆ. ರಕ್ತವು ದೇಹದಲ್ಲಿ ಹರಿಯುತ್ತದೆ. ಅಂಗಾಂಗಗಳ ನಿಸ್ಸಾರ ಪದಾರ್ಥಗಳನ್ನು ಶ್ವಾಸಕೋಶಕ್ಕೆ ಸಾಗಿಸುತ್ತದೆ. ಅಲ್ಲಿ ಆಮ್ಲಜನಕ ಅವುಗಳನ್ನು ಸುಟ್ಟು ಶುದ್ಧಿ ಮಾಡುತ್ತದೆ. ಈ ಎಲ್ಲ ಕ್ರಿಯೆ ನಡೆಯುವಾಗ ದೇಹದಲ್ಲಿನ ತೇವವು ಬೆವರಿನಲ್ಲಿ, ಉಸಿರಿನಲ್ಲಿ, ಮಲಮೂತ್ರಗಳ ರೂಪದಲ್ಲಿ ಹೊರಗೆ ಹಾಕಲ್ಪಡುತ್ತದೆ. ಹೀಗೆ ರಕ್ತ ಇಂಗಿದಾಗ ಬಾಯಾರಿಕೆ

ಆಗುತ್ತದೆ. ಅದೇ ಸೂಚನೆ. ಆಗ ಧಾರಾಳವಾಗಿ ನಿರ್ಮಲವಾದ ನೀರನ್ನು ಕುಡಿಯಬೇಕು. ಅದು ಪ್ರಕೃತಿ ಸಹಜ ಅಗತ್ಯ ಕ್ರಿಯೆ. ಆದರೆ ಇದರಲ್ಲೂ ಮನುಷ್ಯನ ಇಚ್ಛಾಶಕ್ತಿ ಅಡ್ಡಬರುವುದುಂಟು. ನೀರಡಿಕೆಯಾದಾಗ ಮಾದಕ ಪಾನೀಯಗಳನ್ನು ಕುಡಿಯುತ್ತಾನೆ. ಕೃತಕ ಸಿಹಿ ನೀರನ್ನೂ ಬಳಸುತ್ತಾನೆ. ಇವು ದೇಹವನ್ನು ಕೆಡಿಸುತ್ತವೆ. ವಿಷಗಳನ್ನು ಬೆರೆಸುತ್ತದೆ. ಮದ್ಯಪಾನವಂತೂ ದುರ್ಗತಿಯನ್ನೂ ತರುತ್ತದೆ.

ವಾಸನೆ : ಆಹಾರದ ಪರೀಕ್ಷೆಗೆ ಮೂಗು ಮುಖ್ಯ ಸಾಧನ. ನಸ್ಯ, ಬೀಡಿ ಸಿಗರೇಟುಗಳ ಮೂಲಕ ಹೊಗೆಸೊಪ್ಪನ್ನು ಸೇವಿಸಿದರೆ ಅದು ಬಾಧಕ; ಹೃದಯ, ಮೆದುಳುಗಳಿಗೂ ಅಪಾಯ. ಇದೂ ಇಚ್ಛಾಶಕ್ತಿಯ ದುರುಪಯೋಗ.

ಮೈಥುನ : ಸಂತಾನ ವೃದ್ಧಿಗಾಗಿ ಪ್ರಕೃತಿ ನಿಯೋಜಿಸಿರುವ ಪ್ರೇರಕ ಶಕ್ತಿ ಇದು. ಸ್ವಭಾವ ಸಹಜವಾಗಿ ಪ್ರಾಣಿಗಳು ಸಂತಾನೋತ್ಪತ್ತಿಗೆ ಮಾತ್ರವೇ ಗೊತ್ತಾದ ಕಾಲಗಳಲ್ಲಿ ಜೊತೆಗೂಡುತ್ತವೆ. ಮನುಷ್ಯ ಮಾತ್ರ ಬರೀ ಇಂದ್ರಿಯ ಚಾಪಲ್ಯಕ್ಕಾಗಿ ಮಿಥುನಗೂಡುತ್ತಾನೆ. ಇದರಿಂದ ಪ್ರಾಣಿಗಳಿಗಿಂತ ಕೀಳಾಗುತ್ತಾನೆ. ಎಷ್ಟೋ ಸಲ ಮಕ್ಕಳು ಬೇಡವಾದ ಆಕಸ್ಮಿಕ ಘಟನೆ. ಪ್ರಕೃತಿಯ ಉದ್ದೇಶವನ್ನು ಮರೆತು ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು ಅಸ್ವಾಭಾವಿಕ. ಈ ನಿಯಮೋಲ್ಲಂಘನೆಗೆ ಪ್ರಕೃತಿಯು ಶಿಕ್ಷೆಯ ರೂಪದಲ್ಲಿ ವಿವಿಧ ರೋಗಗಳನ್ನು ತಂದೊಡ್ಡುತ್ತದೆ.

ಭಾವನಾಶಕ್ತಿ : ಕಣ್ಣಿಗೆ ಕಾಣದ ಲೋಕಗಳಲ್ಲಿ ಭಾವನಾತ್ಮಕವಾಗಿ ವಿಹರಿಸಿ ಊಹಾಶಕ್ತಿಯಿಂದ ಕಲೆಯನ್ನು ಸೃಷ್ಟಿಸಬಲ್ಲ ವಿಶೇಷ ಗುಣ ಮತ್ತಾವ ಪ್ರಾಣಿಗೂ ಇರುವುದಿಲ್ಲ. ಈ ಪ್ರಕೃತಿದತ್ತ ಶಕ್ತಿಯನ್ನೂ ಮನುಷ್ಯ ತನ್ನ ಇಚ್ಛಾಶಕ್ತಿಗೆ ಅಧೀನಮಾಡಿ ದುರುಪಯೋಗ ಮಾಡಲೂಬಹುದು. ಕೇವಲ ಕೃತ್ರಿಮ ಉದ್ದೇಶಗಳಿಗೆ ಬಳಸಿ ನಿರ್ವೀರ್ಯ, ನಿಷ್ಪ್ರಯೋಜಕವಾಗಿಸಬಹುದು.

ಸೃಷ್ಟಿಶಕ್ತಿ : ತನ್ನ ಉಪಯೋಗಕ್ಕಾಗಿ ಯಾಂತ್ರಿಕ ಬಲವನ್ನು ನಿರ್ಮಿಸಿಕೊಳ್ಳಲು ಸೃಷ್ಟಿಕರ್ತನಾಗುತ್ತಾನೆ ಮನುಷ್ಯ. ಈ ಸೃಷ್ಟಿ ವಿನಾಶಕಾರಕವಾಗದೆ ಆನಂದದಾಯಕವಾಗಲು ಪ್ರಕೃತಿಯ ನಿಯಮಗಳಿಗನುಗುಣವಾಗಿ ಉಪಯೋಗಿಸಬೇಕು. ಇಲ್ಲದಿದ್ದರೆ ಸರ್ವನಾಶವಾದೀತು. ಪ್ರಕೃತಿ ತನ್ನ ನಿಯಮಬದ್ಧ ಚಲನೆಗಳ ಮೂಲಕ ಋತು-ಧರ್ಮಗಳಿಗನುಸಾರವಾಗಿ ಮಳೆಗರೆಯುತ್ತದೆ. ಭೂಮಿಯ ಗುರುತ್ವಾಕರ್ಷಣ ಮತ್ತು ನೀರಿನ ಹರಿಯುವ ಗುಣ ಅದನ್ನು ನದಿಯನ್ನಾಗಿಸುತ್ತದೆ. ಈ ಹರಿಯುವ ನೀರಿಗೆ ಶಕ್ತಿ ಅಪಾರ. ಮನುಷ್ಯ ತನ್ನ ಬುದ್ಧಿ ಮತ್ತು ಸಂಕಲ್ಪಗಳ ಬಲದಿಂದ ಈ ಹರಿಯುವ ನೀರಿನ ಶಕ್ತಿಯನ್ನು

ಉಪಯೋಗಿಸುವ ಉಪಾಯಗಳನ್ನು ಹುಡುಕಬಲ್ಲ. ಅಣೆಕಟ್ಟುಗಳನ್ನು ಕಟ್ಟಿ, ವಿದ್ಯುಚ್ಛಕ್ತಿ ಸಂಗ್ರಹಿಸಿ, ಯಂತ್ರಗಳನ್ನು ರಚಿಸಿ ನಡೆಸಬಲ್ಲ, ಭಾರೀ ಯೋಜನೆಗಳನ್ನು ಹಾಕಿ ವಿದ್ಯುತ್ತನ್ನು ಸಾವಿರಾರು ಮೈಲಿ ಸಾಗಿಸಬಲ್ಲ. ಅದರಿಂದ ಪಟ್ಟಣಗಳಿಗೆ, ಹಳ್ಳಿಗಳಿಗೆ ಬೆಳಕು ದೊರೆತೀತು. ನೀರೆತ್ತುವ ಯಂತ್ರ, ಹಿಟ್ಟಿನ ಯಂತ್ರಗಳು ನಡೆದಾವು. ಗದ್ದೆಗೆ ನೀರು ಹರಿದೀತು. ಚಿಕ್ಕಪುಟ್ಟ ದೋಣಿಗಳನ್ನು ನಡೆಸಬಹುದು. ನೀರಿನ ಪ್ರವಾಹವನ್ನು ತಡೆಗಟ್ಟಿ ಪ್ರಕೃತಿಗೆ ಅಡ್ಡ ನಿಲ್ಲದೆ ಅದರ ನಿಯಮಗಳಿಗೆ ಭಂಗತಾರದೆ ಸಾವಿರಾರು ಜನಕ್ಕೆ ಸಂತೋಷ ಸಮಾಧಾನ ಕೊಡಬಹುದು.

ಪ್ರಕೃತಿ ಒಂದು ಎಲ್ಲೆಯವರೆಗೆ ಸಹಕರಿಸುತ್ತಿರುತ್ತದೆ. ಇಲ್ಲಿ ಮನುಷ್ಯನ ಇಚ್ಛಾಬಲದ ಉಪಯೋಗ ಸರಿ, ಶ್ಲಾಘ್ಯ. ಹೀಗಿದ್ದರೆ ಪ್ರಕೃತಿಯು ಮನುಷ್ಯನಿಗೆ ಅನುಗ್ರಹ ದೇವತೆ. ಹೀಗಲ್ಲದೆ ಅನೇಕ ಸಲ ಮನುಷ್ಯ ತನ್ನ ಇಚ್ಛಾ ಬಲವನ್ನು ಪ್ರಕೃತಿಯ ನಿಯಮಗಳಿಗೆ ಅಡ್ಡಿಯಾಗುವಂತೆ ಬಳಸುತ್ತಾನೆ. ತನ ವಿಲಾಸ ಭೋಗಗಳಿಗಾಗಿ ದಾರಿ ಬಿಟ್ಟು ನಡೆಯುತ್ತಾನೆ. ಉದಾಹರಣೆಗೆ ಬೆಳ್ಳಗೆ ಹೂವಿನಂತೆ ಕಾಣುವ ಬಿಳಿಯ ಅನ್ನಕ್ಕೆ ಮೋಹಗೊಂಡು ಗಿರಣಿಗಳಲ್ಲಿ ತೊಳೆಸುತ್ತಾನೆ. ಪ್ರಕೃತಿಯ ವ್ಯವಸ್ಥೆಯಲ್ಲಿ ಅಕ್ಕಿಯ ಕಾಳಿನಲ್ಲಿ ಪುಷ್ಟಿದಾಯಕ ತಿರುಳೂ ಅದನ್ನು ಜೀರ್ಣಿಸಲು ತೌಡಿನ ಹೊದಿಕೆಯೂ ಇದೆ. ಗಿರಣಿಯಲ್ಲಿ ತೊಳೆಸಿದಾಗ ಈ ಎರಡು ಮುಖ್ಯ ಅಂಶಗಳೂ ನಾಶವಾಗುತ್ತವೆ. ನಿಯಮ ಉಲ್ಲಂಘಿಸಿ ನಡೆದುದಕ್ಕಾಗಿ ಪ್ರಕೃತಿ ಶಿಕ್ಷಿಸುತ್ತದೆ. ಸಂಕಟದ ಅಪಾಯಕರ ಬೆರಿಬೆರಿ ರೋಗ ಪ್ರಾಪ್ತಿಯಾಗುತ್ತದೆ.

ಅಂತೆಯೇ ಪ್ರಕೃತಿ ದತ್ತವಾದ ಹಣ್ಣುಗಳನ್ನು ನೇರವಾಗಿ ತಿನ್ನದೆ ಅದನ್ನು ಹುಳಿಯಿಸಿ ದ್ರಾಕ್ಷಾರಸ ಮಾಡಿಕೊಂಡು ಕೃತ್ರಿಮ ಉಲ್ಲಾಸ ಪಡೆಯುತ್ತಾನೆ. ರೋಗ ಅನುಭವಿಸುತ್ತಾನೆ. ಆಧುನಿಕ ಜೀವನದಲ್ಲಿ ಇಂಥ ದೃಷ್ಟಾಂತಗಳು ಬೇಕಾದಷ್ಟಿವೆ.

ಮನುಷ್ಯ ತನ್ನ ಅಸಾಧಾರಣ ಸಾಮರ್ಥ್ಯ, ಸಾಹಸಗಳನ್ನು ಇಂದ್ರಿಯ ಸುಖದ ಕ್ಷಣಿಕ ಉಲ್ಲಾಸಗಳನ್ನರಿಸಿ ಓಡಿಸುತ್ತಿದ್ದಾನೆ. .ಕ್ಷಣ ಭಂಗುರ ಜೀವನ ನಡೆಸುತ್ತಾ ಕಮರಿ ಬೀಳಲು ವೇಗವಾಗಿ ಧಾವಿಸುತ್ತಿದ್ದಾನೆ. ಪ್ರಕೃತಿಯ ನಿತ್ಯ ನಿರಂತರೋದ್ದೇಶ್ಯಕ್ಕೆ ಇದು ತೀರ ವಿರುದ್ಧ ನಡವಳಿಕೆ. ಅದರ ಶಾಶ್ವತ ವ್ಯವಸ್ಥೆಗೆ ಆತಂಕಕಾರಿ.

ಮನುಷ್ಯನಲ್ಲಿ ಅತ್ಯುತ್ತಮ ಸಹಜ ಗುಣ ಪ್ರೇಮ. ತನ್ನ ಸುತ್ತಲಿನವರ ಸೇವೆಯಲ್ಲಿ ಅದನ್ನು ಪ್ರಕಟಿಸುತ್ತಾನೆ. ಪ್ರಕೃತಿ ಸಹಜ ಮಾತೃಪ್ರೇಮದಲ್ಲಿ ನಮಗಿದು ಗೋಚರವಾಗುತ್ತದೆ. ಲೋಕಸೇವೆಗಾಗಿ ಬದುಕು ನಡೆಸುವಾಗಲೂ

ಮನುಷ್ಯನ ಉತ್ತಮ ರೀತಿಯ ಜೀವನ ಕಾಣುತ್ತದೆ. ತನ್ನಲ್ಲಿರುವ ದಿವ್ಯಜ್ಯೋತಿಯನ್ನು ಜೀವನದಿಂದ ಬೆಳಗಿಸುತ್ತಾನೆ. ಉಪಕಾರ, ಯೋಗ್ಯರ ಸುಖ ಸಂತೋಷಗಳಿಗಾಗಿ ಎಲ್ಲ ಸಾಮರ್ಥ್ಯವನ್ನೂ ಬಳಸುತ್ತಾನೆ. ತನ್ನ ಮತ್ತು ಸರ್ವರ ಯೋಗಕ್ಷೇಮ ಆದರಿಂದ ಸಾಧಿತವಾಗುತ್ತದೆ.

ಸಂಗ್ರಹದ ದುರಾಸೆ ಮತ್ತು ತನ್ನ ಸ್ವಾರ್ಥ - ಲೋಭಗಳಿಂದ ಇಚ್ಛಾಶಕ್ತಿಯನ್ನು ದುರುಪಯೋಗಪಡಿಸಿ ಪ್ರೀತಿ ಪ್ರೇಮಗಳ ಶಾಶ್ವತಾನಂದಗಳನ್ನು ಮನುಷ್ಯ ನಾಶಪಡಿಸಿಕೊಳ್ಳುತ್ತಿದ್ದಾನೆ. ಹಣ ಸಂಗ್ರಹದಂತೆ ವಿಶೇಷ ಸಾಮರ್ಥ್ಯಗಳೂ ಸ್ವಾರ್ಥಪರವಾಗುತ್ತವೆ. ವಿಲಾಸ ಜೀವನ ಅತಿಯಾಗಿ ಆತ್ಮನಾಶವಾಗುತ್ತದೆ, ಸಂತತ ತಿಕ್ಕಾಟಗಳಿಂದ ವಿನಾಶ ಖಂಡಿತ.

೬. ಮಾನವನ ವಿಕಾಸದ ಹಂತಗಳು

ಸಸ್ಯಗಳಲ್ಲಿ, ಪ್ರಾಣಿಗಳಲ್ಲಿ, ಸಚೇತನ ಸೃಷ್ಟಿಯಲ್ಲಿ ಕಾಣಬರುವ ಬೇರೆಬೇರೆ ಬಗೆಯ ಆರ್ಥಿಕ ರೀತಿಗಳನ್ನು ಹಿಂದಿನ ಅಧ್ಯಾಯ ಒಂದರಲ್ಲಿ ಗಮನಿಸಿದ್ದೇವೆ. ಅವೇ ಸೂತ್ರಗಳನ್ನು ಮನುಷ್ಯನಿಗೆ ಅನ್ವಯಿಸಿ ಅಳತೆ ಮಾಡಿ ನೋಡೋಣ– ಮನುಷ್ಯ ಯಾವ ವಿಧಾನಕ್ಕೆ ಹೇಗೆ ಹೊಂದಿಕೊಳ್ಳುತ್ತಾನೋ !

ಪ್ರಾಣಿಗಳು ಸ್ವಭಾವಾಧೀನ. ತವಕ್ಕಿ ತಮ್ಮ ಪ್ರಕೃತಿಗೆ ಅನುಸಾರವಾಗಿ ಬದುಕಲೇಬೇಕು. ಒಂದೇ ಜಾಡು, ಒಂದೇ ಚೌಕಟ್ಟು ಅವಕ್ಕೆ ಇದೆ. ಒಂದು ವಿಧಾನದಿಂದ ಇನ್ನೊಂದು ವಿಧಾನಕ್ಕೆ ತಮ್ಮ ಪ್ರಯತ್ನದಿಂದ ಅವು ಏರಲಾರವು. ಹುಟ್ಟಿದ ಗಳಿಗೆಯಿಂದ ಸಾಯುವವರೆಗೆ ಅವು ಹೀಗೆ ನಡೆಯಬೇಕು ಎಂಬ ನಿರ್ಧಾರ ಇದೆ. ಪರೋಪಜೀವಿ ವರ್ಗದ ಒಂದು ಜೀವ ಕಡೆಯತನಕವೂ ಪರೋಪಜೀವಿಯಾಗಿಯೇ ಉಳಿಯಬೇಕು. ಅದಕ್ಕೆ ಆತ್ಮೋದ್ಧಾರ ಸಾಧ್ಯವಿಲ್ಲ. ಚಿರತೆಗೆ ತನ್ನ ಮೈಮೇಲಿನ ಚುಕ್ಕೆಗಳನ್ನು ಅಳಿಸಿಕೊಳ್ಳಲು ಎಷ್ಟು ಅಸಾಧ್ಯವೋ ತನ್ನ ಸ್ವಭಾವವನ್ನು ತಿದ್ದಿಕೊಳ್ಳಲೂ ಅಷ್ಟೇ ಅಸಾಧ್ಯ. ಅದು ಇತರ ಪ್ರಾಣಿಗಳನ್ನು ಕೊಂದು ತಿನ್ನಲೇಬೇಕು. ಇಲ್ಲದಿದ್ದರೆ ಸಾವೇ ಗತಿ. ಆದರೆ ಅದರ ಬದುಕಿನ ಆ ರೀತಿಗೆ ಅದು ಹೊಣೆಯಲ್ಲ. ತಾನಾಗಿ ಬಯಸಿ ಅದು ಹಾಗೆ ಬದುಕುತ್ತಿಲ್ಲ. ಪ್ರಯತ್ನಶೀಲ ಪ್ರಾಣಿಯಾಗಿ ಅಥವಾ ಸಂಘಜೀವಿಯಾಗಿ ಅದು ಹಾಗೆ ಮುಂಬರಿಯಲಾರದು. ಅದಕ್ಕೆ ಅದು ಅಸಾಧ್ಯ.

ಮನುಷ್ಯನಿಗೆ ಮಾತ್ರ ಇಚ್ಛಾಶಕ್ತಿ – ಸಂಕಲ್ಪಬಲ ಇದೆ. ಬುದ್ಧಿಬಲವಿದೆ. ತನ್ನ ಬುದ್ಧಿಬಲದಿಂದ, ಇಚ್ಛಾಶಕ್ತಿಯ ಉಪಯೋಗದಿಂದ ಮನುಷ್ಯ ತನ್ನ ಪರಿಸ್ಥಿತಿ ಅಥವಾ ವಾತಾವರಣವನ್ನು ಬದಲಾಯಿಸಬಲ್ಲ. ಇತರ ವಿಧಾನಗಳ ಜೀವಿಗಳಿಗೂ ಮನುಷ್ಯನಿಗೂ ಇರುವ ಭೇದವೇ ಇದು.

ಪರೋಪಜೀವಿಯಾದ ಒಬ್ಬ ಕಳ್ಳ ದರೋಡೆಗಾರ ತನ್ನ ಬಾಳಿನ ರೀತಿಯನ್ನು ಬದಲಿಸಿಕೊಳ್ಳಬಲ್ಲ. ತನ್ನ ಹಿಂಸಾಪ್ರವೃತ್ತಿಯನ್ನು ತಗ್ಗಿಸಿ ಜಮೀನುದಾರನಾಗಿ ನೆಲೆಸಿ, ಒಂದು ತೃಣವೂ ಕೆಲಸ ಮಾಡದೆ, ದುಡಿಮೆ ಎಳ್ಳಷ್ಟೂ ಇಲ್ಲದೆಯೆ ತನ್ನ ಗುತ್ತಿಗೆಯನ್ನೋ ಗೇಣಿಯನ್ನೋ ವಸೂಲು ಮಾಡಿಕೊಳ್ಳುತ್ತ ಬದುಕಬಹುದು. ಹೀಗೆ ಪರೋಪಜೀವಿ ವಿಧಾನದಿಂದ ಮುಂದಿನ ಪರಾಪಹಾರಿ ವರ್ಗಕ್ಕೆ ಏರಬಲ್ಲ.

ಅಥವಾ ಬೇಸಾಯಗಾರನಾಗಿ, ಚಿಕ್ಕಪುಟ್ಟ ಕಸಬುದಾರನಾಗಿ ನೆಲೆಸಿ ತನ್ನ ಕೃಷಿಯಿಂದ, ತನ್ನ ಮೈಯ ಬೆವರಿನಿಂದ ಪ್ರಾಮಾಣಿಕ ಜೀವನ ನಡೆಸಲೂಬಹುದು. ಹಾಗೆ ಮಾಡಿದರೆ ಅವನು ಮೂರನೆಯ ವಿಧಾನವಾದ ಪ್ರಯತ್ನಶೀಲ ವರ್ಗಕ್ಕೆ ಏರಿದಂತಾಯಿತು.

ಅಥವಾ ಹಿಂದೂ ಅವಿಭಕ್ತ ಕುಟುಂಬದ ಸದಸ್ಯನಾಗಿ ಕುಟುಂಬದವರೆಲ್ಲರಿಗಾಗಿ ದುಡಿಯುತ್ತ ತನ್ನ ಸಂಪಾದನೆಯನ್ನು ದುಡಿತದ ಫಲವನ್ನು ಎಲ್ಲರೊಡನೆ ಹಂಚಿಕೊಂಡು ಬದುಕಬಹುದು. ಆಗ ಅವನು ಸಂಘಜೀವಿಯಾದ.

ಇನ್ನೂ ಒಂದು ಹೆಜ್ಜೆ ಮುನ್ನಡೆದು ತನ್ನ ಜೊತೆಯ ಮನುಷ್ಯವರ್ಗವನ್ನು ಪ್ರೀತಿಸಿ, ಆ ಪ್ರೇಮದ ಪ್ರೇರಣೆಯಿಂದ ದೇಶ ಸೇವಕನಾಗಿ ಪರಿವರ್ತನಗೊಂಡು ಸರಳ ಜೀವನ ನಡೆಸಿಯಾನು. ಮಿತಾಹಾರ ವಿಹಾರಗಳಿಂದ ಸೇವಾ ದೀಕ್ಷೆಯಲ್ಲಿ ಬಾಳನ್ನು ಸವೆಸಿಯಾನು. ಆಗ ಅವನು ಈ ಆರ್ಥಿಕ ರೀತಿಗಳ ಮೇಲಿನ ಹಂತಕ್ಕೆ ಪರಹಿತಕಾರಿ ವರ್ಗಕ್ಕೆ ಏರಬಲ್ಲ.

ಆತ್ಮಸಂಯಮ, ತಪಸ್ಸು ಇದ್ದರೆ ತನ್ನ ಜೀವನಧರ್ಮವನ್ನು ಅರಿತು ಅದರಂತೆ ನಡೆದರೆ, ಮನುಷ್ಯನಿಗೆ ಇವೆಲ್ಲವೂ ಸಾಧ್ಯವೇ. ಉತ್ತಮೋತ್ತಮವನ್ನು ಸಾಧಿಸುವ ಹಂಬಲ, ಅದಕ್ಕಾಗಿ ಇಚ್ಛಾಶಕ್ತಿಯ ಯೋಜನೆ ಅಗತ್ಯ.

ಈ ಆರ್ಥಿಕ ವಿಧಾನಗಳನ್ನು ಮನುಷ್ಯನಿಗೆ ಅನ್ವಯಿಸಿದಾಗ ಆಯಾವರ್ಗದ ವಿಶೇಷ ಲಕ್ಷಣಗಳು ಹೇಗಿರುತ್ತವೋ ಸ್ಥೂಲವಾಗಿ ನೋಡೋಣ.

ಪರೋಪಜೀವಿ ವಿಧಾನ : ಉದಾಹರಣೆ : ಒಡವೆಯ ಆಸೆಗಾಗಿ ಮಗುವನ್ನೆ ಕೊಲ್ಲುವ ಕೊಲೆಗಡುಕ ಕಳ್ಳ. ಈ ಕೃತ್ಯವನ್ನು ಹೀಗೆ ವಿಶ್ಲೇಷಿಸಬಹುದು :–

೧. ಲೋಭ–ದುರಾಸೆಗಳಿಂದ ಬಂದ ಸ್ವಾರ್ಥ;
೨. ತನ್ನ ಕೃತಿಯಿಂದ ಯಾರಿಗೆ ಏನೇ ಹಾನಿಯಾಗಲಿ ತನಗೆ ಲಾಭ ಆದರಾಯಿತು;
೩. ತನಗೆ ಲಾಭಕೊಟ್ಟ ಮೂಲವಸ್ತುವನ್ನೇ ನಾಶಮಾಡುವುದು ಅಥವಾ ಗಾಸಿಗೊಳಿಸುವುದು;
೪. ಕೇವಲ ತನ್ನ ಹಕ್ಕು ಮತ್ತು ಅಧಿಕಾರದ ಮೇಲೆ ಗಮನ;
೫. ತನ್ನ ಕರ್ತವ್ಯಗಳೂ ಇವೆ ಎಂಬುದರ ಗಣನೆಯೇ ಇಲ್ಲ;
೬. ಪರೋಪಕಾರಬುದ್ಧಿ ಶೂನ್ಯ;
೭. ಹಿಂಸಾಜನಕ ಕಾರ್ಯ.

ಮುಖ್ಯ ಲಕ್ಷಣ : ಲಾಭಕೊಟ್ಟ ವಸ್ತುವನ್ನೇನಾಶಮಾಡುವುದು.

ಪರೋಪಹಾರಿ ವಿಧಾನ : ಉದಾಹರಣೆ : ಗೊತ್ತೇ ಆಗದ ಹಾಗೆ ಜೇಬಿನಿಂದ ಹಣವನ್ನು ಕತ್ತರಿಸುವ ಜೇಬುಗಳ್ಳ. ಇದರ ವಿಶ್ಲೇಷಣೆ ಹೀಗೆ :-

೧. ದುರಾಶೆಯಿಂದ ಬಂದ ಸ್ವಾರ್ಥ;
೨. ಕೈಗೆ ಸಿಕ್ಕವನಿಗೆ ಹೆಚ್ಚು ಹಿಂಸೆ ಕೊಡದೆ ಕೆಲಸ ಸಾಧಿಸುವಂತಿದ್ದರೆ ಸಾಧಿಸಿಕೊಳ್ಳುತ್ತಾನೆ;
೩. ಹಕ್ಕು ಮತ್ತು ಸ್ವಂತ ಅಧಿಕಾರದ ಮೇಲೇ ಗಮನ;
೪. ಕರ್ತವ್ಯ ಜ್ಞಾನ ಶೂನ್ಯ ;
೫. ಪರಹಿತಕಾರಿತನದ ಅಭಾವ ;
೬. ಹಿಂಸಾಜನಕ ಕಾರ್ಯ.

ಮುಖ್ಯ ಲಕ್ಷಣ : ದುಡಿಯದೆ ಫಲ ಬೇಕು.

ಪ್ರಯತ್ನ ವಿಧಾನ : ಉದಾಹರಣೆ : ರೈತ ನೆಲವನ್ನು ಉತ್ತು, ಕಾದು, ಗೊಬ್ಬರ ಚೆಲ್ಲಿ, ನೀರು ಹರಿಯಿಸಿ, ಬೀಜ ಬಿತ್ತಿ, ಪೈರನ್ನು ಕಾದು ಸುಗ್ಗಿಯಲ್ಲಿ ಬೆಳೆ ಕೊಯಿದುಕೊಳ್ಳುತ್ತಾನೆ. ಇದರ ವಿಶ್ಲೇಷಣೆ ಹೀಗೆ:-

೧. ಯೋಗ್ಯ ಸ್ವಾರ್ಥ, ಆಶೆ-ಆಕಾಂಕ್ಷೆಗಳ ಪ್ರೇರಣೆ;
೨. ಅವನ ಆತ್ಮಾಭಿಮಾನವು ಅವನಿಂದ ಸ್ವಂತವಾಗಿ ಕೃಷಿಮಾಡಿಸುತ್ತದೆ; ಅದರ ಫಲವಾಗಿ ಬಂದುದನ್ನು ಮಾತ್ರ ಅವನು ತೆಗೆದುಕೊಳ್ಳುತ್ತಾನೆ,
೩. ಪ್ರಯತ್ನಪಡುವ ವೃತ್ತಿ; ಅಪಾಯಕ್ಕೆ, ನಷ್ಟಕ್ಕೆ ಎದೆಗೊಡುವ ಸಿದ್ಧತೆ;
೪. ಸಂಗಾತಿಗಳಿಗೆ, ಸಾಧ್ಯವಿದ್ದರೆ ಇತರರಿಗೂ, ಪ್ರಯೋಜನವಾಗಲಿ ಎಂಬ ಬಯಕೆ;
೫. ಎಲ್ಲರ ಹಕ್ಕುಗಳನ್ನೂ ಸಮರಸವಾಗಿ ತೂಗುವ ವೃತ್ತಿ;
೬. ಇತರರಿಗೆ ಸಲ್ಲಿಸಬೇಕಾದ ಋಣಗಳ ಭಾವನೆಯ ಬೆಳವಣಿಗೆ;
೭. ನ್ಯಾಯ-ಧರ್ಮಗಳ ಆಧಾರ;
೮. ಹಿಂಸೆ ಮಾಡಲೂಬಹುದು ಒಮ್ಮೊಮ್ಮೆ.

ಮುಖ್ಯ ಲಕ್ಷಣ : ದುಡಿತದಿಂದ ಪಡೆತ; ಲಾಭನಷ್ಟ, ಜಯಾಪಜಯಗಳಿಗೆ ಸಿದ್ಧ.

ಸಂಘಜೀವಿ ವರ್ಗ : ಉದಾಹರಣೆ: ಒಟ್ಟು ಕುಟುಂಬದ ಹಿತಕ್ಕಾಗಿ ಕೆಲಸ ಮಾಡುವ ಕುಟುಂಬದ ಸದಸ್ಯ; ಹಳ್ಳಿಗಾಗಿ, ಒಂದು ಜನ ಸಮುದಾಯಕ್ಕಾಗಿ ಕೆಲಸಮಾಡುವ ಒಂದು ಗ್ರಾಮ ಪಂಚಾಯತಿ ಅಥವಾ ಸಹಕಾರ ಸಂಘ. ಇದರ ವಿಶ್ಲೇಷಣೆ ಹೀಗೆ :-

೧. ಉದ್ದೇಶ್ಯ ವೈಯಕ್ತಿಕ ಸ್ವಾರ್ಥವಲ್ಲ; ಸಂಘ-ಸಮುದಾಯದ ಹಿತ.

೨. ಸಂಘದ ಇಚ್ಛೆಗೆ ಅಧೀನ. ಸ್ವಂತ ಹಿತವನ್ನು ತ್ಯಜಿಸಿ ಸಂಘಕ್ಕೆ ವಿಧೇಯುವಾಗುವಷ್ಟು ಸ್ವಾರ್ಥತ್ಯಾಗ.

೩. ಸಾಂಘಿಕ ಕರ್ತವ್ಯದಲ್ಲಿ ಶ್ರದ್ಧೆ;

೪. ತನಗೆ ಸಲ್ಲಬೇಕಾದ ಲಾಭಕ್ಕಿಂತ ತಾನು ಸಲ್ಲಿಸಬೇಕಾದ ಕರ್ತವ್ಯವೇ ಅಧಿಕವೆಂಬ ಭಾವನೆ;

೫. ಪರಹಿತದ ವೃತ್ತಿ;

೬. ಸಂಘದ ಹೊರಗಿನವರಿಗೆ ಒಮ್ಮೊಮ್ಮೆ ಹಿಂಸೆಯಾದರೂ ಆಗಬಹುದು.

ಮುಖ್ಯ ಲಕ್ಷಣ : ಲಾಭದೃಷ್ಟಿಯಿಲ್ಲದೆ ಮಾಡಿದ ಸೇವಾಕಾರ್ಯ.

ಮಾನವ ಸಮುದಾಯಗಳಲ್ಲಿ, ಸಂಘ–ರಾಷ್ಟ್ರಗಳಲ್ಲಿ ಈ ವಿವಿಧ ಆರ್ಥಿಕ ವರ್ಗಗಳಿಗೆ ಸೇರಿದ ಜನರು ನಮಗೆ ಕಾಣಬರುತ್ತಾರೆ. ನಮ್ಮ ದೇಶದಲ್ಲೂ ನಮ್ಮ ಪುರಾತನ ವರ್ಣಾಶ್ರಮಧರ್ಮ ಈ ವಿವಿಧ ಆರ್ಥಿಕ ವರ್ಗಗಳ ಲಕ್ಷಣಗಳ ಆಧಾರದ ಮೇಲೆಯೇ ನೆಲೆಗೊಳಿಸಲ್ಪಟ್ಟಿತ್ತು.

ಈಗಿನ ಜಾತಿ ಪದ್ಧತಿ ಈ ಮೂಲವಿಚಾರದ ಆದರ್ಶಗಳ ಮಟ್ಟದಿಂದ ಜಾರಿ ಬಹಳ ಕೆಳಗೆ ಉರುಳಿದೆ. ಆ ಹಳೆಯ ವರ್ಗ–ಲಕ್ಷಣಗಳನ್ನು ಈಗಿನ ಜಾತಿಗಳಲ್ಲಿ ಕಾಣಲಾಗುವುದಿಲ್ಲ.

ಆಗಿನ ಪರಿಸ್ಥಿತಿಗೆ ಅನುಸಾರವಾಗಿ ವರ್ಣಾಶ್ರಮ ಧರ್ಮವನ್ನು ರೂಪಿಸಿದವರು ಅದನ್ನು ವಂಶಪಾರಂಪರ್ಯವಾಗಿ ಮಾಡಿ ಬಿಕ್ಕಟ್ಟಾಗಿ ಮಾಡಿರಬಹುದು. ಮನುಷ್ಯ ಯಾವ ಕಸಬು–ಉದ್ಯೋಗ ಮಾಡಬೇಕೆಂಬುದರಲ್ಲಿ ಅವನ ಇಚ್ಛಾಬಲದ ಉಪಯೋಗಕ್ಕೆ ಅವಕಾಶವಿಲ್ಲದಂತೆ ಮಾಡಿದರು. ಅವನ ಜನ್ಮ ಅದನ್ನು ನಿರ್ಣಯಿಸಿಬಿಡುತ್ತಿತ್ತು. ಈಗಿನ ಕಾಲದಲ್ಲೋ ಕಸಬು, ಉದ್ಯೋಗ ಯಾವುದೂ ಸ್ಥಿರವಲ್ಲ. ಕೆಲಸಗಾರರು ಒಂದೆಡೆ ನೆಲೆಸರು. ಬಹಳ ವೇಗದ ಸಂಚಾರ. ಕೆಲಸದಲ್ಲಿ ಜಾಣತನ, ಕುಶಲತೆ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಪಡೆಯಲು ಈಗ ಧಾರಾಳವಾದ ಸೌಕರ್ಯವಿದೆ. ಇಂಥದರಲ್ಲಿ ಆ ನಿರ್ಬಂಧದ ವರ್ಗೀಕರಣ ಹೊಂದುವುದಿಲ್ಲ. ಆದರೆ ಒಂದು ಮಾತು: ಎಂಥ ಪರಿಸ್ಥಿತಿಯೇ ಬರಲಿ, ಈ ಆರ್ಥಿಕ ವರ್ಗೀಕರಣ, ಔದ್ಯೋಗಿಕ ವರ್ಗೀಕರಣ (ಗುಣ-ಕರ್ಮ ವಿಭಾಗಶಃ) ಸಹಜವಾಗಿ ಇದ್ದೇ ಇದೆ. ಕೆಳಗಿನ ವರ್ಗದವರಿಗೆ ಮೇಲೇರಿ ಬರಲು ಸಾಧ್ಯ ಇದ್ದಷ್ಟು ಪ್ರೋತ್ಸಾಹ ಕೊಡಬೇಕು.

ಇಲ್ಲಿ ನಾವು ವರ್ಣಿಸಿದಷ್ಟು, ವಿವರಿಸಿದಷ್ಟು ಸ್ಪಷ್ಟವಾಗಿ ಈ ವರ್ಗಗಳು ಬಾಳಿನಲ್ಲಿ ಕಾಣಬರುವುದಿಲ್ಲ. ಒಬ್ಬನೇ ವ್ಯಕ್ತಿ ಆಯಾ ಕಾಲದ ಉದ್ದೇಶ್ಯಕ್ಕನು

ಗುಣವಾಗಿ ಬೇರೆ ಬಗೆಯಲ್ಲಿ ನಡೆದುಕೊಂಡಾನು. ಅವನ ಕರ್ಮ ವೈವಿಧ್ಯತೆಯ ಸ್ವರೂಪದಿಂದ, ಜೀವನ ಸಿದ್ಧಾಂತದ ಲಕ್ಷಣದಿಂದ ಅವನ ವರ್ಗ – ವರ್ಣ ನಿರ್ಧಾರವಾಗುತ್ತದೆ.

೭. ಸಮೂಹ ಅಥವಾ ರಾಷ್ಟ್ರಗಳಲ್ಲಿ ವಿಕಾಸ

ಒಬ್ಬ ವ್ಯಕ್ತಿ ಒಂದು ಆರ್ಥಿಕ ವಿಧಾನದಿಂದ ಇನ್ನೊಂದಕ್ಕೆ ಹೇಗೆ ಏರಬಹುದೋ ಇಳಿಯಬಹುದೋ ಹಾಗೆಯೇ ಒಂದು ಗುಂಪೂ ಒಂದು ರಾಷ್ಟ್ರವೂ ಒಟ್ಟಾಗಿ ಒಂದು ಆರ್ಥಿಕ ವಿಧಾನದಿಂದ ಇನ್ನೊಂದಕ್ಕೆ ಸಾಗಬಹುದು. ತನ್ನ ಸಾಮೂಹಿಕ ಜೀವನದಲ್ಲಿ, ಸಂಘಜೀವನದಲ್ಲಿ ಆ ವಿಧಾನದ ಲಕ್ಷಣಗಳನ್ನು ಸ್ಪಷ್ಟವಾಗಿ ಮೂಡಿಸಬಹುದು. ಇಡೀ ಮಾನವ ಲೋಕವೇ ಹಾಗೆ ಮಾಡಬಹುದು. ಆದುದರಿಂದ ಒಂದು ಗುಂಪಿನ ಅಥವಾ ರಾಷ್ಟ್ರದ ಸಾಂಘಿಕ ಜೀವನದ ಮುಖ್ಯ ಲಕ್ಷಣಗಳನ್ನೂ ಇತರ ಗುಂಪು ಅಥವಾ ರಾಷ್ಟ್ರಗಳೊಡನೆ ಅದು ವ್ಯವಹರಿಸುವ ರೀತಿಯನ್ನೂ ಗಮನಿಸಿ ಅದರ ವಿಕಾಸದ ಹಂತ ಯಾವುದೆಂದು ನಿರ್ಧರಿಸಬಹುದು.

ಮಾನವ ನಾಗರಿಕತೆ ಬಹಳ ಬಳಸಿ ಇಲ್ಲಿಗೆ ಬಂದಿದೆ. ಅದನ್ನು ಮೂರು ಹಂತಗಳಾಗಿ ವಿಂಗಡಿಸಿದರೆ ನಮ್ಮ ಈ ಜಿಜ್ಞಾಸೆಗೆ ಸಾಕು. ಪ್ರಾಥಮಿಕ ಮೃಗಸ್ಥಿತಿ, ಮಾನವೀಯ ಸ್ಥಿತಿ, ಪ್ರಗತಿಪೂರ್ಣ ಆಧ್ಯಾತ್ಮ ಸ್ಥಿತಿ. ಹಿಂದೆ ನಾವು ಪರಿಶೀಲಿಸಿದ ಐದು ಬಗೆಯ ಆರ್ಥಿಕ ವಿಧಾನಗಳನ್ನು ಈ ಹಂತಗಳಿಗೆ ಹೋಲಿಸಿದರೆ 'ಪರೋಪಜೀವಿ', 'ಪರಾಪಹಾರಿ' ವಿಧಾನಗಳೆರಡೂ ಪ್ರಾಥಮಿಕ, ಮೃಗ – ಹಂತದ ಲಕ್ಷಣಗಳು; ಆ ಮುಂದಿನ 'ಪ್ರಯತ್ನಶೀಲ', 'ಸಂಘಜೀವಿ' ವಿಧಾನಗಳೆರಡೂ ಆಧುನಿಕ ಮಾನವೀಯಹಂತದ ಲಕ್ಷಣ. ಮೊದಲನೆಯದು ನಶ್ವರ, ಹಿಂಸಾ ವಿಧಾನ; ಎರಡನೆಯದೂ ಅಶಾಶ್ವತವ್ಯವಸ್ಥೆಯೆ. ಅದರಲ್ಲೂ ಹಿಂಸೆ ಇದೆ. ಕಟ್ಟಕಡೆಯ ಹಂತವೇ ಶಾಶ್ವತತೆ. ಶಾಂತಿ, ಅಹಿಂಸೆಗಳನ್ನು ಕೊಡಬಲ್ಲದ್ದು.

ಪ್ರಾಥಮಿಕ ಅಥವಾ ಮೃಗಹಂತ

(ಅ) ಪರೋಪಜೀವಿ : ಈ ವರ್ಗದ ಜನ ಇತರ ಗುಂಪುಗಳನ್ನು, ರಾಷ್ಟ್ರಗಳನ್ನು ಅವಲಂಬಿಸಿ ಪರೋಪಜೀವಿಗಳಾಗಿ ಬದುಕುತ್ತಾರೆ. ಇತರರ ಹಕ್ಕುಗಳೇನು, ತನಗೆ ಬೇಕಾದುದು ಹೇಗೆ ಸಿಕ್ಕೀತು, ತಾನು ಮಾಡಿದ ಕೆಲಸದ ಫಲಗಳೇನು – ಇವು ಯಾವುದೂ ಪರೋಪಜೀವಿಯ ತಲೆಗೆ ಹತ್ತುವುದೇ ಇಲ್ಲ. ಪ್ರಾಣಿವರ್ಗದಲ್ಲಿ ಕುರಿಮರಿಯ ಸಂಕಟವೇನು ಎಂಬುದನ್ನು ತೋಳ ತಾನದರ ಮೇಲೆ ನೆಗೆಯುವಾಗ ಯೋಚಿಸದು. ಆ ಗಳಿಗೆಯಲ್ಲಿ ತನ್ನ ಹಸಿವು ಹಿಂಗಬೇಕು. ಅಷ್ಟೇ ಅದರ ಉದ್ದೇಶ್ಯ.

ಇದೇ ರೀತಿ ಇನ್ನೊಂದು ಜನಾಂಗವನ್ನು, ರಾಷ್ಟ್ರವನ್ನು ಹಾಳುಮಾಡದೆ ತನ್ನ ಬದುಕನ್ನು ಸಾಗಿಸಲಾರದ ದೇಶವೂ ಪರೋಪಜೀವಿಯೇ. ಅಂಥ ಆರ್ಥಿಕ ವಿಧಾನ ಪರೋಪಜೀವಿ ವಿಧಾನವೇ, ನಿಸ್ಸಂಶಯವಾಗಿ ! ಇದಕ್ಕೆ ಉದಾಹರಣೆಃ ಹಿಂದೆ ಗ್ರೀಕವ ರೋಮ ಸಾಮ್ರಾಜ್ಯಗಳು ಅನ್ಯದೇಶಗಳ ಕಪ್ಪಕಾಣಿಕೆಗಳಿಂದ ಪುಷ್ಟವಾಗಿದ್ದವು. ತಮ್ಮಲ್ಲಿಯ ಕೆಲವರನ್ನು ಗುಲಾಮರನ್ನಾಗಿ ಮಾಡಿ ಅವರ ದುಡಿತದಿಂದ ವೈಭವನ್ನು ಮೆರೆಸಿದವು.

ಈಗಲೂ ವಸಾಹತುಗಳಿಂದ ಕಚ್ಚಾ ಮಾಲು ತರಿಸಿಕೊಂಡೋ, ಕೆಲಸಗಾರರನ್ನು ಶೋಷಣೆಮಾಡಿಯೋ ಬಾಳು ಸಾಗಿಸುವ ಎಲ್ಲಾ ರಾಷ್ಟ್ರಗಳೂ ಪರೋಪಜೀವಿಗಳೇ. ಚೀನಾದೊಡನೆ ಬ್ರಿಟಿಷರು ನಡೆಸಿದ ಅಫೀಮು ವ್ಯಾಪಾರ, ದಕ್ಷಿಣ ಅಮೆರಿಕಾ ರಾಜ್ಯಗಳಲ್ಲಿ ಬ್ರಿಟಿಷರು ಮಾಡಿದ ಗುಲಾಮರ ವ್ಯಾಪಾರ, ಪಶ್ಚಿಮ ಆಫ್ರಿಕಾದ ರಾಜ್ಯಗಳಲ್ಲಿ ಲಿಯೊಪಾಲ್ಡ್ ದೊರೆ ನಡೆಸಿದ ಶೋಷಣೆ, ಹಿಂದುಸ್ತಾನದ ಗಿರಾಕಿಯನ್ನೇ ನಂಬಿ ಬದುಕದ ಬ್ರಿಟಿಷ್ ಗಿರಣಿಗಾರರ ರೀತಿ ಎಲ್ಲವೂ ಪರೋಪಜೀವನ. ಯಾರಿಂದ ಲಾಭ ಪಡೆಯುತ್ತಾರೋ ಅವರನ್ನೇ ಸಮೂಲವಾಗಿ ನಾಶ ಮಾಡುವ ವಿಧಾನ.

(ಬ) ಪರಾಪಹಾರಿ :

ಇನ್ನು ಕೆಲವರು ಕೋತಿಗಳ ಹಾಗೆ. ತಾವು ಬಿತ್ತಿ ಬೆಳೆಸದೆಯೆ, ದುಡಿದು ಸೃಷ್ಟಿಸದೆಯೆ ಕೈಗೆ ಸಿಕ್ಕ ಫಲವನ್ನು ಅನುಭವಿಸುವವರು. ಆದರೂ ಕೋತಿ ಮರವನ್ನೇನು ಕಿತ್ತು ಹಾಕದು, ಮರಕ್ಕೆ ಹಾನಿಯಿಲ್ಲದೆ ಇನ್ನೊಮ್ಮೆ ಅದು ಫಲ ಬಿಡುವಂತೆ ಕಾಯನ್ನಷ್ಟೇ ಕಿತ್ತುಕೊಳ್ಳುತ್ತದೆ. ಕೋತಿ ಪರಾಪಹಾರಿ.

ಹಿಂದಿನ ಇತಿಹಾಸದಲ್ಲಿ ನಾದಿರ್ ಷಾನಂಥವರಿದ್ದರು. ದೇವಾಲಯಗಳಲ್ಲಿ ಲೂಟಿ ಮಾಡಿ ಅಲ್ಲಿದ್ದ ಅತುಳೈಶ್ವರ್ಯವನ್ನೂ ಹೊತ್ತುಕೊಂಡುಹೋದ ನಾದಿರ್ ಷಾ. ಆದರೆ ದೇಶದ ಜನರು ಮಾಡುತ್ತಿದ್ದ ಸಂಪದಭಿವೃದ್ಧಿ ಕಾರ್ಯಕ್ಕೆ ಆತಂಕ ತರಲಿಲ್ಲ. ಅವನ ದಾಳಿಗಳೆಲ್ಲ ಪರಾಪಹಾರದ ಲಕ್ಷಣದವು.

ದಕ್ಷಿಣ ಅಮೆರಿಕಾದ ಪ್ರಜಾರಾಜ್ಯಗಳನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿರುವ ನ್ಯೂಯಾರ್ಕಿನ ಬಂಡವಾಳಗಾರ–ಸಾವುಕಾರರೆಲ್ಲ ಈ ವರ್ಗದವರೇ. ಜಾಯಿಂಟ್ ಸ್ಟಾಕ್ ಕಂಪೆನಿಗಳ ಷೇರುದಾರರಾಗಿ ಉತ್ಪಾದನೆಯಲ್ಲಿ ಸ್ವಲ್ಪವೂ ಪ್ರತ್ಯಕ್ಷ ಭಾಗವಹಿಸದೆ ಕೂತಲ್ಲೇ ಲಾಭ ಗಿಟ್ಟಿಸುವ ಜನರೆಲ್ಲಾ ಪರಾಪಹಾರಿಗಳೇ. ಲಾಭದಲ್ಲಿ ಮಾತ್ರ ಪಾಲು, ದುಡಿತದಲ್ಲಿ ಮಾತ್ರ ಸೊನ್ನೆ. ಹೀಗೇ ಹಲವು ಸಂಸ್ಥೆಗಳು ಕೂಡಿಕೊಂಡು ಬೇರೆ ಬೇರೆ ಹೆಸರುಗಳಿಂದ ಏಕೈಕಾಧಿಕಾರ ಪಡೆದು ಉದ್ಯೋಗ–ವ್ಯಾಪಾರ

ನಡೆಸುವುದು ಕೂಡ ಪರಾಪಹಾರವೇ. ಏಕೆಂದರೆ, ಅವರದು ಕಾಸಿನ ಕಷ್ಟ, ರೂಪೋಯಿಯು ಲಾಭ.

ಆಧುನಿಕ ಮಾನವ ಹಂತ :

(ಅ) ಪ್ರಯತ್ನಶೀಲತೆ : ಈ ಹಂತದಲ್ಲಿ ಕರ್ತವ್ಯ ಜ್ಞಾನವಿದೆ, ಹಕ್ಕುಗಳನ್ನೂ ಕರ್ತವ್ಯಗಳನ್ನೂ ತೂಗಿ ನೋಡುವ ಗುಣವಿದೆ. ಈ ಹಂತದಲ್ಲಿರುವ ರಾಷ್ಟ್ರಗಳು ನೆರೆಹೊರೆಯ ದೇಶಗಳಿಗೆ ಯಾವ ಬಗೆಯ ತೊಂದರೆಯನ್ನೂ ಕೊಡದೆ ತಾವು ಕಷ್ಟಪಟ್ಟು ಉತ್ಪತ್ತಿ ಮಾಡಿದುದನ್ನೇ ಭುಜಿಸುತ್ತವೆ. ಪ್ರತಿಯೊಬ್ಬ ಕಸಬುದಾರನೂ ತನ್ನ ಕೈಗಾರಿಕೆಯನ್ನು ಉದರನಿರ್ವಾಹಕ್ಕಾಗಿ, ಲಾಭಗಳಿಕೆಗಾಗಿ ಶಾಂತವಾಗಿ ನಡೆಯಿಸುತ್ತಿರುವಂಥ ಪರಿಸ್ಥಿತಿ ಇರುವ ಭಾರತ, ಚೀನಾಗಳ ನಾಗರಿಕತೆ ಈ ಪ್ರಯತ್ನಶೀಲ ವಿಧಾನದ ದೃಷ್ಟಾಂತ.

(ಬ) ಸಂಘಜೀವಿ ;

ಬಿಳಿ–ಕರಿ, ಕೆಂಪು–ಹಳದಿ ಬಣ್ಣ ಭೇದವಿಲ್ಲದ, ಜಾತಿ ಭೇದಏಲ್ಲದ, ರಾಯ–ರಂಕ ಎಂಬ ವರ್ಗಭೇವಿಲ್ಲದ ಒಂದೇ ಸಾಮಾಜಿಕ ರೀತಿಯ ಐಕಮತ್ಯವುಳ್ಳ ಇಸ್ಲಾಂ ಸಂಸ್ಕೃತಿ ನಿಸ್ಸಂದೇಹವಾಗಿ ಸಂಘಜೀವನದ ರೀತಿಯದು. ಇದೇ ರೀತಿ ಸಂಘಜೀವನ ನಾಜಿಗಳದು, ಫ್ಯಾಸಿಸ್ಟರದು. ಈ ಸಂಘಜೀವಿಗಳ ಜನಕ್ಕೆ ತಮ್ಮ ಗುಂಪು, ಬಣ ಒಂದೇ ಮುಖ್ಯ. ತಮ್ಮ ಬಣದ ಹೊರಗಿನವರ ಬಗ್ಗೆ ತಾತ್ಸಾರ. ವಿಶೇಷ ಹಿಂಸಾಭಾವನೆ. ತಮ್ಮ ಗುಂಪಿನ ಜನಕ್ಕೆ ತಾವು ಸಲ್ಲಿಸಬೇಕಾದ ಕರ್ತವ್ಯದ ಬಗ್ಗೆ ಅವರಿಗೆ ಬಹಳ ಸೂಕ್ಷ್ಮ, ಉನ್ನತ ದೃಷ್ಟಿ. ಇಡೀ ಗುಂಪಿನ, ಸಂಸ್ಥೆಯ ಹಿತಕ್ಕಾಗಿ ಪ್ರತ್ರಿಯೊಬ್ಬನೂ ತನ್ನ ವ್ಯಕ್ತಿತ್ವವನ್ನು ಅದರಲ್ಲಿ ವಿಲೀನಗೊಳಿಸುತ್ತಾನೆ.

ಪ್ರಗತಿಪೂರ್ಣ ಆಧ್ಯಾತ್ಮ ಹಂತ : ಈ ವರ್ಗಕ್ಕೆ ಸೇರಿದ ಜನರಲ್ಲಿ ತಮ್ಮ ಗುಂಪಿಗಷ್ಟೇ ಅಲ್ಲ, ಇಡೀ ಜೀವಲೋಕಕ್ಕೇ ತಾವು ಸಲ್ಲಿಸಬೇಕಾದ ಋಣವಿದೆಯೆಂಬ ಭಾವನೆ ತಂಬಿರುತ್ತದೆ. ಸಾಧಾರಣವಾಗಿ ಎಲ್ಲ ಧರ್ಮಗಳೂ ಈ ಹಂತವನ್ನೇರಲು ಸನ್ನೇಕೋಲು ಇದ್ದಂತೆ. ನೆರೆಹೊರೆಯವರಲ್ಲಿ ವಿಶ್ವಾಸ, ದೀನರ ಸೇವೆಗಳೇ ಎಲ್ಲಾ ಧರ್ಮಗಳು ತಿಳಿಸುವ ಸಂದೇಶ. ಮನುಷ್ಯನು ದೇವರ ದಾರಿ ಬಿಟ್ಟು ಅಡ್ಡ ದಾರಿ ತುಳಿದು ಪಾಪ ಮಾಡಿದರೆ ಹೇಗೆ ನರಕ ಭಾಜನನಾಗುತ್ತಾನೆಂಬುದನ್ನು ಧರ್ಮಗಳು ತಿಳಿಸುತ್ತವೆ. ಆಸೆಯ ಮಾಯಾಜಾಲಕ್ಕೆ ಕ್ಷಣಿಕವಾದ ಪ್ರಾಪಂಚಿಕ ಸುಖಕ್ಕೆ ಆಸೆಗೊಂಡು ನಮ್ಮ ಇಚ್ಛಾಬಲವನ್ನು ಅದಕ್ಕೆ ಉಪಯೋಗಿಸುವುದರ ಬಗ್ಗೆ ಎಚ್ಚರಿಕೆ ಕೊಡುತ್ತವೆ.

ಗಾಂಧೀಜೀ ತಮ್ಮ ಸರ್ವ ಶಕ್ತಿಯಿಂದಲೂ ಮುನ್ನುಗ್ಗಿ ನಡೆಯುತ್ತಿರುವುದ ಈ ಹಂತವನ್ನು ಮುಟ್ಟಲಿಕ್ಕೆ. ಅವರು ನಿರ್ಮಿಸಿದ ಅಖಿಲ ಭಾರತ ಚರಕ ಸಂಘ, ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಇತ್ಯಾದಿಗಳೆಲ್ಲವೂ ಆ ಧ್ಯೇಯುವನ್ನು ದಿನನಿತ್ಯದ ಜೀವನದಲ್ಲಿ ವ್ಯಾವಹಾರಿಕವಾಗಿ ರೂಪಿಸುವ ಪ್ರಯತ್ನ. ಅವರು ಸಫಲರಾದರೆ ಅಹಿಂಸೆಯು ಶಾಶ್ವತ ಅರ್ಥವಿಧಾನ ಸ್ಥಿರವಾಗಿ, ಸ್ಥಿರ ಶಾಂತಿಯು ನಾಗರಿಕತೆ ನೆಲೆಗೊಂಡು ರಾಮರಾಜ್ಯ ಸ್ಥಾಪನೆಯಾದೀತು.

೮. ವಿವಿಧ ರೀತಿಯ ಮೌಲ್ಯಗಳು

ಗೊತ್ತಿಲ್ಲದುದನ್ನು ಗೊತ್ತಿದ್ದುದಕ್ಕೆ ಹೋಲಿಸಿ ಅರಿತುಕೊಳ್ಳುವುದು ವಾಡಿಕೆ. ಬೇರೆ ಬೇರೆ ಪದಾರ್ಥಗಳನ್ನು ಬೇರೆ ಬೇರೆ ಬಗೆಯಲ್ಲಿ ಖಚಿತಪಡಿಸುತ್ತೇವೆ. ಕೆಲವನ್ನು ಎಣಿಸುತ್ತೇವೆ, ಕೆಲವನ್ನು ಅಳತೆಮಾಡುತ್ತೇವೆ, ಕೆಲವನ್ನು ತೂಕ ಮಾಡುತ್ತೇವೆ. ಹೀಗೆ ನಾನಾ ಬಗೆಯಲ್ಲಿ ಅವುಗಳ ಪ್ರಮಾಣವನ್ನು ಖಚಿತಪಡಿಸಿ ಕೊಳ್ಳುತ್ತೇವೆ. ಪ್ರತಿಯೊಂದು ವಿಧಾನಕ್ಕೂ ಒಂದು ನಿಶ್ಚಿತ ಪ್ರಮಾಣ – ಪದ್ಧತಿ ಯಿದೆ. ಎಲ್ಲರಿಗೂ ಅದು ಮಾನ್ಯ.

ಪದಾರ್ಥಗಳಿಗೂ ನಮಗೂ ಏನು ಸಂಬಂಧ ಎಂದು ಮಾತ್ರ ಆಲೋಚಿಸಿ ದಾಗ ಅದು ಸ್ವಾರ್ಥ; ಒಂದು ಧ್ಯೇಯಕ್ಕೆ ಅವು ಸಹಾಯಕಾರಿಯೆ ಎಂದು ಆಲೋಚಿಸಿದಾಗ ನಿಃಸ್ವಾರ್ಥ. ಪ್ರಾಣಿಗಳಿಗೆಲ್ಲ ಎದುರಿಗಿನ ಪದಾರ್ಥಗಳನ್ನು ತಾವು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೊಂದೇ ಯೋಚನೆ. ಇದು ಬರೀ ಸ್ವಾರ್ಥ. ಅವಕ್ಕೆ ಜಗತ್ತಿನ ಹಿತದ ಯೋಚನೆಯೇ ಇಲ್ಲ. ಅದೇ ರೀತಿ ಆದಿಮಾನವರಿಗೆ ಪರಹಿತದ ಮೌಲ್ಯಗಳು ಬೇಕಿರಲಿಲ್ಲ. ಸುಸಂಸ್ಕೃತನಾದ, ಪ್ರಗತಿಪರ ಮನುಷ್ಯನಿಗೆ ಮಾತ್ರ ಅನಾಸಕ್ತಿ ಅಥವಾ ನಿಸ್ವಾರ್ಥ ದೃಷ್ಟಿ ಸಾಧ್ಯ.

ಮನುಷ್ಯ ಯಾವ ಮೌಲ್ಯಗಳನ್ನು ತನ್ನ ಜೀವನದಲ್ಲಿ ಉಪಯೋಗಿಸು ತ್ತಾನೋ ಅದೇ ಅವನ ಲಕ್ಷಣವನ್ನು ತಿಳಿಸುತ್ತದೆ. ಈ ಮೌಲ್ಯಗಳು ತ್ರಿವಿಧ : ಭೌತಿಕ, ಮಾನಸಿಕ ಮತ್ತು ಸಾಂಸ್ಕೃತಿಕ ಅಥವಾ ಆಧ್ಯಾತ್ಮಿಕ.

ಯಾವುದರಲ್ಲೂ ಒಂದೇ ಮೌಲ್ಯ, ಒಂದೇ ಅಳತೆ ಇಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ಅಳತೆಗೆ, ಬೆಲೆಗೆ ಪ್ರಾಧಾನ್ಯ ಕೊಡಬೇಕಾಗುತ್ತದೆ. ತಾಜಮಹಲನ್ನು ನೋಡಲು ಹೋದ ಪ್ರವಾಸಿ ಅದರ ಅಮೃತಶಿಲೆಯ ಗುಣವನ್ನು ಹೊಗಳುವುದಿಲ್ಲ. ಬೇರೆ ಕಡೆ ಅದಕ್ಕಿಂತ ಉತ್ತಮ ಅಮೃತಶಿಲೆಯಿದ್ದೀತು. ತಾಜಮಹಲಿನ ಶಿಲ್ಪಿ ಯಾರೋ ಅವನಿಗೆ ಗೊತ್ತೇ ಇಲ್ಲದಿರಬಹುದು. ಆ ಮಹಲನ್ನು ಆ ಪರಿಸರ – ಸನ್ನಿ ವೇಶಗಳಲ್ಲಿ ಕಂಡಾಗ ಮನಸ್ಸಿನ ಮೇಲೆ ಆಗುವ ಪರಿಣಾಮ ಅದನ್ನು ಸಹಜವಾಗಿಯೆ ಮೆಚ್ಚಿಕೊಳ್ಳುವಂತೆ ಮಾಡುತ್ತದೆ. ಅದರ ಗುಣಗಳನ್ನು ಯಾರೂ ನಿಂತು ಹೊಗಳಬೇಕಾಗಿಲ್ಲ.

ಒಬ್ಬ ಚಿನಿವಾಲನ ಅಂಗಡಿಯಲ್ಲಿ ವಜ್ರ ಕಟ್ಟಿದ ಬಂಗಾರದುಂಗುರವಿದೆ. ಅದರ ಬೆಲೆ ಕಟ್ಟುವ ರೀತಿಗೂ, ಪೋಲಿಸ ದೃಷ್ಟಾಂತದಲ್ಲಿ ಬೆಲೆ ಕಟ್ಟುವ ರೀತಿಗೂ ಬಹಳ ವ್ಯತ್ಯಾಸವಿದೆ. ತಂದೆ ಮೆಟ್ಟುತ್ತಿದ್ದ ಪಾದುಕೆ, ತಾಯಿ ತೊಡುತ್ತಿದ್ದ ಹಳೇ ಮೆಟ್ಟು ಇವು ಭಾವುಕರಾದ ಮಕ್ಕಳಿಗೆ ಅಮೋಘವಾದ ಸೊತ್ತು. ರಾಮನ ಪಾದುಕೆಗೆ ಭರತ ತೋರಿಸಿದ ಗೌರವವನ್ನು ನೋಡಿ. ಈ ಬೆಲೆಗಳೆಲ್ಲ ಪೇಟೆಯ ಧಾರಣೆಯ ಬೆಲೆಗಳಲ್ಲ. ಆಯಾ ವ್ಯಕ್ತಿಗೆ, ಅವನ ಭಾವನೆಗೆ ಅನುಸಾರ ಅದಕ್ಕೆ ಬೆಲೆ.

ಹಣ ಸರ್ವಸಾಮಾನ್ಯವಾದ ಬೆಲೆಯುಳ್ಳ ಪದಾರ್ಥ. ರೂಪಾಯಿ ಎಲ್ಲರಿಗೂ ರೂಪಾಯಿಯೇ ಆದರೂ ಅದರಿಂದ ಒಬ್ಬೊಬ್ಬನಿಗೂ ಸಿಗುವ ತೃಪ್ತಿ ಮಾತ್ರ ಬೇರೆ ಬೇರೆ. ರೈತನ ಕೈಯಲ್ಲಿ ಒಂದು ರೂಪಾಯಿ ಇದ್ದರೆ ಅದು ಅವನ ಪಾಲಿಗೆ, ಅವನ ಕುಟುಂಬಕ್ಕೆ ಒಂದು ದಿನದ ಅನ್ನ. ಅದೇ ರೂಪಾಯಿ ಪಟ್ಟಣದ ಒಬ್ಬ ಗುಮಾಸ್ತನ ಕೈಲಿದ್ದರೆ ಅದು ಸಿನಿಮಾ ನೋಡಲಿಕ್ಕೆ ಸಾಧನ. ಒಬ್ಬ ಶ್ರೀಮಂತನ ಕೈಲಿರುವ ರೂಪಾಯಿ ಹೋಟೆಲು ಮಾಣಿಗೆ ಇನಾಮ್ ಕೊಡಲು ಆಯಿತು. ಆದ್ದರಿಂದ ಬಡವನ ಕೈಲಿರುವ ರೂಪಾಯಿಗೆ ಪ್ರಾಣದಾಯಕ ತೃಪ್ತಿ ಕೊಡುವ ಸಾಮರ್ಥ್ಯವಿದೆ. ಅದೇ ಭಾಗ್ಯವಂತನ ಕೈಗೆ ಹೋದಾಗ ಈ ಸಾಮರ್ಥ್ಯ ಕಡಮೆಯಾಗುತ್ತದೆ. ಹೆಚ್ಚು ಇದ್ದಷ್ಟೂ ಅದರ ಬೆಲೆ ಕಡಮೆ. ಒಬ್ಬ ಹುಡಗನ ಕೈಲಿ ಒಂದೇ ಜಿಲೇಬಿ ಇದ್ದರೆ ಅದನ್ನು ತಿನ್ನುವಾಗ ತರುವ ತೃಪ್ತಿ ಏಳೆಂಟು ಇದ್ದಾಗ ಕಡಮೆ. ಎರಡನೇ, ಮೂರನೇ ಜಿಲೇಬಿ ರುಚಿಕಳೆದುಕೊಳ್ಳುತ್ತದೆ. ಕಡೆಗೆ ಜಿಲೇಬಿ ಬೇಡ ಎನ್ನುವಷ್ಟು ಅಸಹ್ಯಬರುತ್ತದೆ. ಭಾಗ್ಯವಂತನ ರೂಪಾಯಿಯ ಗತಿಯೂ ಇದೆ.

ಹೆಚ್ಚು ಜಿಲೇಬಿ ತಿಂದವನಿಗೆ ಕೊನೆಗೆ ಒಂದು ಲೋಟ ನೀರಿನ ಹಂಬಲ. ಆ ನೀರನ್ನು ತನ್ನ ಜಿಲೇಬಿಯನ್ನೇ ಕೊಟ್ಟು ಪಡೆದಾನು. ಆ ಸಮಯಕ್ಕೆ ಅವನಿಗೆ ಸಿಗುವ ನೀರಿನ ಬೆಲೆ ಹೆಚ್ಚು. ಈ ವಿನಿಮಯದಿಂದ ಇಬ್ಬರಿಗೂ ತೃಪ್ತಿ. ಇದೊಂದು ವಿನಿಮಯ ಸೂತ್ರ. ಎಲ್ಲಾ ವ್ಯಾಪಾರ ಮತ್ತು ವಾಣಿಜ್ಯಕ್ಕೂ ಇದೇ ಮೂಲ ಸೂತ್ರ. ಕೊಳ್ಳುವವನಿಗೂ ಮಾರುವವನಿಗೂ ಇಬ್ಬರಿಗೂ ಲಾಭ. ಇಬ್ಬರ ಆವಶ್ಯಕತೆಗಳ ಪೂರೈಕೆ. ಇಬ್ಬರಿಗೂ ತೃಪ್ತಿ. ಇದು ಸಾಧ್ಯವಾಗುವುದು ಪದಾರ್ಥಗಳ ವಿವೇಕಯುತ ವಿನಿಮಯದಿಂದ ಮಾತ್ರ. ಇಲ್ಲಿ ಹಣದು ಗೌಣಪಾತ್ರ. ಕೇವಲ ವ್ಯಾವಹಾರಿಕ ಸೌಲಭ್ಯವಾಗಿ ಮಾತ್ರ ಅದು ಇರುತ್ತದೆ.

ಹಣದ ಮೌಲ್ಯದಿಂದಲೇ ಎಲ್ಲವನ್ನೂ ಅಳೆದಾಗ ಅದು ಅನೇಕ ಗೊಂದಲ ಗಳನ್ನೂ, ವಿಪರ್ಯಾಸಗಳನ್ನೂ ಸೃಷ್ಟಿಮಾಡುತ್ತದೆ. ಅಭಿವೃದ್ಧಿ ಏರುಪೇರಾಗುತ್ತದೆ.

ಜೀವನದ ಅವಶ್ಯಕತೆಗಳಿಗೆ ಗಮನ ತಪ್ಪಿ ವಾಸ್ತವ ದೃಷ್ಟಿ ಪಲ್ಲಟವಾಗುತ್ತದೆ. ಕಾಲ ಮತ್ತು ದೇಶಗಳ ಪರಿವೆಯೇ ಇಲ್ಲದ ಹಣದ ವಹಿವಾಟು ಎಲ್ಲವನ್ನೂ ನಿರ್ಧರಿಸುವಂತಾಗುತ್ತದೆ. ಇದರ ಪರಿಣಾಮ ಹಿಂಸೆ ಮತ್ತು ಸರ್ವನಾಶಗಳ ಸುಳಿ. ಅದರಲ್ಲಿ ನಿಸ್ಸಹಾಯಕನಾಗಿ ಮನುಷ್ಯ ತೊಳಲಬೇಕಾದೀತು. ಮನುಷ್ಯನ ಸಂಸ್ಕೃತಿ ವಿಕಾಸವಾದಂತೆ ಇಂಥ ಅಶಾಶ್ವತ, ಅದೂರ ದೃಷ್ಟಿಯ ಪ್ರಮಾಣಗಳನ್ನು ಅವನು ತ್ಯಜಿಸುತ್ತಾನೆ. ನಮ್ಮ ಬೆಲೆಗಳು, ಅಳತೆಗಳು ಸ್ವಲ್ಪವಾದರೂ ಶಾಶ್ವತವಾಗಿರಬೇಕಾದರೆ ಇಂದು ಇದ್ದು ನಾಳೆ ಹೋಗಿ ಅಳಿಯುವ ನಾವೇ ಆದರ ಅಳತೆಗೋಲು ಅಥವಾ ಪ್ರಮಾಣ ಆಗಬಾರದು. ವ್ಯಕ್ತಿಗತ ಭಾವನೆಗಳನ್ನೇ ಮುಂದೆ ಮಾಡದೆ ಅನಾಸಕ್ತಿ ಯಿಂದ, ಶಾಶ್ವತ ವ್ಯವಸ್ಥೆಯ ಮೇಲೆ ಆಧಾರಗೊಂಡ ಧ್ಯೇಯ ನಿಷ್ಠೆಯಿಂದ ಅಳೆಯುವುದಾದರೆ ಆ ಅಳತೆ ವಾಸ್ತವ, ಸತ್ಯ ಮತ್ತು ಪ್ರಾಮಾಣಿಕ ಎನಿಸುತ್ತದೆ. ಅಂಥದನ್ನು ಯಾವ ಕಾಲಕ್ಕೂ ನಂಬಿನಡೆಯಬಹುದು. ಹಣದಳತೆಯ ಕ್ಷಣಭಂಗುರತೆ ಅಲ್ಲಿರದು. ಅಂಥ ಬೆಲೆ ಮತ್ತು ಗುಣಗಳನ್ನವಲಂಬಿಸಿ ರಚಿಸಿದ ಆರ್ಥಿಕ ಪದ್ಧತಿ ಶಾಶ್ವತ ಅರ್ಥರಚನೆಗೆ, ಪುರುಷಾರ್ಥಸಿದ್ಧಿಗೆ ದಾರಿಮಾಡಿಕೊಡುತ್ತದೆ. ಸರ್ವಹಿತ ಕಾರಿಯಾದ ವಾಸ್ತವ ಪ್ರಮಾಣಗಳು ನೆಲೆಗೊಳ್ಳುತ್ತವೆ.

ನೈತಿಕ ಪ್ರಮಾಣ : ನೀತಿಶಾಸ್ತ್ರವನ್ನು ಅನುಸರಿಸುವ ವ್ಯಕ್ತಿ ಜಡ ಪದಾರ್ಥ ಗಳ ಅಳತೆಯನ್ನು ಉಪಯೋಗಿಸುವುದಿಲ್ಲ. ಒಬ್ಬ ಕಳ್ಳ ಒಂದು ಮಗುವಿನ ಕತ್ತನ್ನು ಹಿಸುಕಿಕೊಂದು ಅದರ ಕತ್ತಿನ ಸರವನ್ನು ಒಯ್ದು ಮಾರುತ್ತಾನೆ. ಆ ಘಟನೆಯ ಸುದ್ದಿ ತಿಳಿದರೆ ಯಾರು ತಾನೆ ಆ ಸರವನ್ನು ಕೊಂಡಾರು? ಆ ಸರ ಅಷ್ಟು ತೊಲೆ ಬಂಗಾರವಲ್ಲ; ಆ ಮಗುವಿನ ಸಾವಿನ ಪಾಪದ ಸಮಸ್ತಭಾರ. ಎಷ್ಟೇ ಅಗ್ಗವಾಗಿ, ಒಂದು ಕಾಸಿಗೇ ಆ ಸರವನ್ನು ಕೊಟ್ಟರೂ ಮಕ್ಕಳಲ್ಲಿ ಮಮತೆಯುಳ್ಳ, ಅದರ ಕೊಲೆಗೆ ನಡುಗಿಹೋಗುವ ಯಾವ ಮನುಷ್ಯನೂ ಅದನ್ನು ಕೊಳ್ಳಲಾರ.

ಪೇಟೆಯಲ್ಲಿ ಮಾರಲು ಇಟ್ಟ ಪ್ರತಿಯೊಂದು ಪದಾರ್ಥಕ್ಕೂ ಇಂಥ ನೈತಿಕ ಬೆಲೆ ಇದ್ದೇ ಇದೆ. ಆ ಬೆಲೆಯನ್ನು ಅಸಡ್ಡೆಮಾಡಿ, ವ್ಯಾಪಾರದಲ್ಲಿ ನೀತಿಗೇನು ಸ್ಥಾನ ಎಂದು ತಳ್ಳುವ ಹಾಗಿಲ್ಲ. ಕೆಲಸಗಾರರನ್ನು ಶೋಷಣೆ ಮಾಡಿ, ಗುಲಾಮರನ್ನಾಗಿ ದುಡಿಸಿ ಉತ್ಪತ್ತಿಮಾಡಿದ ಪದಾರ್ಥಗಳಿಗೆ ಆ ಪಾಪ, ಅಪರಾಧಕ್ಕೆ ಅಂಟಿರುತ್ತದೆ. ಆ ಪರಿಸ್ಥಿತಿಯನ್ನು ನಾವೇ ನೀರೆರೆದು ಕಾಪಾಡಿದಂತೆ. ಆದ್ದರಿಂದ ಒಂದು ಕಾಸಿನ ವ್ಯಾಪಾರವನ್ನೇ ಮಾಡಿದರೂ ನಾವು ಮಾಡಿದ ವ್ಯಾಪಾರ ನಮಗೆ ಇಷ್ಟವಿಲ್ಲದ, ನಾವು ವಿರೋಧಿಸಲೂಬಹುದಾದ ಪರಿಸ್ಥಿತಿಗೆ ಪುಷ್ಟಿಕೊಡುವ ಅಪರಾಧವಾಗದಂತೆ ನೋಡಿಕೊಳ್ಳಬೇಕು. ಅದು ಕರ್ತವ್ಯ. ಅದು ಅರ್ಥ ಧರ್ಮ.

ಸಾಮಾಜಿಕ ಮೌಲ್ಯಗಳ ಪ್ರಮಾಣವೂ ಒಂದು ಮುಖ್ಯ ಅಂಶ. ಸಮಾಜವೇ ತಾನು ಪಡೆದ ಪ್ರಯೋಜನಗಳನ್ನು ಗುರುತಿಸಿ ಅಳೆದು ತೂಗಿನೋಡುತ್ತದೆ, ಸ್ಥಾನ ಮಾನಗಳನ್ನು ನೀಡುತ್ತದೆ. ಸಾವಿರಾರು ವರ್ಷಗಳ ಹಿಂದೆ ನಮ್ಮ ದೇಶ ಇಂಥಹ ಒಂದು ಸಂಸ್ಕೃತಿಯನ್ನು ಸಾಧಿಸಿಕೊಂಡಿತ್ತು. ವರ್ಣಾಶ್ರಮ ವ್ಯವಸ್ಥೆಯ ಮೂಲ ಉದ್ದೇಶ ಅದೇ ಆಗಿತ್ತು. ಈಗ ಕಣ್ಣು ಕೋರೈಸುವ ಜಡ ಸಂಪತ್ತಿನ ಮೋಹಕ್ಕೆ ಬಲಿಯಾಗಿ ಈ ಮೌಲ್ಯಗಳನ್ನು ನಾವೀಗ ಕಳೆದುಕೊಂಡಿದ್ದೇವೆ. ಈಗಿನ ಜಾತಿ ವಿಂಗಡಣೆಗೂ ಅಂದಿನ ಧಾರ್ಮಿಕ ಮೌಲ್ಯಗಳಿಗೂ ಏನೂ ಸಂಬಂಧವಿಲ್ಲ. ಆಧುನಿಕ ಸಮಾಜಕ್ಕೆ ಅನ್ವಯಿಸಿ ಈ ಶಾಶ್ವತ ಆದರ್ಶಗಳನ್ನು ಪಡೆಯಲು ನಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಬೇಕು.

ಅಧ್ಯಾತ್ಮಿಕ ಮೌಲ್ಯ ಇನ್ನೂ ಉನ್ನತಸ್ತರದ್ದು. ಇವುಗಳ ಮೇಲೆ ನಮ್ಮ ನಡತೆ ಮತ್ತು ಕಾರ್ಯಗಳು ಎಷ್ಟರ ಮಟ್ಟಿಗೆ ಆಧಾರಿತವಾಗಿರುತ್ತವೆಯೋ ಅಷ್ಟರ ಮಟ್ಟಿಗೆ ಪರಿಶುದ್ಧ. ಈ ಮೌಲ್ಯಗಳು ಸತ್ಯನಿಷ್ಠ ಮೌಲ್ಯಗಳಾದುದರಿಂದ ಅವು ಗಳ ಮೇಲೆ ಕಟ್ಟಿದ ಆರ್ಥಿಕ ರಚನೆ ಸ್ಥಿರ ಹಾಗೂ ಶಾಶ್ವತ. ಅದು ಅಹಿಂಸೆಯ ಮೂಲಕ ಮಾನವ ಲೋಕಕ್ಕೆ ಸುಖ ಶಾಂತಿಗಳನ್ನು ಕೊಟ್ಟೀತು.

೯. ಬೆಲೆಕಟ್ಟುವಿಕೆ

ನಾವು ಯಾವ ಅಳತೆಯನ್ನು ಬಳಸುತ್ತೇವೊ, ಹೇಗೆ ಬೆಲೆ ಕಟ್ಟುತ್ತೇವೋ ಅದರ ಪ್ರಭಾವ ನಮ್ಮ ಮೇಲೆ ಬೀಳುತ್ತದೆ. ನಾವು ಉಪಯೋಗಿಸುವ ಪ್ರಮಾಣ-ಅಳತೆಗಳ ಪ್ರಧಾನ ಗುಣ ನಮ್ಮ ಸಂಸ್ಕೃತಿಯಲ್ಲಿ ಇಳಿದುಬರುತ್ತದೆ. ನಮ್ಮ ಮೌಲ್ಯಗಳಿದ್ದಂತೆ ನಮ್ಮ ಸಂಸ್ಕೃತಿ. ಆದ್ದರಿಂದ ನಾವು ಬಹಳ ಎಚ್ಚರಿಕೆಯಿಂದ ನಮ್ಮ ಮೌಲ್ಯಗಳ ನಿರ್ಣಯ ಮಾಡಬೇಕು. ಯಾವ ವಿಧಾನವನ್ನು ಅವಲಂಬಿಸುತ್ತೇವೆಂಬುದು ಬಹಳ ಮುಖ್ಯ.

ಈಜಿಪ್ಟ್, ಬೇಬಿಲೋನ್, ಗ್ರೀಸ್ ಮತ್ತು ರೋಂಗಳ ಪುರಾತನ ನಾಗರಿಕತೆಗಳು ತಮ್ಮ ಕತೆಗಳನ್ನು ಹೇಳುವಂತಿಲ್ಲ. ಕೆಲವು ದಿನ ವೈಭವದಿಂದ ವಿಜೃಂಭಿಸಿ ಬಹುಬೇಗನೆ ಕಣ್ಮರೆಯಾಗಿ ಹೋದವು. ಸ್ವಾರ್ಥಮಯ ಅಶಾಶ್ವತ ಮೌಲ್ಯಗಳ ಮೇಲೆ ಕಟ್ಟಿದ ನಾಗರಿಕತೆಗಳು ಅವು. ಹಿಂದೆಯೇ ತಿಳಿಸಿದಂತೆ ಗುಲಾಮಗಿರಿಯಿಂದ ಆ ಸಮಾಜ ರಚನೆಗೆ ಗೆದ್ದಲು ಹಿಡಿದಿತ್ತು. ಸಾಮಂತ ರಾಜರ ಕಪ್ಪಕಾಣಿಕೆಗಳಿಂದ ಕಲುಷಿತವಾಗಿತ್ತು. ಗ್ರೀಕರೂ ರೋಮಕರೂ ತಮ್ಮ ಭಾವನಾಮಯ ಸ್ವಾರ್ಥಪೂರ್ಣ ಮೌಲ್ಯಗಳ ಗುರುತನ್ನು ತಮ್ಮ ಕಲೆ, ಸಾಹಿತ್ಯ, ಶಿಲ್ಪಗಳಲ್ಲಿ ಸ್ಥಿರವಾಗಿ ಮೂಡಿಸಿದಾರೆ. ಆ ಗತವೈಭವವನ್ನು ನೆನೆದು ಹಿಗ್ಗಲು ಅವರ ಸಂತಾನಕ್ಕೆ ಇವು ಸಾಧನ. ಆದರೆ ಆ ನಾಗರಿಕತೆಗಳೀಗ ಸಚೇತನವಿಲ್ಲ.

ಇವಕ್ಕೆ ವಿರುದ್ಧವಾಗಿ ಅವುಗಳಷ್ಟೇ ಪುರಾತನ, ಇನ್ನೂ ಪುರಾತನವಾದ ಚೀನಾ-ಭಾರತೀಯ ನಾಗರಿಕತೆಗಳು ಇಂದಿಗೂ ಸಜೀವವಾಗಿವೆ, ಶಕ್ತವಾಗಿವೆ. ನಿಸ್ವಾರ್ಥ, ವಾಸ್ತವ ಮೌಲ್ಯಗಳ ಮೇಲೆ ಕಟ್ಟಲ್ಪಟ್ಟಿರುವ ಇವು ಇಂದಿಗೂ ದೃಢವಾಗಿ, ಶಾಶ್ವತವಾಗಿ, ಅಹಿಂಸಾಪೂರ್ಣವಾಗಿ ಬಾಳುತ್ತಿವೆ. ಪೌರ್ವಾತ್ಯರ ಧಾರ್ಮಿಕ ಪ್ರವೃತ್ತಿ, ಪರಲೋಕಪ್ರಿಯತೆಗಳನ್ನು ಈಗಿನ ಕಾಲದ ಬುದ್ಧಿವಂತರು ಹಗುರಾಗಿ ಅಣಕಿಸಬಹುದು. ಅದಕ್ಕಾಗಿ ನಾವು ಸಂಕೋಚಪಡಬೇಕಾಗಿಲ್ಲ. ಚಿರತೆ-ಹುಲಿಗಳ ಹಂತವನ್ನು ದಾಟಿ ಚಿರಂತನ ಪ್ರಗತಿಶೀಲ ಮಾನವನಾಗುವ ಪ್ರಯತ್ನ ಅದು. ಈ ನಾಗರಿಕತೆಗಳು ಇಷ್ಟು ದೀರ್ಘಕಾಲ ಬದುಕಿ ಉಳಿದಿರುವುದೇ ನಮ್ಮ ಪುರಾತನರು ಸ್ಥಿರವಾದ ಸಮಾಜವನ್ನು ಕಟ್ಟಲು ಹಾಕಿದ ದೂರದೃಷ್ಟಿಯ ತಳಹದಿಯ ಮೌಲ್ಯಗಳಿಗೆ ಸಾಕ್ಷಿ.

ಅವರು ಹಾಕಿದ ಶಾಶ್ವತತೆ, ಅಹಿಂಸೆಗಳ ತಳಹದಿಯ ಮೇಲೆ ನಾವೂ ಮುಂಬರಿಯ ಬೇಕೆಂದರೆ ನಮ್ಮ ಮೌಲ್ಯಗಳೂ ಜಗದ್ಧಿತಕಾರಿಯಾಗಿ ವಾಸ್ತವವಾಗಿರಬೇಕು; ಕೇವಲ ಕ್ಷಣಭಂಗುರವಾಗಬಾರದು. ರಾಜಕೀಯ ಸಂಸ್ಥೆಗಳೆಲ್ಲ ಕರಗಿಹೋಗಿ ಭವಿಷ್ಯಕ್ಕಾಗಿ ಹಲವು ಯೋಜನೆಗಳಾಗುತ್ತಿರುವ ಈ ಸಮಯದಲ್ಲಿ ನಾವು ಎಚ್ಚರವಾಗಿರಬೇಕಾದುದು ಅಗತ್ಯ.

ದೌರ್ಭಾಗ್ಯ ವಶದಿಂದ ಜಗದ್ರಂಗದಲ್ಲಿ ಈಗ ನಾಯಕ ಪಾತ್ರವಹಿಸಿರುವ ಗುಂಪುಗಳು ಕ್ಷಣಭಂಗುರವಾದ ಹಣವನ್ನೇ ಅಳತೆಯಾಗಿಟ್ಟುಕೊಂಡಿವೆ ಸಂಪೂರ್ಣವಾಗಿ ಅಲ್ಲದಿದ್ದರೂ ಪ್ರಧಾನವಾಗಿ. ಎಲ್ಲೆಲ್ಲೂ 'ಉನ್ನತ ಜೀವನ', 'ರಾಷ್ಟ್ರೀಯ ವರಮಾನವನ್ನು ಹೆಚ್ಚಿಸುವಿಕೆ', 'ಉತ್ಪಾದನಶಕ್ತಿ–ದಕ್ಷತೆಗಳ ವರ್ಧನ', 'ಆಧುನಿಕ ಕಾಲದ ಸ್ಪರ್ಧೆಯಲ್ಲಿ ಗಿಟ್ಟಿಸುವುದು' ಮುಂತಾದ ಘೋಷಣೆಗಳನ್ನು ಕೇಳುತ್ತೇವೆ. ಲಾಭ, ಬೆಲೆ, ಕೊಳ್ಳುವ ಸಾಮರ್ಥ್ಯ, ಪರದೇಶದ ವ್ಯಾಪಾರ ಇಂಥ ಅಶಾಶ್ವತ ಮೌಲ್ಯಗಳ ಮರಳಿನಲ್ಲಿ ಮನೆಕಟ್ಟುವ ಪ್ರಯತ್ನವೇ ಈಗಿನ ಆರ್ಥಿಕ ವಿಚಾರ. ಉಳಿದ ಜೀವಕೋಟಿಗೂ ಮನುಷ್ಯನಿಗೂ ಇರುವ ಭೇದದ ಬಗ್ಗೆ ಕಿಂಚಿತ್ತೂ ವಿಚಾರ ಹರಿಯದಾಗಿದೆ. ಮಾನವೀಯ, ಆಧ್ಯಾತ್ಮಿಕ ಪ್ರಮಾಣಗಳ ಬಗ್ಗೆ ಮಾತಾಡಿದರೆ ತಿರಸ್ಕಾರಪೂರ್ವಕ ನಗುವ ವಿಪರೀತ ಸ್ವಭಾವ ಬೆಳೆಯುತ್ತಿದೆ. ಆದುದರಿಂದ ಜಾಗರೂಕರಾಗಿರಬೇಕಾದುದು ಅಗತ್ಯ.

ಹಿಂದಿನಿಂದ ನಮಗೆ ಬಂದಿರುವ ನಿಧಿಗಳೊಂದಿಗೆ ಈ ಆಧುನಿಕ ಪ್ರಮಾಣ – ಅಳತೆಗಳನ್ನು ಹೋಲಿಸಿದರೆ ಈ ಅಳತೆಗಳು ಎಷ್ಟು ತುಚ್ಛವೆಂದು ತಿಳಿಯುತ್ತದೆ. ಕೈಯಿಂದ ಚಿತ್ರಿಸಿ ಬಣ್ಣಹಾಕಿದ ಒಂದು ಅಪರೂಪವಾದ ಚೀನೀ ಪಿಂಗಾಣಿ ಪಾತ್ರೆ. ಅದನ್ನು ಈಗಿನ ಪಿಂಗಾಣಿ ಕಾರಖಾನೆಯ ವ್ಯವಸ್ಥಾಪಕನ ಕೈಗೆ ಕೊಟ್ಟರೆ, 'ಇದೇನು ಮಹಾ! ಇದಕ್ಕೆ ಅಷ್ಟು ಕಾಲ ಬೇಕೆ? ಇಂಥ ಪಾತ್ರೆಗಳನ್ನು ತಿಂಗಳಿಗೆ ಒಂದು ಸಾವಿರ ಜೊತೆ ಮಾಡಿಕೊಡುತ್ತೇನೆ' ಎಂದಾನು.

ಇಡೀ ಲೋಕದಲ್ಲಿಯೇ ಅತ್ಯದ್ಭುತವಾದ ಭಿತ್ತಿಚಿತ್ರ, ಕುಡ್ಯಚಿತ್ರಗಳುಳ್ಳ ಅಜಂತಾ ಗುಹೆಗಳಿಗೆ ಒಬ್ಬ ಕಲ್ಲಚ್ಚಿನ ಕಲೆಗಾರನನ್ನು ಕಳಿಸಿದರೆ, ನೂರಾರು ವರ್ಷ ಕಷ್ಟಪಟ್ಟು ಹಿಂದಿನವರು ನಿರ್ಮಿಸಿದ ಆ ಚಿತ್ರಗಳನ್ನು ನೋಡಿ, "ಅದರ ನಕಲನ್ನು ಸಾವಿರಗಟ್ಟಲೆ ಬೇಕಾದರೂ ನಾನು ಒಂದು ತಿಂಗಳಲ್ಲಿ ಮಾಡಿಕೊಡುತ್ತೇನೆ" ಎಂದಾನು.

ಕಾಶ್ಮೀರದ ಶಾಲಿಮಾರ್ ಉದ್ಯಾನವನ್ನು ನೋಡಿ ಎಣ್ಣೆಬೀಜಗಳ ವ್ಯಾಪಾರಿಯೊಬ್ಬ, "ಎಲ್ಲಾ ಹಾಳು. ಇಲ್ಲೆಲ್ಲಾ ನೆಲಗಡಲೆ ಬಿತ್ತಿದರೆ ಸಾವಿರಾರು ಮಣ ನೆಲಗಡಲೆ ಆದೀತಲ್ಲ" ಎಂದಾನು! ಹಲವು ತತ್ವಶಾಸ್ತ್ರಗಳಿಗೆ ಆಧಾರವಾಗಿ ಕೆಲವು ಸಂಸ್ಕೃತಿ

ಗಳಿಗೆ ಆಲಂಬವಾದ ತಾಳೆಯೋಲೆಯ ಗ್ರಂಥಗಳನ್ನು ಕಂಡು ಒಬ್ಬ ಪ್ರಕಟನಕಾರ, "ಇದೇನು ಕೆಲಸಕ್ಕೆ ಬಾರದ ಪದಾರ್ಥ? ಒಳ್ಳೇ ಬಾಂಡ್ ಕಾಗದದ ಮೇಲೆ ಅಚ್ಚುಮಾಡಿ ೫ ರೂ. ಗೆ ಪ್ರತಿಯಂತೆ ಮಾರೋಣ" ಎನ್ನುತ್ತಾನೆ. ಇರಾನೀ ಚಹಾದಂಗಡಿಯವನು ತಾಜಮಹಾಲಿನ ಅಮೃತಶಿಲೆಯನ್ನು ಕಂಡು, "ಏನು ಪ್ರಯೋಜನ ಇದು?" ಎನ್ನುತ್ತಾನೆ.

ಒಬ್ಬ ಅಕ್ಕಸಾಲೆ ಒಂದು ಗುಲಾಬಿ ತೋಟಕ್ಕೆ ಹೋಗಿ ಆ ಹೂಗಳನ್ನು ತನ್ನ ಒರೆಗಲ್ಲಿಗೆ ಹಾಕಿ ತಿಕ್ಕಿದನಂತೆ. ಅವನಿಗೆ ಗೊತ್ತಿರುವ ಬೆಲೆಕಟ್ಟುವ ರೀತಿ ಅದೊಂದೇ!

ಹಾಗಿವೆ ಮೇಲೆ ಹೇಳಿದ ಬೆಲೆ ಕಟ್ಟುವಿಕೆಗಳೆಲ್ಲ. ಈ ವಿಚಿತ್ರ ಮೂರ್ಖ ಪರಿಸ್ಥಿತಿಗಳಿಗೆ ಕಾರಣ ಒಂದು ಬಗೆಯ ಆರ್ಥಿಕ ವಿಧಾನದ ಸೂತ್ರಗಳನ್ನು ಇನ್ನೊಂದಕ್ಕೆ ಅನ್ವಯಿಸುವುದು.

ಮೇಲೆ ಹೇಳಿದ ಉದಾಹರಣೆಗಳೆಲ್ಲ ನಿಜವಲ್ಲ ಎನ್ನುವಷ್ಟು ವಿಚಿತ್ರವಾಗಿವೆ. ಆದರೂ ಬಾಳಿನಲ್ಲಿ ಇಂಥ ಬೆಲೆಕಟ್ಟುವಿಕೆ ನಡೆದೇ ಇದೆ. ತಿಳಿಗೇಡಿಗಳಾದವರಿಂದಲ್ಲ, ಬುದ್ಧಿವಂತರಿಂದ, ಲೋಕದ ಸುಪ್ರಸಿದ್ಧ ವಿಶ್ವವಿದ್ಯಾನಿಲಯಗಳ ಪಂಡಿತರಿಂದ. ವಿಶ್ವವಿದ್ಯಾನಿಲಯಗಳು ಮಾಡುತ್ತಿರುವ ಕೆಲಸವೇನು? ಪರೋಪಜೀವನ, ಪರಾಪಹಾರ, ಪ್ರಯತ್ನಶೀಲತೆಗಳವರ್ಗದ ಆರ್ಥಿಕ ವಿಧಾನಗಳಿಗೆ ಹೊಂದುವ ಆಧುನಿಕ ಕೈಗಾರಿಕೆಯನ್ನು ಸಮರ್ಥಿಸಲು ಯುಕ್ತಿಗಳನ್ನು ಹುಡುಕುವ ಪಂಡಿತರನ್ನು ಸೃಷ್ಟಿಸುವುದು. ಅವರು ಮಾಡುವುದೇನು ಗೊತ್ತೆ? ಯಾವ ಸಮಸ್ಯೆಗೆ ಯಾವ ಉತ್ತರವೇ ಬರಲಿ ಅದರಿಂದ ಎಷ್ಟು ಲಾಭ ಎಂಬುದೇ ಅವರ ಒರೆಗಲ್ಲು. ಹಸನಾದ ತುಪ್ಪದಿಂದ ಮನೆಯಲ್ಲಿ ಮಕ್ಕಳಿಗಾಗಿ ತಾಯಿ ಹಲ್ವಾ ಮಾಡಿದರೆ ಈ ಬುದ್ಧಿವಂತ ಏನು ಕೇಳುತ್ತಾನೆ ಗೊತ್ತೆ? "ತುಪ್ಪಕ್ಕೆ ಯಾವುದಾದರೂ ವನಸ್ಪತಿಯನ್ನು ಬೆರಕೆ ಮಾಡದಿದ್ದರೆ ಜಗತ್ತಿನ ಪೇಟೆ ಧಾರಣೆಗೆ ಸರಿತೂಗುತ್ತದೆಯೆ ಹಲ್ವಾ? ಆ ತಿಂಡಿಯನ್ನು ಮಾಡಲು ತಾಯಿ ಒಂದು ಗಂಟೆಯನ್ನು ಕಳೆಯಲಿಲ್ಲವೆ?" ಆ ಹಲ್ವಾದ ಬೆಲೆಗೆ ಆ ಗಂಟೆಯ ಕೂಲಿಯನ್ನು ಸೇರಿಸಿ ಲೆಕ್ಕ ಹಾಕು ಎನ್ನುತ್ತಾನೆ. ಹಾಗೆ ಸೇರಿಸಿದರೆ ಆಗ ಲೆಕ್ಕ ಶಾಸ್ತ್ರೀಯವಾಯಿತು. ಆಗ ಅದನ್ನೂ ಪೇಟೆ ಧಾರಣೆಯನ್ನೂ ಹೋಲಿಸುತ್ತಾನೆ – ಸೇರಿಗೆ ಇಷ್ಟು ಎಂದು. ಆ ತಾಯಿಗೆ ಈ ಗೋಜು ಬೇಕಿಲ್ಲ. "ನನ್ನ ಮಕ್ಕಳಿಗಾಗಿ ನಾನು ಹಲ್ವಾ ಮಾಡಿದೆ. ಶುದ್ಧವಾದ ಶುಚಿಯಾದ ತಿಂಡಿಯನ್ನು ಅವರಿಗೆ ಕೊಡಬೇಕು. ನಿನ್ನ ಪೇಟೆಯ ಧಾರಣೆ ಕಟ್ಟಿಕೊಂಡು ನನಗೇನು? ನಾನು ಕಳೆದ ಗಂಟೆಗೆ ನನಗೆ ಕೂಲಿಯೇ? ನನ್ನ ಇಡೀಬಾಳೇ ನನ್ನ ಕುಟುಂಬದ ಸೇವೆಗೆ ಮೀಸಲಲ್ಲವೆ?" ಎನ್ನುತ್ತಾಳೆ. ಈ ನಿರಕ್ಷರ

ಹಳ್ಳಿಯ ತಾಯಿಗೆ ಅರ್ಥಶಾಸ್ತ್ರದ ಪ್ರಾಥಮಿಕ ಸೂತ್ರಗಳೂ ಗೊತ್ತಿಲ್ಲವಲ್ಲಾ ಎಂದು ಈ ಬುದ್ಧಿವಂತನಿಗೆ ಅಚ್ಚರಿ, ಮನೆಯಲ್ಲಿನ ಆರ್ಥಿಕ ರಚನೆ ಸೇವಾ ವಿಧಾನದ್ದು. ತಾಯಿಗೆ ಅದೇ ಅಭ್ಯಾಸ. ತನ್ನ ಕೆಲಸವನ್ನು ಆ ಅಳತೆಯಿಂದ ಆಕೆ ನಿರ್ಧರಿಸುತ್ತಾಳೆ. ಆದರೆ ಈ ಪಂಡಿತ ಅಲ್ಲಿ ಹೋಗಿ ಪರಾಪಹಾರದ ಅರ್ಥ ನೀತಿಯಿಂದ ಅದನ್ನು ಅಳತೆ ಮಾಡುತ್ತಾನೆ. ಅಲ್ಲಿ ಅದು ಹೊಂದದು. ಏಕಾಂತವಾಗಿ ತನ್ನ ಪುಸ್ತಕ ಪ್ರಪಂಚದಲ್ಲಿ ಕುಳಿತು ಬೇರಾವ ಸಂದರ್ಭಗಳ ಸೊಂಕೂ ಇಲ್ಲದೆ, ಪರಿಸ್ಥಿತಿಯ ಜ್ಞಾನವೂ ಇಲ್ಲದೆ ಯಾವುದೋ ಒಂದೇ ಒಂದು ಅಳತೆಗೋಲನ್ನು ಹಿಡಿದು ಎಲ್ಲವನ್ನೂ ಅಳೆಯುವ ಅಭ್ಯಾಸ ಅವನದು. ಬುದ್ಧಿಯ ವ್ಯಾಯಾಮಕ್ಕೆ ಆ ಮಾರ್ಗ ಬಹಳ ಒಳ್ಳೆಯದಿರಬಹುದು. ಆದರೆ ಅಷ್ಟು ಸರಳ ಪರಿಸ್ಥಿತಿಯಲ್ಲಿ ಕೃತ್ರಿಮತೆ ಯಿಲ್ಲದ ನಿಜ ಪ್ರಪಂಚದಲ್ಲಿ ಅವನ ವಿದ್ಯೆ ಕೆಲಸಕ್ಕೆ ಬಾರದಾಗುತ್ತದೆ.

ಯಾವ ಸಮಸ್ಯೆಯನ್ನೇ ತೆಗೆದುಕೊಂಡರೂ ನೂರಾರು ದೃಷ್ಟಿ, ನೂರಾರು ಅಂಶ ಇರುತ್ತವೆ. ಯಾವುದನ್ನೂ ತೀರ್ಮಾನಿಸುವ ಮೊದಲು ಈ ಎಲ್ಲ ಅಂಶಗಳನ್ನೂ ಗಮನಿಸಬೇಕು; ಎಲ್ಲಾ ದೃಷ್ಟಿಗಳಿಂದಲೂ ನೋಡಬೇಕು. ಆಗ ತೀರ್ಮಾನ ಸರಿ. ಅನೇಕ ಸಲ ಸ್ಪಷ್ಟವಾಗಿ ಗೋಚರಿಸದ ಮೌಲ್ಯಗಳೇ ಹೆಚ್ಚು ಸ್ಥಿರ ಮತ್ತು ಶಾಶ್ವತ. ಎದ್ದು ಕಾಣುವ ಮೌಲ್ಯಗಳು ಕೇವಲ ಹಣದ ಅಳತೆಯಿಂದ ಅಳತೆಯುವಂಥವು. ಉಳಿದ ದೃಷ್ಟಿಯಿಂದ ಅತ್ಯಂತ ಗೌಣ.

ಅರ್ಥಶಾಸ್ತ್ರಿಯನ್ನು ಕೇಳಿದರೆ, "ಬೇಡಿಕೆ–ಪೂರಯಿಕೆಗಳು ಬೆಲೆಯ ತಂತ್ರಕ್ಕೆ ಅಧೀನ ; ಬೆಲೆ ಕಡಿಮೆಯಾದಷ್ಟೂ ಬೇಡಿಕೆ ಹೆಚ್ಚು" ಎನ್ನುತ್ತಾನೆ. ಆದರೆ ಇದೇ ಯಾವಾಗಲೂ ಸತ್ಯವೆ? ಅರ್ಥಶಾಸ್ತ್ರದ ಪುಸ್ತಕವನ್ನು ಬಿಟ್ಟರೆ ಪ್ರಪಂಚದಲ್ಲಿ ಎಲ್ಲಿಯೂ ಆರ್ಥಿಕ ಮನುಷ್ಯ ಎಂಬುವನು ಇಲ್ಲವೇ ಇಲ್ಲ.

ಗಿರಣಿ ಬಟ್ಟೆ ಬಳಸುವ ಪಟ್ಟಣಿಗನಿಗೆ ಖಾದಿಬಟ್ಟೆ ತುಟ್ಟಿಯೆನಿಸಬಹುದು. ಆದರೆ ನಾವು ಅದರ ಹಿನ್ನೆಲೆಯನ್ನು ಗಮನಿಸುವುದಿಲ್ಲ. ಹಳ್ಳಿಯಲ್ಲಿ ವಾಸಿಸುವವನು ತನ್ನ ವಿರಾಮಕಾಲದಲ್ಲಿ ನೂತು ತನ್ನ ನೆರೆಯ ನೇಯ್ಗೆಯವನಿಂದ ಬಟ್ಟೆ ಮಾಡಿಸಿ ಕೊಳ್ಳುವುದು ಅಗ್ಗವೆನಿಸುತ್ತದೆ. ತನ್ನ ಬಟ್ಟೆ ತಾನೇ ಒಗೆದುಕೊಳ್ಳುವ, ಸರಳವಾದ ಉಡಿಗೆ ತೊಡುವ, ನೆಲದ ಮೇಲೆ ಚಾಪೆ ಹಾಸಿ ಕುಳಿತುಕೊಳ್ಳುವವನ ಜೀವನದ ವಿಧಾನಕ್ಕೆ ಖಾದಿ ಹೊಂದಿಕೊಳ್ಳುತ್ತದೆ. ನಾಲ್ಕಾಣೆ ಕಡಮೆ ಕೊಟ್ಟು ಗಿರಣಿ ಬಟ್ಟೆ ಕೊಳ್ಳುವವನು ನಾಜೂಕು ಹೊಲಿಗೆ, ಹೆಚ್ಚು ಉಡಿಗೆ ತೊಡಿಗೆಗಳು, ಇಸ್ತ್ರಿ ಮಾಡಲು ಅಗಸನಿಗೆ ಕೂಲಿ ಹೀಗೆ ವೆಚ್ಚ ಮಾಡುವ ಹಣವನ್ನು ಬಟ್ಟೆಯ ಬೆಲೆಗೆ ಸೇರಿಸುವು ದಿಲ್ಲ. ಅಲ್ಲದೆ ಪಂಚೆಬಿಟ್ಟು ಷರಾಯಿ ತೊಡುವ ನಾಗರಿಕನು ಮನೆಯಲ್ಲಿ ಕುರ್ಚಿ ಮೇಜುಗಳನ್ನು ಕೊಳ್ಳುತ್ತಾನೆ. ಹೀಗೆ ಬೆಲೆಕಟ್ಟುವಾಗ ಯಾವುದು ತುಟ್ಟಿ, ಯಾವುದು

ಸೋವಿ ಎಂದು ಹೇಳುವುದು ಕಷ್ಟ. ಬೆಲೆ ಕಟ್ಟುವಾಗ ಆ ಪದಾರ್ಥದ ಸುತ್ತಲೂ ಹೆಣೆದುಕೊಂಡಿರುವ ಆರ್ಥಿಕ ಗಂಟುಗಳನ್ನೆಲ್ಲ ಗಮನಿಸಬೇಕಾಗುತ್ತದೆ. ಆದರೆ ಈಗ ಕೇವಲ ಉಪಯೋಗಿಸಲು ಕೊಳ್ಳುವ ಗಿರಾಕಿಯ ದೃಷ್ಟಿಯಿಂದಲೇ ಬೆಲೆಕಟ್ಟುತ್ತ ಬಂದಿದ್ದೇವೆ.

ಈ ಯಂತ್ರಯುಗದಲ್ಲಿ ಗುಡಿ–ಕೈಗಾರಿಕೆಗಳು ಬದುಕುತ್ತವೆಯೆ? ಈ ಪ್ರಶ್ನೆ ಆಗಾಗ ಕೇಳಿಬರುತ್ತದೆ. ಇದರ ಪೂರ್ಣ ಚರ್ಚೆ ಬೇರೆಡೆ ಮಾಡಿದರೂ ಇಲ್ಲಿ ಇಷ್ಟು ಹೇಳಬಹುದು; ಗೃಹಕೈಗಾರಿಕೆ ಅಥವಾ ಗ್ರಾಮೋದ್ಯೋಗ ಬರೀ ಒಂದು ಉತ್ಪಾದನಾ ವಿಧಾನವಲ್ಲ, ಒಂದು ಆರ್ಥಿಕ ವಿಧಾನವಲ್ಲ. ಒಂದು ಆರ್ಥಿಕ ವಿಧಾನದ ಮುಖ್ಯಾಂಶ. ಇನ್ನೊಂದು ಬಗೆಯ ಆರ್ಥಿಕ ವಿಧಾನಕ್ಕೆ 'ಆಧುನಿಕ ಕೈಗಾರಿಕೆ' ಇದ್ದಹಾಗೆ. ನಮಗೆ ಯಾವ ವಿಧಾನ ಇಷ್ಟವೆಂಬುದು ನಮ್ಮ ಧ್ಯೇಯಗಳನ್ನು ಅವಲಂಬಿಸಿದೆ. ಅದಕ್ಕೆ ನಮಗೆ ಜೀವನ ಮೌಲ್ಯಗಳು ಯಾವುವು ಎಂಬುದು ಆಧಾರ. ಆದುದರಿಂದ ಮೌಲ್ಯಗಳು, ಬೆಲೆ ಕಟ್ಟುವ ರೀತಿ ಎರಡೂ ಮಾನವ ಜೀವನದ ಪ್ರಗತಿ ರಥವನ್ನು ಎಳೆಯುವ ಕುದುರೆಗಳು. ಕಡೆಯಲ್ಲಿ, ನಮ್ಮ ಪಯಣದ ದಿಕ್ಕು ಶಾಶ್ವತತೆ, ಅಹಿಂಸೆಯ ಕಡೆಗೋ ಅಥವಾ ಅಶಾಶ್ವತತೆ, ಹಿಂಸೆಯ ಕಡೆಗೋ ನಿರ್ಧರಿಸುವುವು ಅವೇ. ಆದುದರಿಂದ ಈ ಎರಡೂ ವಿಷಯಗಳ ಬಗ್ಗೆ ಬಹಳ ಸ್ಪಷ್ಟವಾಗಿರಬೇಕು. ನಮ್ಮ ಗುರಿ ಅಥವಾ ಮೌಲ್ಯಗಳಲ್ಲಿ ಗೊಂದಲವಿದ್ದರೆ ಸರ್ವನಾಶ ಖಂಡಿತ.

ತಿರುವಾಂಕೂರಿನಲ್ಲಿ ಗರಿಯ ಚಾಪೆಗಳನ್ನು ಚೆನ್ನಾಗಿ ಹೆಣೆಯುತ್ತಾರೆ. ಈ ಕೈಗಾರಿಕೆಯನ್ನು ಪರಿಶೀಲಿಸಲು ಒಮ್ಮೆ ಹೋದಾಗ ಅಲ್ಲಿನ ಕೆಲಸಗಾರ ತನ್ನ ಮನೆಗೆ ಊಟಕ್ಕೆ ಕರೆದ. ಚಾಪೆಗಳಿಗೆ ಮಾರುಕಟ್ಟೆಯೇ ಇಲ್ಲ ಎಂದು ಆತನ ಗೋಳು. ನಮಗೆ ಕುಳಿತುಕೊಳ್ಳಲು ಅವನ ಮನೆಯಲ್ಲಿ ಹಾಕಿದ ಚಾಪೆ ಜಪಾನಿನದು ಎಂದು ಅವನೇ ಹೇಳಿದ. ಅದನ್ನು ಪೇಟೆಯಲ್ಲಿ ಕೊಂಡಿದ್ದ. ಅತಿಥಿಗಳಿಗೆ ಹಾಕಲು ತಾನು ಹೆಣೆದ ಚಾಪೆ ಗೌರವ ವಸ್ತುವಲ್ಲ ಎಂದೇ ಅವನ ಭಾವನೆ. ಆತನಿಗೆ ಹೇಳಿದೆ. "ಈ ಬಣ್ಣದ ಜಪಾನೀ ಚಾಪೆ ನೀನು ಹೆಣೆದ ಚಾಪೆಗಿಂತ ಶ್ರೇಷ್ಠ ಎಂದು ನೀನೇ ತಿಳಿದಿದ್ದೀಯ. ಇನ್ನು ಇತರರು ಇದನ್ನು ಹೇಗೆ ಗೌರವಿಸಬೇಕು? ಗಿರಾಕಿಗಳು ಹೇಗೆ ಕೊಂಡಾರು? ನಿನ್ನ ಕೈಗಾರಿಕೆಯನ್ನು ಹಾಳು ಮಾಡಲು ನೀನೇ ಮುಖ್ಯ ಕಾರಣ. ನಿನ್ನ ಮೌಲ್ಯಗಳಲ್ಲೇ ಈ ತಪ್ಪಾಗಿದೆ" ಎಂದೆ. ಆತ ನನಗೆ ಕೈಮುಗಿದು ಆ ಜಪಾನೀ ಚಾಪೆಯನ್ನು ತೆಗೆದು ಹಾಕಿ ತಾನೇ ಹೆಣೆದ ಚಾಪೆಯನ್ನು ಹಾಕಿದ.

ಒಂದು ಸಹಕಾರ ಸಂಘ. ಸದಸ್ಯರು ಉತ್ಪಾದನೆ ಮಾಡಿದ ಜೇನುತುಪ್ಪವನ್ನು ಮಾರಿ ಅದು ಅವರಿಗೆ ಅನೇಕ ಅನುಕೂಲತೆಗಳನ್ನು ಕಲ್ಪಿಸಿತ್ತು. ಅದನ್ನೆಲ್ಲ ಹೆಮ್ಮೆಯಿಂದ ವಿವರಿಸುತ್ತ ಅದರ ಕಾರ್ಯದರ್ಶಿಯು ಒಬ್ಬ ಸದಸ್ಯನ ತೋಟಕ್ಕೆ ಕರೆದೊಯ್ದ.

ಆ ಸದಸ್ಯ ಮೂವತ್ತು ಜೇನುಗೂಡುಗಳನ್ನು ಇಟ್ಟುಕೊಂಡಿದ್ದ. ಹುಳುಗಳೂ ಬಹಳ ಚಟುವಟಿಕೆಯಾಗಿದ್ದವು. ನೂರಾರು ಪೌಂಡು ಜೇನುತುಪ್ಪ ವನ್ನು ಮಾರಲಿಕ್ಕೆ ಸಂಘಕ್ಕೆ ಕಳಿಸುತ್ತಿದ್ದ ಆ ಸದಸ್ಯ. ಇದರಿಂದ ಎಷ್ಟು ಹಣ ಗಳಿಸಿರಬಹುದು ಎಂದು ಲೆಕ್ಕಹಾಕುತ್ತ ಆತನ ಪರಿಶ್ರಮವನ್ನು ಮೆಚ್ಚಿಕೊಂಡೆ ನಾನು. ಅಷ್ಟರಲ್ಲಿ ಆತನ ಪುಟ್ಟ ಮಗಳು ಅಲ್ಲಿಗೆ ಓಡಿಬಂದಳು. "ಈ ಜೇನು ಹುಳ ಏನು ಮಾಡುತ್ತವೆ?" ಎಂದಳು ಆ ಹುಡುಗಿ. "ಜೇನುತುಪ್ಪ ನಿನಗೆ ಇಷ್ಟವೇ?" ಎಂದೆ. "ನನಗದರ ರುಚಿ ಗೊತ್ತಿಲ್ಲ" ಎಂದಳು ಅ ಹುಡುಗಿ. ನಾನು ಬೆರಗಾದೆ. ಇತ್ತ ತಿರುಗಿ, "ನಿಮ್ಮ ಮನೆಯ ಮಕ್ಕಳಿಗೆ ಜೇನುತುಪ್ಪದ ರುಚಿ ಯನ್ನೇ ತೋರಿಸಿಲ್ಲವೆ ನೀವು?" ಎಂದು ಆ ದೊಡ್ಡ ಮನುಷ್ಯನನ್ನು ಕೇಳಿದೆ. ಅದಕ್ಕೆ ಸರಿಯಾದ ಉತ್ತರ ಎಂದು ಆತ ತಿಳಿದುದನ್ನು ಹೇಳಿದ: "ಸಂಘಕ್ಕೆ ಕೊಟ್ಟರೆ ಒಂದು ಪೌಂಡು ಜೇನುತುಪ್ಪಕ್ಕೆ ಒಂದು ರೂಪಾಯಿ ಕೊಡುತ್ತಾರೆ. ಮನೆಯಲ್ಲಿ ಅದನ್ನು ಬಳಸಲು ಮೊದಲಿಟ್ಟರೆ ಹೇಗಾದೀತು?" ಎಂದ. ಅಲ್ಲಿಯ ವರೆಗೆ ಆ ಸದಸ್ಯನ ಪರಿಶ್ರಮವನ್ನು ಮೆಚ್ಚುತ್ತಿದ್ದ ನನಗೆ ಹೇಗೆ ಹೇಗೋ ಆಯಿತು. ಆ ಕಾರ್ಯದರ್ಶಿಯ ಕಡೆ ತಿರುಗಿ, "ಈ ಮಗುವಿಗೆ ಜೇನುತುಪ್ಪದ ರುಚಿಯನ್ನೇ ತೋರಿಸದಂಥ ನಿಮ್ಮ ಕೆಲಸವೆಲ್ಲವೂ ವ್ಯರ್ಥ. ಅದಕ್ಕೆ ಹೆಚ್ಚು ಬೆಲೆ ಕೊಟ್ಟು ನೀವು ಮಾಡಿದುದೇನು ಗೊತ್ತೆ? ಆ ಮಗುವಿಗೆ ಒಂದು ತೊಟ್ಟು ಜೇನುತುಪ್ಪ ಇಲ್ಲದಂತೆ ದೋಚಿದಿರಿ. ಹೊಟ್ಟೆ ತುಂಬಿದ ಹಣವಂತರ ಬಾಯಿಗೆ ಜೇನುತುಪ್ಪ ಸುರಿದಿರಿ" ಎಂದೆ. ಎಲ್ಲಿ ನೋಡಿದರೂ, ಯಾವ ಪದಾರ್ಥದ ವಿಷಯವಾದರೂ ಇದೇ ಕಥೆಯೇ! ಹಾಲು, ಹಣ್ಣು, ಮೊಟ್ಟೆ, ಪುಷ್ಟಿಕರವಾದ ಪದಾರ್ಥ ಯಾವುದೇ ಆಗಲೀ ಇದೇ ಹಾಡು. ನಂಜನಗೂಡಿನಲ್ಲಿ ರಸಬಾಳೆಗೇ ಅಭಾವ. ಕೊಡಗಿನಲ್ಲಿ ಕಿತ್ತಲೆಯೇ ಸಿಗದು. ವಾಯುವ್ಯ ಪ್ರಾಂತ್ಯದಲ್ಲಿ ಕೋಳಿ ಸಾಕುವ ಪರಿಶ್ರಮ ಹೆಚ್ಚು. ಹಿಂದೆ ಅಲ್ಲಿ ಎಲ್ಲರ ಮನೆಯಲ್ಲೂ ಮೊಟ್ಟೆ ತಿನ್ನುವ ರೂಢಿಯಿತ್ತು. ರಾವಲಂಪಿಡಿ, ಕ್ವೆಟ್ಟಾ, ಅಂಬಾಲಾಗಳಲ್ಲಿ ದಂಡಿನ ಏರ್ಪಾಟಾದ ಮೇಲೆ ಒಳ ನಾಡಿನಲ್ಲಿ ಮೊಟ್ಟೆಯನ್ನು ತಿಂದವರೇ ಇಲ್ಲ.

ನಮ್ಮ ದೇಶದಲ್ಲಿ ಎಲ್ಲಾ ಕಡೆಯಲ್ಲೂ ನಡೆಯುತ್ತಿರುವುದರ ಸಂಗ್ರಹ ಚಿತ್ರ ಇದು. ನಾವು ಕಟ್ಟುವ ಬೆಲೆ ಸಮಗ್ರವಲ್ಲ. ಅನೇಕ ವೇಳೆ ಪದಾರ್ಥ ಅಗ್ಗವಾಗಿದ್ದರೆ ಸಾಕು, ಕೊಂಡುಬಿಡುತ್ತೇವೆ. ಹಾಗೆ ಕಣ್ಣುಮುಚ್ಚಿ ಕುರುಡಾಗಿ ನಾವು ಕೊಂಡುದರ ಸಾಮಾಜಿಕ ಪರಿಣಾಮವೇನೆಂಬುದು ನಮಗೆ ತಿಳಿಯದು. ಬೆಳ್ಳಗಿರುವುದೆಲ್ಲ ಹಾಲಲ್ಲ. ನಮ್ಮ ನೆರೆಹೊರೆಯವರು ಮಾಡಿದ ಪದಾರ್ಥಗಳಿಗೆ ಬರೀ ಹಣವನ್ನು ಮೀರಿದ ಕೆಲವು ಅಗೋಚರ, ಅವ್ಯಕ್ತ ಮೌಲ್ಯಗಳಿವೆ.

ಕೊಳ್ಳುವಾಗ ನಮಗೆ ಹಣದ್ದೊಂದೇ ಲೆಕ್ಕವಾದರೂ ಒಂದು ಪದಾರ್ಥದ ಬೆಲೆಯಲ್ಲಿ ಹಣದ ಸ್ಥಾನ ಬಹಳ ಗೌಣವಾದ ಅಂಶ. ಬರೀ ಹಣದ ಲೆಕ್ಕವನ್ನೇ ನಂಬಿದರೆ ಮರದ ಮೇಲೆ ನಿಂತು ಬುಡವನ್ನೇ ಕಡಿದಂತೆ. ಸಾಮಾಜಿಕ ದೂರ ದೃಷ್ಟಿಯನ್ನು ಕಳೆದುಕೊಂಡು ಪರೆಯು ಕಣ್ಣಿನಿಂದ ನೋಡಿದಂತೆ. ಸಮಾಜದಲ್ಲಿ ಸ್ಥಿರತೆ, ಶಾಶ್ವತತೆಗಳು ಬೇಕು ಎಂದರೆ ಪ್ರತಿಯೊಂದು ಪ್ರಶ್ನೆಗೂ ತಾತ್ಕಾಲಿಕ ಪರಿಹಾರವನ್ನು ಮಾತ್ರವೇ ನೋಡದೆ, ಶಾಶ್ವತವಾದ ಪರಿಹಾರವನ್ನು ನೋಡುವ ದೂರದರ್ಶಿತ್ವಬೇಕು. ಒಂದೊಂದು ಕೆಲಸದ ದೀರ್ಘ ಪರಿಣಾಮವನ್ನೂ ಗಮನಿಸ ಬೇಕು. ಒಬ್ಬ ವ್ಯಕ್ತಿ ಮಾಡಿದ ಒಂದು ವ್ಯಾಪಾರ ಅಲ್ಲಿಗೇ ಮುಗಿಯುವುದಿಲ್ಲ. ಸಮಾಜದಲ್ಲಿ ಅದರ ಪರಿಣಾಮ ಪರಂಪರೆಯಾಗಿ ಸಾಗಿಬರುತ್ತದೆ. ಅದನ್ನು ಅರಿತುಕೊಳ್ಳುವ ಬುದ್ಧಿ ನಮಗಿಲ್ಲದಿರಬಹುದು.

ಹಣದ ಅಳತೆಯನ್ನು ಹಿಡಿದರೆ ಉಳಿದೆಲ್ಲ ಬೆಲೆಗಳೂ, ಉಚ್ಚತರ ಮೌಲ್ಯಗಳೂ ಹಿಂದೆ ಸರಿಯುತ್ತವೆ. ಅದರಲ್ಲಿ ಒಬ್ಬನಿಗೆ ಅಲ್ಪ ಲಾಭವಾಗಿ ಕಂಡರೂ ಇನ್ನೊಬ್ಬನಿಗೆ ಪೂರಾ ನಷ್ಟ, ವಿನಾಶ ಕಾದಿದೆ. ಹಣವು ಜೀವಾಳವನ್ನೇ ಹಿಂಡಿಬಿಡುತ್ತದೆ. ಆ ಗಳಿಗೆಯಲ್ಲಿ ಅದರಿಂದ ಸಮಾಜಕ್ಕೆ ಆಗುವ ಹಾನಿ ಅರ್ಥವಾಗದು. ೧೯೪೩ ರಲ್ಲಿ ಬಂದ ಬಂಗಾಳದ ಬರಕ್ಕೆ ಕಾರಣ ಈ ಹಣದ ಪದ್ಧತಿಯೆ. ಹಳ್ಳಿಗಳಲ್ಲಿ ಹಸಿದುಬಿದ್ದ ಜನರ ಬಾಯಿಂದ ಪುಷ್ಟಿಕರ ಆಹಾರವನ್ನು ಪೇಟೆಗೆಳೆದು ಕಾಗದದ ಹಣವನ್ನು ಅವರ ಕೈಗೆ ತುರುಕಿತು ಈ ಹಣದ ಪದ್ಧತಿ. ಆ ಕಾಗದಕ್ಕೆ ಹಣ ಸಿಗುವುದು ಲಂಡನ್ನಿನಲ್ಲಿ. ಭಾರತದಲ್ಲ. ಇಷ್ಟೆಲ್ಲ ಆ ಬಡಜನಕ್ಕೆ ತಿಳಿಯುವ ಮೊದಲೇ ಸರ್ವನಾಶವಾಗಿ ಕ್ಷಾಮದೇವತೆ ರುದ್ರನಾಟ್ಯವಾಡಿತು.

ಆದುದರಿಂದ ನಾವು ಬಳಸುವ ಅಳತೆ ಒಂದು ಸಂದರ್ಭಕ್ಕೆ ಮಾತ್ರವಲ್ಲ ಇಡೀ ಆರ್ಥಿಕ ವಿಧಾನಕ್ಕೇ ಅನ್ವಯಿಸುವಂತಿರಬೇಕು.

ಹಣಕ್ಕಿಂತ ಹೆಚ್ಚಾದ ಹಾಗೂ ಉತ್ತಮವಾದ ಮೌಲ್ಯಗಳು ಲೋಕದಲ್ಲಿವೆ ಎಂಬುದನ್ನು ಅರಿಯೋಣ.

೧೦. ಜೀವನ ಮತ್ತು ಬದುಕು

ಬಾಳಿಗೇನಾದರೂ ಮಹತ್ವವಿದೆಯೇ? ಜೀವನಕ್ಕೆ ಅರ್ಥವುಂಟೇ? ಬಾಳು ಎಂದರೇನು – ಬರೀ ಇರುವಿಕೆಯೇ?

ಕೆಳಗಿನ ಪ್ರಾಣಿವರ್ಗಕ್ಕೂ ಮನುಷ್ಯನಿಗೂ ಇರುವ ಭೇದ ಎಂದರೆ ಇಚ್ಛಾಬಲ - ವಿಚಾರಶಕ್ತಿ. ತನ್ನ ಬಾಳಿಗೆ ಅವನು ಹೇಗೆ ಬೆಲೆ ಕಟ್ಟುತ್ತಾನೆ ಎನ್ನುವುದರ ಮೇಲೆ ಅದರ ಗುಣ. ಅವನ ಬದುಕಿನ ರೀತಿ ಅದನ್ನು ತೋರಿಸುತ್ತದೆ. ಅದನ್ನೇ ವ್ಯಕ್ತಿತ್ವ ಎನ್ನುತ್ತೇವೆ. ಅವನ ವಿಕಾಸಕ್ಕೆ ಬಾಳೇ ಆಧಾರ. ಅವನ ಕ್ರಿಯಾಶಕ್ತಿಯ ಮೂಲಕ ವ್ಯಕ್ತಿತ್ವವು ವ್ಯಕ್ತವಾಗುವ ಅವಕಾಶ ಕೊಡುವುದು ಬಾಳು. ಆದ್ದರಿಂದ ಮನುಷ್ಯರು ಹೇಗೆ ಬದುಕುತ್ತಾರೆ - ಹೇಗೆ ಬದುಕಬೇಕು ಎನ್ನುವುದು ಮುಖ್ಯ.

ಮನುಷ್ಯ ಒಬ್ಬ ಕಲೆಗಾರ. ಅವನ ಮೌಲ್ಯಗಳೇ ಅವನ ಬಣ್ಣ, ಅವನ ಇಚ್ಛಾಬಲವೇ ಅವನ ಕುಂಚ. ಬಾಳು ಅವನ ಕೈಯಲ್ಲಿರುವ ಪಟ. ಅದರ ಮೇಲೆ ಆ ಕುಂಚದಿಂದ ಅವನು ಹೇಗೆ ಗೆರೆ ಎಳೆದರೆ ಹಾಗೆ ಚಿತ್ರ ಮೂಡುತ್ತದೆ. ಮಾನವ ಲೋಕದ ಪ್ರಗತಿಗೆ ಅದು ಸಾಧಕವಾಗಬಹುದು, ಬಾಧಕವಾಗಲೂಬಹುದು. ಸ್ವಾರ್ಥಮಯ ಮೌಲ್ಯಗಳು ನೀರಾದಬಣ್ಣವಿದ್ದ ಹಾಗೆ. ದಿನ ಕಳೆದ ಹಾಗೆ ಆ ಬಣ್ಣ ಅಳಿಸುತ್ತದೆ, ಅದು ಬಹು ಕಾಲ ಬಾಳದು. ಹಿಂಸೆಯಿಂದ ವಿರೂಪವಾಗುತ್ತದೆ. ನಿಸ್ವಾರ್ಥ ಮೌಲ್ಯಗಳು ಅಜಂತಾದಲ್ಲಿ ಹಲವಾರು ಶತಮಾನ ಕಳೆದರೂ ಅಚ್ಚಳಿಯದಿರುವ ಮೃದ್ವರ್ಣಗಳಂತೆ. ಅಂಥ ಬಣ್ಣದಲ್ಲಿ ಚಿತ್ರಿಸಿದ ಅವನ ಚಿತ್ರಗಳು ಶಾಶ್ವತವಾಗಿ, ಅಹಿಂಸಾಮಯವಾಗಿ, ಪೀಳಿಗೆ-ಪೀಳಿಗೆಗಾಗಿ ತಮ್ಮ ಸಂದೇಶ ಸಾರುತ್ತ ಬರತ್ತವೆ.

ಹೀಗಿದೆ ಮನುಷ್ಯನ ಜವಾಬದಾರಿ. ಹೀಗಿರುವಾಗ ತನ್ನ ಬಾಳನ್ನು ಅವನು ತೆಪ್ಪನೆ ಇನ್ನೊಬ್ಬರ ಕೈಯಲ್ಲಿ ಒಪ್ಪಿಸಲಾದೀತೆ? ಪ್ರತಿಯೊಬ್ಬನೂ ತನ್ನ ಬಾಳಿನ ರೀತಿಗೆ ತಾನೇ ಜವಾಬದಾರ. ತನ್ನ ಸ್ವಂತ ಚಿತ್ರಕ್ಕೆ ಬದಲು ಯಾರೋ ಒಟ್ಟುಗಟ್ಟಲೆ ಮಾಡಿಕೊಟ್ಟ ಕಲ್ಲಚ್ಚಿನ ನಕಲು ಚಿತ್ರವನ್ನು ಕೊಡಲಾದೀತೆ?

ಈಗಿನ ಭಾರಿ ಕೈಗಾರಿಕೆಗಳ ಒಂದೇ ಪಡಿಯಚ್ಚಿನ ಉತ್ಪಾದನೆ ಮನುಷ್ಯರು ಹೇಗೆ ಬದುಕುಬೇಕೆಂಬುದನ್ನು ನಿರ್ಣಯಿಸುತ್ತದೆ. ನಮಗೆ ಬೇಕಾದ ಬಗೆಯ

ಪದಾರ್ಥಗಳನ್ನು ನಾವು ಕೇಳುವಂತಿಲ್ಲ. ಉತ್ಪಾದಕರು ರಾಶಿಗಟ್ಟಲೆ ತಯಾರು ಮಾಡಿ ಸುರಿದುದನ್ನು ಕಣ್ಣುಮುಚ್ಚಿ ತೆಗೆದುಕೊಳ್ಳಬೇಕಾಗುತ್ತದೆ. ಹೀಗೆ ನಾವು ನಿಷ್ಕ್ರಿಯರಾಗಿದ್ದರೆ, ಉದಾಸೀನರಾಗಿದ್ದರೆ ಜವಾಬದಾರಿಯನ್ನು ನಿರ್ವಹಿಸಿದಂತಾಗದು. ನಾವು ಕ್ರಿಯಾಶೀಲರಾಗಬೇಕು.

ಈ ತಲೆಮಾರಿನಲ್ಲಿ ಆದ ಎರಡು ಜಗತ್ ಸಂಗ್ರಾಮಗಳೇ ಈ ಕಾಲದ ಸಂಸ್ಥೆ–ಸಂಘಟನೆಗಳ ಸರ್ವನಾಶಕ ಸ್ವಭಾವಕ್ಕೆ ಸಾಕ್ಷಿ. ವಿಜ್ಞಾನ ಸಹಜವಾಗಿ ವಾಸ್ತವವೂ, ಸೃಷ್ಟಿಶಕ್ತಿ ಸಂಪನ್ನವೂ ಆಗಿರಬೇಕು. ಅದನ್ನು ವಿನಾಶಕ ವಿದ್ಯೆಯಾಗಿ ಮಾಡಿದ್ದಾರೆ. ಅಹಿಂಸೆ, ನಿತ್ಯತೆಗಳ ಸ್ಥಿರ ತಳಹದಿಯ ಮೇಲೆ ನಿಲ್ಲದೆ ಶ್ರೇಷ್ಠ ವಿಜ್ಞಾನಿಗಳು ಹಿಂಸೆಯ ಹುಚ್ಚು ಹೊಳೆಯಲ್ಲಿ ಕೊಚ್ಚಿಹೋಗುತ್ತಿದ್ದಾರೆ. ಮಾನವ ಜೀವನ ಕ್ಷೇತ್ರದಲ್ಲಿ ಅವರು ಸಾವು ಸರ್ವನಾಶಗಳನ್ನು ಹರಿಯಿಸುತ್ತ ಹೋಗುತ್ತಿದ್ದಾರೆ. ತಾವು ತಟಸ್ಥರಾಗಿದ್ದೇವೆಂದು ಆ ವಿಜ್ಞಾನಿಗಳ ನಂಬಿಕೆ. ಇದು ಆತ್ಮವಂಚನೆ, ತಾಟಸ್ಥ್ಯವೇ ಇಲ್ಲ. ವಿಜ್ಞಾನಿಗಳು ಸೃಜಕ ಬ್ರಹ್ಮರು, ಇಲ್ಲವೆ ಸಂಹಾರ-ರುದ್ರರು. ತಮ್ಮ ಇಚ್ಛಾಬಲವನ್ನು ಸಂಹಾರ ಕಾರ್ಯಕ್ಕೆ ಉಪಯೋಗಿಸಿ ಪ್ರಳಯಕಾರಣರಾಗಿದ್ದಾರ ವಿಜ್ಞಾನಿಗಳು.

ಭೌತಿಕ ವಿನಾಶ ಎಷ್ಟೇ ಆದರೂ ಅದೇನು ಮಹತ್ವದ್ದಲ್ಲ. ಎಲ್ಲಕ್ಕಿಂತ ಹೆಚ್ಚಿನ ನಷ್ಟ ಅರಳಬೇಕಾದ ಬಾಳುಗಳ ಬವಣೆ. ಒಂದು ಹುಲಿ ಒಬ್ಬ ವಿಜ್ಞಾನಿಯನ್ನು ಕೊಂದರೆ ಅದಕ್ಕೆ ಆದ ಲಾಭವೇನು? ಬಹುಶಃ ಮೂರು ಮಣ ಮಾಂಸ, ಸ್ವಲ್ಪ ಬಿಸಿ ನೆತ್ತರು. ಆದರೆ ಮಾನವಲೋಕಕ್ಕೆ ಆದ ನಷ್ಟವೋ? ಬರೀ ಮಾಂಸ ರಕ್ತವಲ್ಲ; ನೂರಾರು ವರ್ಷ ಹಲವು ತಲೆಮಾರು ಕೃಷಿ ಮಾಡಿ ಪಡೆದ ಸಂಸ್ಕಾರಗಳ ಫಲವಾದ ಉತ್ತಮ ಗುಣಗಳೆಲ್ಲ ಹುಲಿಯ ಪಾಲಾದವು. ನಮಗೆ ಆದ ನಷ್ಟ ಅಪಾರ, ಹುಲಿಗೆ ಆದ ಲಾಭ ಅತ್ಯಲ್ಪ, ಅಗಣನೀಯ. ನಿತ್ಯತೆಯ ಮೆಟ್ಟಿಲೇರುತ್ತಿದ್ದ ಜೀವನದ ಉತ್ತಮಾಂಶ ಹುಲಿಯ ಪರೋಪಜೀವನದ ಕೃತಿಯಿಂದ ನಾಶವಾಯಿತು. ಹುಲಿಗೆ ಆದ ಲಾಭವು ಆ ಗಳಿಗೆಯದು, ಒಂದು ಹೊತ್ತಿನ ಹಸಿವಿನ ತೃಪ್ತಿ. ಅದಕ್ಕಾಗಿ ಶಾಶ್ವತ ಹಾನಿ! ಜ್ಞಾನ, ಪ್ರೇಮ, ಸೃಷ್ಟಿಗಳಿಂದ ತುಂಬಿದ ಆ ವಿಜ್ಞಾನಿಯ ಉತ್ತಮ ಜೀವನ ಆ ದುಷ್ಟ, ಪರಪೀಡಕ ಮೃಗಕ್ಕೆ ಲೆಕ್ಕವೇ ಇಲ್ಲ.

ಇದೇ ರೀತಿ ಈ ಯುದ್ಧಗಳಲ್ಲಿ ಆಗುವ ಅಪಾರ ವಿನಾಶ, ಅಸಂಖ್ಯ ಮರಣ ಮಾನವ ಪ್ರಯತ್ನದಿಂದ ಸರಿಪಡಿಸಲು ಸಾಧ್ಯವಿಲ್ಲದುದು. ಇಂಥ ಪ್ರಳಯಗಳಿಂದ ಮಾನವ ಪ್ರಗತಿ, ನಾಗರಿಕತೆಗಳು ಸಾವಿರಾರು ವರ್ಷ ಹಿಂದಕ್ಕೆ ಸರಿಯುತ್ತವೆ.

ಸೊಗಸಾದ ಕಸಿ ಮಾವಿನಹಣ್ಣಿನ ಗಿಡವನ್ನು ಫಲಬಿಡುತ್ತಿರುವಾಗ ಯಾವ

ತೋಟಗಾರ ಸೌದೆಗಾಗಿ ಕಡಿಯುತ್ತಾನೆ? ಆದರೂ ಮನುಷ್ಯ ತನ್ನ ಮಕ್ಕಳನ್ನೇ ಯುದ್ಧದಲ್ಲಿ ಬಲಿಕೊಡುತ್ತಾನೆ. ಅದೂ ಹೆಮ್ಮೆಯಿಂದ! ಇದಲ್ಲವೆ ವಿಚಿತ್ರ? ಹಿಂಸೆಯನ್ನು ಹೊಗಳಿದರೆ ಅದು ಹೀಗೆ ವಿಜೃಂಭಿಸುತ್ತದೆ.

ಇಲ್ಲಿ ಒಂದು ಮಾತನ್ನು ಹೇಳಬಹುದು : ಧಾರ್ಮಿಕ ಭಾವನೆ, ಅಹಿಂಸಾ ತತ್ವಗಳ ಮಾತನ್ನು ಬಿಟ್ಟರೂ ಈ ತರ್ಕದಿಂದಲೇ ಮಾಂಸಾಹಾರ ದೂಷ್ಯವಾಗುತ್ತದೆ. ತನ್ನ ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಕೊಲ್ಲುವ ಪರೋಪಜೀವನ ಸಲ್ಲದು. ಮಾಂಸ ತಿನ್ನುವವರಿಗೆ ಸಿಗುವ ಸೇರು ಆಹಾರವನ್ನು ಸಸ್ಯಗಳು ಕೊಡಬಲ್ಲವು. ಆದರೆ ಪ್ರಕೃತಿ ಕಳೆದುಕೊಳ್ಳುವ ಪಕ್ಷಿಗಳ ಗಾನ, ಪ್ರಾಣಿಗಳ ಪ್ರೀತಿ ಮುಂತಾದ ಸ್ವಾಭಾವಿಕ ಗುಣಗಳ ಅಮೂಲ್ಯ ಆವಿಷ್ಕರಣವನ್ನು ಮತ್ತೆ ಎಲ್ಲಿಂದ ತರಬೇಕು? ಮನುಷ್ಯನ ಸೃಷ್ಟಿ ಶಕ್ತಿಯು ಹಾಗೆಯೇ ಅವೂ ಅಲಭ್ಯ. ಮಾಂಸಾಹಾರ ಅನಗತ್ಯವಾದ ಪರೋಪಜೀವನ ವಿಧಾನ; ಪೂರ್ಣ ಹಿಂಸಾಮಯ. ಆ ವಿಧಾನವನ್ನು ಅವಲಂಬಿಸಿದವನು ಮಾನವ ಜೀವನದಲ್ಲಿ ತೀರಾ ಕೆಳಗಿನ ಅಧಮ ತರಗತಿಗೆ ಇಳಿಯುತ್ತಾನೆ.

ಬಾಳಿನ ಈ ವಿಚಾರಗಳನ್ನು ಐದು ಬಗೆಯ ಆರ್ಥಿಕ ವಿಧಾನಗಳಿಗೆ ಅನ್ವಯಿಸಿದರೆ ಪರೋಪಜೀವನ ಬರೀ ಅನುಕರಣ ; ಪರಾಪಹಾರ ಜೀವನ ಅನುಸರಣ ; ಪ್ರಯತ್ನಶೀಲ ಜೀವನ ಪದಾರ್ಥ ನಿರ್ಮಾಣ; ಸಂಘಜೀವನ ಸಾಮಾಜಿಕ ಕೃತಿ ; ಇತರರ ಬಾಳಿನಲ್ಲಿ ಭಾಗವಹಿಸುವ ಪರಹಿತಕಾರಿಜೀವನ ಉದಾತ್ತ, ಗಂಭೀರ – ಹೀಗೆ ಆಗುತ್ತವೆ.

ಅನುಕರಣಶೀಲ ವರ್ಗ : ಈ ವರ್ಗಕ್ಕೆ ಸೇರಿದ ಜನ ತಾವು ಏನನ್ನೂ ನೀಡರು, ಮಾಡರು. ಇತರರು ಮಾಡಿದುದನ್ನು ನೋಡಿ ಅದನ್ನೇ ಅನುಕರಿಸಿ ಅದರ ಲಾಭವನ್ನೆಲ್ಲ ಪಡೆಯುತ್ತಾರೆ. ಅವರ ಮುಖ್ಯ ಉದ್ದೇಶ್ಯ ಸುಖ – ಸಂತೋಷ, ಸ್ವಾರ್ಥ–ತೃಪ್ತಿ. ಅದನ್ನು ಪಡೆಯಲು ಅತೀ ಸುಲಭ ಮಾರ್ಗ ಬೇಕು. ಸಾಧಾರಣವಾಗಿ ಇಂಥವರು ಇತರರ ಬದುಕನ್ನು ಅವಲಂಬಿಸಿ ಬದುಕುತ್ತಾರೆ. ಇವರದು ಬರೀ ಬದುಕು, ಬರೀ ಅಸ್ತಿತ್ವ. ಕೇವಲ ಮಣ್ಣಾದರೂ ಚಂದ್ರನಂತೆ ಇತರರ ಕಳೆಯಿಂದ ಮೆರೆಯುವ ಜನ ಇವರು. ಇವರಿಗೆ ವ್ಯಕ್ತಿತ್ವ ಎಂಬುದೇ ಇಲ್ಲ. ಇವರಿಂದ ಯಾರೂ ಏನನ್ನೂ ಕಲಿಯಬೇಕಾಗಿಲ್ಲ. ಹೇಸರಕತ್ತೆಯಂತೆ ಇವರು ವ್ಯರ್ಥ ಜೀವಿಗಳು. ಇತ್ತ ಕತ್ತೆಯೂ ಅಲ್ಲ. ಅತ್ತ ಕುದುರೆಯೂ ಅಲ್ಲ. ಅದಕ್ಕೆ ಸಂತಾನವೂ ಇಲ್ಲ, ನಿಸ್ಸಂತತಿಯಾಗಿ ಅದು ಸಾಯುತ್ತದೆ. ಹೀಗೆ ಅನುಕರಣಶೀಲರಿಗೆ ಸೃಷ್ಟಿಶಕ್ತಿಯಿಲ್ಲ. ಇದ್ದರೂ ಅದು ಸುಪ್ತ. ಅದಕ್ಕೆ ವಿಕಾಸಾವಕಾಶವಿಲ್ಲ. ವಾತಾವರಣ ವ್ಯತ್ಯಾಸವಾದರೆ ಸಮಾಜದ ಸಾಮೂಹಿಕ ಪ್ರಗತಿಗೆ ಸ್ವಲ್ಪ ಸಾಧಕವಾದರೂ ಆಗಬಹುದು. ಆದರೆ ಏನೂ ಕ್ರಿಯೆ – ಕರ್ಮ

ಇಲ್ಲದೆ ಇರುವಷ್ಟು ದಿನ ಅಂಥ ಗುಂಪು ಇರುವುದೆಂದರೆ ಸಮಾಜಕ್ಕೆ ಅಷ್ಟರ ಮಟ್ಟಿಗೆ ನಷ್ಟ. ಅವರು ಉತ್ಪಾದನೆ ಮಾಡದೆ ತಿನ್ನುತ್ತಾರೆ. ಅವರ ಬಾಳು ಕಲಾಕೃತಿಯಲ್ಲ. ಅಚ್ಚುಕೂಟದಿಂದ ಬರುವ ಬಣ್ಣವೇ ಇಲ್ಲದ ಕಪ್ಪು-ಬಿಳುಪಿನ ಬರೀ ಗೊಂದಲ.

ಈ ಶತಮಾನದ ಆರಂಭದಲ್ಲಿ ಪಾಶ್ಚಿಮಾತ್ಯರನ್ನು ಎಲ್ಲಾ ಬಗೆಯಲ್ಲೂ ಅನುಕರಿಸಿ ಜಪಾನೀಗಳು ಈ ಗುಂಪಿಗೆ ಸೇರಿದರು. ಹಿಂದೆ ಭಾರತ, ಚೀನಾಗಳ ಜೊತೆಗಳಲ್ಲಿ ತಾವು ಅನುಸರಿಸುತ್ತಿದ್ದ ಶಾಶ್ವತ ಆರ್ಥಿಕ ವಿಧಾನವನ್ನು ಬಿಟ್ಟು ಅನುಕರಣಪರತೆಯನ್ನು ಕಲಿತರು. ಅದರ ಪರಿಣಾಮ ಪರೋಪಜೀವನದ ಆರ್ಥಿಕ ವಿಧಾನದ ಅವಲಂಬನೆ; ಮಂಚೂರಿಯಾ, ಚೀನಾಗಳ ಆಕ್ರಮಣ. ಅಹಿಂಸೆಯನ್ನು ಕೈಬಿಟ್ಟು ಈಗ ಅವರು ಹಿಂಸೆ- ವಿನಾಶಗಳನ್ನು ಆರಾಧಿಸುತ್ತಿದ್ದಾರೆ.

ಅನುಸರಣಶೀಲವರ್ಗ : ಅನುಸರಣಶೀಲರಿಗೆ ಸಾಲಮಾಡಿಯಾದರೂ ಸುಖ ಪಡು ಎನ್ನುವುದೇ ಸೂತ್ರ. ಇತರರ ಸೃಷ್ಟಿಯನ್ನು ಸ್ವಲ್ಪ ವ್ಯತ್ಯಾಸ ಮಾಡಿ ತಮ್ಮದಾಗಿಸಿಕೊಳ್ಳುತ್ತಾರೆ. ಇದರಲ್ಲೂ ಜಪಾನೀಯರು ಮುಂದಾಗಿದ್ದಾರೆ. ಭಾರೀ ಕೈಗಾರಿಕೆಗಳನ್ನೇ ಅನುಕರಿಸಿದರೂ ಒಡೆದು ಚಿಕ್ಕ ಚಿಕ್ಕ ಘಟಕಗಳನ್ನಾಗಿ ಮಾಡಿದರು. ಆರ್ಥಿಕ ವ್ಯವಸ್ಥೆ ಮಾತ್ರ ಅದೇ.

ನಮ್ಮಲ್ಲೂ ಕೆಲವರು ಕಣ್ಣುಮುಚ್ಚಿ ಪಾಶ್ಚಾತ್ಯರನ್ನು ಅನುಕರಿಸುವವರು ಅನೇಕರುಂಟು. ಈ ಬಿಸಿಲಿನ ಸೀಮೆಗೆ ಅನುಗುಣವಾದ ವೇಷಭೂಷಣಗಳನ್ನು ಬಿಟ್ಟು ಅವರ ರೀತಿಯ ಉಡಿಗೆ-ತೊಡಿಗೆಗಳನ್ನು ತೊಡುತ್ತಾರೆ. ಬಿಸಿಲಿನಲ್ಲಿ ಬೆಂದರೂ ಅದೇ ಅವರಿಗೆ ಸುಖ. ಅದೇ ನಾಗರೀಕತೆ. ಇಂಥ ಜನ ಅಗ್ಗವಾದ ಕಲ್ಲಚ್ಚಿನ ಚಿತ್ರಗಳಂತೆ. ಯಾವುದನ್ನೂ ಸಮಗ್ರವಾಗಿ ಮಾಡುವ ದೃಷ್ಟಿಯೇ ಇಲ್ಲ. ಸ್ವತಂತ್ರ ಬುದ್ಧಿ ಇದ್ದರೂ ಇವರು ಅಸ್ವತಂತ್ರರು. ಅನೇಕ ಸಲ ಹಿಂಸಾರಾಧಕರು.

ಪ್ರಯತ್ನಶೀಲವರ್ಗ : ಇದು ಪ್ರಯತ್ನಶೀಲವರ್ಗದ ಜನರ ಕ್ಷೇತ್ರ ಯಾರು ಹೇಗಾದರೂ ಹೋಗಲಿ, ನಾನು ಸುಖವಾಗಿದ್ದರೆ ಸಾಕು ಎಂಬ ಸೂತ್ರ ಇವರದು. ಇತರರ ಕಷ್ಟ-ಸುಖದ ಪರಿವೆಯಿಲ್ಲದೆ ತಮ್ಮ ಬದುಕನ್ನು ಹಾಯಾಗಿ ನಡೆಸಬಯಸುವ ಜನ ಇವರು. ಇವರಿಗೆ ಸ್ವತಂತ್ರ ವಿಚಾರವುಂಟು. ಪ್ರತಿ ಯೊಬ್ಬರೂ ತಮ್ಮ ನಿತ್ಯಜೀವನದ ರೀತಿಯಲ್ಲಿ ಸ್ವತಂತ್ರರಾಗಿದ್ದರೆ ಅದೊಂದು ರೀತಿ.

ಈಗ ಹಾಗಿಲ್ಲ. ಈಗ ಪದಾರ್ಥಗಳನ್ನು ತಯಾರಿಸುವವರು ಹೇಗೆ ಪಂಕ್ತಿ ಹಾಕಿಕೊಟ್ಟರೆ ಗಿರಾಕಿಗಳಾದ ನಾವು ಹಾಗೆ ತೀಡಬೇಕು. ಇದರಿಂದ ನಮಗೆ ಬೇಕಾದುದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವೂ ಇಲ್ಲ. ನಮ್ಮ ಸೃಷ್ಟಿ ಶಕ್ತಿಗೂ ಅವಕಾಶವಿಲ್ಲದೆ ಅದು ಬಾಡಿ ಬತ್ತಿಹೋಗುತ್ತದೆ.

ಪಶ್ಚಿಮ ದೇಶದಲ್ಲಿ ಬಂದಿರುವ ಈ ಏಕರೂಪತೆ ಗಿರಾಕಿಗಳ ಬಾಳಿನಲ್ಲಿ ಸ್ವತಂತ್ರ ಭಾವನಾಶಕ್ತಿ ಹೊರಹೊಮ್ಮದಂತೆ ಮಾಡಿದೆ. ಅದನ್ನು ಕೊಂದಿದೆ. ಸರ್ವ ಸಾಮಾನ್ಯ ಪದ್ಧತಿಯನ್ನು ಬಿಟ್ಟರೆ ಜನರು ಏನನ್ನುತ್ತಾರೋ ಎಂಬುದೇ ಚಿಂತೆ. ಮನೆಯೊಳಗಿನ ಜೀವನ, ಕಚೇರಿ, ಶ್ರೀಮಂತರ ಕೂಟ, ವ್ಯಾಪಾರಿ ಸಂಸ್ಥೆ ಮುಂತಾದವುಗಳು ಹೊರಗಿನವರು ಹಾಕಿಕೊಟ್ಟ ಮಾದರಿಗಳಂತೆ ನಡೆಯಬೇಕಾಗಿದೆ.

ಇಂಥ ಅರ್ಥವಿಲ್ಲದ ಆಚಾರಗಳನ್ನು ಅನುಸರಿಸುವ ಜನ ಅರಿವಿಲ್ಲದವರು ಅಥವಾ ಸಮಾಜದಲ್ಲಿ ಮೇಲಕ್ಕೆ ಬರಬೇಕೆನ್ನುವವರು. ತಮ್ಮ ಪ್ರಚಾರ ಕೌಶಲದಿಂದ ಜಾಣ ವರ್ತಕರು ಗಿರಾಕಿಯಿಲ್ಲದ ಕಡೆ ಇವಕ್ಕೆ ಗಿರಾಕಿ ಹುಟ್ಟಿಸುತ್ತಾರೆ. ಈ ಆಚಾರ–ಪ್ರಚಾರಗಳಿಗೆ ಬಲಿಯಾಗುವ ಜನ ಕ್ರಮೇಣ ಆತ್ಮವಿಶ್ವಾಸವನ್ನು ಕಳೆದುಕೊಂಡು ದೀನರಾಗಿ, ತಮ್ಮ ರಚನಾಶಕ್ತಿಯನ್ನು ಬತ್ತಿಸಿ ಬಾಳನ್ನು ಬರೀ ಬೇಸರಾಗಿ ಮಾಡಿಕೊಳ್ಳುತ್ತಾರೆ.

ಬೊಂಬಾಯಿನ ಹಲವು ಸಾಲು ಮನೆಗಳನ್ನು ನೋಡಿದರೆ ಅಲ್ಲಿನ ಎಲ್ಲಾ ಮನೆಗಳಲ್ಲೂ ಏನಿರಬಹುದೆಂಬುದನ್ನು ಊಹಿಸಬಹುದು. ಒಂದೇ ರೀತಿಯ ಕುರ್ಚಿ-ಮೇಜುಗಳು, ಅದೇ ಹೂದಾನಿ, ಎಲ್ಲಾ 'ಕಿಸಬಾಯಿ' ರೀತಿ. ಯಾವ ಮನೆಗೆ ಹೋದರೂ ಅದೇ. ವೈವಿಧ್ಯವಿಲ್ಲ. ನವ್ಯತೆಯಿಲ್ಲ, ಭಾವ–ಕಲ್ಪನೆ ಇಲ್ಲ; ಒಂದೇ ನಿರ್ಜೀವ ಮಾದರಿ. ಹಳೆಯ ಕಾಲದ ಗೋರಿಗಳಲ್ಲಾದರೂ ಕಲೆ–ಶಿಲ್ಪ ಕಂಡೀತು. ಬೊಂಬಾಯಲ್ಲಿ ಬದುಕಿರುವ ಜನರ ಮನೆಯಲ್ಲಿ ಕಾಣಲಾರದು. ಗೋರಿಗಳಲ್ಲಾದರೂ ಜೀವವಿದೆ. ಈ ಮನೆಗಳಲ್ಲಿ ಜೀವವೇ ಇಲ್ಲ. ಬದುಕನ್ನು ಹೀಗೆ ಸುಖಮಯ, ಸರಾಗವಾಗಿಮಾಡುವ ನೆಪದಲ್ಲಿ ನಮಗೆ ಬೇಕಾದುದನ್ನೆಲ್ಲ ಮಾಡುವವನು ಉತ್ಪಾದಕ. ಜನರ ಉತ್ತಮ ಗುಣ–ಭಾವನೆಗಳನ್ನು ಲಯಗೊಳಿಸಿ ಪ್ರಗತಿ ಇಲ್ಲದಂತೆ ಮಾಡುತ್ತದೆ ಈ ಸರಾಗತೆ.

ಬಾಳು ರಚನಾಮಯವಾಗಬೇಕೆಂದರೆ ಈ ಮೃತ್ಯುಸಮ ಏಕೈಕ ರೂಪ ಹೋಗಬೇಕು. ವ್ಯಕ್ತಿಯ ಅಭಿರುಚಿ ಪ್ರಕಟವಾಗಲು ಅವಕಾಶ, ಅನುಕೂಲ ಇರಬೇಕು. ತನ್ನ ಮನೆಯ ಸಾಮಗ್ರಿಗಳನ್ನು, ಮನೆಯನ್ನು ರಚಿಸುವ ಕಾರ್ಯ ತನ್ನ ವ್ಯಕ್ತಿತ್ವ ಪ್ರಕಟನೆಗೆ ಯೋಗ್ಯ ಕ್ಷೇತ್ರ. ನಮ್ಮ ಚಿಂತೆಯನ್ನು ತಗ್ಗಿಸುವ ನೆಪದಲ್ಲಿ ಭಾರಿ ಉತ್ಪಾದಕರು ಮಾನವ ವ್ಯಕ್ತಿತ್ವವನ್ನೂ ವೈಶಿಷ್ಟ್ಯವನ್ನೂ ನಾಶ ಮಾಡುತ್ತಿದ್ದಾರೆ. ಅಮೆರಿಕದಲ್ಲಿ 'ಸಿದ್ಧಗೃಹ' ಗಳನ್ನು ತಂದು ರಾತ್ರಿ–ರಾತ್ರಿಯೇ ಮನೆ ಕಟ್ಟಬಹುದು. ಏನೂ ಕಷ್ಟಪಡಬೇಕಾಗಿಲ್ಲ. ಉತ್ಪಾದನೆಗೆ ಟೆಲಿಫೋನ್ ಮಾಡಿ ಇಂಥ ಬೀದಿ, ಇಂಥ ಕಡೆ, ಇಂಥ ಮಾದರಿಯ ಮನೆ – ಅ, ಬ, ಕ, ಡ – ಬೇಕು ಎಂದು ಹೇಳಿದರೆ ಸಾಕು. ಅದರ ಬಾಗಿಲು ಕಿಟಕಿ ಮೊದಲಾದುವೆಲ್ಲ

ಸಿದ್ಧವಾಗಿರುತ್ತವೆ. ಅವನ್ನು ತಂದು ಜೋಡಿಸಿಟ್ಟರಾಯಿತು. ಆಹಾರದಲ್ಲಿ ವೈಯಕ್ತಿಕ ರುಚಿಯೇ ಮುಖ್ಯ ತಾನೆ. ಅದರಲ್ಲಿಯೂ ತಮ್ಮ ಕುಶಲ ಪ್ರಚಾರ ದಿಂದ ಉತ್ಪಾದಕರು ವೈಯಕ್ತಿಕತೆಯನ್ನು ತೊಡೆದು ಹಾಕಿದ್ದಾರೆ. ಹಿಂದುಸ್ಥಾನದ ಅಂಗಡಿಗಳಲ್ಲೂ 'ಸಿದ್ಧಾನ್ನ'ದ ಪೊಟ್ಟಣಗಳು ಬರುತ್ತಿವೆ. ಅಡಿಗೆಯ ಕಲೆಯನ್ನು ಸಾಯಿಸುತ್ತಿವೆ. ತನ್ನ ಪಾಕವಿದ್ಯೆಯ ಬಗ್ಗೆ ಹೆಮ್ಮೆಗೊಳ್ಳಬೇಕು ಹೆಂಗಸು. ಅದರ ಬದಲು ಉಪ್ಪಿನಕಾಯಿ, ಮುರಬ್ಬಾ, ಚಟ್ನಿ, ಮಕ್ಕಳ ಆಹಾರ ಮುಂತಾದ ವನ್ನು ಸಾವಿರಾರು ಮೈಲಿಗಳ ದೂರದಿಂದ ತರಿಸಿ ಒಂದೇ ಬೇಸರದ ಮಾದರಿಗೆ ಇಳಿಸಿದ್ದೇವೆ.

ವಿಚಾರ ಕಡಮೆಯಾದಷ್ಟೂ ಜೀವನಕ್ಕೆ ಮನುಷ್ಯ ಅಯೋಗ್ಯನಾಗುತ್ತಾನೆ. ಅವನ ರಚನೆಯೆ ಹಾಗಿದೆ. ಆದುದರಿಂದ ಗಿರಾಕಿಯ ಪರ ತಾನೇ ಎಲ್ಲಾ ವಿಚಾರವನ್ನೂ ಮಾಡುವ ಆಧುನಿಕ ಉತ್ಪಾದಕ ನಿಜವಾಗಿ ಗಿರಾಕಿಯನ್ನು ವಿಚಾರಹೀನನನ್ನಾಗಿ ಮಾಡುತ್ತಿದ್ದಾನೆ. ತಾಯಿ ಕೂಡ ಮಗು ಅಂಬೆಗಾಲಿ ಡುವಾಗ ಒಂದೆರಡು ಸಲ ಬೀಳಲು ಬಿಡುತ್ತಾಳೆ. ಮಗು ಒಂದು ಸಲವೂ ಬೀಳ ದಂತೆ, ಯಾವಾಗಲೂ ತಾನೇ ಅದನ್ನು ಎತ್ತಿಕೊಂಡು ಓಡಾಡಿದರೆ ಕಡೆಗೆ ಆ ಮಗುವಿಗೆ ನೆಟ್ಟಗೆ ನಿಲ್ಲುವ ರೂಢಿಯೆ ಇಲ್ಲದಾಗಿ ಅಂಗವಿಕಲವಾಗುತ್ತದೆ. ಈಗಿನ ಉತ್ಪಾದಕರಿಂದ ಸಮಾಜಕ್ಕೆ ಸಲ್ಲುವ ಸೇವೆ ಇದೇ.

ನಮ್ಮ ದೇಶದಲ್ಲಿ ನಿತ್ಯಜೀವನ ನಾನಾ ವಿಧವಾದುದು, ಬಹು ಮುಖ್ಯ ವಾದುದು. ಮನುಷ್ಯನ ರಚನಾ ಸಾಮರ್ಥ್ಯಕ್ಕೆ ಹಲವಾರು ಬಗೆಗಳ, ನಾನ್ನಾ ಮೇಳಗಳಲ್ಲಿ ಅವಕಾಶ ಕೊಡುವಂಥದು. ಬೇರೆ ಬೇರೆ ಪ್ರಾಂತ, ಸೀಮೆಗಳಲ್ಲಿ ಬೇರೆ ಬೇರೆ ರೀತಿ. ಒಂದೇ ಸೀಮೆಯಲ್ಲೂ ಬೇರೆ ಬೇರೆ ಗುಂಪುಗಳಲ್ಲಿ ಬೇರೆ ಬೇರೆ ರೀತಿಯ ಜೀವನ ವಿಕಾಸ. ವರ್ತಕರ ಈ ಭಾರಿ ಮಾಯಾಜಾಲಕ್ಕೆ ಮಾತ್ರ ಬೀಳದೆ ಇದ್ದರೆ ನಮ್ಮಲ್ಲಿ ವ್ಯಕ್ತಿವಿಕಾಸಕ್ಕೆ, ಆತ್ಮ ಪ್ರಕಟನೆಗೆ ಇರುವ ದಾರಿ ಸಾವಿರಾರು. ಈಗಲೂ ಪಟ್ಟಣ, ನಗರಗಳನ್ನು ಬಿಟ್ಟರೆ ಹಳ್ಳಿಗಳಲ್ಲಿ ಇನ್ನೂ ಈ ಜಾಲ ಹರಡಿಲ್ಲ. ತೀರಾ ಕೊನೆಯ ಮೂಲೆಗಳಲ್ಲೂ ನಿಟ್ಟು ತಪ್ಪಿದ ಪ್ರಗತಿ ಕಾಲಿಡುತ್ತಿದ್ದರೂ ಇನ್ನೂ ಪರಿಸ್ಥಿತಿ ಹದಗೆಟ್ಟಿಲ್ಲ. ಈ ಸಾವಿನ ಸೋಂಕುರೋಗವನ್ನು ತಡೆಗಟ್ಟಲು ಕೂಡಲೇ ಏನಾದರೂ ಮಾಡಬೇಕು.

ರಚನಾಶೀಲವರ್ಗ ದೇಶಕ್ಕೆ ಸಾಮರ್ಥ್ಯದಾಯಕವಾಗಬಹುದು. ಭಾರಿ ಉತ್ಪಾ ದಕನೇ ಮುಖ್ಯ ಜೀವಾಳವಾದ ಈ ತಿರುಗುಮುರುಗು ವ್ಯವಹಾರದಲ್ಲಿ ಮಾನ ವನು ಬರೀ ಉತ್ಪನ್ನಭಕ್ಷಕ ಗಿರಾಕಿ ಆಗಿ ಪೂರಾ ನಿರ್ವೀರ್ಯನಾಗಿದ್ದಾನೆ. ಅತ್ಯಧಿಕ ಸಂಖ್ಯೆಯ ಈ ವರ್ಗದ ಜನ ಆಧುನಿಕ ಗಿರಣಿ–ಕಾರಖಾನೆಗಳ ಭಾರಕ್ಕೆ ಪುಡಿ ಪುಡಿಯಾಗಿದ್ದಾರೆ. ಅವರ ರಚನಾ ಸಾಮರ್ಥ್ಯವೆಲ್ಲ ನಾಶವಾಗಿದೆ. ಈ ಬಗೆಯ

ಬದುಕು ಕಲಾಕೃತಿಗಳನ್ನು ಸೃಷ್ಟಿಸುವುದಿಲ್ಲ, ಬರೀ ನಕಲುಗಳನ್ನು ನಿರ್ಮಿಸುತ್ತದೆ.

ಈಗ ಇಂಥ ವಸ್ತು ಬೇಕೆಂದು ಗಿರಾಕಿ ಕೇಳುವಂತಿಲ್ಲ. ಅವನು ಮಾಡುವ ವ್ಯವಹಾರವನ್ನು ಅರ್ಥಶಾಸ್ತ್ರ ಪಂಡಿತರು ಅರಿವಿಲ್ಲದೆ 'ಬೇಡಿಕೆ' ಎಂದು ಕರೆಯು ತ್ತಾರೆ. ಅವನು ಏನನ್ನೂ ಬೇಡುವುದೇ ಇಲ್ಲ. ಅಂಗಡಿಯಲ್ಲಿ ಇದ್ದುದನ್ನು ಮಾತಾಡದೆ ಒಯ್ಯುತ್ತಾನೆ. ಬೇಡಿದುದನ್ನು ಕೊಡುವುದಿಲ್ಲ; ಕೊಡುವುದನ್ನೇ ಬೇಡುವಂತೆ ಮಾಡುತ್ತಾರೆ. ಎಲ್ಲಾ ತಲೆಕೆಳಗು! ಹಿಂದುಸ್ಥಾನದ ವಿಷಯವೇ ಗೊತ್ತಿಲ್ಲದ ಇಂಗ್ಲೆಂಡ್ ಕೆಲಸಗಾರರು ಮಾಡಿದ ಚಪ್ಪಲಿಯನ್ನು ಅಥವಾ ಇನ್ನೆಲ್ಲೋ ಜಗತ್ತಿನ ಮೂಲೆಯಲ್ಲಿ ಮಾಡಿದುದನ್ನು ಕೊಳ್ಳಬೇಕು. ಕೇಳುವವರ ಕಾಲಿನ ಅಳತೆಗೆ ಚಪ್ಪಲಿ ಮಾಡುವುದಿಲ್ಲ. ಸಿದ್ಧವಾಗಿಟ್ಟಿದ್ದ ಚಪ್ಪಲಿಗಳಲ್ಲಿ ಕಾಲಿಟ್ಟು ಎಲ್ಲಕ್ಕಿಂತ ಹೆಚ್ಚು ಸರಿಹೊಂದುವುದನ್ನು ಕೊಳ್ಳಬೇಕು. ಈ ಕಾರಖಾನೆ ಸಿದ್ಧ ಮಾಡಿದ ಚಪ್ಪಲಿಗಳು ನಮ್ಮ ಯಾರ ಕಾಲಿಗೂ ಸರಿಹೋಗದಿದ್ದರೆ ಆಗ ಬರಿಗಾಲಲ್ಲಿ ಓಡಾಡುವ ರೂಢಿಯುಳ್ಳ ಅಬಿಸೀನಿಯಾದಂಥ 'ದೇಶೀಜನರ' ಸೀಮೆ ಯನ್ನು ಗೆದ್ದು ಅವರಿಗೆ 'ನಾಗರೀಕತೆ' ಕಲಿಸಿ, ಅವರಿಗೆ ಆ ಚಪ್ಪಲಿ ತೊಡಿಸಬೇಕು. ಗಿರಾಕಿಯೇ ಇಲ್ಲದೆ ವಸ್ತುನಿರ್ಮಾಣ ಮಾಡುವ ಈ ಪದ್ಧತಿಯೇ ಈಗ ಕಲಹ-ಕಾಳಗಗಳಿಗೆ ಮುಖ್ಯಕಾರಣ. ಕುಲಾವಿಗಳಿವೆಯಲ್ಲ ಎಂದು ಕೂಸು ಹುಟ್ಟಬೇಕು! ಹೀಗೆ ಕೃತ್ರಿಮವಾಗಿ ಬೇಡಿಕೆಯನ್ನು ಸೃಷ್ಟಿಸುವಾಗ ಹಿಂಸೆ ಹೆಚ್ಚುತ್ತದೆ, ಲೋಕದ ಸಮತೂಕ ತಪ್ಪುತ್ತದೆ. ಮತ್ತೆ ತೂಕ ಸಮಮಾಡಿಕೊಳ್ಳುವ ಪ್ರಯತ್ನವೂ ಪುನಃ ಹಿಂಸೆಗೆ ಕಾರಣವಾಗುತ್ತದೆ.

ಸಮಾಜದಲ್ಲಿ ಸ್ಥಿರತೆ, ಅಹಿಂಸೆ ಇರಬೇಕಾದರೆ ಸಮಾಜರಚನೆಯಲ್ಲಿ ಕೊಳ್ಳುವ ಗಿರಾಕಿಯೇ ಮುಖ್ಯಾಂಶವಾಗಿರಬೇಕು. ಅವನ ವೈಯಕ್ತಿಕ ಅಭಿರುಚಿಯೇ ಮುಖ್ಯ ವಾಗಬೇಕು. ಅಲ್ಲಲ್ಲಿ ಆಯಾ ಸ್ಥಳಗಳಲ್ಲಿಯೆ ದಿನಬಳಕೆಯ ವಸ್ತುಗಳನ್ನು ಗಿರಾ ಕಿಯ ಕಣ್ಣೆದುರಿಗೇ ಗುಡಿಸಲುಗಳಲ್ಲಿ ಅಣಿಮಾಡಿದಾಗಲೇ ಇದು ಸಾಧ್ಯ. ಅಂಥ ಪರಿಸ್ಥಿತಿಯಲ್ಲಿ ಮಾತ್ರವೇ ಗಿರಾಕಿ ತನ್ನ ವ್ಯಕ್ತಿತ್ವವನ್ನು ಬೆಳೆಯಿಸಿ ಪ್ರಕಟಗೊಳಿ ಸುವ ಮೌಲ್ಯಗಳನ್ನು ರೂಢಿಗೆ ತರಬಲ್ಲ. ಆಧುನಿಕ ಉತ್ಪಾದನ ವಿಧಾನ, ವಿಕ್ರಯ ವಿಧಾನಗಳು ಬಾಳನ್ನು ಬರೀ ಬದುಕಾಗಿ ಮಾಡಿದೆ. ಬಾಳು ಮಲತು ನಿಂತಿದೆ. ಗಾಳಿ ಆಡದೆ ಉಸಿರುಗಟ್ಟಿದಂತಾಗಿದೆ. ಈ ರಚನಾಶೀಲ ವರ್ಗಕ್ಕೆ ಸೇರಿದ ಜನ ಕ್ರಿಯಾಶೀಲರಾಗಿ ತಮ್ಮ ವ್ಯಕ್ತಿತ್ವವನ್ನು ಸಾಧಿಸಿದರೆ ಈ ಪರಿಸ್ಥಿತಿ ಬದಲಾಗುತ್ತದೆ. ಈ ವರ್ಗದ ಜನ ಈಗ ಒಪ್ಪಿಕೊಂಡು ಬಳಸುತ್ತಿರುವ ಹಣದ ಅಳತೆಯನ್ನು ಕೈಬಿಟ್ಟು, ವಿವಿಧ ಸಾಂಸ್ಕೃತಿಕ ಮೌಲ್ಯಗಳನ್ನು ಮತ್ತೆ ವ್ಯವಹಾರ ದಲ್ಲಿ ಪ್ರತಿಷ್ಠಿಸಿದರೆ, ಆ ಮೌಲ್ಯಗಳು ಜನಜೀವನವನ್ನು ರೂಪಿಸುವಂತೆ ಮಾಡಿ ದರೆ ಆಗ ಎಲ್ಲವೂ ಸರಿಯಾದೀತು.

ಸಂಘ ಸುಧಾರಕ ವರ್ಗ : ಇದು ಸಂಘ ಜೀವನದ ಆರ್ಥಿಕ ವಿಧಾನ ದವರ ಕ್ಷೇತ್ರ. ಆದುದರಿಂದ ಪ್ರತಿಯೊಂದು ಸಂದರ್ಭದಲ್ಲೂ, ಯಾವುದನ್ನೇ ಆಗಲೀ ನಿರ್ಧರಿಸುವಾಗ ತನಗೇನು ಲಾಭ, ತನ್ನ ಗುಂಪಿಗೇನು ಪ್ರಯೋಜನ ಎಂಬು ವಲ್ಲ ಒರೆ; ಸಮಾಜಕ್ಕೇನು ಲಾಭ ಎಂಬುದು. ಇಂಥ ಕ್ಷೇತ್ರದಲ್ಲಿ ಹಣಕ್ಕೆ ಬೆಲೆಯೇ ಇಲ್ಲ. ಹಣದ ಅಳತೆ ಇಲ್ಲಿ ಸಲ್ಲದು ಎಂಬುದನ್ನು ಹೇಳಬೇಕಾಗಿಯೆ ಇಲ್ಲ. ತಾತ್ಕಾಲಿಕ ಪ್ರಯೋಜನಕ್ಕಿಂತ ಚಿರಕಾಲದ ಲಾಭವೇ ಇಲ್ಲಿ ಮುಖ್ಯ.

ಇತ್ತೀಚೆಗೆ ಸಾಮಾಜಿಕ - ಆರ್ಥಿಕ ಪ್ರಯೋಗಗಳು ಹಲವು ನಡೆದಿವೆ. ಸೋವಿಯೆಟ್ ಕಮ್ಯುನಿಸಮ್ಮನ್ನು ತಂದು ರಷ್ಯಾ ಈ ಪ್ರಯತ್ನ ಮೊದಲಿಟ್ಟಿತು. ಆಮೇಲೆ ಫ್ಯಾಸಿಸ್ಟರೂ ನಾಜೀಗಳೂ ಪ್ರಯೋಗ ನಡೆಸಿದರು. ಅವರ ಪ್ರಯೋಗ ಗಳು ಸ್ಥಿರತೆ, ಶಾಶ್ವತತೆ, ಅಹಿಂಸೆಗಳನ್ನು ತರಲಿಲ್ಲ. ವಿಫಲವಾದವು. ತದ್ವಿ ಪರೀತವಾಗಿ ಮಾನವನ ಲೋಕವನ್ನು ನೆತ್ತರಿನ ಹೊಳೆಯಲ್ಲಿ ಮುಳುಗಿಸಿವೆ. ತಮ್ಮ ವರ್ಗಕ್ಕೆ, ದೇಶಕ್ಕೆ ಹತ್ತಿರದ ಅಡ್ಡದಾರಿ ಹುಡುಕುವುದರಲ್ಲಿ ಇಡೀ ಮಾನವಲೋಕದ ಮಹತ್ತರ ಪ್ರಶ್ನೆಯನ್ನು ಅವು ಮರೆತವು. ಸರಿಯೋ ತಪ್ಪೋ 'ನನ್ನ ದೇಶ ಮಾಡಿದುದೇ ಸರಿ' ಎಂಬ ಸೂತ್ರವನ್ನು ಕಲಿತವು. ಕಡೆಗೆ ಅದರಿಂದ ಹಿಂಸೆ-ಪ್ರಳಯಗಳಿಗೆ ತುತ್ತಾದವು.

ಬಾಳಿಗೊಂದು ಸರಿಯಾದ, ಕ್ರಮವಾದ ಯೋಜನೆ ಅಗತ್ಯ. ಈ ಯೋಜನೆ ಸಫಲವಾಗಬೇಕೆಂದರೆ ಅದರ ಗುರಿ ಸಾರ್ವತ್ರಿಕವಾಗಿ ಅನ್ವಯಿಸುವಂತಿರಬೇಕು, ಜಗತ್ತಿನ ಶಾಶ್ವತ ನಿಯಮಗಳಿಗೆ ಅನುಗುಣವಾಗಿರಬೇಕು, ಕೇಂದ್ರಿತ ಕಾರಖಾನೆ ಗಳಲ್ಲಿ ಉತ್ಪತ್ತಿಯಾದ ವಸ್ತುಗಳನ್ನು ಮಾರುವ ನಿಮಿತ್ತ ದೇಶದಲ್ಲಿ ಆಚಾರ-ಸಂಪ್ರದಾಯಗಳನ್ನು ಹರಡುವ ಪ್ರಯತ್ನವಾಗಬಾರದು.

ನಮ್ಮ ದೇಶದಲ್ಲಿ ಈ ಕ್ಷೇತ್ರದ ಜನರಿಗೆ ಬೇಕಾದಷ್ಟು ಕೆಲಸವಿದೆ. ಹಳ್ಳಿಯ ಜೀವನ ಸುಗಮವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸಬಲ್ಲ ಜನರು ಹಳ್ಳಿ ಯವರಿಗೆ ಬಹಳ ಅಗತ್ಯ. ಅಡವಿಯ ಮೃಗಗಳಿಗಾದರೂ ಹೊಟ್ಟೆತುಂಬಾ ಅನ್ನ ಸಿಗುತ್ತದೆ. ಹಳ್ಳಿಯ ಜನಕ್ಕೆ ಈಗ ಅದೂ ಇಲ್ಲ. ಈಗಿನ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಪ್ರಯತ್ನಶೀಲತೆಯನ್ನೇ ಕೊಲ್ಲುತ್ತಿದೆ. ಅಸಹಾಯಕರಾದ ಜನ ಕೋಟಿಯ ಜೀವನವನ್ನು ಸರಿಯಾಗಿ ವ್ಯವಸ್ಥೆಗೊಳಿಸಿ ಅವರು ಮಾನವ-ಸಹಜ ಜೀವನ ನಡೆಸುವಂತೆ ಮಾಡುವುದು ಈ ವರ್ಗದವರ ಕೆಲಸ.

ಈ ಗುರಿಯನ್ನು ಮುಟ್ಟಲು ಯೋಜನೆ ಮಾಡುವುದೆಂದರೆ ನಾವು ಯಾವ ರೀತಿಯ ಜೀವನಕ್ಕಾಗಿ ಪ್ರಯತ್ನಿಸಬೇಕೋ ನಿರ್ಧರಿಸಬೇಕು. ಆ ಕಲ್ಪನೆ ಯೋಗ್ಯ ವಾದುದಾದರೆ ಸಮಾಜದಲ್ಲಿರುವ ಸಮಸ್ತ ವ್ಯಕ್ತಿಗಳಿಗೂ ಅವರ ರಚನಾಶಕ್ತಿಯ ಪ್ರಕಟನೆಗೆ ಅವಕಾಶವಾಗುತ್ತದೆ. ಸಹಜವಾದ ಜೀವನಪದ್ಧತಿಯನ್ನು ಉತ್ತಮ

ಗೊಳಿಸಲಾಗಲಿ ಕೆಳಗಿಳಿಸಲಾಗಲಿ ಒಂದು ತಲೆಮಾರಿನಲ್ಲಿ ಸಾಧ್ಯವಿಲ್ಲ. ಹಾಗೆ ಮಾಡಲು ಹೋದರೆ ಪರಿಣಾಮ ದಾರುಣವಾಗುತ್ತದೆ. ಪ್ರಕೃತಿಯು ಕೋಟ್ಯಾಂತರ ವರ್ಷಗಳಿಂದ ಮಾನವನ ಜೀವನವನ್ನು ರೂಪಿಸುತ್ತ ಬಂದಿದೆ. ನಮಗಿರುವ ಜೀರ್ಣಕೋಶದಂಥ – ಕ್ಷವಾದರೂ ಅತ್ಯಂತ ಸರಳವಾದ – ಯಂತ್ರವನ್ನು ಯಾವ ವಿಜ್ಞಾನಿಯೂ ರಚಿಸಲಾರ. ಹೃದಯದಂಥ ಸ್ವಯಂಚಾಲಿತ, ಸ್ವಯಂಶಾಸಿತ ಯಂತ್ರವನ್ನು ಯಾವ ಯಂತ್ರ ಶಾಸ್ತ್ರಜ್ಞನೂ ನಿರ್ಮಿಸಲಾರ. ವಿತಂತಿಯೋ ತಂತಿಯೋ ಯಾವ ಮಾರ್ಕೊನಿಯೂ ನಮ್ಮ ನರಗಳ ಸಮೂಹದಂಥ ವಾರ್ತಾ ವಾಹಿನಿಯನ್ನು ರೂಪಿಸಲಾರ. ಮಾನವನ ದೇಹ ಮತ್ತು ಮನಸ್ಸುಗಳ ಸಹಜ ಕ್ರಿಯಾವಿಧಾನವನ್ನು ಅಜ್ಞಾನಿ ಮನುಷ್ಯ ಹೊಸದಾಗಿ ರಚಿಸಲೂ ಆರ, ಬದಲಿ ಸಲೂ ಆರ. ಆದುದರಿಂದ ತನ್ನ ಮನಸ್ಸಿಗೆ ತೋಚಿದಂತೆ ಜೀವನದ ದಿಕ್ಕನ್ನು ಬದಲಿಸಲು ಮಾಡಿದ ಮನುಷ್ಯ ಪ್ರಯತ್ನವೆಲ್ಲವೂ ವ್ಯರ್ಥ. ನಾವು ಮಾಡಬೇಕಾದು ದೆಲ್ಲ ಪ್ರಕೃತಿಯೊಡನೆ ಸಹಕರಿಸುವುದು, ಅತ್ಯುತ್ತಮ ರೀತಿಯಲ್ಲಿ ಪ್ರಕೃತಿ ತನ್ನ ಕೆಲಸ ನಡೆಸಲು ತಕ್ಕ ಪರಿಸ್ಥಿತಿಯನ್ನು ಕಲ್ಪಿಸಿಕೊಡುವುದು. ಈ ರೀತಿ ಈ ವಿಧಾ ನವು ಪ್ರಕೃತಿ ನಿರ್ಮಿತ. ಅದನ್ನರಿತು ಪ್ರಕೃತಿಗೆ ಏನು ನೆರವು ಬೇಕೋ ಅದನ್ನು ಒದಗಿಸುವುದು ಮನುಷ್ಯನ ಕೆಲಸ. ಪ್ರಕೃತಿಯ ವಿಧಾನಕ್ಕೆ ತಪ್ಪಿ ನಡೆದರೆ ಸಾಮಾ ಜಿಕ ಅವ್ಯವಸ್ಥೆಯೇ ಫಲ.

ದೇಹಕ್ಕೆ ಒಂದು ಸಾಮಾನ್ಯ ಶಾಖದ ಪ್ರಮಾಣ ಇದೆ. ಅದನ್ನು ಬದಲಿಸಲು ಪ್ರಯತ್ನಿಸುವುದು ವ್ಯರ್ಥ ಎಂದು ವೈದ್ಯರಿಗೆಲ್ಲ ಗೊತ್ತು. ಸಾಮಾನ್ಯ ಪ್ರಮಾಣ ಕ್ಕಿಂತ ಹೆಚ್ಚಾದರೆ ಜ್ವರ ಬರುತ್ತದೆ. ಕಡಿಮೆಯಾದರೆ ನಿತ್ರಾಣ, ನೀರಸತೆ ಬರುತ್ತದೆ. ಎರಡಕ್ಕೂ ಸಾವೇ ಕೊನೆ. ಹೃದಯವನ್ನೇ ತೆಗೆದುಕೊಳ್ಳಿ. ಅದರ ಗತಿಯನ್ನು ಅತಿ ಯಾಗಿ ಹೆಚ್ಚಿಸಿದರೆ ತಡೆದೀತೆ? ಮಿತಿಮೀರಿದರೆ ರಕ್ತದ ಒತ್ತಡ ಪ್ರಾರಂಭವಾಗು ತ್ತದೆ. ಹೀಗೆಯೇ ಮಾನವನ ಜೀವನದ ಅವಶ್ಯಕತೆಗಳಿಗೆ ಒಂದು ಇತಿಮಿತಿಯಿದೆ. ಅಷ್ಟನ್ನು ಪೂರೈಸಿದರೆ ಬಾಳು ಉತ್ತಮವಾಗಿ ನಡೆಯುತ್ತದೆ. ಆ ಇತಿಮಿತಿಯನ್ನು ಕಾಲಕಾಲಕ್ಕೆ ನಿರ್ಧರಿಸಿ ಅದನ್ನು ಪಾಲಿಸಲು ಮಾಡಬೇಕಾದ ಕಾರ್ಯಕ್ರಮವೇ ಯೋಜನೆ.

ಆದರೆ ದುರ್ದೈವದಿಂದ ಈಗ ಹಣವೇ ದೊಡ್ಡದಾಗಿ ಮಾನವೀಯ ವ್ಯಕ್ತಿತ್ವ ಚಿಕ್ಕದಾಗಿದೆ. ಸರ್ವೇ ಜನಾಃ ಕಾಂಚನಮಾಶ್ರಯಂತಿ. ಹಣವೆಂದರೆ ಹೆಣವೂ ಬಾಯಿಬಿಡುತ್ತದೆ ಎಂಬ ಗಾದೆಯನ್ನು ನಮ್ಮವರು ಹುಟ್ಟಿಸಿದ್ದಾರೆ.

ಎಷ್ಟೋ ಯೋಜನೆಗಳು ಬಂದಿವೆ. ಹೆಚ್ಚು ಹೆಚ್ಚು ವಸ್ತುಗಳನ್ನು ಉತ್ಪಾದನೆ ಮಾಡುವುದೇ ಎಲ್ಲಕ್ಕೂ ಗುರಿ. ಮಾನವನ ಸ್ವಭಾವವನ್ನು ಉತ್ತಮಗೊಳಿ ಸುವ ಯೋಜನೆಯೇ ಇಲ್ಲ. ಇಂಥ ಯೋಜನೆಗಳೆಲ್ಲ ಮೇಜಿನ ಮೇಲಿನ

ಪೂದಾನಿಯಲ್ಲಿ ಹರಿದುತಂದಿಟ್ಟ ಹೂವಿನ ಹಾಗೆ. ಒಂದೆರಡು ಗಂಟೆಯ ಹೊತ್ತು ಆ ಹೂ ಬಣ್ಣ ಬಣ್ಣವಾಗಿ ಗಮಗಮಿಸುತ್ತದೆ. ಗಿಡದಿಂದ ಹರಿದುತಂದ ಕಾರಣ ಬೇಗನೇ ಬಾಡಿ ಹೋಗುತ್ತದೆ. ಅದರ ಸೊಬಗು ಒಂದೇ ಗಳಿಗೆಯದು.

ಯೋಜಕರು ತೋಟಗಾರನ ಹಾಗಿರಬೇಕು. ತೋಟಗಾರ ಮೊದಲು ನೆಲವನ್ನು ಹದ ಮಾಡುತ್ತಾನೆ. ಆಮೇಲೆ ಬೀಜ ಬಿತ್ತಿ ನೀರು ಹಾಯಿಸುತ್ತಾನೆ. ತನ್ನ ಕೆಲಸ ಮಾಡಿ ತಾನು ದೂರ ಸರಿಯುತ್ತಾನೆ. ಆ ಗಿಡ ತನ್ನ ಸ್ವಾಭಾವಿಕ ಸಾಮರ್ಥ್ಯದಿಂದ ನೆಲದೊಳಗಿನ ಆಹಾರವನ್ನು ಹೀರಿಕೊಂಡು ಬೆಳೆದು ಹೂ ಬಿಡುತ್ತದೆ. ಎಷ್ಟೇ ಸೊಗಸಾಗಿ ಅಲಂಕಾರವಾಗಿ ಇಟ್ಟರೂ ಬಣದ ಪೂದಾನಿಯ ಹೂಗಳು ಕ್ಷಣಿಕ; ಅದರಲ್ಲಿ ಸಾವು ಅಡಗಿದೆ. ತೋಟದಲ್ಲಿನ ಹೂವಿನ ಗಿಡವಾದರೋ ಸ್ಥಿರ; ನೆಲದೊಳಗಿನ ರಸವನ್ನು ತನ್ನ ಬೇರುಗಳಿಂದ ಹೀರುತ್ತದೆ; ಅದು ಜೀವನ. ಗಿಡದಲ್ಲಿ ಒಂದೆರಡು ಹೂ ಬಾಡಿದರೂ ಉಳಿದವು ಅರಳುತ್ತವೆ.

ಇದೇ ರೀತಿ ಯಾವ ಯೋಜನೆಯಾದರೂ ಮನುಷ್ಯ ಮತ್ತು ಪ್ರಾಣಿಗಳ ಬೆಳವಣಿಗೆಗೆ ತಕ್ಕ ಪರಿಸ್ಥಿತಿಯನ್ನು ನಿರ್ಮಿಸಬೇಕು. ಯೋಜನೆಗಳ ಉದ್ದೇಶ್ಯ ಯಾವುದೋ ಒಂದು ಗುರಿ–ಗಮ್ಯ ಅಲ್ಲ. ಇಂತಿಷ್ಟು ಕೆಲಸ ಆಗಬೇಕು ಎಂದು ನಿರ್ಧರಿಸಿ ಅದಕ್ಕಾಗಿ ಯತ್ನಿಸುವುದು ಪ್ರಕೃತಿಯ ಸ್ವಭಾವವಲ್ಲ. ಅದರಿಂದ ಬಲವಂತವಾಗಿ ಕೆಲವು ಫಲ ದೊರೆತಾವು. ಆ ಫಲ ಸಹಜವಲ್ಲವಾದುದರಿಂದ ಬೇಗ ಬಾಡಿಹೋಗುತ್ತವೆ. ಆ ಮೂರು ಗಳಿಗೆಯ ಫಲಭೋಗದ ತರುವಾಯ ಸಾವೇ ಬರಬಹುದು. ಕೃತಕವಾದುದು ಯಾವುದೂ ಹೆಚ್ಚು ಕಾಲ ಬದುಕಲಾರದು.

ಮನುಷ್ಯನ ಶಕ್ತಿಗಳೆಲ್ಲ ವಿಕಸಿತವಾಗಿ ಅವನು ಪೂರ್ಣವಾಗಿ ಬೆಳೆಯಲು ಸರ್ವಾನುಕೂಲವೂ ಆಗುವಂತೆ ಪರಿಸ್ಥಿತಿ ವಾತಾವರಣಗಳನ್ನು ನಿರ್ಮಿಸುವುದೇ ಯೋಜನೆಯ ಪ್ರಥಮೋದ್ದೇಶ್ಯ. ಪ್ರತಿಯೊಬ್ಬ ಮನುಷ್ಯನಿಗೆ ಹೊಟ್ಟೆ ತುಂಬ ಪುಷ್ಟಿಕರವಾದ ಆಹಾರ ಸಿಗಬೇಕು. ಮಳೆ, ಗಾಳಿ, ಛಳಿಗಳ ಬಾಧೆಗೆ ಮೈಒಳಗೊಳ್ಳದಷ್ಟು ಹೊದಿಕೆ ಬೇಕು. ಇರಲು ವಸತಿ ಬೇಕು. ಮೈ–ಮನಗಳನ್ನು ಬಾಳಿನ ಭವ್ಯ ಕಾರ್ಯಕ್ಕೆ ಅಣಿಗೊಳಿಸುವ ಶಿಕ್ಷಣ ಬೇಕು. ಆರೋಗ್ಯಕರ ಸನ್ನಿವೇಶವಿರಬೇಕು. ಪರಸ್ಪರ ಸಹವಾಸಕ್ಕೆ, ವಸ್ತುಗಳ ಉತ್ಪಾದನೆ–ವಿನಿಮಯಕ್ಕೆ ಅನುಕೂಲಗಳು ಯೋಜನೆಗಾರರ ಉದ್ದೇಶ್ಯಗಳು ಇವು. ಇವಕ್ಕಿಂತ ಹೆಚ್ಚಿನದನ್ನೆಲ್ಲ ಆಯಾ ವ್ಯಕ್ತಿಯ ಶಕ್ತಿಸಾಮರ್ಥ್ಯಗಳಿಗೆ ಬಿಡಬೇಕು. ಆಗಲೇ ಅವರಿಗೆ ತಮ್ಮ ಸಂಕಲ್ಪ ಶಕ್ತಿಯನ್ನೂ ಮೌಲ್ಯ–ನಿರ್ಧಾರವನ್ನೂ ಉಪಯೋಗಿಸಿ ತಮ್ಮ ಬಾಳನ್ನು ಬರೀ ಬದುಕಾಗಿ ಮಾಡದೆ, ಸಂಸ್ಕಾರವಂತ ರಚನೆಯಾಗಿ ಮಾಡಿ ಮಾನವ ಜಾತಿಯ ಪ್ರಗತಿಗೆ ತಮ್ಮ ಸ್ಥಿರ–ಶಾಶ್ವತ ಕಾಣಿಕೆಯನ್ನು ಸಲ್ಲಿಸಲು ಸಾಧ್ಯವಾಗುತ್ತದೆ.

ತಾನು ಆರಿಸಿಕೊಳ್ಳುವ ಜೀವನ-ವಿಧಾನ ಇತರರ ಸುಖಸಾಧನಕ್ಕೆ, ಹಕ್ಕಿಗೆ ಅಡ್ಡಬಾರದಿದ್ದರಾಯಿತು. ಯಾವ ಯೋಜನೆಯೂ ಮನುಷ್ಯನ ಈ ಸ್ವಾತಂತ್ರ್ಯವನ್ನು, ತನ್ನ ಮನಸ್ಸೊಪ್ಪಿದ ಜೀವನ-ವಿಧಾನ ಅವಲಂಬಿಸುವ ಅಧಿಕಾರವನ್ನು ಕಿತ್ತುಕೊಳ್ಳಲಾರದು. ಯೋಜನೆಯ ಕೆಲಸ ಮನುಷ್ಯನಿಗೆ ಕನಿಷ್ಠ ಮಿತಿಯ ಜೀವನಾನುಕೂಲತೆಯನ್ನಾದರೂ ಒದಗಿಸುವುದು. ಅದನ್ನು ಮೀರಿ ಪ್ರತಿಯೊಬ್ಬನಿಗೂ ತನ್ನ ತನ್ನ ಬೆಲೆಗಳ ಪ್ರಕಾರ ಬದುಕಲು ಅವಕಾಶವಿರಬೇಕು. ಹಾಗಿಲ್ಲದೆ, ಈ ಸ್ವಾತಂತ್ರ್ಯವನ್ನು ಮೊಟಕಿಸಿ, ಮನುಷ್ಯ ತನ್ನ ಮೌಲ್ಯಗಳನ್ನು ನಿರ್ಧರಿಸಿ ಅದರಂತೆ ನಡೆಯಲು ಸಾಧ್ಯವಿಲ್ಲದಂತೆ ಮಾಡುವ ನಿಷ್ಠುರ ಯೋಜನೆ ಮನುಷ್ಯನನ್ನು ಯಂತ್ರದ ಒಂದು ಮೊಳೆ, ಕಂಬಿ ಆಗಿಸಿಬಿಡುತ್ತದೆ. ಹಾಗೆ ಹುಟ್ಟಿದಂದಿನಿಂದ ಸಾಯುವವರೆಗೆ ಬದುಕು ಪರತಂತ್ರವಾದರೆ ಅದರಲ್ಲಿ ಎಷ್ಟೇ ಕ್ಷಮತೆಯಿದ್ದರೂ ಅದು ವ್ಯರ್ಥ. ಮನುಷ್ಯನ ವ್ಯಕ್ತಿತ್ವದ ಪ್ರಕಟಣೆಗೆ ಅವಕಾಶವಿರಬೇಕೆಂಬುದೇ ಮೊಟ್ಟಮೊದಲವೇ ನಿಯಮ. ಅದೇ ಇಲ್ಲದ ಮೇಲೆ ಏನಿದ್ದೇನು?

ನಿಯಮ-ನಿಯಂತ್ರಣ ಸಾಮೂಹಿಕ ಕರ್ಮಕ್ಕೆ; ಕಾರಖಾನೆ, ಸೈನ್ಯಗಳಲ್ಲಿ ಒಟ್ಟಾಗಿ-ಗುಂಪಾಗಿ ಕೆಲಸ ಮಾಡುವ ಜನರಿಗೆ; ವ್ಯಕ್ತಿತ್ವ ವಿಕಾಸವೇ ಗುರಿಯಾದ ವೈಯಕ್ತಿಕ ಕರ್ಮಕ್ಕಲ್ಲ. ಸಾಮೂಹಿಕ ಕರ್ಮದಲ್ಲಿ ವ್ಯಕ್ತಿ ಮುಖ್ಯವಲ್ಲ; ಇಷ್ಟು ಆಳುಗಳಲ್ಲಿ ಅವನೂ ಒಂದಾಳು. ಆ ಕೆಲಸವೇ ಮುಖ್ಯ. ನಮಗೆ ವ್ಯಕ್ತಿಯ ವಿಕಾಸವೇ ಗುರಿ. ಸಂಘ-ಸಂಸ್ಥೆ ಅದಕ್ಕೆ ಸಾಧನ. ಇಲ್ಲಿ ನಿಯಮ-ನಿಯಂತ್ರಣಗಳಿಗೆ ಎಡೆಯಿಲ್ಲ.

ಉತ್ತಮ ವ್ಯವಸ್ಥೆಯುಳ್ಳ ಗೋಶಾಲೆಯಲ್ಲಿ ಹಸುಗಳಿಗೆ ಸರಿಯಾಗಿ, ಸಮವಾಗಿ ಬೆರೆಸಿದ ಹಿಂಡಿ-ತಿಂಡಿಯನ್ನು, ನೀರು-ಉಪ್ಪನ್ನು ಕಾಲಕ್ಕೆ ಸರಿಯಾಗಿ ಕೊಡುತ್ತಾರೆ. ಬೆಚ್ಚಗಿರುವ ಮನೆಯಲ್ಲಿ ಕಟ್ಟುತ್ತಾರೆ. ಬಿಸಿಲಿನಲ್ಲಿ ಸಾಕಷ್ಟು ವ್ಯಾಯಾಮ, ನಿತ್ಯ ಸ್ನಾನ, ಮೈತಿಕ್ಕುವುದು, ಕಾಲಕ್ಕೆ ಸರಿಯಾಗಿ ಹಾಲು ಹಿಂಡುವುದು ಎಲ್ಲವೂ ನಡೆಯುತ್ತವೆ. ಆದರೆ ಮೃಗಜೀವನಕ್ಕಿಂತ ಮೇಲೇರಬಯಸಿದ ಮನುಷ್ಯಪ್ರಾಣಿಗೆ ಈ ಬಗೆಯ ಜೀವನ ಉಪಯೋಗವಿಲ್ಲ. ಒಳ್ಳೆಯ ಜೈಲಿನಲ್ಲಿ ಈ ವ್ಯವಸ್ಥೆಯೆಲ್ಲಾ ಇದ್ದೀತು. ಜೈಲಿನಲ್ಲೇ ಊಟ ನಿದ್ದೆ, ವಿಶ್ರಾಂತಿ ಯಾವುದನ್ನು ಬಿಟ್ಟರೂ ತಪ್ಪೇ. ಅದರಿಂದ ಆರೋಗ್ಯ ಕೆಟ್ಟೀತು. ಸೆರೆಯಾಳಿನ ದೇಹಾರೋಗ್ಯದ ಬಗ್ಗೆ ಅಷ್ಟು ಗಮನ. ಆದರೆ ಕ್ರಿಯಾಸ್ವಾತಂತ್ರ್ಯ, ರುಚಿ ಸ್ವಾತಂತ್ರ್ಯ ಇಲ್ಲದ ಆ ಬಾಳು ಬಾಳಲ್ಲ.

ಆದುದರಿಂದ ಅಸಾಧ್ಯ ನಿರ್ಬಂಧಗಳ ಕೋಟೆ ಕಟ್ಟಿ ಬಾಳನ್ನು ಸೆರೆಮನೆಯ ವಾಸದಂತೆ ಮಾಡಬಾರದು. ಯೋಜನೆ. ತೋಟಕ್ಕೆ ಬೇಲಿಯಿರುವ ಹಾಗೆ ರಕ್ಷಣೆಯ

ಕೆಲಸ ಮಾಡಬೇಕು. ಗಾಳಿ ಹಾಗೂ ಬೆಳಕೇ ಬಾರದಂತೆ ಮಾಡಿದರೆ ಬೇಲಿಯೋ? ಈ ವರ್ಗಕ್ಕೆ ಸೇರಿದ ಜನರು ತಮ್ಮ ಬಾಳನ್ನು ಲೋಕಹಿತಕ್ಕಾಗಿ ಸಮರ್ಪಣೆ ಮಾಡುತ್ತಾರೆ. ಅವರ ಸಮರ್ಪಿತ ಜೀವನವು ಲೋಕದಲ್ಲಿ ಸ್ವತಂತ್ರ ಜೀವನ ವನ್ನು ರೂಪಿಸುವ ಯೋಜನೆಗಳಲ್ಲಿ ನಿರತವಾಗಬೇಕು.

ಉದಾತ್ತ ಜೀವನ ಕ್ಷೇತ್ರ : ಇದು ಸೇವಾ ಜೀವನದ ವರ್ಗ. ಈ ಕ್ಷೇತ್ರ ದಲ್ಲಿ ಹಕ್ಕು-ಅಧಿಕಾರ ಇಲ್ಲವೇ ಇಲ್ಲ. ಎಲ್ಲವೂ ಕರ್ತವ್ಯ-ಕರ್ಮ. ಇಲ್ಲಿ ಸಂಕಲ್ಪ ಬಲದ ಉಪಯೋಗ ಇಂದ್ರಿಯ ಮತ್ತು ಜೀವನದ ನಿಗ್ರಹಕ್ಕೆ, ಸ್ವಾರ್ಥದ ಸಂಯಮಕ್ಕೆ ; ಎಲ್ಲ ಕೃತಿ-ಕರ್ಮವನ್ನೂ ಯೋಗ್ಯ ಮಾರ್ಗದಲ್ಲಿ ಹರಿಯಿಸಲಿಕ್ಕೆ. ಇಲ್ಲಿನ ಮೌಲ್ಯಗಳು ಲೋಕ ಹಿತ ಸಾಧಕ ; ಸ್ವಾರ್ಥ, ಸಂತೋಷ ಸಾಧಕವಲ್ಲ. ಆದುದರಿಂದ ಇಲ್ಲಿ ಸ್ವಭಾವವಲ್ಲ ಗುರಿ, ತಾತ್ಕಾಲಿಕ ಫಲವಲ್ಲ; ದೂರದ ಚಿರಫಲ.

ಈ ವರ್ಗದ ವ್ಯಕ್ತಿಯು ರಚನಾಶೀಲನಾಗುವ ಮೊದಲು ಸಮಾಜದ ಗುಣ ದೋಷಗಳೊಡನೆ ತಾದಾತ್ಮ್ಯ ಹೊಂದಬೇಕು. ಬರೀ ಬುದ್ಧಿಯಿಂದ ಯಾವ ಕೆಲಸವೂ ಇಲ್ಲಿ ಸಾಧ್ಯವಿಲ್ಲ. ತನ್ನ ಬಾಳಿನಲ್ಲಿ ಪ್ರತಿಯೊಂದನ್ನೂ ಪ್ರಯೋಗ ಮಾಡಿ, ಅದು ಫಲಸಿದ್ಧಿಯಾದರೆ ಆಮೇಲೆ ಲೋಕದ ಮುಂದೆ ಆ ಮಾತನ್ನು ಆಡಬೇಕು. ಆಹಾರಶಾಸ್ತ್ರ ಪಂಡಿತ ಮೊದಲು ಇಲಿ, ಕೋತಿ, ಹಂದಿಗಳನ್ನು ಹಿಡಿದು ಪ್ರಯೋಗ ನಡೆಸುತ್ತಾನೆ. ಬೇರೆ ಬೇರೆ ಆಹಾರ, ಅದರ ಪರಿಣಾಮ ಎಲ್ಲವೂ ಗೊತ್ತಾದ ಮೇಲೆ ಮನುಷ್ಯರಿಗೆ ಇಲ್ಲಿ ಯಾವ ಆಹಾರ ಸರಿ ಎಂದು ಸಿದ್ಧಾಂತ ಮಾಡುತ್ತಾರೆ. ಹಾಗೆಯೇ ಎಲ್ಲಾ ಸಮಾಜ ಸುಧಾರಣೆಗಳಲ್ಲೂ ಮಾನವ ಜೀವನದಲ್ಲಿ ಹೊಸ ಹೊಸ ವಿಚಾರಗಳ ಪ್ರಯೋಗ ನಡೆಯಬೇಕು. ಆದುದರಿಂದ ಈ ವರ್ಗದ ಜನ ಪ್ರಯೋಗಮಾಡುವ ಪಂಡಿತರೂ ಆಗಬೇಕು. ಪ್ರಯೋಗಕ್ಕೆ ಗುರಿಯಾಗುವ ಪ್ರಾಣಿಗಳೂ ಆಗಬೇಕು. ತಮ್ಮ ಬಾಳಿನಲ್ಲಿಯೆ ಪ್ರಯೋಗ ಮಾಡಬೇಕು.

ಕಟ್ಟಕಡೆಯ ಈ ವರ್ಗದವರು ಜನತೆಗಾಗಿ ಯೋಜನೆ ಮಾಡಬೇಕು. ಆ ಯೋಜನೆಗೆ ಪ್ರಯೋಗಿಸಿದ್ದ ತತ್ವಗಳೆ ಆಧಾರವಾಗಬೇಕು. ಮನಸ್ಸಿದ್ದಲ್ಲಿ ಮಾದೇವ. ಇತರರ ದುಃಖವನ್ನು ನಾವು ಅರಿತರೆ, ನಮಗೆ ರಚನಾ ಸಾಮರ್ಥ್ಯ ವಿದ್ದರೆ, ಆ ದುಃಖ ನಿವಾರಣೆಗೆ ಮಾರ್ಗ ಸ್ಫುರಿಸಿಯೆ ತೀರುತ್ತದೆ. ಈ ವರ್ಗದ ವ್ಯಕ್ತಿಯು ಪರರಿಗಾಗಿ ತಪಿಸಿಯಾನು, ದುಃಖವನ್ನನುಭವಿಸಿಯಾನು. ತನ್ನದಕ್ಕಿಂತ ಪರರ ಭಾವನೆಗಳಿಗೇ ಗಮನ ಕೊಟ್ಟಾನು. ಅವರ ಇಂಗಿತವರಿ ತಾನು. ಅಳುವವರೊಡನೆ ಅತ್ತಾನು, ನಲಿವವರೊಡನೆ ನಲಿದಾನು. ಅವನ ಮೌಲ್ಯಗಳು ಪರಹಿತಕಾರಿ ಮೌಲ್ಯಗಳು. ತನ್ನ ಹಕ್ಕು-ಅಧಿಕಾರಗಳ ಪರಿವೆಯೆ ಅವನಿಗಿಲ್ಲ. ಅನಾಥರನ್ನು ಕಾಯುವುದರಲ್ಲಿ, ಗೆಳೆಯರಿಲ್ಲದವರಿಗೆ ಗೆಳೆಯನಾಗುವು

ದರಲ್ಲಿ ತನ್ನ ಪಿತೃತ್ವವನ್ನು ಉದಾತ್ತಗೊಳಿಸಿ ವಸುಧೈವ ಕುಟುಂಬಕನಾದಾನು.

ವಿಜ್ಞಾನಿಗಳೆಷ್ಟೋ ಮಂದಿ ಪ್ರಯೋಗಗಳಲ್ಲಿ ತಾವೇ ಆಹುತಿಯಾಗಿದ್ದಾರೆ. ಆ ಹುತಾತ್ಮರ ಬಲಿದಾನವೇ ಮಾನವ ಪ್ರಗತಿ ಪಥದ ಕೈಗಂಬ. ಗಾಂಧೀಜೀ ಸರ್ವವಸ್ತ್ರ ಪರಿತ್ಯಾಗ ಮಾಡಿ ಕೇವಲ ಕೌಪೀನಧಾರಿಯಾದುದಕ್ಕೆ ಕಾರಣ ನಮ್ಮ ದೇಶದ ನಿರ್ಗತಿಕ ಅರ್ಧನಗ್ನ ಜನಕೋಟಿಯೊಡನೆ ಆತ್ಮಗವ್ಯಾವನ್ನು ಸಾಧಿಸುವ ಉದ್ದೇಶ್ಯದಿಂದ.

ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಂದ ತುಂಬಿದ ನಮ್ಮೀ ದೇಶದಲ್ಲಿ ಜನತೆಯ ದುಃಖ-ದಾರಿದ್ರ್ಯ-ದೈನ್ಯಗಳನ್ನು ತಮ್ಮ ಸ್ವಂತ ಜೀವನದಲ್ಲಿ ಅನುಭವಿಸುವ ವ್ರತ ತೊಟ್ಟ ಜನರು ಬೇಕು. ಪರದುಃಖಕ್ಕೆ ದುಃಖಿತರಾಗಿ ಅದಕ್ಕೆ ಅವರು ಪರಿಹಾರವನ್ನರಸಬಲ್ಲರು. ಈ ಉದ್ದೇಶ್ಯದಿಂದಲೇ ಆಶ್ರಮ, ಶಾಂತಿನಿಕೇತನ ಚರಖಾಸಂಘ, ಗ್ರಾಮೋದ್ಯೋಗ ಸಂಘಗಳಂಥ ಪ್ರಯೋಗ ಶಾಲೆಗಳು ಏರ್ಪಾಡಾದುದು. ದೇಶದ ತೋಟಗಳಿಗೆಲ್ಲ ಸಸಿಗಳನ್ನು ಸಿದ್ಧಮಾಡಿ ಕೊಡುವ ಕೈತೋಟವಿದ್ದಂತೆ ಅವು. ಈ ಪ್ರಯೋಗಶಾಲೆಯಲ್ಲಿ ದೊರೆತ ಫಲವನ್ನು ಲೋಕಕ್ಕೆ ಅರ್ಪಿಸುವುದು ಅದರ ಲಕ್ಷ್ಯ.

ಹಿಂಸೆ-ವೈರಗಳಿಂದ ಕುದಿಯುತ್ತಿರುವ ಈ ಲೋಕದ ಸಂಕಟ-ಪೀಡೆಗಳಿಗೆ ಪರಿಹಾರ ಸಿಗಬೇಕಾದರೆ ಈ ಉದಾತ್ತ ಜೀವನ ಕ್ಷೇತ್ರದಲ್ಲೇ. ಜನತೆಯ ಬಾಳಿಗೆ ಯೋಜನೆ ಬೇಕು ; ಸ್ವೈರ, ಸ್ವಾರ್ಥದ, ವೈಯಕ್ತಿಕ ದೃಷ್ಟಿಯಿಂದಲ್ಲ, ನಿಸ್ವಾರ್ಥ, ಚಿರಸ್ಥಾಯಿ, ಅನಾಸಕ್ತ ದೃಷ್ಟಿಯದು. ಆ ರೀತಿ ಯೋಜನೆ ಮಾಡಿದರೆ ಎಂಥ ಸ್ಥಾನದಲ್ಲಿಯೇ ಇರಲಿ, ಪ್ರತಿಯೊಬ್ಬ ಮನುಷ್ಯನಿಗೂ ಸರ್ವಹಿತಕ್ಕಾಗಿ, ಲೋಕಾಭ್ಯುದಯಕ್ಕಾಗಿ ತನ್ನ ಕೈಲಾದುದನ್ನು ಮಾಡುವ ಅವಕಾಶ ದೊರೆಯುತ್ತದೆ. ಆಗ ಬಾಳು ಕಾಲ-ದೇಶ-ಪರಿಸ್ಥಿತಿಗಳ ಲಕ್ಷ್ಯವಿಲ್ಲದ ಬರೀ ಅಂಧಾನುಕರಣವೂ ಆಗದು. ಹಾಗೆ ಯೋಜನೆ ಮಾಡಿದ ಬಾಳು ವ್ಯಕ್ತಿ-ಸಂಘಗಳ ಅವಶ್ಯಕತೆಗಳನ್ನು ಪೂರಯಿಸೀತು, ಸಮಸ್ತ ಲೋಕದ ಸುಖಕ್ಕೂ ದಾರಿ ಮಾಡೀತು ; ವ್ಯಕ್ತಿವಿಕಾಸಕ್ಕೆ, ಆತ್ಮಾಭ್ಯುದಯಕ್ಕೆ ವಿಶಾಲ ಕ್ಷೇತ್ರವನ್ನು ಕಲ್ಪಿಸಿ, ನೆರೆಹೊರೆಯವರ ಯೋಗಕ್ಷೇಮಕ್ಕೆ ಮನುಷ್ಯ ಕಂಟಕವಾಗದಂತೆ ಮಾಡೀತು.

೧೧. ಜೀವನದ ಮಟ್ಟಗಳು

ಜನತೆಯ ನಿತ್ಯ-ಜೀವನವು ಅವರ ವ್ಯಕ್ತಿತ್ವವನ್ನು ಹೊರಗೆಡಲು ಸಹಾಯಕವಾಗುವಂತೆ ರೂಪಿತವಾಗಬೇಕು, ನಿಯಮಿತವಾಗಬೇಕು. ಇದು ಅನುಲ್ಲಂಘನೀಯ. ನಾವು ಏನು ತಿನ್ನುತ್ತೇವೆ, ಏನು ಉಡುತ್ತೇವೆ, ಹೇಗೆ ಬಾಳುತ್ತೇವೆ ಎಂಬುದು ನಮ್ಮ ಬಾಳಿಗಷ್ಟೇ ಸಂಬಂಧಿಸಿಲ್ಲ; ಮಾನವ ಜಾತಿಯ ಭವಿಷ್ಯಕ್ಕೂ ಸಂಬಂಧಿಸಿದೆ. ಮನುಷ್ಯ ತಾನು ಉಪಯೋಗಿಸುವ ಅಳತೆ-ಮೌಲ್ಯಗಳ ಮೂಲಕ ತನ್ನ ವಿವೇಕ ವಿಚಾರಗಳನ್ನು ತಿಳಿಸುವಂತೆ, ಅವನ ಬಾಳಿನ ರೀತಿ ಅವನ ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಆದುದರಿಂದ ಸರ್ವಸಾಮಾನ್ಯವಾದ ಕೆಲವು ಆದರ್ಶಗಳು ಬೇಕು. ಈ ಆದರ್ಶಗಳನ್ನು ಏರ್ಪಡಿಸುವಾಗ ಮನುಷ್ಯನಿಗೆ ತನ್ನ ಗೆಲ ಶಕ್ತಿಗಳನ್ನೂ ವಿಕಾಸದಿಡಿಸಿಕೊಳ್ಳಲು, ತನ್ಮೂಲಕ ವ್ಯಕ್ತಿತ್ವವನ್ನು ಸ್ಫುಟಗೊಳಿಸಲು ಸಂಪೂರ್ಣ ಅವಕಾಶ ಇರುವಂತೆ ವಾಸ್ತವ ದೃಷ್ಟಿಯಿಂದ ಏರ್ಪಡಿಬೇಕು. ಈ ಆದರ್ಶ ಕೇವಲ ದೈಹಿಕ ಅವಶ್ಯಕತೆಗಳನ್ನು ಗುಣಸಂಪನ್ನವಾಗಿ ಸಾಧಿಸಿದರೆ ಸಾಲದು; ಬರೀ ಇರುವಿಕೆಯಿಂದ ಬದುಕನ್ನು ಮೇಲೆತ್ತಿ ಬಾಳನ್ನು ಮಾಡುವ ಅಸಂಖ್ಯ ಅಂಶಗಳನ್ನೂ ಸಾಧಿಸಬೇಕು. ಮನುಷ್ಯನಿಗೆ ತನ್ನ ಜೀವನವನ್ನು ಯೋಗ್ಯ ರೀತಿಯಲ್ಲಿ ನಡೆಸಲು ಅಗತ್ಯವಾದ ಅನ್ನ, ಅವಶ್ಯಕವಾದ ಔಷಧೋಪಚಾರ, ಮೈಮುಚ್ಚಿಕೊಳ್ಳಲು ಮಾತ್ರವಲ್ಲದೆ ಕಲೆ-ಚೆಲುವುಗಳನ್ನು ತೋರಿಸುವಂಥ ಬಟ್ಟೆ ಬರೆ, ಒಳಗಿನ ಶಕ್ತಿ-ಸಾಮರ್ಥ್ಯಗಳನ್ನು ಹೊರಗೆಳೆದು ಬಾಳನ್ನು ಬೆಳಗಿಸುವ ಶಿಕ್ಷಣ, ಮನುಷ್ಯರ ರಚನಾಕೌಶಲವನ್ನು ಹೊರಹೊಮ್ಮಿಸುವ ಸ್ವಭಾವಾನುಗುಣವಾದ ಕೆಲಸ, ವ್ಯಕ್ತಿ-ಸಮಾಜ ಎರಡೂ ದಾರಿಯಲ್ಲಿ ಪ್ರಗತಿಯನ್ನು ಸಾಧಿಸುವ ಉಳಿದೆಲ್ಲ ಪರಿಕರಗಳು ಇವೆಲ್ಲವನ್ನೂ ಒದಗಿಸಬೇಕು ಈ ಆದರ್ಶ.

ಈ ಎಲ್ಲ ಅಂಶಗಳನ್ನೂ ತೃಪ್ತಿಕರವಾಗಿ ನಿರ್ವಹಿಸುವ ಆದರ್ಶ ಅಥವಾ ಮಟ್ಟ ವ್ಯಕ್ತಿಗೂ ಸಮಾಜಕ್ಕೂ ಉಭಯಸಮ್ಮತವಾಗಿರಬೇಕಾದುದು ಸಹಜ, ಕೇವಲ ಒಂದೇ ಕಡೆಯ ಹಿತವನ್ನು ಮಾತ್ರ ಗಮನಿಸಲಾಗುವುದಿಲ್ಲ. ಯಾವ ಅಂಕೆಯೂ ಇಲ್ಲದೆ ವ್ಯಕ್ತಿ ತನ್ನ ಇಷ್ಟ ಬಂದಂತೆ ಹೋಗಲಿ ಎಂದು ಬಿಟ್ಟರೆ ಆ ವ್ಯಕ್ತಿ ಅನುಕರಣಶೀಲ ಅಥವಾ ಅನುಸರಣಶೀಲ ವರ್ಗದವನಾದರೆ, ಅವನ ಬಾಳಿನ ರೀತಿ ಸಮಾಜಕ್ಕೆ ಕಿಂಚಿತ್ತೂ ಲಾಭಕರವಾಗಲಾರದು; ಘಾತಕವೇ ಆಗಬಹುದು. ರಚನಾಶೀಲನಾದರೆ ಅವನ ರಚನೆಗಳು ಇತರರ ರಚನೆಗಳಿಗೆ ವಿರುದ್ಧ

ವಾಗಿ, ಘರ್ಷಣೆ ನಡೆದು ಪ್ರಗತಿಗೆ ಅಡ್ಡವಾಗಬಹುದು. ಉತ್ಪಾದಕನನ್ನು ಅವನ ಪಾಡಿಗೇ ಬಿಟ್ಟರೆ ಅವನು ತನ್ನ ವಸ್ತುಗಳನ್ನು ಪ್ರಚಾರದ ಮೂಲಕ, ಸಮಾಜ ದಲ್ಲಿ ಸಂಪ್ರದಾಯ–ರೂಢಿಗಳನ್ನು ತಂದೊಡ್ಡುವ ಮೂಲಕ ಹೇಗೆ ಹೆಚ್ಚು ಹೆಚ್ಚಾಗಿ ಮಾರಬಹುದೋ ಅದನ್ನೇ ಯೋಚಿಸುತ್ತಾನೆ. ಹಾಗಲ್ಲದೆ ಸಮಾಜಕ್ಕೇ ಸರ್ವಾಧಿಕಾರವನ್ನು ಕೊಟ್ಟರೆ ಅವರ ಪದಹತಿಗೆ ವ್ಯಕ್ತಿ ಜರ್ಝರಿತನಾಗಿ ಕೇವಲ ಯಂತ್ರವತ್ ಆದಾನು. ಸಾಮಾನ್ಯ ಜನರಿಗೆ ಈಗ ಬಂಡವಾಳಷಾಹಿ, ಫ್ಯಾಸಿಸಂ, ನಾಜಿಸಂ, ಸರಕಾರಿ-ಸಮತಾವಾದಗಳಲ್ಲಿ ಒದಗಿರುವ ಅಧೋಗತಿ ಇದೇ ಅಲ್ಲವೆ? ಈಗ ಉತ್ಪಾದಕನು ಹಾಡಿದ ರಾಗಕ್ಕೇ ಜಗತ್ತು ತಾಳಹಾಕಬೇಕು. ಈ ಉತ್ಪಾದಕ ರಿಗಾದರೊ ಒಂದು ಯೋಜನೆ, ನಿಯಮ ಇದೆಯೆ? ಏನೂ ಇಲ್ಲ. ಅದರಿಂದ ಬರೀ ದೊಂಬಿ, ಅವ್ಯವಸ್ಥೆ. ಪ್ರತಿಯೊಬ್ಬ ಉತ್ಪಾದಕನೂ ತನಗೆ ತೋಚಿದಂತೆ ನಡೆಯುತ್ತಾನೆ. ಆದರಿಂದ ಗೊಂದಲವಾಗಿ ಬಾಳಿನ ಬಗೆಯೆ ಕಕ್ಕಾಬಿಕ್ಕಿಯಾಗಿದೆ.

ಜೀವನ ಮಟ್ಟ ಎನ್ನುತ್ತಾರೆ. ಹಾಗೆಂದಾಗ ಅದರ ಅರ್ಥವೇನೋ ತಿಳಿ ಯುವುದು ಕಷ್ಟವಾಗಿದೆ. ಬಹಳ ಅಸ್ಪಷ್ಟ, ಅನಿರ್ದಿಷ್ಟ ಶಬ್ದ ಅದು. ತಾವು ಏನು ಹೇಳುತ್ತಾರೋ ಅದನ್ನು ಖಚಿತವಾಗಿ ತಿಳಿಸದೆ ಈ ಶಬ್ದವನ್ನು ಧಾರಾಳ ವಾಗಿ ಬಳಸಬಹುದು. ಇದಕ್ಕೆ ಪ್ರತಿಯೊಬ್ಬನಿಗೂ ಬೇರೆ ಬೇರೆ ಅರ್ಥವಿದೆ. ಒಂದು ರೇಡಿಯೋ, ಒಂದು ಮೋಟರು ಇದ್ದರೆ ಅದು ಕನಿಷ್ಠ ಮಿತಿಯ ಜೀವನ ಮಟ್ಟ ಒಬ್ಬನಿಗೆ. ಎರಡು ಹೊತ್ತು ಹೊಟ್ಟೆತುಂಬಾ ಊಟವೇ ಇನ್ನೊಬ್ಬನಿಗೆ ಮಹದೈಶ್ವರ್ಯ. ಆದುದರಿಂದ ನಮ್ಮ ದೇಶದ ಪರಿಸ್ಥಿತಿಯನ್ನು ಗಮನಿಸಿ ಒಂದು ವಾಸ್ತವಿಕ ಮಟ್ಟವನ್ನು ಏರ್ಪಡಿಸಬೇಕು. ಈ ಮಟ್ಟ ಅಥವಾ ಆದರ್ಶ ಬರೀ ಆರ್ಥಿಕ ದೃಷ್ಟಿಯಿಂದ ರೂಪಿತವಾಗಬೇಕೆ? ಸಾಂಸ್ಕೃತಿಕ,ಸಾಮಾಜಿಕ ಸಂದರ್ಭಗಳೂ ಅದನ್ನು ರೂಪಿಸಬೇಡವೆ? ಮೇಲ್ಮಟ್ಟ, ಕೆಳಮಟ್ಟ ಎಂದರೇನು? ಇಹಭೋಗದ ಸಕಲಾನುಕೂಲವೂ ಇದ್ದರೆ ಮೇಲ್ಮಟ್ಟ ದೇಹಯಾತ್ರೆಗೆ ಎಷ್ಟು ಅಗತ್ಯವೋ ಅಷ್ಟು ಸೌಕರ್ಯವಾದರೆ ಕೆಳಮಟ್ಟ. ಹೀಗೆಯೇ?

ಹಿಂದಿನ ಅಧ್ಯಾಯಗಳಲ್ಲಿ ಬಾಳನ್ನು ಎಷ್ಟು ಬಗೆಯಲ್ಲಿ ಕಾಣಬಹುದೋ, ಬಾಳಿನಲ್ಲಿ ಎಷ್ಟು ಬಗೆಯ ಮೌಲ್ಯಗಳಿವೇಯೋ ನೋಡಿದ್ದೇವೆ. ಅದೆಲ್ಲದರ ಫಲವಾಗಿ, ಬಾಳನ್ನು ಬರಿ ಹಣದ ಗಳಿಕೆಯಿಂದ ಅಳೆಯಬಾರದು ; ತಾತ್ಕಾಲಿಕ, ಕ್ಷಣಿಕ ಪ್ರಯೋಜನದಿಂದಲೂ ಕೂಡದು. ಬಾಳನ್ನು ವಿಶಾಲ, ವ್ಯಾಪಕ ಆಗಿಸುವ ವಿವಿಧ ಅಂಶಗಳನ್ನು ಒಳಗೊಂಡು ಶಾಶ್ವತತೆ, ಅಹಿಂಸೆಗಳನ್ನು ಸ್ಥಾಪಿಸುವ ಸಮ್ಯ ತೂಕದ ಆರ್ಥಿಕ ವಿಧಾನವೇ ನಮ್ಮ ಗುರಿ ಎಂಬ ಸಿದ್ಧಾಂತಕ್ಕೆ ಬಂದಿದ್ದೇವೆ.

ಅಂಥ ವಿಧಾನದಲ್ಲಿ ಹಣ ತೀರಾ ಕಟ್ಟಕಡೆಯ ಅಂಶ ; ಅತ್ಯಂತ ಅಪ್ರಧಾನ ಅಂಶ.

ಆಡಂಬರದ ಆ ಜೀವನ ಮಟ್ಟ ತನ್ನ ಆರಾಧಕನನ್ನು ವ್ಯರ್ಥ ಶ್ರಮಕ್ಕೆ ಗುರಿಮಾಡುತ್ತದೆ. ಶ್ರೀಮಂತ ಮನುಷ್ಯನ ಹೆಂಡತಿ ಬೆಳಗಿನಿಂದ ಬೈಗಿನವರೆಗೆ ಏನಾದರೊಂದು ಮಾಡುತ್ತಲೇ ಇರಬೇಕಾಗುತ್ತದೆ. ನೆಲಕ್ಕೆ ಹಾಸಿದ ಕಂಬಳಿ ಕೊಡಹು, ಕಿಟಕಿಯ ಧೂಳು ಒರಸು, ಪರದೆಗಳನ್ನು ಒಗೆ, ತಟ್ಟೆ-ಚಾಕು-ಚೂರಿ ಗಳನ್ನು ತೊಳೆ, ಮಗ್ಗಲುಹಾಸಿಗೆ, ದಿಂಬಿನ ಚೀಲಗಳನ್ನು ಬೆಳ್ಳಗೆ ಮಾಡು ; ಇದರ ಜೊತೆಗೆ ದಿನಗಟ್ಟಲೆ ತರಕಾರಿ ಹೆಚ್ಚು, ಅಡಿಗೆ ಮಾಡು, ಪೇಟೆಗೆ ಹೋಗಿ ಸಾಮಾನು ತಾ – ಎಷ್ಟುಮಾಡಿದರೂ ಸಾಲದು. ಒಂದು ಚಾಕು-ಚೂರಿ ತೊಳೆ ಯುವುದೇ ಕೈತೊಳೆಯುವುದಕ್ಕಿಂತ ಹೆಚ್ಚು ಶ್ರಮ, ಹೆಚ್ಚು ಹೊತ್ತು. ಇಂಥ ಆಡಂಬರದ ಬದುಕು ಇದ್ದಲ್ಲಿ ಹೆಂಗಸರು ತಮಗ ಮಕ್ಕಳು ಬೇಡ ಎನ್ನುವುದು ಅಚ್ಚರಿಯೆ? 'ಮಕ್ಕಳಿಗೂ ನಾಯಿಗಳಿಗೂ ಸ್ಥಳವಿಲ್ಲ' ಎಂಬ ಎಚ್ಚರಿಕೆ ಪಾಶ್ಚಿಮಾತ್ಯ ದೇಶಗಳಲ್ಲಿ ಸರ್ವತ್ರ ಕಾಣಬರುತ್ತದೆ. ಬಿಡುವು ಇಲ್ಲದ ಈ ದಿನಚರಿಗೆ ತಾಯ್ತನ ಒಂದು ಹೊರೆ. ಈ ಆಡಂಬರದ ವ್ಯರ್ಥ ಕರ್ಮದ ಜೀವನವೇ ಅವರ ಜೀವನಮೌಲ್ಯಗಳ ಕುರುಹು. ಉತ್ಪಾದಕರು ಪ್ರಚಾರ, ಜಾಹೀರಾತು, ಹೊಸ ಸಂಪ್ರದಾಯಗಳ ಏರ್ಪಾಟು ಇತ್ಯಾದಿ ರೀತಿಗಳಿಂದ ಈ ಬಗೆಯ ಆಡಂಬರದ ಜೀವನವನ್ನು ಅವಲಂಬಿಸುವಂತೆ ಗೃಹಿಣಿಯರನ್ನು ಮರುಳುಗೊಳಿಸು ತ್ತಾರೆ. ಇದೊಂದು ದೊಡ್ಡ ಬಲೆ. ಈ ಬಲೆಗೆ ಬಿದ್ದರೆ ಅದು ಬೇಕು, ಇದು ಬೇಕು ಎಂಬ ದಾಹಕ್ಕೆ ದಾಸರಾಗುವುದು ಖಂಡಿತ. ಅದರಿಂದ ಬರುವ ಫಲ ಏನೂ ಇಲ್ಲ ; ಕೆಲಸಕ್ಕೆ ಬಾರದ ಚಿಲ್ಲರೆ ವಿಷಯಗಳಿಂದ ಬದುಕನ್ನು ತುಂಬುವುದೊಂದೇ.

ಹೊಸ ಹೊಸ ವಸ್ತುಗಳನ್ನು ಮಾರುವ ಜಾಣರು ಯಂತ್ರಗಳನ್ನು ಬಳಸಿದರೆ ಹೆಂಗಸರಿಗೆ ಬಿಡುವು ಸಿಗುತ್ತದೆ ಎಂಬ ಉಪದೇಶಮಾಡುತ್ತಾರೆ. ಆದರೆ ನಾವು ಮಾಡುವ ಕೆಲಸಕ್ಕೆ ಒಂದು ಯಂತ್ರವನ್ನು ಒಂದು ಕಡೆ ಬಳಸಿ ದೆವೋ, ಅದರಿಂದ ಉಳಿತಾಯವಾದ ಹಣಕ್ಕೂ ಸಂಚಕಾರವಾಗಿ ಇನ್ನೊಂದು ಯಂತ್ರ ಹಿಂದೆಯೇ ಬರುತ್ತದೆ. ಕಡೆಗೆ ಸಾಕಪ್ಪಾ ಸಾಕು ಎನಿಸಿಬಿಡುತ್ತದೆ.

ಈ ಆಡಂಬರದ ಬದಕಿನಲ್ಲಿ ವ್ಯಕ್ತಿಯ ಕಲೆ, ಕೌಶಲ ಯಾವುದಕ್ಕೂ ಅವಕಾಶವಿಲ್ಲ. ವಿಚಾರ ಮನನಗಳಿಗಂತೂ ಎಡೆಯೇ ಇಲ್ಲ. ಪ್ರತಿಯೊಂದನ್ನೂ ತಾನೇ ಮಾಡಿಕೊಳ್ಳಬೇಕು, ಒಂದು ಪುಸ್ತಕ, ಪತ್ರಿಕೆ ನೋಡಲಿಕ್ಕೂ ಬಿಡುವಿಲ್ಲ. ಬೆಳಗಿನಿಂದ ಸಂಜೆಯವರೆಗೆ ಏನೋ ಕೆಲಸ. ಇದು ನಿಜವಾದ ಜೀವನವನ್ನು ನೀಡುವ ಕೆಲಸವಲ್ಲ ; ಶುದ್ಧ ಶೂನ್ಯ ಕೆಲಸ. ಇದು ಬದುಕೆ? ಅಲ್ಲ, ಬರೀ ಇರುವಿಕೆ.

ಅದೇ 'ಸರಳ' ಜೀನವಾದರೋ'ಉನ್ನತ'ವಾಗಿ, ಮನುಷ್ಯ ಜೀವನದ ಉತ್ತಮಾಂಶಗಳ ವಿಕಾಸಕ್ಕೆ ದಾರಿ ಮಾಡುತ್ತದೆ. ಆಡಂಬರದ ರೀತಿ ವ್ಯಕ್ತಿತ್ವ ವನ್ನೆ ಕೊಲ್ಲುತ್ತದೆ.

ಆಧುನಿಕ ಕಾಲದಲ್ಲಿ ಸ್ಪರ್ಧೆಯಿಂದ ಆಡಂಬರದ ಸಂಪ್ರದಾಯಗಳನ್ನು ಹೆಚ್ಚಿಸುವುದೇ ಕೆಲಸವಾಗಿದೆ. ಅದರಿಂದ ಮಾನವೀಯತೆಯ ಮಟ್ಟ ಇಳಿಯುತ್ತ ಲಿದೆ. ತಪ್ಪು ತಿಳಿವಳಿಕೆಯಿಂದ, ಅಸತ್ಯ ವಿಚಾರಗಳ ಪ್ರಚಾರದಿಂದ ಗೃಹಜೀವನವೇ ಇಲ್ಲದಾಗುತ್ತಿದೆ. ಅವರಿಗೆ ಮಕ್ಕಳ ತಾಪತ್ರಯ ಬೇಡ. ಅವರ 'ಉನ್ನತ' ಮಟ್ಟದ ಜೀವನದಲ್ಲಿ ಮಕ್ಕಳಿಗೆ ಅವಕಾಶವೂ ಇಲ್ಲ. ಗಿರಣಿಗಾರರು ತಮಗೆ 'ಆಳು'ಗಳು ಬೇಕೆಂದು ಏರ್ಪಡಿಸಿದ ಈ ಉನ್ನತ ಮಟ್ಟದ ಮಾಯೆಗೆ ಮರುಳಾಗಿ ಗುಲಾಮರಾದವರು ಇವರು. ಹಳ್ಳಿಗಳಲ್ಲಿ ಕೆಲಸ ಬಿದ್ದಾಗ ಮನೆಯಾಕೆಗೆ, ಯಜಮಾನನಿಗೆ ನೆರವಾಗುತ್ತಿದ್ದ ಬಿಡಿಕೆಲಸಗಾರರು ಈ ಗಿರಣಿಗಾರರ ದೆಸೆಯಿಂದ ನಿರುದ್ಯೋಗಿಗಳಾದರು. ಈಗ ಗಿರಣಿಗಳ ಬಾಗಿಲಿಗೇ ಬಂದು ಅಲ್ಲಿ 'ಉನ್ನತ' ಜೀವನದ ಗುಲಾಮರಾದರು.

ಈ 'ಉನ್ನತ' ಮಟ್ಟವನ್ನು ಹೊಗಳುವವರು ಲೋಕೋಪಕಾರಕ್ಕಾಗಿ ಹೊಗಳುತ್ತಿಲ್ಲ. ತಮ್ಮ ವಸ್ತುಗಳನ್ನು ಮಾರಲು ಹೊಗಳುತ್ತಾರೆ. ಕಾರ್ಖಾನೆ ದಾರರು ಕೆಲಸಗಾರರನ್ನು ಬರೀ ಆಳುಗಳನ್ನಾಗಿ ಮಾಡಿ ಇಂಥ ಮಟ್ಟವನ್ನು ಕಲ್ಪಿಸಿ ಅವರ ಸ್ವೇಚ್ಛಾ-ಸ್ವಾತಂತ್ರ್ಯವನ್ನೇ ಅಪಹರಿಸುತ್ತಾರೆ, ಜೀವನದ ಮಟ್ಟ ಹೆಚ್ಚಿ ದಂತೆ ಕೆಲಸಗಾರರ ಚೌಕಾಸಿಯ ಬಲ ಕಡಮೆಯಾಗುತ್ತದೆ.

ತನ್ನ ಕೆಲಸಗಾರರು ಆಗಾಗ ತಪ್ಪಿಸದಂತೆ, ನಿಯತವಾಗಿ ದುಡಿಯುವಂತೆ ಮಾಡಲು ಕಾರ್ಖಾನೆದಾರ ತನ್ನ ಕಿಲಸಗಾರರಿಗೆ 'ಉನ್ನತ' ಮಟ್ಟದ ಆಡಂಬರವನ್ನು ಕಲಿಸುತ್ತಾನೆ. ಅದರಿಂದ ಅವನ ಉತ್ಪತ್ತಿ ಏರಿಳಿಯದೆ ಒಂದೇ ಸಮವಾಗಿರು ತ್ತದೆ. ಇದಕ್ಕಾಗಿ ಕೆಲಸಗಾರರಿಗೆ ಹೆಚ್ಚು ವೇತನ ಕೊಡುತ್ತಾನೆ. ಅವರಿಗಾಗಿ ಕ್ಲಬ್ಬು, ಆಟಪಾಟ, ಸಿನಿಮಾ, ಒಳ್ಳೆಯ ಮನೆಗಳು, ಪಾರ್ಕು ಮುಂತಾದವನ್ನೆಲ್ಲ ಮಾಡುತ್ತಾನೆ. ಈ ಅನುಕೂಲಗಳಿಗೆಲ್ಲ ಕೆಲಸಗಾರರ ಮನಸ್ಸು ಒಗ್ಗಿಹೋಗು ತ್ತದೆ, ಆಡಂಬರದ ಬಾಳಿಗೆ ಮನಸೋತು ಕಾರ್ಖಾನೆದಾರ ದಾರಿತಪ್ಪಿದರೂ ಅವನನ್ನು ವಿರೋಧಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ ಕೆಲಸಗಾರರು. ಈ ಮಟ್ಟದಲ್ಲಿ ಬದುಕಿದ ಕೆಲಸಗಾರ ಒಂದು ಬಿಡಿ ಕಾಸನ್ನೂ ಕೂಡಿಡಲಾರ. ಸದಾ ಸುಖ-ಸಂತೋಷಗಳಿಗಾಗಿ ಹಣ ವೆಚ್ಚ ಮಾಡುವ ರೂಢಿ ಕಲಿತು, ಅದೇ ಚಟ ವಾಗಿ ಬಿಡುತ್ತದೆ. ಆಮೇಲೆ ಆ ಅನುಕೂಲಗಳಿಲ್ಲದ ಬದುಕೇ ದುಸ್ಸಹ್ಯವಾಗು ತ್ತದೆ. ಇಂಥ ಸ್ಥಿತಿಯಲ್ಲಿ ತನ್ನ ಕೆಲಸವನ್ನು ಕಳೆದುಕೊಳ್ಳುವ ಧೈರ್ಯ ಅವನಿಗೆ ಇರುವುದಿಲ್ಲ. ಸ್ವಾತಂತ್ರ್ಯವನ್ನು ನೀಗಿ ಕಾರ್ಖಾನೆಗೆ ಅಂಟಿಕೊಂಡು ಬಿಡುತ್ತಾನೆ.

ಆ ಜೀವನದ ಮಟ್ಟ ಅವನ ಪಾಲಿಗೆ ಮಣಿಗುದಾರವಿದ್ದಂತೆ. ಅತ್ತ ಇತ್ತ ಕೊಸರಾಡದಂತೆ ಅದು ಬಿಗಿಹಿಡಿದು ಅವನನ್ನು ಕಾರ್ಖಾನೆಯ ಗುಲಾಮನನ್ನಾಗಿ ಸುತ್ತದೆ.

ಸರಕಾರದಲ್ಲಿ ಕೊಡುವ ಅಧಿಕ ವೇತನಗಳೂ ಇವೇ ಜಾತಿಯವು. ಆ ಬಲೆಗೆ ಬಿದ್ದು ಅನೇಕರು ಕರ್ತವ್ಯಭ್ರಷ್ಟರಾಗಿದ್ದಾರೆ. ಅವರ ಅಂತರಾತ್ಮ ನಂದಿಹೋಗಿದೆ. ತಮ್ಮ ದೇಶಿಯರನ್ನೇ ಅತಿ ನಿಷ್ಠುರವಾಗಿ ಕಠಿಣವಾಗಿ ಕಂಡಿದ್ದಾರೆ. ಆ ಆಸಕ್ತಿಯಿರದಿದ್ದರೆ ಹೀಗೆಂದೂ ಮಾಡುತ್ತಿರಲಿಲ್ಲ. ಸುಖ ಸೊಬಗಿನ ಬಾಳಿಗೆ ಮನಸೋತು ಹೀಗಾಗಿದೆ.

ಈ ರೀತಿಯ ಕೃತಕ ಜೀವನದ ಅಂತಸ್ತನ್ನು ರೂಢಿಗೊಳಿಸಲು ಬೇರೆ ಕಾರಣಗಳೂ ಇವೆ. ಅವು ಜನತೆಯ ಜೀವನಕ್ಕೆ ಹೆಚ್ಚು ಸಂಬಂಧಿಸಿಲ್ಲವಾದ್ದರಿಂದ ಸ್ಥೂಲವಾಗಿ ಸೂಚಿಸುತ್ತೇನೆ. ಆಡಂಬರ, ವೈಭವ, ಅಟ್ಟಹಾಸಗಳಿಗೆ ಈ ಬಗೆಯ ಕೃತ್ರಿಮ ಅಂತಸ್ತು ಅತ್ಯಗತ್ಯ. ಮನೆಯ ಆಳುಗಳಿಗೆ ಸಮವಸ್ತ್ರ (ಯೂನಿಫಾರಂ) ತೊಡಿಸಿದರೆ ಏನೋ ಗಾಂಭೀರ್ಯ ಬಂದ ಹಾಗೆ, ಜನರ ದೃಷ್ಟಿಯನ್ನು ಸೆಳೆದ ಹಾಗೆ ಆಗುತ್ತದೆ. ಸಮವಸ್ತ್ರ ತೊಟ್ಟರೆ ಆಳಿನ ವ್ಯಕ್ತಿತ್ವವು ಮುಳುಗಿ ಅವನು ಬರೀ ಆಳಾಗುತ್ತಾನೆ. ಅವನು ರಾಮ – ಭೀಮನಲ್ಲ ; ಬಾಯ್, ಪ್ಯೂನ್, ಚಪ್ರಾಸಿ ಮುಂತಾದುದು ಆಗುತ್ತಾನೆ. ಆ ಬಡಪಾಯಿಗಳಿಗೆ ಇಂಥ ಬಟ್ಟೆ ಎಲ್ಲಿ ಬರಬೇಕು ? ಆದುದರಿಂದ ಅವರು ಅದನ್ನು ಪ್ರೀತಿಸುತ್ತಾರೆ. ನಾಲ್ಕು ಜನರ ಕಣ್ಣು ಕುಕ್ಕುವಂತೆ ಮೆಚ್ಚುಮಾಡುವ ವೈಭವಪ್ರಿಯತೆ ಇದು.

ಹತ್ತೂ ಜನರಂತಲ್ಲದೆ ತಾನೇ ಬೇರೆ ಎನ್ನುವವನು ಈ ಆಡಂಬರದ ಅಂತಸ್ತನ್ನು ಅವಲಂಬಿಸಬೇಕು. ಹೆಚ್ಚು ಬಾಡಿಗೆ ಕೊಟ್ಟು ಭಾರಿ ಮನೆ ಹಿಡಿಯುವುದೂ, ರೈಲಿನಲ್ಲಿ ಮೊದಲನೆ ತರಗತಿಯಲ್ಲಿ ಪ್ರಯಾಣ ಮಾಡುವುದು ಇದರ ಲಕ್ಷಣ. ನಮ್ಮ ಈ ಬಡ ದೇಶದಲ್ಲಿ ಆ ಅಟ್ಟಹಾಸ ಅಕ್ಷಮ್ಯ.

ನಮ್ಮ ದೇಶಕ್ಕೆಲ್ಲ ಒಂದೇ ಸರ್ವಸಾಧಾರಣ ರೂಢಿ ಸಾಧ್ಯವಿಲ್ಲ. ಆಯಾ ಸ್ಥಳದ ವಾಯುಗುಣ, ಆಹಾರಾವಶ್ಯಕತೆ, ವ್ಯಕ್ತಿವಿಕಾಸಾನುಕೂಲತೆ, ಪ್ರಗತಿ ಸಾಧನ ಇತ್ಯಾದಿಗಳನ್ನು ಅನುಸರಿಸಿ ಅಲ್ಲಲ್ಲಿಗೆ ಒಂದೊಂದು ರೀತಿಯನ್ನು ಏರ್ಪಡಿಸಬಹುದು. ಒಂದು ಕಡೆ ಅತ್ಯಗತ್ಯವಾದುದು ಇನ್ನೊಂದು ಕಡೆ ಅನಗತ್ಯವಾಗುತ್ತದೆ. ಆದುದರಿಂದಲೇ ಆಯಾ ಸ್ಥಳದ ಪರಿಸ್ಥಿತಿಗೆ ಅನುಸಾರವಾಗಿ ರೂಢಿ–ಸಂಪ್ರದಾಯಗಳು ಏರ್ಪಡಬೇಕು.

ಶಾಶ್ವತತೆ ಮತ್ತು ಅಹಿಂಸೆಗಳಿಗೆ ದಾರಿ ಮಾಡಿಕೊಡಬೇಕು ಸಾಮಾನ್ಯ ರೂಢಿ. ಅಂದರೆ ಅದು ಜನರ ಸ್ಥಳೀಯ ಆರ್ಥಿಕ ಜೀವನಕ್ಕೆ ಹೊಂದಿಕೊಳ್ಳುವಂತಿರಬೇಕು. ಪ್ರಕೃತಿಯ ಜೀವನಚಕ್ರ ಹೇಗೆ ಒಂದಕ್ಕೊಂದು ಪೋಣಿಸಿಕೊಂಡು ಸಾಗು

ತ್ತದೆಯೋ, ಆ ಚಕ್ರವನ್ನು ಎಲ್ಲಾದರೂ ಅಡ್ಡಗಟ್ಟಿದರೆ ಹೇಗೆ ಹಿಂಸೆ ತಲೆದೋರುತ್ತದೆಯೋ, ವಿನಾಶದಲ್ಲಿ ಕೊನೆಗಾಣುತ್ತದೆಯೋ ಹಿಂದಿನ ಅಧ್ಯಾಯವೊಂದರಲ್ಲಿ ತಿಳಿಸಿದೇನೆ. ಜನ ಜೀವನದ ಸಾಮಾನ್ಯ ಪದ್ಧತಿಯು ವ್ಯಕ್ತಿತ್ವ ಪ್ರಕಟಣೆಗೆ ಒಂದು ರಾಜಮಾರ್ಗ ಆಗಬೇಕು. ಅಲ್ಲದೆ, ಸಮಾಜದ ಬೇರೆ ಬೇರೆ ವ್ಯಕ್ತಿಗಳ ನಡುವಿನ ಬೆಸುಗೆಯಾಗಿ ಶಕ್ತಿವಂತರಾದವರು ಅಶಕ್ತರಿಗೆ ನೆರವಾಗುವ ರೀತಿಯಲ್ಲಿ ಇರಬೇಕು.

ಸುತ್ತ ಮುತ್ತಲಿನ ಜನರ ಜೀವನಕ್ಕೆ ಸ್ವಲ್ಪವೂ ಸಂಬಂಧವಿಲ್ಲದೆ ಬರೀ ದುಡ್ಡಿನ ಅಳತೆಯಿಂದಲೇ ಆಗಾಗ ಜೀವನದ ಮಟ್ಟವನ್ನು ಅಳೆಯುವುದುಂಟು. ಆ ಮಟ್ಟಗಳೆಲ್ಲ ಕೃತಕ, ಅಸ್ಥಿರ. ಜನಜೀವನದಲ್ಲಿ ಅದಕ್ಕೆ ಬೇರಿಲ್ಲ. ಬರೀ ಹಂದರ.

ಜೀವನದ ಪೂರ್ಣತೆಗೆ ಏನೇನು ವಿವರಗಳು ಬೇಕೋ ಎಲ್ಲವನ್ನೂ ನಾವು ನಿರ್ಧರಿಸಬೇಕಾಗಿಲ್ಲ. ಅತ್ಯವಶ್ಯಕವಾಗಿ ಮೂಲಭೂತವಾದುದನ್ನು ಗಮನಿಸಿ, ಜನರಿಗೆ ಕಚ್ಚಾ ಮಾಲು ಸುಲಭವಾಗಿ ಎಟುಕುವಂತೆ ಮಾಡಿ ಉತ್ಪಾದನೆಯ ಕಾರ್ಯಕ್ಕೆ ಅನುಕೂಲ ಮಾಡಿದರೆ, ಉಳಿದುದೆಲ್ಲ ತಾನೇ ಸರಿ ಹೋಗುತ್ತದೆ. ಜನರು ತಮ್ಮ ಬುದ್ಧಿಶಕ್ತಿ, ಕೌಶಲದಿಂದ ಬೆಳೆಯುತ್ತಾರೆ. ಬೆಳೆಸುತ್ತಾರೆ. ಕೆರೆಯ ನೀರಿನ ಮಟ್ಟ ಹೆಚ್ಚಿಸಬೇಕಾಗಿದ್ದರೆ ಹೆಚ್ಚು ನೀರನ್ನು ಕೆರೆಗೆ ಬಿಟ್ಟರೆ ಸಾಕು. ನೀರು ತುಂಬಿದಂತೆ ಮಟ್ಟ ತಾನೇ ಏರುತ್ತದೆ. ಅದು ಪ್ರಕೃತಿ ನಿಯಮ.

ನಮ್ಮ ದೇಶದ ಜನಕ್ಕೆ ಅರೆಹೊಟ್ಟೆ, ಅರೆಬಟ್ಟೆ ಸ್ಥಿತಿ ಬಂದಿದೆ. ಅವರೇನು ಅಂದಗಾರಿಕೆಯ ಸ್ಪರ್ಧೆಗಾಗಿ ಸೊರಗಿಸುತ್ತಿಲ್ಲ ಮೈಯನ್ನು ! ನಗ್ನ ಸಂಸ್ಕೃತಿಯನ್ನು ಆರಾಧಿಸುತ್ತಲೂ ಇಲ್ಲ. ಏನು ತಿನ್ನಬೇಕೋ, ಏನು ಉಡಬೇಕೋ ಅವರಿಗೆ ಗೊತ್ತಿದೆ. ಅವರಿಗೆ ಈ ಪಾಠ, ಈ ಪ್ರಚಾರ ಬೇಕಿಲ್ಲ ; ಬೇಕಾದುದು ಆ ವಸ್ತುಗಳು - ಅನ್ನ ಮತ್ತು ಬಟ್ಟೆ, ಅದನ್ನು ಹೇರಳವಾಗಿ ಉತ್ಪತ್ತಿ ಮಾಡಲು ತಕ್ಕ ವ್ಯವಸ್ಥೆಮಾಡಬೇಕು. ಜನರಲ್ಲಿ ಉತ್ಪಾದನೆ ಹೆಚ್ಚಿ ಅವರೇ ಅವನ್ನು ಉಪಯೋಗಿಸುವಂತಾದರೆ, ಅಣಿಮಾಡಿದ ವಸ್ತುಗಳಿಗೆ ಅಲ್ಲಲ್ಲಿಯೆ ಗಿರಾಕಿ ಸಿದ್ಧವಾಗಿ ದೊರೆತು, ಜನರ ಜೀವನಕ್ರಮವು ಅವರ ಪ್ರತಿಭೆ – ಸಂಸ್ಕೃತಿಗಳಿಗೆ ದ್ಯೋತಕವಾಗಿ ಸ್ಥಿರವಾಗಿ ನಿಲ್ಲುತ್ತದೆ,

ನಮ್ಮ ಗುರಿ ಒಂದು ಕುಟುಂಬದ, ಒಂದು ವರ್ಗದ ಸುಖವಲ್ಲ. ಎಲ್ಲರ ಜೀವನ ಸೌಖ್ಯವೂ ನಮ್ಮ ಲಕ್ಷ್ಯ. ಎಲ್ಲರ ಜೀವನವೂ ಅನ್ಯೋನ್ಯಾಶ್ರಯವಾಗಿದೆ. ನಮ್ಮ ಪುರಾತನ ಗ್ರಾಮಜೀವನದಲ್ಲಿ ಈ ಬಗೆಯ ವ್ಯವಸ್ಥೆಯಿತ್ತು. ಪ್ರತಿಯೊಬ್ಬ ಗ್ರಾಮಸ್ಥನಿಗೂ ಇಡೀ ಹಳ್ಳಿಯ ಬೆಳೆಯಲ್ಲಿ ಒಂದು ಪಾಲು ಸಿಗುತ್ತಿತ್ತು. 'ಆಯ'. ಅಥವಾ 'ಪಡಿ' ಎನ್ನುತ್ತಿದ್ದರು. ಹಳ್ಳಿಯ ಜನರೆಲ್ಲರೂ

ಸೇರಿ ಒಂದು ಸಮಷ್ಟಿ ಎನ್ನುವುದೇ ಈ ಪದ್ಧತಿಯ ಕಲ್ಪನೆ. ಆದರೆ ಬರೀ ಹೊಟ್ಟೆಪಾಡು ಆದರೆ ಸಾಲದು, ಪ್ರತಿಯೊಬ್ಬನಿಗೂ ತನ್ನ ರಚನಾ ಸಾಮರ್ಥ್ಯ, ಸೃಷ್ಟಿಶಕ್ತಿಗಳನ್ನು ವಿಕಾಸ ಮಾಡಿಕೊಳ್ಳುವ ಅವಕಾಶವೂ ಬೇಕು.

ನಮ್ಮ ಮಂತ್ರಿ-ನಾಯಕನನ್ನೆ ತೆಗೆದುಕೊಳ್ಳಿ. ಆತನಿಗೆ ಒಂದು ತೊಗಲಿನ ಪೆಟ್ಟಿಗೆಬೇಕು. ಆತ ಮೋಚಿಗೆ ಹೇಳುತ್ತಾನೆ. ಅದಕ್ಕೆ ಬೇಕಾದ ಚರ್ಮವನ್ನು ಹದಮಾಡಿ ಕೊಡಲು ಆ ಮೋಚಿ ಚಮ್ಮಾರನನ್ನು ಕೇಳುತ್ತಾನೆ. ಇದರಿಂದ ಹಲವು ಸಮಸ್ಯೆ ಏಳುತ್ತವೆ, ಹಲವು ತೊಡಕು ಉಂಟಾಗುತ್ತವೆ. ಅವನ್ನು ಪರಿಹರಿಸಲು ಮೋಚಿ–ಚಮ್ಮಾರ ಇಬ್ಬರೂ ಯತ್ನಿಸುತ್ತಾರೆ. ಅವರ ಉಪಜ್ಞತೆ, ಉಪಾಯಶಾಲಿತನಗಳಿಗೆ ಪುಟಕೊಟ್ಟಂತಾಗುತ್ತದೆ. ಈ ನಾಯಕ ಸ್ಥಳೀಯ ವಸ್ತು ವನ್ನು ಬಯಸಿದುದರಿಂದ ಸುತ್ತಲಿನವರ ಸಾಮರ್ಥ್ಯ ಪ್ರಕಟನೆಗೆ ದಾರಿಯಾಯಿತು. ಹೀಗೆ ಉತ್ಪಾದಕನಿಗೂ ಗಿರಾಕಿಗೂ ಅತಿನಿಕಟ ಸಂಬಂಧ ಬೆಳೆಯುತ್ತದೆ. ಅವನು ಹೂಡಿದ ಸಮಸ್ಯೆಗೆ ಇವನು, ಇವನ ಸಮಸ್ಯೆಗೆ ಅವನು ಉತ್ತರ ಕೊಡುತ್ತಾರೆ. ನಾವು ಒಬ್ಬೊಬ್ಬರೇ ಒಂದೊಂದು ಬಿಡಿ ಜೀವವಲ್ಲ. ಒಬ್ಬರಿಗೊಬ್ಬರು ಸಂಬಂಧಿತರು. ಒಬ್ಬೊಬ್ಬರೂ ಒಂದು ಬಿಡಿ ಮುತ್ತಾದರೆ ನಮ್ಮ ಜೀವನಕ್ರಮ, ಬಾಳಮಟ್ಟ ಈ ಬಿಡಿಮುತ್ತುಗಳನ್ನು ಪೋಣಿಸುವ ರೇಷ್ಮೆದಾರವಾಗಬೇಕು. ನಾಯ ಕನ ಬಾಳು ಅಂಥದು. ನೂಲುಗಾರರು, ನೇಕಾರರು, ಚಾಪೆಮಾಡುವವರು, ಚಮ್ಮಾರರು, ಮೋಚಿಗಳು ಇವರೆಲ್ಲರ ಬದುಕಿನೊಡನೆ ಆ ಬಾಳು ಹೆಣೆದುಕೊಂಡಿದೆ. ಆದರೆ ಕಾರ್ಖಾನೆಯ ವಸ್ತುಗಳನ್ನು ಬಳಸಿದಾಗ ಸುತ್ತಲಿನ ಜನಜೀವನಕ್ಕೆ ಸಂಬಂಧವೇ ಬಾರದು. ಆಗ ನಮ್ಮ ಬಾಳು ಆತ್ಮಶೂನ್ಯವಾದ, ನಿರ್ಜೀವ ಯಂತ್ರಗಳಿಗೆ ಗಂಟುಹಾಕಿಕೊಳ್ಳುತ್ತದೆ. ಆ ಯಂತ್ರಗಳಿಂದ ಮನುಷ್ಯನ ರಚನಾ ಸಾಮರ್ಥ್ಯ ಎಳ್ಳಷ್ಟೂ ಬೆಳೆಯದು.

ಆದುದರಿಂದ, ಸಮಾಜದ ನಾನಾ ಭಾಗಗಳಲ್ಲಿ ಸಹಕಾರಪೂರ್ಣ ಸಮರಸತೆ ತಂದು, ಎಲ್ಲಾ ಒಂದೇ ಜೀವ ಎಂಬಂತೆ ನಡೆಯಲು ಅನುಕೂಲವಾಗುವಂತೆ ಮಾಡಬೇಕು ಜೀವನಕ್ರಮ, ಬಾಳಮಟ್ಟ. ಬಿಡಿಬಿಡಿ, ಏಕಾಕಿಗಳ ಸುಖಭೋಗ ಕ್ಕಲ್ಲ ಜೀವನಕ್ರಮ ರೂಪಿತವಾಗಬೇಕಾದುದು ; ಇಡೀ ಸಮಾಜವನ್ನು ಒಂದಾಗಿ ಕಟ್ಟುವ ಪ್ರೇಮದ ಸಿದ್ಧಿಗಾಗಿ. ಆಗ ಪರಸ್ಪರ ವಿಶ್ವಾಸ, ಒಗ್ಗಟ್ಟು, ಸುಖ ಲಭಿಸೀತು ; ಅದರಿಂದ ಸಮಾಜಕ್ಕೆ ಬಲ ಬಂದೀತು.

ಹತ್ತಿಯ ತೊಳೆಯ ಒಂದೊಂದು ನಾರೂ ದುರ್ಬಲವೇ. ಅದು ಒಂದೇ. ಆದರೆ ಬರೀ ಕಸ. ಆ ನಾರನ್ನೇ ಸಾವಿರಾರು ಎಳೆಗೂಡಿಸಿ ನೂತರೆ, ಆ ದಾರ ವನ್ನು ಹೊಸೆದು ಹಗ್ಗಮಾಡಿದರೆ ಎಂಥ ಭಾರಿ ಹಡಗನ್ನಾದರೂ ಅದು ತಡೆದು ನಿಲ್ಲಿಸುತ್ತದೆ. ತೃಪ್ತಿಕರವಾದ ಜೀವನದ ಮಟ್ಟದಿಂದ ಬರುವ ಫಲ ಇಂಥದಾಗ

ಬೇಕು. ಉತ್ಪಾದಕನನ್ನೂ ಉಪಯೋಗಿಸುವವನನ್ನೂ ಒಟ್ಟಿಗೆ ಗೆಳೆತನದಿಂದ ಹೊಸೆದು, ಸಮಾಜವನ್ನು ಒಗ್ಗಟ್ಟಾದ ಒಂದು ವಿರಾಟ್ ವ್ಯಕ್ತಿಯನ್ನಾಗಿ ಮಾಡಬೇಕು. ಆಗಲೇ ಆ ಆರ್ಥಿಕ ವಿಧಾನ ಸ್ಥಿರ, ಶಾಶ್ವತ.

೧೨. ಕೆಲಸ

'ಕೆಲಸ' ಎಂಬ ಮಾತು ಎಲ್ಲರ ಬಾಯಲ್ಲೂ ಬರುತ್ತದೆ. ಆದರೆ ಬಹಳ ಸ್ವಲ್ಪ ಜನ ಅದಕ್ಕೆ ಸರಿಯಾದ ಅರ್ಥ ತಿಳಿದುಕೊಂಡಿದ್ದಾರೆ. ಕೆಲಸ ಎಂದ ರೇನು ? ಪ್ರಕೃತಿಯ ನಿಯಮಗಳಂತೆ ಏರ್ಪಡುವ ಅರ್ಥವ್ಯವಸ್ಥೆಯಲ್ಲಿ ಕೆಲಸಕ್ಕೆ ಏನು ಸ್ಥಾನ ?

ಈಗ ಎಲ್ಲಾ ರಾಷ್ಟ್ರಗಳನ್ನೂ ಬಾಧಿಸುತ್ತಿರುವ ಸಮಸ್ಯೆ – ತಮ್ಮ ದೇಶದ ಜನಕೋಟಿಗೆ ಏನು ಕೆಲಸ ಒದಗಿಸಬೇಕು ಎಂಬುದು. ಆದುದರಿಂದ ಕೆಲಸ ಎಂದ ರೇನು ಎಂಬುದನ್ನು ಪೂರ್ಣವಾಗಿ ಅರಿತುಕೊಳ್ಳಬೇಕಾದುದು ಅಗತ್ಯ. ಪ್ರಕೃತಿಯ ಸ್ಥಿರತೆಗೆ, ಶಾಶ್ವತತೆಗೆ, ಪರಂಪರೆಗೆ ಕಾರಣವಾದ ಅಂಶಗಳನ್ನೆಲ್ಲ ಪ್ರಕೃತಿಯ ವಿವಿಧ ಅಂಗಾಂಗಗಳು ಒಟ್ಟಿಗೆ ಸೇರಿ ಪ್ರಾಣಪ್ರವಾಹವನ್ನು ಹೇಗೆ ಅಖಂಡ ವಾಗಿ ಸಾಗಿಸುತ್ತಿವೆಯೆಂಬುದನ್ನು ಮೊದಲನೆ ಅಧ್ಯಾಯಗಳಲ್ಲಿಯೆ ತಿಳಿದುಕೊಂಡಿ ದ್ದೇವೆ. ಮಣ್ಣುಹುಳು ನೆಲವನ್ನು ಹದಮಾಡುತ್ತದೆ, ಹಕ್ಕಿಗಳು ಬೀಜವನ್ನು ಚೆಲ್ಲುತ್ತವೆ. ದುಂಬಿಗಳು ಗಿಡಗಳು ಫಲಿಸುವಂತೆ ಮಾಡುತ್ತವೆ. ಇದು ಕೆಲಸ– ಕಾರ್ಯ. ಪ್ರಕೃತಿಯ ಈ ಜೀವಿಗಳ ಜೀವನಧರ್ಮ ಇದು.

ಮನುಷ್ಯನ ವಿಷಯವಾಗಿಯೂ ಬಾಳು ಎಂದರೇನು, ಅದು ಬರೀ ಬದುಕಾ ಗಿರದೆ ಬಾಳಿನಲ್ಲಿ ಮತ್ತೇನಿದೆ ಎಂಬುದನ್ನು ಚರ್ಚಿಸಿದ್ದೇವೆ. ಮಾನವೇತರ ಪ್ರಾಣಿ ವರ್ಗದಿಂದ ಭಿನ್ನವಾಗಿ, ತನ್ನ ಸಂಕಲ್ಪಬಲದಿಂದ ಪ್ರಕೃತಿಯ ವಿವಿಧ ಅಂಗ ಗಳನ್ನು ಒಂದೆಡೆ ತಂದು ಸೇರಿಸಿ ಆ ಪ್ರಕೃತಿಯ ಮೂಲೋದ್ದೇಶ್ಯವನ್ನು ಮನುಷ್ಯ ಮತ್ತಷ್ಟು ಸಮರ್ಪಕಗೊಳಿಸಬಲ್ಲ. ಆ ಪ್ರಯತ್ನದಲ್ಲಿ ತನ್ನ ಶಕ್ತಿ ವಿಶೇಷಗಳನ್ನು ಬೆಳೆಸಿಕೊಂಡು, ತನ್ನಿದಿರಿನ ವಾಸ್ತವ ಪ್ರಶ್ನೆಗಳನ್ನು ಬಿಡಿಸುವುದ ರಲ್ಲಿ ಮೌಲ್ಯ – ನಿರ್ಣಯಮಾಡಿ ತನ್ಮೂಲಕ ತನ್ನ ವ್ಯಕ್ತಿತ್ವವನ್ನು ಬೆಳೆಸಬಲ್ಲ; ಇದು ಮನುಷ್ಯನ 'ಕೆಲಸ' – ಇದೇ ಆ ಕೆಲಸದ ಉದ್ದೇಶ್ಯ.

ಕೆಲಸ ಎಂದರೆ ಈಗ ನಾನಾ ಅರ್ಥ, ಅಲಂಕಾರ ತುಂಬಿಕೊಂಡಿವೆ. ಇದ ನ್ನೆಲ್ಲ ಬದಿಗೆ ಸರಿಸಿ ಮನುಷ್ಯನ ಆದಿಕಾಲದ ಇತಿಹಾಸದಲ್ಲಿ ಕಾಣುವ ಕೆಲಸದ ತೀರಾ ಸರಳ ಲಕ್ಷಣವನ್ನು ಗಮನಿಸಿದರೆ ಆಗ ಸರಿಯಾಗಿ ತಿಳಿಯುತ್ತದೆ. ತಮ್ಮ ಪ್ರಕೃತಿ – ಸ್ವಭಾವಾನುಸಾರ ನಡೆವ ಪ್ರಾಣಿಗಳ ರೀತಿಯನ್ನು ಬಿಟ್ಟು, ಮನುಷ್ಯ ತನ್ನದೇ ಒಂದು ಮಾರ್ಗ ತುಳಿಯಲು ಮೊದಲಿಟು ಕಲ್ಲಿನ ಆಯುಧಗಳನ್ನು

ಮಾಡಿಕೊಳ್ಳಲು ಪ್ರಾರಂಭಿಸಿದಾಗ, ಶುದ್ಧ ಮೂಲಾರ್ಥದಲ್ಲಿ ಅದು ಕೆಲಸ ಆಯಿತು. ಹಕ್ಕಿಯು ಗೂಡು ಕಟ್ಟಿಕೊಂಡು ತನ್ನ ಆಹಾರಕಾಗಿ ಹಾರಾಡದೆ ? ಅದರಂತೆಯೇ ತನ್ನ ಬುದ್ಧಿ ಸಾಮರ್ಥ್ಯ, ಮುನ್ – ಯೋಚನೆ, ಸಮಯ ಸ್ಫೂರ್ತಿಗಳ ಬಲದಿಂದ ತನ್ನ ಆವಶ್ಯಕತೆಗಳನ್ನು ಪೂರಯಿಸಿಕೊಳ್ಳುವುದು ಮನುಷ್ಯನ ಕೆಲಸ. ಸೇವೆ ಮಾಡಿ ಸಂತೋಷಪಡಲು ಮನುಷ್ಯ ಕೆಲಸ ಮಾಡತೊಡಗಿದ. ತನ್ನ ಸ್ವಂತ ಆವಶ್ಯಕತೆಗಳನ್ನು ತೃಪ್ತಿಗೊಳಿಸುವುದೇ ಅವನಿಗೆ ಅದರಿಂದ ದೊರೆತ ಪ್ರತಿಫಲ – ಕೂಲಿ. ಈ ಕ್ಷೇಮಕಾರಿ ಚಟುವಟಿಕೆ ಅವನ ಶಕ್ತಿಗಳನ್ನು ಪ್ರಜ್ವಲಗೊಳಿಸಿತು. ಅವನನ್ನು ವಿಚಾರಶೀಲ ಪ್ರಾಣಿಯನ್ನಾಗಿ ಬೆಳೆಯುವಂತೆ ಮಾಡಿತು. ತನ್ನ ಸುತ್ತಾಟದಲ್ಲಿ ದೊರೆತ, ತಾನು ಬೇಟೆಯಾಡಿ ಕೊಂದ ಪದಾರ್ಥಗಳನ್ನೆಲ್ಲ ತನ್ನ ಗುಹೆಗೆ ತರುತ್ತಿದ್ದ. ಅಲ್ಲಿ ಅವನ ಹೆಂಗಸರು ಅವನ್ನು ಅಟ್ಟು ತಿನ್ನಲು ಅಣಿಮಾಡುತ್ತಿದ್ದರು. ಆಗ ಹೆಂಗಸಿಗೆ ಮನೆಗೆಲಸದ ಅಂಕುರಾರ್ಪಣವಾಯಿತು. ಈವೊತ್ತಿಗೂ ನಮ್ಮ ದೇಶದಲ್ಲಿ ಹೆಂಗಸರ ಕೆಲಸ ಇದೇ : ಮನೆಯಲ್ಲಿಯೆ ತಮಗೆ ಬೇಕಾದುದನ್ನೆಲ್ಲ ಅಣಿಮಾಡಿ ತಮ್ಮ ಅವಶ್ಯಕತೆಗಳನ್ನು ತೃಪ್ತಿಪಡಿಸಿಕೊಳ್ಳುವುದು.

ಕೆಲಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದರಲ್ಲಿ ಹಲವು ಭಾಗಗಳಿರುವುದು ಕಾಣುತ್ತದೆ. ಪ್ರತಿಯೊಂದು ಭಾಗವೂ ಅಂತಿಮಸಿದ್ಧಿಗಾಗಿ ತನ್ನ ತನ್ನ ಪಾಲಿನ ಕೆಲಸವನ್ನು ಮಾಡುತ್ತದೆ. ಮುಖ್ಯವಾಗಿ ದಿನಚರಿ, ವಿರಾಮ, ಪ್ರಗತಿ, ಸಂತೋಷಗಳು ಅದರ ಭಾಗಗಳು. ಈ ಭಾಗಗಳಲ್ಲಿ ಒಂದೊಂದನ್ನೇ ಬೇರೆ ಮಾಡಿ ಅದಕ್ಕೆ ಪ್ರಾಣಪ್ರತಿಷ್ಠೆ ಮಾಡಲು ಸಾಧ್ಯವಿಲ್ಲ. ಒಬ್ಬನಿಗೆ ದಿನಚರಿ, ಒಬ್ಬನಿಗೆ ವಿರಾಮ ಹಂಚಿಕೊಡಲಾಗದು. ಮೂರನೆಯವನಿಗೆ ಬರೀ ಸಂತೋಷವನ್ನು ಕೊಡಲು ಆದೀತೆ ? ಸಂಗೀತದಲ್ಲಿ ಪ್ರತಿಯೊಂದು ಹಂತದಲ್ಲೂ ಆರೋಹಣ, ಅವರೋಹಣಗಳಿವೆ. ಒಂದಿಲ್ಲದೆ ಒಂದಕ್ಕೆ ಅರ್ಥವೇ ಇಲ್ಲ. ಸಂಗೀತಗಾರನಾಗಬೇಕೆನ್ನುವವನು ದಿನವೂ ಸ್ವರಾಭ್ಯಾಸ ಮಾಡಬೇಕು. ಆ ದಿನಚರಿ ನಡೆದರೇನೇ ಕಟ್ಟಕಡೆಯಲ್ಲಿ ಅವನು ತನ್ನ ಭಾವವನ್ನು ನಾದದಲ್ಲಿ ಪ್ರಕಟಿಸಿ ಅದರ ಆನಂದವನ್ನು ಪಡೆಯಬಲ್ಲ.

ಹಾಗೆಯೇ ಕೆಲಸದ ಎಲ್ಲಾ ಅಂಗಗಳೂ ಆ ಕೆಲಸದ ಪೂರ್ಣ ಫಲ ದೊರೆಯಲು ಅತ್ಯಗತ್ಯ. ಪ್ರತಿಯೊಂದೂ ತನ್ನ ತನ್ನ ಕರ್ತವ್ಯವನ್ನು ಮಾಡಬೇಕು.

ಅನಾದಿಕಾಲದಿಂದಲೂ ಕೆಲಸವನ್ನು ವಿಭಾಗಮಾಡಲು ಮನುಷ್ಯ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದ್ದಾನೆ. ಭಾರವಾದ, ಪದೇಪದೇ ಮಾಡಬೇಕಾದ ಗೋಜಿನ ಕೆಲಸವನ್ನೆಲ್ಲ ಕೈಲಾಗದ ದುರ್ಬಲರ ತಲೆಯ ಮೇಲೆ ಹೇರಿ, ಬಲಿಷ್ಠರಾದವರು ಕೆಲಸದ ಸುಖ–ಸಂತೋಷವನ್ನು ಮಾತ್ರ ಹಂಚಿಕೊಂಡಿದ್ದಾರೆ. ಕಷ್ಟದ

ಕೆಲಸ ಗುಲಾಮರಿಗೆ, ಕೆಲಸದ ಫಲ – ಸುಖ ಧಣಿಗೆ. ಗ್ರೀಸ್, ರೋಂಗಳ ನಾಗರಿಕತೆಗಳು ದುಡಿತವನ್ನು ತಪ್ಪಿಸಿ ಮೈಕದ್ದು ಸುಖ – ಫಲವನ್ನು ಮಾತ್ರ ಬಾಚಿಕೊಳ್ಳುವ ಬುದ್ಧಿಯಿಂದ ಹುಟ್ಟಿತು. ಆದುದರಿಂದಲೇ ಅವು ಹೇಳಲು ಹೆಸರಿಲ್ಲದಂತೆ ಬರೀ ಮಣ್ಣಾಗಿಹೋದವು. ಅವುಗಳ ವಿನಾಶದಿಂದ ಮನುಷ್ಯನಿಗೆ ಒಂದು ಪಾಠ. ಆದರೆ ಆ ಪಾಠವನ್ನು ಗಮನಿಸದೆ ಆಧುನಿಕ ಸಾಮ್ರಾಜ್ಯಗಳೂ ಅದೇ ದಾರಿ ಹಿಡಿದಿವೆ. ಕಚ್ಚಾ ಪದಾರ್ಥವನ್ನು ಸರಬರಾಜು ಮಾಡುವ ದುಡಿತಗಾರ ದೇಶಗಳಿಗೆ ದಟ್ಟದಾರಿದ್ರ್ಯ, ಗಿರಣಿಗಳಲ್ಲಿ ವಸ್ತೂತ್ಪಾದನೆ ಮಾಡುವ ಕಾರಖಾನೆ ದೇಶಗಳಿಗೆ ಸಕಲ ಸುಖ – ಸಂಪತ್ತು. ಈ ವಿಧಾನ, ಆರ್ಥಿಕ ಕ್ರಮ ಪ್ರಕೃತಿ ವಿರುದ್ಧ. ಆದುದರಿಂದ ಅದು ನಶಿಸಲೇಬೇಕು. ಪ್ರಕೃತಿಗೆ ವಿರುದ್ಧ ನಿಂತಾಗ ಉದ್ಭವಿಸಿದ ಪ್ರಳಯಸಮ ಹಿಂಸೆಯನ್ನು ನಾವು ನಮ್ಮ ಕಾಲದಲ್ಲಿ ಕಣ್ಣಾರೆ ಕಂಡಿದೇವೆ. ಹಲವು ವರ್ಷಗಳಿಗೊಮ್ಮೆ ನಡೆದ ಈ ಜಗತ್ ಯುದ್ಧಗಳನ್ನು ಸಾಮ್ರಾಜ್ಯಷಾಹಿ ರಾಷ್ಟ್ರಗಳು ತಮ್ಮ ಇಷ್ಟವನ್ನು ಇತರ ದೇಶಗಳ ಮೇಲೆ ಹೊರಿಸಲು ಮಾಡಿಕೊಂಡ ಒಂದು ಸಾಧನ. ಒಂದೆರಡು ಬಾರಿ ಅದು ಸಫಲವಾದಂತೆ ಕಂಡೀತು. ಆದರೆ ಅದರ ಗರ್ಭದಲ್ಲಿಯೆ ಕ್ಷಯ – ವಿನಾಶದ ಬೀಜ ಅಡಗಿದೆ. ಹಿಂಸೆಯ ಮೂಲಕ ಯಾವುದನ್ನು ಕಟ್ಟಿದರೂ ಅದಕ್ಕೆ ಅಳಿವು ಖಂಡಿತ.

ಕೆಲಸ ಕಡಿಮೆ ಮಾಡುವ ಯಂತ್ರಗಳನ್ನು ಬಳಕೆಗೆ ತಂದು, ಜಾಣತನದಿಂದ ಪ್ರಚಾರಮಾಡಿ ಹಳ್ಳಿಯ ಕೆಲಸಗಾರರನ್ನೆಲ್ಲ ಊರುಬಿಟ್ಟೋಡಿಸಿ ಅವರನ್ನೆಲ್ಲ ಕಾರ್ಖಾನೆ ಕೆಲಸಗಾರರನ್ನಾಗಿಮಾಡಿದರು. ಅಲ್ಲಿ ಇವರ ಯಂತ್ರಗಳನ್ನುನಡೆಸಬೇಕಲ್ಲ! ಇದರಿಂದ ಇಂಗ್ಲೆಂಡಿನ ಹಳ್ಳಿಗಳಲ್ಲಿ ಹೊಲ ಪಾಳುಬಿದ್ದವು. ಬರೀ ಕಬ್ಬಿಣ, ಕಲ್ಲಿದ್ದಲು, ತಗಡು ತಿಂದು ಬದುಕೀತೆ ದೇಶ ? ಅನ್ನ ಬೇಕೇ ಬೇಕು. ತಮ್ಮ ದೇಶದಲ್ಲಿ ಸಿಗದ ಅನ್ನ ಬೇರೆ ದೇಶಗಳಿಂದ ಬರಬೇಕು. ಇಲ್ಲದಿದ್ದರೆ ಸಾವೇ. ಆದುದರಿಂದ ಇಂಗ್ಲೆಂಡು ಇವರ ದೇಶಗಳನ್ನು ರಾಜಕೀಯ ದಾಸ್ಯದಲ್ಲಿ ಬಲವಾಗಿ ಹಿಡಿದಿಡಬೇಕಾಯಿತು. ಇತರ ದೇಶಗಳು ಸುಲಭವಾಗಿ ಗುಲಾಮಗಿರಿಗೆ ಒಪ್ಪುತ್ತವೆಯೆ ? ಬಲಾತ್ಕಾರದಿಂದ ಒಪ್ಪಿಸಬೇಕು. ಹೀಗೆ ಇಂಗ್ಲೆಂಡಿನ ಬಾಳಿಗೆ ಹಿಂಸೆ ಆಧಾರವಾಯಿತು. ಈ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲೆಂದು ಪ್ರತಿ ಎರಡನೆಯ ಪೀಳಿಗೆಯೂ ಯುದ್ಧರಂಗದಲ್ಲಿ ತನ್ನ ತರುಣರನ್ನು ಬಲಿಕೊಡಬೇಕು. ಹೀಗೆ ಕಾಲ ಕಾಲಕ್ಕೆ ಮಕ್ಕಳನ್ನು ಬಲಿಕೊಡುವ ಈ ವ್ಯವಸ್ಥೆ ಬರೀ ಮೂರ್ಖತನ ಎಂದು ಮನುಷ್ಯ ಮಾತ್ರದವನು ಯಾರಾದರೂ ಹೇಳುತ್ತಾರೆ. ಈ ಸುಲಭವಾದ ವಿಚಾರವನ್ನು ಮರೆಮಾಚಿ ಮಂಕುಬೂದಿ ಎರಚಲು ಎಲ್ಲಾ ಬಗೆಯ ಉಪಾಯವೂ ನಡೆಯುತ್ತವೆ. ಅಟ್ಟಹಾಸದ ಜೀವನಮಟ್ಟ ಬೇಕೆನ್ನು

ತ್ತಾರೆ. ಸುಳ್ಳು ಬೆಲೆ ಟ್ಟುವುದನ್ನು ಕಲಿಸುವ ಶಿಕ್ಷಣ ಕೊಡುತ್ತಾರೆ, ಹಿಂಸೆಯನ್ನು ಹೊಗಳಿ ಅಟ್ಟದಮೇಲೆ ಕೂಡಿಸುತ್ತಾರೆ. ತಾಯಿ ಮಗನನ್ನು ಹೆಮ್ಮೆಯಿಂದ ಬಲಿಕೊಡುತ್ತಾಳೆ. ಯುದ್ಧಕ್ಕೆ ಹೋಗಲು ಗಂಡಂದಿರನ್ನು ಹೆಂಡಿರೇ ಹುರಿದುಂಬಿಸುತ್ತಾರೆ. ಈ ಪ್ರಚಾರದ ವಿನಾಶಕರ ಪರಿಣಾಮಕ್ಕೆ ಬೇರೇನು ಸಾಕ್ಷಿ ಬೇಕು ? ಯಾವುದೋ ದೇಶದ ತಬ್ಬಲಿಗಳನ್ನು ಕೊಲ್ಲಲು ತನ್ನ ಮಗ ತರಪೇತಾಗುತ್ತಿದ್ದಾನೆ ಎಂಬ ಹೆಮ್ಮೆ ಯಾವ ತಾಯಿಗೆ ಸಹಜ ? ಅಂತರ ರಾಷ್ಟ್ರೀಯ ಲೂಟಿ, ಸುಲಿಗೆಗೆ ತನ್ನ ಗಂಡ ಬಲಿಯಾಗಲೆಂದು ಯಾವ ಹೆಂಡತಿ ಸಹಜವಾಗಿ ಬಯಸಿಯಾಳು ? ಇವೆಲ್ಲವೂ ನಡೆಯುತ್ತಿವೆ. ಸುಳ್ಳಿನ ಕಂತೆಯನ್ನು ಹರಡಿ, ಅಸತ್ಯ ಮೌಲ್ಯಗಳನ್ನು ಕಲಿಸಿ, ಜನರ ಮನಸ್ಸು ಹಿಂಸೆ ಮತ್ತು ವಿನಾಶಗಳ ಕಡೆ ವಾಲುವಂತೆ ಮಾಡುತ್ತಾರೆ.

ಈ ಅಸಹಜ ತಿರುಗುಮುರುಗನ್ನು ಸಾಧಿಸಲು ಹಿಂಸೆಗೆ ಆರತಿ ಬೆಳಗಿದಾರೆ. ಒಬ್ಬನನ್ನು ಕೊಂದರೆ ಅದು ಕೊಲೆ. ಅದಕ್ಕೆ ಮರಣದಂಡನೆ. ಏನೂ ಅರಿಯದ ತಬ್ಬಲಿಗಳನ್ನು ಹಿಂಡು ಹಿಂಡಾಗಿ ಕೊಂದರೆ ಅದಕ್ಕೆ ರಾಷ್ಟ್ರಚಕ್ರ, ವೀರಚಕ್ರದಂಥ ಗೌರವ – ಮರ್ಯಾದೆ ! ಊರು ತುಂಬಾ ಅದಕ್ಕೆ ಸ್ಮಾರಕಗಳು, ಹೀಗೆ ಏನಾದರೂ ಕುತಂತ್ರಮಾಡಿ ಬದುಕಿಕೊಳ್ಳಬೇಕಾದ ವ್ಯವಸ್ಥೆಯಲ್ಲಿ ಏನೂ ದೋಷವಿಲ್ಲವೆ ? ಈ ತಿರುಗುಮುರುಗು ರಚನೆಯಿಂದ ಜನತೆಯ ಉತ್ತಮ ಗುಣಗಳೆಲ್ಲ ಮಸಕಾಗಿ ಹೋಗಿವೆ. ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಅಟ್ಟಹಾಸದ ಜೀವನಕ್ರಮದಲ್ಲಿ ಇದನ್ನೆಲ್ಲ ಶಾಂತವಾಗಿ ಚಿಂತನಮಾಡುವಷ್ಟು ಬಿಡುವೇ ಇಲ್ಲ. ಜನಕ್ಕೆ ಏನೋ ಬಾಳೆಲ್ಲ ತುಂಬಿಕೊಂಡ ಹಾಗೆ, ತೃಪ್ತರಾದ ಹಾಗೆ ಎನಿಸುತ್ತದೆ. ಅದರಿಂದ ಅಧಿಕಾರದಲ್ಲಿರುವವರು ತಮ್ಮ ಮನಸ್ಸಿಗೆ ಬಂದಂತೆ ಮಾಡಲು ಅನುಕೂಲವಾಗುತ್ತದೆ.

ಇದಕ್ಕೆಲ್ಲ ಬಳಸುವ ಉಪಾಯವೂ ಬಹಳ ಸುಲಭ ಹಾಗೂ ಸರಳ. ಮನುಷ್ಯ ಆತ್ಮತೃಪ್ತಿಗಾಗಿ ಕೆಲಸಮಾಡುವುದು ಪ್ರಕೃತಿನಿಯಮ. ಆದ್ದರಿಂದ ಅವನ ಪ್ರಯತ್ನಗಳಿಗೆ ಬೀಜ ಅವನ ಬಯಕೆ, ಇಷ್ಟಾರ್ಥ. ಅವನ ಬಯಕೆಗಳು ಹೆಚ್ಚಿದರೆ, ಅದರ ಸಿದ್ಧಿಗಾಗಿ ಅವನ ಪ್ರಯತ್ನವೂ ಅಷ್ಟು ಹೆಚ್ಚಬೇಕು. ಜನರ ಜೀವನದ ಮಟ್ಟವನ್ನು ಹೆಚ್ಚಿಸಬೇಕು, ಅಟ್ಟಹಾಸದ ಜೀವನವನ್ನು ಬಳಕೆಗೆ ತರಬೇಕು ಎಂಬುದರ ಗುಟ್ಟು ಇದೇ. ಹೀಗೆ ಮಾಡಿ ಅವನಿಗೆ ಮೂಗುದಾರ ಹಾಕಿದರೆ ತಾನೆ ಅವನ ಸ್ವೇಚ್ಛೆ, ಸ್ವಾತಂತ್ರ್ಯ, ಚಲನವಲನ ಮೊಟಕಾಗಿ ಯಾರು ಮೂಗುದಾರ ಹಿಡಿದು ನಡೆಸುತ್ತಾರೋ ಅವರು ತೋರಿದ ದಾರಿಯಲ್ಲಿ ಹೋಗುವಂತೆ ಆಗುವುದು. ಹೀಗೆ ಲಗಾಮು ಹಾಕಿಕೊಂಡವನಿಗೆ ವಿಚಾರ – ಆಲೋಚನೆ ಏನು ಬಂತು ? ಕಣ್ಣುಮುಚ್ಚಿ, ಬಾಯಿಮುಚ್ಚಿ ಹೇಳಿದತ್ತ ಹೊರಳುವುದೇ !

ಈಗ ಜಗತ್ತು ಭಾರಿ ಉತ್ಪಾದಕನ ಕೈಲಿದೆ. ಜನಗಳ ಬಾಯಿ ಮುಚ್ಚಿಸಿ ಎರಡೂ ಕೈಯಲ್ಲಿ ಬಾಚಿ ದೋಚಿಕೊಳ್ಳುವಂಥ ವ್ಯವಸ್ಥೆ ಕಟ್ಟಿದಾನೆ ಅವನು. ಶಾಂತಿಯ ಕಾಲದಲ್ಲಿ ಬೈಸಿಕಲ್ ಮಾಡಿ ಮಾರುತ್ತಾನೆ. ಯುದ್ಧಕಾಲದಲ್ಲಿ ಬಾಂಬು, ಬಂದೂಕು ಮಾಡಿ ಮಾರುತ್ತಾನೆ. ಅವನ ಸ್ವಾರ್ಥಪೂರ್ಣ ಉಪಾಯ ಗಳನ್ನು ಅರಿಯಲಾರದೆ ಈ ಆರ್ಥಿಕ ವ್ಯವಸ್ಥೆಯನ್ನು ಕಾಪಾಡಲು ಜನ ತಮ್ಮ ಮಕ್ಕಳನ್ನು ಬಲಿಕೊಡುತ್ತಾರೆ. ಇದೆಲ್ಲವೂ ಏತಕ್ಕಾಗಿ ? ಕೆಲಸಕ್ಕೆ ಅಗತ್ಯವಾದ ಶರೀರಶ್ರಮವನ್ನು ತಪ್ಪಿಸಿಕೊಂಡು, ಇತರರ ಶ್ರಮದ ಫಲವಾದ ಸುಖ – ಸಂತೋಷವನ್ನು ಅನುಭವಿಸಲಿಕ್ಕೆ !

ಸರಿಯಾದ ಪೌಷ್ಟಿಕಾಹಾರ ಮೈಗೆ ಶಕ್ತಿ, ಸಾಮರ್ಥ್ಯ, ಆರೋಗ್ಯಗಳನ್ನು ಕೊಡುವಂತೆ ಸರಿಯಾದ ಕೆಲಸವೂ ಕೊಡುತ್ತದೆ. ಅದು ಮೈಗೆ ವ್ಯಾಯಾಮ, ಮನಸ್ಸಿಗೆ ವಿಕಾಸ, ಆತ್ಮತೃಪ್ತಿಗಳನ್ನು ಕೊಡುತ್ತದೆ. ಶಿಸ್ತು ಕಷ್ಟಗಳನ್ನು ತಪ್ಪಿಸಿ. ಅದನ್ನೆಲ್ಲ ತಬ್ಬಲಿಗಳಾದ ನಿರ್ಭಾಗ್ಯರ ವರ್ಗಕ್ಕೆ ಹೊರಿಸಿ, ಕೆಲಸದ ಸುಖ – ಸಂತೋಷಗಳನ್ನೆಲ್ಲ ಮುಂಬರಿದವರಿಗೇ ಮೀಸಲಾಗಿಟ್ಟುಕೊಳ್ಳುವುದು ಈಗಿನ ಮನೋವೃತ್ತಿ. ಆದುದರಿಂದ ಕೆಲಸದ ಬೇರೆ ಅಂಗಗಳನ್ನು ವಿಂಗಡಿಸಿ, ಬೇರೆ ಆಟ – ಪಂದ್ಯಗಳನ್ನೇರ್ಪಡಿಸಿ ಅದರಲ್ಲಿ ಆನಂದವನ್ನುಂಟುಮಾಡುವ ಉಪಾಯಗಳನ್ನು ಮಾಡಿದ್ದಾರೆ. ಹೀಗೆ ಕೆಲಸದಲ್ಲಿ ದುಡಿತ ಬೇರೆ, ಆಟ ಬೇರೆ ಆಗಿ ದುಡಿತವೆಲ್ಲ ಕೆಲವರಿಗೆ, ಆಟ – ವಿನೋದವೆಲ್ಲ ಕೆಲವರಿಗೆ ಆಗಿದೆ. ಹೀಗೆ ವಿಭಾಗವಾದಾಗ ದುಡಿತದ ಕೆಲಸ ಬೇಸರವಾಗುತ್ತದೆ. ಆಟದ ಕೆಲಸ ವ್ಯಸನವಾಗುತ್ತದೆ. ಎರಡೂ ಹಿತವಲ್ಲ. ದುಡಿತಗಾರ ಉಪವಾಸದಿಂದ ಸಾಯುತ್ತಾನೆ. ಯುಗಯುಗದಲ್ಲೂ ಈ ಪ್ರಯೋಗ ನಡೆದಿದೆ. ಮಾನವನನ್ನು ಪರಿಪಕ್ವತೆಗೆ ಒಯ್ಯಲು ಈ ಏರ್ಪಾಟು ಅಸಮರ್ಥ ಎಂಬುದು ಸಿದ್ಧವಾಗಿದೆ. ನಮ್ಮ ಕಾಲದಲ್ಲಿಯೆ ಶ್ರಮವಿಲ್ಲದೇ ಸುಖಪಡಬೇಕೆಂಬ ಪ್ರಯತ್ನದ ಫಲವಾಗಿ ಮಾನವ ಜಾತಿಯು ಯುದ್ಧ, ರೋಗ ರುಜಿನ, ಬರ, ಸಾವುಗಳಿಗೆ ತುತ್ತಾಗುತ್ತಿರುವುದನ್ನು ನೋಡುತ್ತಿದ್ದೇವೆ.

ಇದು ಇನ್ನು ಸಾಕು ಎಂದು ನಾವು ಕೂಗಬೇಡವೆ ? ಇನ್ನಾದರೂ ನಾವು ಎಚ್ಚರವಾಗಬೇಡವೆ ?

೧೩. ಶ್ರಮ ವಿಭಾಗ

ಶ್ರಮವಿಭಾಗದಿಂದ ದಕ್ಷತೆ, ಕೌಶಲಗಳು ಲಭಿಸುತ್ತವೆ. ಇದನ್ನು ಯಾರೂ ಇಲ್ಲವೆನ್ನರು. ಈ ಬಗೆಯ ವಿಶಿಷ್ಟ ಕುಶಲತೆಯ ಸಂಪಾದನೆ ಆದಿಯಿಂದಲೂ ರೂಢಿಯಲ್ಲಿದೆ ನಮ್ಮ ದೇಶದಲ್ಲಿ. ಕಡೆಕಡೆಗೆ ಆ ಪದ್ಧತಿ ವಂಶಪಾರಂಪರ್ಯವಾಗಿ ಜಾತಿಗಳಿಗೆ ಜನ್ಮ ಕೊಟ್ಟಿತು. ಈ ಬಗೆಯ ನಾನಾ ತೊಡಕುಗಳುಂಟಾಗಿ ನಮಗೆ ಮುಂದೆ ದಾರಿಯೇ ಕಾಣದಾಗಿದೆ.

ಶ್ರಮವಿಭಾಗ ಮಾಡುವ ನೆಪದಲ್ಲಿ ಪಾಶ್ಚಾತ್ಯ ಕೈಗಾರಿಕೋದ್ಯಮಿಗಳು, ಉದ್ಯೋಗವಾದಿಗಳು ಕೆಲಸವನ್ನು ತೀರಾ ಸೂಕ್ಷ್ಮ ಕ್ರಿಯೆಗಳನ್ನಾಗಿ ವಿಭಾಗಿಸಿದ್ದಾರೆ. ಅದರಿಂದ ಕೆಲಸವೆಂದರೂ ಕತ್ತೆಚಾಕರಿ ಎಂದರೂ ಒಂದೇ ಆಗಿದೆ. ಕೆಲಸವೆಂದರೆ ಒಂದು ಶಾಪವಾಗಿಬಿಟ್ಟಿದೆ.

ಕೆಲಸ ಮಾಡಿದರೆ ಬರುವ ಮತ್ತು ಉಳಿದ ಲಾಭ ಏನೇ ಇರಲಿ, ಕೆಲಸಗಾರನಿಗೆ ಆ ಕೆಲಸ ಹಿತಕರವಾಗಿರಬೇಕು. ಕೆಲಸದಲ್ಲಿ ಉಲ್ಲಾಸ ಹುಟ್ಟುವಂತಿರಬೇಕು. ಅದರ ಪ್ರತಿಯೊಂದು ಅಂಶದಲ್ಲೂ ಸಾಕಷ್ಟು ವೈಶಿಷ್ಟ್ಯವಿರಬೇಕು. ಇಲ್ಲದಿದ್ದರೆ ಕೆಲಸ ಜಡವಾಗುತ್ತದೆ, ಮೈಗೆ ಆಯಾಸವಾಗುತ್ತದೆ. ಆದುದರಿಂದ ಶ್ರಮವಿಭಾಗದ ಪ್ರಯೋಜನಕ್ಕೂ ಕೆಲವು ಮಿತಿಗಳಿವೆ. ಅದನ್ನು ದಾಟಿದರೆ ಶ್ರಮ ಅನರ್ಥಕಾರಿಯಾಗುತ್ತದೆ.

ಒಂದು ಕೆಲಸವನ್ನು ವಿಭಾಗಿಸಿದಾಗ ಒಂದೊಂದು ಅಂಶವೂ ಸಾಧ್ಯವಿದ್ದ ಮಟ್ಟಿಗೆ ಇಡೀ ಕೈಗಾರಿಕೆಯನ್ನೇ ಮಾಡಿದಂತಿರಬೇಕು. ಗಾಣದೆತ್ತಿನಂತೆ ಬರೀ ಚಕ್ರ ಸುತ್ತುವ ಕೆಲಸವಾಗಬಾರದು. ಬಡಗಿಯ ಕೆಲಸವನ್ನು ಹಂಚುವುದಾದರೆ ಗಾಲಿ ಮಾಡುವುದೊಂದು, ಗಾಣ ಮಾಡುವುದೊಂದು ವಿಭಾಗ ಮಾಡಬಹುದು. ಎರಡೂ ಬಹಳ ಕುಶಲವಾದ ವೃತ್ತಿಗಳೇ. ಕೆಲಸಗಾರರ ಸಮಸ್ತ ಕೌಶಲಕ್ಕೂ ಇಲ್ಲಿ ಅವಕಾಶವಿದೆ. ಅದರಲ್ಲಿ ಉತ್ಪತ್ತಿಯಾದ ವಸ್ತುಗಳೂ ಪೂರ್ಣವಸ್ತುಗಳು. ಮಾರಾಟಕ್ಕೆ ಸಿದ್ಧ. ಇದನ್ನು ಬಿಟ್ಟು ಈ ಕೈಗಾರಿಕೆಯನ್ನು ಇನ್ನೂ ವಿಭಾಗ ಮಾಡಿ ಗುಂಬ ಮಾಡುವವನು ಬೇರೆ, ಅರೆಕಾಲು ಮಾಡುವವನು ಬೇರೆ, ಮರ ಕಡಿಯುವವನು ಬೇರೆ ಹೀಗೆ ಹಂಚಿದರೆ ಆ ಕೆಲಸ ಕೈಗಾರಿಕೆಯಾಗದೆ ಬರೀ ಜಡ ಕರ್ಮವಾಗುತ್ತದೆ. ಚರ್ಮದ ಕೆಲಸದಲ್ಲಿ ಪಾದರಕ್ಷೆಗಳನ್ನು ಮಾಡುವುದು ಒಂದು ಸಂತೋಷಕರ ವಿಭಾಗವಾಗಬಹುದು. ಕೆರದ ಹಿಮ್ಮಡಿಯ ಬಿಲ್ಲೆಗಳನ್ನೋ ಬ್ರ

ಉಂಗುಟದ ಪಟ್ಟಿಗಳನ್ನೋ ಕತ್ತರಿಸಿ ಕೊಡುವ ಕೆಲಸವಾದರೆ ಬೇಸರವಾಗುತ್ತದೆ. ಅದೇ ಒಂದು ವಿಭಾಗವಾಗಲಾರದು. ಈಗಿನ ಕಾಲದ ಕಾರ್ಖಾನೆಗಳಲ್ಲಿ ಶ್ರಮ ವಿಭಾಗ ಎಷ್ಟು ದೂರ ಹೋಗಿದೆಯೆಂದರೆ, ಒಬ್ಬ ಮನುಷ್ಯ ದಿನವೆಲ್ಲಾ ಮೊಳೆ ಹೊಡೆಯಬೇಕು, ಇಲ್ಲವೆ ತಿರುಪು ತಿರುವಬೇಕು, ದಿನವೂ ಎಂಟೆಂಟು ಗಂಟೆ ಇಂಥ ಕೆಲಸ ಮಾಡುತ್ತ ವರ್ಷದಲ್ಲಿ ೩೦೦ ದಿನ ಕಳೆಯಬೇಕಾದರೆ ಕೆಲಸಗಾರನ ನರಗಳೆಲ್ಲ ಸೆಟೆದುಕೊಂಡು ಕಟ್ಟಕಡೆಗೆ ಅವನು ಹುಚ್ಚರ ಆಸ್ಪತ್ರೆ ಸೇರಬೇಕಾದೀತು. ಕೈಗಾರಿಕೆಯಲ್ಲಿ ಬಹಳ ಮುಂಬರಿದ ಅಮೆರಿಕಾ ದೇಶದಲ್ಲಿ ಜನಕ್ಕೆ ಉಳಿದೆಲ್ಲ ಬೇನೆಗಳಿಗಿಂತ ನರಗಳ ಬಾಧೆಯೇ ಹೆಚ್ಚು. ಮನುಷ್ಯನ ರಚನೆಯು ಯಂತ್ರದ ರಚನೆಯು ಹಾಗಲ್ಲ. ಅವನ ಕೆಲಸದಲ್ಲಿ ಸಮತೂಕ, ಸಾಮರಸ್ಯ ಬೇಕು; ದೇಹದ ಎಲ್ಲ ಶಕ್ತಿಗಳೂ ಉಪಯೋಗವಾಗಬೇಕು. ಕೆಲಸ ಸಾಕಷ್ಟು ಪೂರ್ಣವಾದುದಾದರೇನೇ ಇದು ಸಾಧ್ಯ.

ಕೇವಲ ಒಂದು ಅಲ್ಪಕ್ರಿಯೆ ಎನಿಸುವಷ್ಟು ತೀರಾ ಚಿಕ್ಕ ಅಂಶವಾದರೆ ಮನುಷ್ಯನ ಶಕ್ತಿ ವ್ಯರ್ಥವಾಗಿ, ಕೆಲಸಗಾರರು ಬಹುಬೇಗ ನಿರುದ್ಯೋಗಿಗಳಾಗಲು ದಾರಿಯಾಗುತ್ತದೆ. ಕಷ್ಟಪಟ್ಟು ದುಡಿಯುವ ಕೆಲಸಗಾರ ೪೫ ವರ್ಷವಾಗುವುದರೊಳಗಾಗಿಯೆ ನಿಶ್ಯಕ್ತನಾಗುತ್ತಾನೆ. ಈ ಮನುಷ್ಯಬಲದ ವಿನಾಶವೆಲ್ಲ ಸಮಾಜದ್ದು; ಯಾರು ಸತ್ತರೂ, ಯಾರು ಸುಣ್ಣವಾದರೂ ಗಿರಣಿಗಾರನ ಕೆಲಸವೇನು ನಿಲ್ಲದು. ಅವನ ಉದ್ಯೋಗ ಪದ್ಧತಿಯಿಂದ ಎಷ್ಟು ಹಾನಿ ಎಂಬುದೂ ತಾನು ಎಂಥ ಲೋಕಕಂಟಕನಾದಾನು ಎಂಬುದೂ ಕೂಲಿ ಮಾಡಿಸಿಕೊಳ್ಳುವ ಈ ಬಂಡವಾಳಗಾರನಿಗೆ ಅರ್ಥವಾಗದು. ಒಬ್ಬ ಕೆಲಸಗಾರ ಹಾಸಿಗೆ ಹಿಡಿದರೆ ಅವನನ್ನು ತೆಗೆದು ಹಾಕಿ ಇನ್ನೊಬ್ಬನನ್ನು ನೇಮಿಸಿಕೊಳ್ಳುತ್ತಾನೆ. ಪ್ರೀತಿ–ವಿಶ್ವಾಸ ಎಳ್ಳಷ್ಟೂ ಇಲ್ಲ. ಸಿಗರೇಟು ಸೇದಿದ ಮೇಲೆ ಉಳಿದ ತುಂಡನ್ನು ಬಿಸುಡುವಂತೆ, ಅಷ್ಟೇ ನಿರ್ಯೋಚನೆಯಿಂದ, ತನ್ನ ಕೆಲಸದಲ್ಲಿಯೆ ಆಯುಸ್ಸನ್ನೆಲ್ಲ ಕಳೆದು ಎದೆಯೊಡೆದುಕೊಂಡ ಕೆಲಸಗಾರರನ್ನೂ ಗಿರಣಿಗಾರ ಕಿತ್ತು ಬಿಸುಡುತ್ತಾನೆ. ಮುಪ್ಪಡರಿ ಮೈ ಸವೆದವರನ್ನು ಹೀಗೆ ಕಿತ್ತು ಹಾಕಿದರೆ ಅವನಿಗೆ ಲಾಭವೇ! ಅವರ ಸ್ಥಾನಕ್ಕೆ ಬಂದ ಹೊಸ ಹುಡುಗರು ಹೆಚ್ಚು ಕೆಲಸ ಮಾಡಬಲ್ಲರು. ಹೀಗೆ ಕೆಲಸಗಾರರ ಜೀವನವನ್ನು ಹಿಂಡಿ ತೆಗೆದುದಕ್ಕೆ ಗಿರಣಿಗಾರ ಏನೂ ಪರಿಹಾರ ಕಟ್ಟಿಕೊಡಬೇಕಾಗಿಲ್ಲ. ಅವನಿಗೆ ಜವಾಬದಾರಿಯೂ ಇಲ್ಲ. ಮಾನವ ಜೀವನ, ಸಾಮರ್ಥ್ಯಗಳ ಅಪವ್ಯಯವಲ್ಲವೆ–ಇದು? ಇಂಥ ಅಪವ್ಯಯವು ಸ್ಥಿರತೆಗೆ–ಶಾಶ್ವತತೆಗೆ ದಾರಿ ಮಾಡೀತೆ? ಒಂದೆರಡು ಕಾಸು ಹೆಚ್ಚು ಕೂಲಿಯನ್ನು ಇವರಿಗೆ ಈಗ ಕೊಟ್ಟರೆ ಅದರ ಅರ್ಥ, ಆ ಕೆಲಸಗಾರರ ಮುಂದಿನ ಬದುಕನ್ನು, ೫೫ ವರ್ಷವಾದ ಮೇಲಿನ ಅವರ ಬದುಕನ್ನು, ಈಗಲೇ ಕೊಂಡು ಬಳಸಿದಂತೆ.

ಹೆಚ್ಚು ಕೂಲಿ–ಸಂಬಳ ಎಂಬುದನ್ನು ದೊಡ್ಡದು ಮಾಡಿ ತೋರಿಸಿದರೆ, ರಾಶಿ ರಾಶಿ ಪದಾರ್ಥ ಎಂದು ಬೆರಳು ಮಾಡಿದರೆ, ಬಾಳವುಟ್ಟ ಎಂಬ ಆಡಂಬರವನ್ನು ಎತ್ತಿತೋರಿಸಿದರೆ, ಮನುಷ್ಯನ ಉತ್ತಮ ಗುಣಗಳ ವಿಕಾಸಕ್ಕೆ ಅವಕಾಶ ಕೊಡದೆ ಇವೆಲ್ಲವನ್ನೂ ಮಾಡಿದರೂ, ಮನುಷ್ಯನ ಇಚ್ಛಾಶಕ್ತಿಯನ್ನು ನಷ್ಟಗೊಳಿಸಿ, ಮೌಲ್ಯಗಳನ್ನು, ಆಳತೆಗಳನ್ನು ತಲೆಕೆಳಗು ಮಾಡಿದಂತೆ.

ಇಂಥ ಸನ್ನಿವೇಶ ಇಲ್ಲದ ಕಡೆಗೆ ಕೆಲಸ ಮಾಡುವವನು ಗಾಣದೆತ್ತಿನ ಹಾಗೆ. ಗಾಣದೆತ್ತಿಗೆ ಕಣ್ಣುಕಟ್ಟಿ ಗಾಣಕ್ಕೆ ಹೂಡುತ್ತಾರೆ. ಎತ್ತಿಗೆ ತಾನು ಎಲ್ಲಿಗೆ ಹೋಗುತ್ತೇನೆಂಬುದು ತಿಳಿಯದು. ಮೂಗುದಾರ ಎಳೆದ ಕಡೆ ಅದು ಹೋಗಬೇಕು. ಅದನ್ನು ಕೂಡ ಮನುಷ್ಯ ಹಿಡಿದು ನಡೆಸ. ಗಾಣಕ್ಕೇ ಆ ದಾರವನ್ನು ಕಟ್ಟುತ್ತಾರೆ. ಆ ಪಶು ಯಾವಜ್ಜೀವವೂ ಸುಮ್ಮನೆ ಒಂದೇ ದಿಕ್ಕಿಗೆ ಕಣ್ಣುಮುಚ್ಚಿ ತುಳಿದು ಸುತ್ತಬೇಕು. ಇಷ್ಟೆಲ್ಲ ನಡೆದರೂ ಅದು ಒಂದು ಹೆಜ್ಜೆಯೂ ಮುಂಬರಿಯದು. ಆ ಎತ್ತು ಅಣಿಮಾಡಿದುದರಲ್ಲೇ ಗಾಣಿಗ ಅದಕ್ಕೊಂದಿಷ್ಟು ಹಿಂಡಿ ಹಾಕುತ್ತಾನೆ ಉದಾರವಾಗಿ. ನಮ್ಮ ಕಾರ್ಖಾನೆಯಲ್ಲಿಯ ಕೂಲಿಗಳ ಪಾಡೂ ಇಷ್ಟೇ. ಜೀವನದ ಆನಂದ, ಸ್ವಾತಂತ್ರ್ಯದ ಸವಿ ಅವರಿಗಿಲ್ಲ. ವಿಕಾಸ, ವೃದ್ಧಿಗಳ ಅವಕಾಶ ಒಂದೂ ಅವರಿಗಿಲ್ಲ. ಪ್ರಕೃತಿ ಏರ್ಪಡಿಸಿದ 'ಕೆಲಸ' ಇದಲ್ಲ. ಇದರಿಂದ ಕೆಲಸಗಾರರಿಗೆ ಸರ್ವನಾಶ, ಆತ್ಮಹಾನಿಯೆ ವಿನಾ ಬೇರಿಲ್ಲ. ಎಷ್ಟೇ ಹಣಕೊಟ್ಟರೂ ಆ ಹಾನಿಯನ್ನು ತುಂಬಲಾರದು.

ಕೈಗಾರಿಕೋದ್ಯಮಿಗಳು ತಮ್ಮ ಪಾಲಿನ ದುಡಿತವನ್ನು ತಪ್ಪಿಸಿ ಪರರ ತಲೆಯ ಮೇಲೆ ಹೊರಿಸಿ, ಕೆಲಸದ ಸುಖ–ವಿನೋದಗಳನ್ನು ಮಾತ್ರ ಹಂಚಿಕೊಂಡರೆ ನಮ್ಮ ಸಮಾಜವಾದಿ ಗೆಳೆಯರು ಕೆಲಸದಿಂದ ವಿಶ್ರಾಂತಿಯನ್ನೇ ಕಿತ್ತುಹಾಕೋಣ ಎನ್ನುತ್ತಾರೆ. ನಿಜವಾಗಿ ಅರಿತರೆ ಎಲ್ಲಾ ಕೆಲಸದಲ್ಲೂ ಬಿಡುವು, ದಣಿವಾರಿಕೆ ಅದರೊಳಗಡೆಯೆ ಅಡಕವಾಗಿರಬೇಕು. ಸಂಗೀತದಲ್ಲಿ ವಿರಾಮ ಹೇಗೋ ಕೆಲಸದಲ್ಲಿ ಬಿಡುವು, ವಿಶ್ರಾಂತಿ ಹಾಗೆ ಕೆಲಸದ ಅಂಗ. ಅವೆರಡನ್ನೂ ವಿಂಗಡಿಸಲಾಗದು. ಬಿಡುವು ಎಂದರೆ ಎಲ್ಲಾ ಕೆಲಸವನ್ನೂ ಬಿಟ್ಟ ನಿಷ್ಕ್ರಿಯೆಯಲ್ಲ. ಅದು ಸಾವು. ಬಿಡುವು ಎಂದರೆ ಸೋಮಾರಿತನವಲ್ಲ, ಕಾಲಹರಣವೂ ಅಲ್ಲ, ಸೋಮಾರಿತನ ಮನುಷ್ಯನನ್ನು ಕ್ಷಯಿಸುತ್ತದೆ. ಒಂದು ಚಟುವಟಿಕೆ, ಒಂದು ಕೌಶಲಕ್ಕೆ ಬಿಡುವಾಗಿ ಇನ್ನೊಂದು ಚಟುವಟಿಕೆಗೆ, ಕೌಶಲ ಮೊದಲಾದಾಗಲೇ ನಿಜವಾದ ಬಿಡುವು. ಮೇಜಿನ ಮುಂದೆ ಕೂತು ಬರೆವ ಬುದ್ಧಿಜೀವಿಗೆ ತೋಟಗಾರಿಕೆಯಂಥ ಒಂದು ಅಭಿರುಚಿಯಿರಬೇಕು. ಈ ಲೇಖನಿಯ ವೃತ್ತಿಯಿಂದ ಆದ ಭಾರವನ್ನು ಅದು ಹಗುರಮಾಡೀತು. ಪ್ರತಿಯೊಂದು ಕೆಲಸಕ್ಕೂ ಪ್ರಕೃತಿ ಒಂದು ಉದ್ದೇಶ್ಯ-ಒಂದು ವ್ಯಾಪ್ತಿಯನ್ನು ಏರ್ಪಡಿಸಿದೆ. ಅದರಲ್ಲಿ ಹೀಗೆ ಈ ಎರಡೂ ಪೂರಕ

ಎರಡೂ ಪೂರಕ ವೃತ್ತಿಗಳಿರಬೇಕು. ಅಲ್ಲದೆ ಕೆಲಸದ ಉದ್ದೇಶವನ್ನು ಮನುಷ್ಯ ಮುರಿಯಬಾರದು.

ಒಮ್ಮೆ ಒಬ್ಬ ಅನುಭವಶಾಲಿ ಇಂಜನಿಯರೊಡನೆ ಕೆಲಸದ ಈ ಅಂಶವನ್ನು ಚರ್ಚಿಸುತ್ತಿದ್ದೆ. ಕೆಲಸ ಮತ್ತು ವಿಶ್ರಾಂತಿ ಎರಡೂ ಒಟ್ಟಿಗೆ ಒಂದೇ ಸಲ ಹೇಗೆ ಎಂಬುದು ಆತನಿಗೆ ಸಮಸ್ಯೆಯಾಯಿತು. ಇದನ್ನು ತರ್ಕಮಾಡಿ ಹೇಳುವುದಕ್ಕಿಂತ ಕಣ್ಣಾರೆ ತೋರಿಸುವುದು ಸುಲಭವೆಂದು ಒಬ್ಬ ಕೆಲಸಗಾರನ ಬಳಿ ಹೋಗಿ ನೋಡೋಣ ಎಂದೆ. ಇಬ್ಬರೂ ಒಬ್ಬ ಕೆಲಗಾರನ ಬಳಿಗೆ ಹೋದೆವು. ಆ ಕೆಲಸಗಾರ ಟೋಪಿ ಹೊಲೆದು ತನ್ನ ಬದುಕು ಸಾಗಿಸುತ್ತಿದ್ದ. ಇದರಲ್ಲಿ ಕೆಲಸ ಯಾವುದು, ವಿಶ್ರಾಂತಿ ಯಾವುದು ತೋರಿಸಿ ಎಂದ ಇಂಜನಿಯರು.

ಕೆಲಸಗಾರನನ್ನು ಕೇಳಿದೆವು, "ನಿಮ್ಮ ಕೆಲಸವನ್ನು ಹೇಗೆ ನಡೆಸುತ್ತೀರಿ? ಆತ ತುಪ್ಪಲದಂತೆ ಕಾಣುವ ರೇಶಿಮೆ ಬಟ್ಟೆಯನ್ನು ತೆಗೆದುಕೊಂಡು ಅಂಡಾಕಾರವಾಗಿ ಅದರಿಂದ ಒಂದು ತುಂಡನ್ನು ಕತ್ತರಿಸಿಕೊಂಡ. ಆಮೇಲೆ ಕೆಂಪು ಒಳಪಟ್ಟಿ ಬಟ್ಟೆಯನ್ನು ತೆಗೆದು ಅದರಲ್ಲೂ ಹಾಗೇ ಒಂದು. ತುಂಡನ್ನು ಕತ್ತರಿಸಿದ. ಅದಕ್ಕೆ ಹಳೇ ಪತ್ರಿಕೆಯ ಚೂರುಗಳನ್ನು ಜೋಡಿಸಿ ಸುತ್ತಲೂ ಕೆಲವು ಹೂವುಗಳನ್ನು ಹೊಲೆದ. ಆಮೇಲೆ ಮೇಲ್ಭಾಗದಲ್ಲಿ ಒಂದೆರಡು ತೂತು ಮಾಡಿ ಅವಕ್ಕೆ ಕೆಲವು ಕಣ್ಣಿರುವ ಗುಂಡಿಗಳನ್ನು ಜೋಡಿಸಿದ. ಟೋಪಿಯ ಮೇಲ್ಗಡೆ ಗಾಳಿಯಾಡಲು ಸಾಧ್ಯವಾಗುವಂತಾಯಿತು. ಹೀಗೆ ಆತ ತನ್ನ ಕೆಲಸದಲ್ಲಿ ಮಗ್ನನಾಗಿದ್ದಾಗ ಈ ಚಿಕ್ಕ ಕಚಿಕ್ಕ ಕಸುಬಿನಲ್ಲಿ ಅಂತರರಾಷ್ಟ್ರೀಯ ವ್ಯಾಪಾರ ಸಮಸ್ಯೆ ಹೇಗೆ ಬಗೆಹರಿಯುತ್ತದೆಂಬುದನ್ನು ಇಂಜನೀಯರಿಗೆ ತಿಳಿಸಿದೆ. ಆ ರೇಷ್ಮೆ ತುಪ್ಪಟ ಇಟಲಿಯದು, ಕೆಂಪು ಒಳಪಟ್ಟಿ ಜಪಾನಿನದು. ಆ ಕೆಲಸಗಾರ ಕತ್ತರಿಸುತ್ತಿದ್ದಾಗ ಒಂದು ಬಗೆಯ ಕರ್ಮ ನಡೆಯಿತು. ಹೂಗಳನ್ನು ಹೊಲೆಯುವಾಗ ದೇಹದ ಮತ್ತೊಂದು ಭಾಗ. ಕೆಲಸ ಮಾಡಿತು. ಆಗ ಕಲೆಗಾರಿಕೆ ಬಿಡುವು ! ಹೀಗೆ ನಾವು ಮಾತನಾಡುತ್ತಿದ್ದಾಗ ಆತನ ಚಿಕ್ಕ ಮಗು ಮನೆಯ ಹಿತ್ತಿಲಲ್ಲಿ ಅಳತೊಡಗಿತು. ಒಡನೆಯೇ ಆ ಕೆಲಸಗಾರ ಎದ್ದು ಹೋಗಿ ಮಗುವನ್ನು ಸಂತಯಿಸಿ, "ಮನೆಗೆ ಹೊರಗಿನವರು ಬಂದಿದ್ದಾಗ ಮಗುವನ್ನು ಅಳಲಿಕ್ಕೆ ಬಿಡಬಹುದೆ?" ಎಂದು ಹೆಂಡತಿಯನ್ನು ಗದರಿಸಿದ, ಗಂಡ-ಹೆಂಡಿರ ಈ ಜಗಳ ನಡೆಯುತ್ತಿದ್ದಾಗ ನಾನು, "ನೋಡಿದಿರಾ, ಇದು ಆತನಿಗೆ ಬಿಡುವು, ವಿಶ್ರಾತಿ, ವಿನೋದ" ಎಂದೆ.

ಇಂಜಿನೀಯರು ಗಟ್ಟಿಯಾಗಿ ನಕ್ಕು, "ಈಗ ನಿಮ್ಮ ಅಭಿಪ್ರಾಯ ಅರ್ಥವಾಯಿತು" ಎಂದರು!

ಪ್ರಕೃತಿ ಸಹಜವಾಗಿ ಜೀವನವನ್ನು ನಡೆಸಿದರೆ ಅದರಲ್ಲಿಯೇ ಬಾಳಿಗೆ ಬೇಕಾದ

ರಸಭಾವವೆಲ್ಲ ಒದಗುತ್ತದೆ. ಅದಕ್ಕಾಗಿ ಕೃತ್ರಿಮ ಸನ್ನಿವೇಶ, ಪ್ರಯತ್ನ ಒಂದೂ ಬೇಕಾಗಿಲ್ಲ. ಪ್ರಕೃತಿ ಸ್ವಯಂ ಸಮರ್ಥವಾದುದು. ಬಾಳಿನಲ್ಲಿ ಇದು ಅದರ ಕೆಲಸ. ಮನುಷ್ಯ ತನ್ನ ಸರ್ವ ಶಕ್ತಿಗಳನ್ನೂ ಬೆಳೆಸಿ ತನ್ನ ಜೀವಮಾನದಲ್ಲಿ ತನ್ನ ವ್ಯಕ್ತಿತ್ವವನ್ನು ನಿರ್ಮಿಸಿಕೊಂಡು, ತನ್ನ ಕೃತಿಗಳಲ್ಲಿ ತನ್ನ ವ್ಯಕ್ತಿತ್ವವನ್ನು ಸ್ಥಿರವಾಗಿ ಮೂಡಿಸಲು ಇದರಿಂದ ಅವಕಾಶವಾಗುತ್ತದೆ. ಕೃತಿಯೇ ಮನುಷ್ಯನ ಉತ್ತಮ ಅಂಶ.

ಒಂದು ಬಟ್ಟೆಯ ಚದರಿನ ಮೇಲೆ ತನ್ನ ಕಲಾಕುಶಲತೆಯಿಂದ ಒಬ್ಬ ಕಲೆಗಾರ ಹೇಗೆ ತನ್ನ ಸೌಂದರ್ಯಾನುಭವವನ್ನು ಮೂಡಿಸಿ, ಮುಂದಿನ ಪೀಳಿಗೆಗಳ ಜನ ಮೆಚ್ಚಿ, ತಲೆದೂಗಿ ಆನಂದಿಸುವಂಥ ಒಂದು ಸುಂದರ ಚಿತ್ರವನ್ನು ನಿರ್ಮಿಸುತ್ತಾನೋ ನೋಡಿದೇವೆ. ಆ ಬಟ್ಟೆಯ ಪಟಕ್ಕೆ ಒಂದೊಂದು ಗೆರೆ ಬಣ್ಣವನ್ನು ಹಾಕುತ್ತಿದ್ದಾಗ ನೋಡಿದವರಿಗೆ ಇದು ಏನು ಪ್ರಯಾಸ, ಏನು ಬೇಸರ ಎನಿಸಿರಬೇಕು. ಆ ನಿರಂತರ ಪರಿಶ್ರಮ, ಆ ಬೇಸರದ ದುಡಿತವೇ ಆ ಮಹಾ ಕಲಾಕೃತಿಗೆ ಆಧಾರ. ಒಂದು ಕಲ್ಲಚ್ಚಿನ ಯಂತ್ರದಲ್ಲಿ ಇಂಥ ಕಷ್ಟ– ದುಡಿತ ಯಾವುದೂ ಇಲ್ಲ. ಅದರಲ್ಲಿ ಅಚ್ಚಾಗಿ ಬಂದ ಚಿತ್ರಗಳಿಗೂ ಬೆಲೆಯಿಲ್ಲ. ಕೆಲಸಕ್ಕೆ ಬಾರದ ಕಾಗದದ ತುಂಡಿನ ಬೆಲೆ ಅದಕ್ಕೆ.

ಚಿತ್ರ ಬರೆಯುವ ಮೊದಲೇ ಆ ಬಣ್ಣಗಳನ್ನು ಬಹಳ ಜಾಗರೂಕತೆಯಿಂದ ಕಲೆಸಲು ಎಷ್ಟೋ ಕಾಲ ಬೇಕು. ಅಜಂತಾ ಗುಹೆಯಲ್ಲಿ ತೊಡೆದಿರುವ ಬಣ್ಣಗಳು ಅಷ್ಟು ಪಕ್ವವಾಗಿ ಮೂಡಿಬರುವ ಎಷ್ಟು ವರ್ಷ ಕಾಲ ಅವನ್ನು ಕಲೆಸಿ ಅಳಿಶಿ ಮಾಡಿದ್ದರೋ ಏನೋ! ಇಲ್ಲದಿದ್ದರೆ ನೂರಾರು ವರ್ಷ ಅವು ಬಾಳುತ್ತಿದ್ದವೆ? ಅವು ಆ ಕಾಲದ ಕಲಾವಿದರು ಈ ಬಣ್ಣ ಅರೆಯಲು ಇಷ್ಟು ಕಾಲ ಬೇಕಾಗಿಲ್ಲ ಎಂದು ಗೊಣಗಲಿಲ್ಲ. ಅವರ ಅಸದೃಷ ಕಲಾದಾನವನ್ನಿಂದು ಪ್ರತಿಯೊಂದು ಪೀಳಿಗೆಯೂ ಕೊಂಡಾಡುತ್ತಿದೆ. ಆ ಕಷ್ಟ, ಆ ದುಡಿತವನ್ನು ತಪ್ಪಿಸಿ ಈ ಫಲ ಪಡೆಯುವ ಉಪಾಯ ಒಂದನ್ನೂ ಆ ಚಿತ್ರಗಾರರು ಮಾಡಲಿಲ್ಲ. ಪ್ರಕೃತಿ ಬಹಳ ನಿಷ್ಠುರ ಯಜಮಾನಿ. ಗೊಣಗುತ್ತ, ಅರೆಮನಸ್ಸಿನಿಂದ ಮಾಡಿದ ಕೆಲಸಕ್ಕೆ ಪ್ರಕೃತಿ ಎಂದೂ ಸ್ಥಿರತೆಯನ್ನು ನೀಡಳು. ಮಾಡಿದ ಕೆಲಸ ಸ್ಥಿರವಾಗಿರಬೇಕೆಂದರೆ ಅದು ಪೂರ್ಣ ಕೆಲಸ ಆಗಿರಬೇಕು. ಅರೆಬರೆ ಇರಕೂಡದು. ಆ ಗಳಿಗೆಗೆ ಸಾಕು ಎಂದು ಮಾಡಿದ ಕೆಲಸ ಪ್ರಯೋಜನವಿಲ್ಲ. ಪ್ರಕೃತಿಗೆ ಮೋಸ ಮಾಡಲು, ಅದಕ್ಕೆ ಹೆದರಿಸಲು ಸಾಧ್ಯವಿಲ್ಲ.

ಅದೇ ರೀತಿ, ಬರುವ ಭವಿಷ್ಯದ ಪೀಳಿಗೆಗೂ ಸೊತ್ತಾಗಿ ನಮ್ಮ ಹಿರಿಯರು ಬಿಟ್ಟುಹೋಗಿರುವ ಇನ್ನೊಂದು ಮಹಾಕೃತಿ ಎಲ್ಲೋರಾದ ಗುಹಾಂತ ದೇವಾಲಯಗಳು. ಗುಡ್ಡಗಳನ್ನೇ ಕೊರೆದು ಅಲ್ಲಿ ಗುಡಿ ಕಟ್ಟಿದ್ದಾರೆ. ಏನು

ಶ್ರಮ, ಏನು ಸಾಹಸ! ಆ ಕಲೆಗಾರಿಕೆ, ಲಯ- ಸಾಮರಸ್ಯ ತಪ್ಪಿಸುವ ಅಥವಾ ಕಡಿಮೆ ಮಾಡಿಕೊಳ್ಳುವ ಪ್ಯೈಗಳ್ಳತನ ಬಂದುದಲ್ಲ. ಪೂರ್ಣ ಮನಸ್ಸಿನಿಂದ ಪೂರಾ ದುಡಿದು ನಿರ್ಮಿಸಿದ ಕೃತಿ ಅದು. ಯೋಗ್ಯ ರೀತಿಯಲ್ಲಿ ಮಾಡಿದ ಪರಿಶ್ರಮ ದುಡಿದವರಿಗೂ ಆನಂದ ಕೊಡುತ್ತದೆ. ಅವರ ಕೃತಿಗಳಿಗೂ ಅಂದ ಕೊಡುತ್ತದೆ.

ಶ್ರದ್ಧೆಯಿಂದ ಮಾಡಿದ ಇನ್ನೊಂದು ಕುಶಲಕರ್ಮ ದಿಲ್ಲಿಯ ಕುತುಬ್ ಮಿನಾರಿನ ಬಳಿ ಇರುವ ಕಬ್ಬಿಣದ ಕಂಬ, ಅದರ ಮೇಲೊಂದು ಶಾಸನವಿದೆ. ಆ ಬಯಲಿನಲ್ಲಿ ಮಳೆ, ಗಾಳಿ, ಬಿಸಿಲು, ಛಳಿ ಎಲ್ಲವನ್ನೂ ಇದಿರಿಸಿ ಅಚ್ಚಳಿಯದೆ ಶತಮಾನಗಳಿಂದ ಅಲ್ಲಿ ನಿಂತಿದೆ. ಆ ಸ್ತಂಭ ಇನ್ನೂ ಒಂದು ಚುಕ್ಕೆಯಷ್ಟಾದರೂ ತುಕ್ಕು ಹಿಡಿದಿಲ್ಲ ಅದಕ್ಕೆ. ಈ ಉಕ್ಕನ್ನು ಹಿಂದಿನವರು ಹೇಗೆ ಸಿದ್ಧಗೊಳಿಸಿದರೋ ಆಧುನಿಕ ಲೋಹ ಶಾಸ್ತ್ರಜ್ಞರಿಗೆ ದಿಗ್ಭ್ರಮೆ ಹಿಡಿಸಿದೆ. ಹಿಂದಿನ ಕಾಲದಲ್ಲಿ ಈ ಅದ್ಭುತ ಸ್ತಂಭವನ್ನು ನಿರ್ಮಿಸಿದ ಕಮ್ಮಾರರು ತಮ್ಮ ಕೆಲಸದಲ್ಲಿ ಭಾರ ತಗ್ಗಿಸುವ, ಬೇಗ ಮುಗಿಸುವ ಉಪಾಯಗಳನ್ನು ಹೂಡಲಿಲ್ಲ. ಅಂಥ ಲೋಹವನ್ನು ಸಿದ್ಧಪಡಿಸಲು ಅಗತ್ಯವಾದ ಸಮಸ್ತ ಶ್ರಮವನ್ನೂ ಅವರು ಸಂತೋಷವಾಗಿ ಕೈಗೊಂಡರು. ಪ್ರಕೃತಿಯ ಏರ್ಪಾಡಿನಂತೆ ಕೆಲಸ ಮಾಡಿದರು. ಕೃತಕ ವ್ಯವಸ್ಥೆ ಮಾಡಲಿಲ್ಲ. ಆದರಿಂದ ಈ ಅದ್ಭುತ ಕೃತಿ ಅವರ ನೆನಪು ಕೊಡುತ್ತ ಇಂದಿಗೂ ಉಳಿದಿದೆ.

ಬಂಗಾರದ ಗಣಿ ಕೈಗಾರಿಕೆಯಲ್ಲಿ ಬಹಳ ಸುಖ-ಐಶ್ವರ್ಯ ಇದೆಯೆಂದು ಎಲ್ಲರೂ ತಿಳಿಯುತ್ತಾರೆ. ಆದರೆ ದುಡಿತವೆಲ್ಲ ಒಂದು ವರ್ಗಕ್ಕೆ, ಸುಖವೆಲ್ಲ ಇನ್ನೊಂದು ವರ್ಗಕ್ಕೆ. ಹಿರಣ್ಯಗರ್ಭೆಯಾದ ಬಂಗಾರದ ಜಿಲ್ಲೆ ಎಲ್ಲಕ್ಕಿಂತಲೂ ಬಡಸೀಮೆಯಾಗಿದೆ. ಅಲ್ಲಿಯ ರೈತ ಬಹಳ ಬಡವಾಗಿದ್ದಾನೆ. ಹಾಲು ಕರೆಯದೆ ಒದೆದುಕೊಂಡ ಹಸುವನ್ನು ನೇಗಿಲಿಗೆ ಕಟ್ಟುವಷ್ಟು ಕಷ್ಟದಲ್ಲಿದ್ದಾನೆ ಅಲ್ಲಿಯ ರೈತ.

ಒಂದು ಸಲ ಇಂಥದೊಂದು ಬಂಗಾರದ ಗಣಿಯೊಳಕ್ಕೆ 2000 - ಅಡಿ ಆಳದ್ದು- ಇಳಿದಿದ್ದೆ. ಅಲ್ಲಿ ಕಾಳ್ಗತ್ತಲೆಯಲ್ಲಿ ಚಿಕ್ಕ ಲಾಂದ್ರಗಳ ಬೆಳಕಿನಲ್ಲಿ ಸುರಂಗಗಳೊಳಗೆ ಜನರು ಕೆಲಸ ಮಾಡುತ್ತಿದ್ದರು. ಕಲ್ಲನ್ನು ಸುರಂಗವಿಟ್ಟು ಸಿಡಿಸುತ್ತಿದ್ದರು. ಧೂಳು ಕೊಳೆ ತುಂಬಿತ್ತು. ರಾತ್ರಿಯವರೆಗೆ ಅರೆಹೊಟ್ಟೆ ಕೂಲಿಯಲ್ಲಿ ದುಡಿಯಬೇಕು. ದುಡಿದುಡಿದು ಆ ಭೂಗರ್ಭದಿಂದ ಮೇಲಕ್ಕೆ ಬಂದಾಗ ಆ ಜನ ಜೀವಚ್ಛವಗಳಾಗಿರುತ್ತಿದ್ದರು. ರಾಜ್ಯಕ್ಕೆ ಎಲ್ಲಾ ಜಿಲ್ಲೆಗಳಿಗಿಂತ ಹೆಂಡದ ವರಮಾನ ಹೆಚ್ಚು ಕೊಡುವುದು ಈ ಜಿಲ್ಲೆ! ಇಷ್ಟು ಆಯಾಸವಾದ ಮೇಲೆ ಹೆಂಡದ ಅಮಲಿಗೆ ಕೆಲಸಗಾರರು ಶರಣು ಹೋದರೆ ಏನಚ್ಚರಿ?

ಗಣಿ ಕೆಲಸಗಾರರಲ್ಲಿ ಮೋಹದ ಕಾಯಿಲೆಗಳೂ ಹೆಚ್ಚು. ನರಗಳನ್ನು ಇಷ್ಟು ಸೆಟೆಸಿದರೆ ಹೆಂಗಸು-ಹೆಂಡಗಳನ್ನು ಮೊರೆಹೋಗುವುದು ಸಹಜ. ನನ್ನ ಭೇಟಿ ಮುಗಿದಾಗ ಅಲ್ಲಿನ ವ್ಯವಸ್ಥಾಪಕ ಆ ಜನರ ಯೋಗಕ್ಷೇಮಕ್ಕೇನಾದರೂ ಸೂಚನೆಗಳನ್ನು ಕೊಡಲು ನನ್ನನ್ನು ಕೇಳಿದ. ನಾನು ಎರಡು ಮಾತು ಹೇಳಿದೆ: ೧. ಮೊದಲನೆಯದು ಈ ಗಣಿಯನ್ನು ಮುಚ್ಚಿಬಿಡುವುದು; ೨. ಎರಡನೆಯದು ಈ ಜನ ದುಃಖವನ್ನು ಮರೆಯಲು ಇನ್ನೂ ಕೆಲವು ಹೆಂಡದಂಗಡಿಗಳನ್ನು ಹೆಚ್ಚು ಮಾಡುವುದು. ವ್ಯವಸ್ಥಾಪಕನಿಗೆ ಇದನ್ನು ಕೇಳಿ ಗಾಬರಿಯಾಯಿತು. ಎರಡೂ ಅವನಿಗೆ ಒಪ್ಪಿಗೆಯಾಗಲಿಲ್ಲ. ಆ ಗಣಿ ಹೇರಳವಾಗಿ ಲಾಭಕೊಡುತ್ತಿತ್ತು. ಬಂಡವಾಳಗಾರರಿಗೆ ಮನುಷ್ಯನಿಗಿಂತ ಬಂಗಾರ-ಹಣ ಹೆಚ್ಚು.

ಪ್ರಕೃತಿ ರೂಪಿಸಿದಂತೆ ಕೆಲಸದ ಪೂರ್ಣಲಾಭವನ್ನು ಪಡೆಯಬೇಕಾದರೆ ಕೆಲಸವು ಪ್ರಕೃತಿಯ ಮೂಲರೂಪದ ಸರಳತೆಗೆ ಅನುಗುಣವಾಗಿರಬೇಕು. ಅದನ್ನು ವ್ಯರ್ಥವಾದ ಚಿಕ್ಕ ಚಿಕ್ಕ ಭಾಗಗಳಾಗಿ ಮಾಡಬಾರದು.

ಕೆಲಸಗಾರನಿಗೆ ಪ್ರಕೃತಿ ಉತ್ತಮ ರೀತಿಯಲ್ಲಿ ಫಲಕೊಡುತ್ತದೆ: ನಾವು ಕಂಡಿದ್ದೇವೆ. ಕೆಲಸದಿಂದ ದೊರೆತ ಈ ಫಲ ಸಹಜವಾದ ನೈಸರ್ಗಿಕ ಫಲ.

ಜೀವನ ತೊಡಕು-ಸಿಕ್ಕು ಆದ ಮೇಲೆ ಮನುಷ್ಯ ಶ್ರಮವಿಭಾಗವನ್ನು ತಂದಿಟ್ಟ. ದುಡಿತಕ್ಕೆ ಪ್ರತಿಫಲವಾಗಿ ಹಣದ ಕೂಲಿ ಕೊಟ್ಟು ನೈಸರ್ಗಿಕ ಫಲದ ಒಂದಂಶವನ್ನು ಮಾತ್ರ ನೀಡಿದ. ಆದರೆ ಕೆಲಸದ ನಿಜಧರ್ಮ, ಉದ್ದೇಶ್ಯ ಏನೆಂಬುದನ್ನು ಸದಾ ನೆನಪಿಟ್ಟರೆ ಈ ತೊಡಕು ನಮ್ಮನ್ನು ದಾರಿಗೆಡಿಸಲಾರವು.

ಈ ಹಣಗೂಲಿಯ ಪದ್ಧತಿ ಬಂದ ಮೇಲೆ ಕೆಲಸಕ್ಕಿಂತ, ಕೆಲಸದ ಅರ್ಥಕ್ಕಿಂತ ಎಷ್ಟು ಉತ್ಪಾದನೆಯಾಯಿತು ಎಂಬುದೇ ಮುಖ್ಯವಾಯಿತು. ಈಗ ಉತ್ಪಾದನೆಯಾದ ವಸ್ತುವೆ ಪ್ರಧಾನ; ಉತ್ಪಾದನೆಯ ಕೆಲಸದ ಮೂಲೋದ್ದೇಶ್ಯ ಮುಖ್ಯವಲ್ಲ. ಪೇಟೆಯಲ್ಲಿ ಯಾವ ವಸ್ತುವನ್ನು ಮಾರಿದರೆ ಅಧಿಕಾಧಿಕ ಲಾಭ ಸಿಕ್ಕೀತೆಂಬುದು ಉತ್ಪಾದಕನ ಚಿಂತೆ. ಈ ವಸ್ತುವನ್ನು ಮಾಡಲು ಕೆಲಸಗಾರರಿಗೆ ಕಡಿಮೆ ಕೂಲಿ ಕೊಡುತ್ತಾನೆ. ಜನಸಂಖ್ಯೆ ಹೆಚ್ಚಾಗಿ, ಸ್ಪರ್ಧೆ ಮಿತಿಮೀರಿ ಕೆಲವರು ಬಹಳ ಕಡಮೆ ಕೂಲಿಗೆ ಅದನ್ನು ಮಾಡಿಕೊಡಲು ಮುಂದೆ ಬರುತ್ತಾರೆ. ಅದರಿಂದ ನೀತಿಗೆಡಲಿ, ಮೈಕೆಡಲಿ, ಏನೇ ಇರಲಿ ಹಣವೊಂದೇ ಮುಖ್ಯ. ಉಳಿದ ವಿಚಾರ ಬರುವುದೇ ಇಲ್ಲ ಆ ಅಳತೆಯಲ್ಲಿ. ಹೀಗೆ ಕೆಲಸವೂ ಒಂದು ಮಾರಾಟದ ಪದಾರ್ಥವಾಯಿತು. ಯಾರು ಹೆಚ್ಚಿನ ಕೂಲಿ ಕೊಟ್ಟರೆ ಅವರಿಗೆ ನಮ್ಮ ಕೆಲಸವನ್ನು ಮಾರುತ್ತೇವೆ. ಯಾರು ಕಡಿಮೆ ಬೆಲೆಗೆ ಕೆಲಸ ಮಾರುತ್ತಾರೋ ಅದನ್ನು ಬಂಡವಾಳಗಾರ ಕೊಳ್ಳುತ್ತಾನೆ.

ತಾಯಿ ತನ್ನ ಮಗುವಿನ ಆರೈಕೆ ಮಾಡಿದಾಗ, ಮಕ್ಕಳಿಗೆ ಅಡಿಗೆ ಮಾಡಿ

ಯಾಗ, ಆಕೆ ನೈಸರ್ಗಿಕವಾದ 'ಸೇವಾವಿಧಾನ' ವನ್ನು ಅವಲಂಬಿಸಿದ್ದಾಳೆ. ಆಕೆಗೆ ಸಿಗುವ ಪ್ರತಿಫಲ ತನ್ನ ಮಕ್ಕಳು ಹೃಷ್ಟಪುಷ್ಟವಾಗಿರುವುದನ್ನು ನೋಡುವ ಆನಂದ; ಅದೇ ಆಕೆಯ 'ಕೂಲಿ'.

ಅದರ ಬದಲು ಒಬ್ಬ ದಾದಿಯನ್ನಿಟ್ಟು ಮಗುವಿಗೆ ಹಾಲು ಕೊಡಿಸಿದರೆ, ಅಡಿಗೆಗೆ ಒಬ್ಬ ಪರಿಚಾರಕನನ್ನು ಇಟ್ಟರೆ ಅದು ಕೆಳಗುರುಳಿದಂತೆ: ಪ್ರಯತ್ನಶೀಲ ಆರ್ಥಿಕ ವಿಧಾನವನ್ನು ಅವಲಂಬಿಸಿದಂತೆ. ಎರಡು ಸಂದರ್ಭಗಳಲ್ಲೂ ತಾಯಿಯ ನೈಸರ್ಗಿಕ ಕರ್ಮ–ಧರ್ಮಗಳನ್ನು ವ್ಯಾಪಾರಕ್ಕೆ ಇಟ್ಟಹಾಗಾಯಿತು. ಆ ದಾದಿಗೆ, ಅಡಿಗೆಯವನಿಗೆ ಆ ಕೆಲಸದಲ್ಲಿ ಸಂತೋಷವಿಲ್ಲ. ಮಕ್ಕಳ ಸುಖ ಮುಖ್ಯವಲ್ಲ; ಅದರಿಂದ ಬರುವ ಕೂಲಿ–ಕಾಸು ಮುಖ್ಯ.

ಮೊಲೆ ಹಾಲನ್ನು ಕುಡಿಸದೆ ಡಬ್ಬಾ ಹಾಲನ್ನು ಮಗುವಿಗೆ ಕುಡಿಸಿ ತಾಯಿ ತನ್ನ ದೇಹಸೌಂದರ್ಯವನ್ನು ಕಾಪಾಡಿಕೊಳ್ಳುವ ಪ್ರಯತ್ನಮಾಡಿದರೆ, ಮಗು ಹೇಗೇ ಇರಲಿ ತಾನು ಬಳುಬಳುಕುತ್ತ ಇರಬೇಕೆಂದರೆ ಸಂಸ್ಕೃತಿಯಲ್ಲಿ ಇನ್ನೂ ಒಂದು ಹೆಜ್ಜೆ ಇಳಿದ ಹಾಗಾಯಿತು. ಇದು 'ಪರಾಪಹಾರ'ದ ವಿಧಾನ. ಆ ಡಬ್ಬಾ ಹಾಲನ್ನು ತಯಾರಿಸುವ ಬಂಡವಾಳಗಾರನಿಗೆ ಮಗುವಿನ ಚಿಂತೆಯೇ ಇಲ್ಲ. ತಾಯಿಯ 'ಸೌಂದರ್ಯ'ದ ಚಿಂತೆಯ ನೆಪಹೂಡಿ ಆ ಹಾಲಿನ ಗುಣವನ್ನು ಹೊಗಳುತ್ತಾನೆ.

ಈ ಗುಣಗಳು ಸ್ವಲ್ಪವೂ ಆ ಹಾಲಿನಲ್ಲಿ ಇಲ್ಲದಿದ್ದರೆ ಅದು ಪೂರಾ 'ಪರೋಪಜೀವನ'. ಮಗುವಿಗೆ ಏನು ರೋಗ ಬಂದರೂ ಸರಿ. ಅದರ ಚಿಂತೆಯಿಲ್ಲದೆ ತನ್ನ ಲಾಭದ ಚಿಂತೆಯೊಂದಿದ್ದರಾಯಿತು. ತಾಯಿ ಮಾಡಬೇಕಾದ ಸಹಜ ಕ್ರಿಯೆಯನ್ನು ಹೀಗೆ ಹಲವಾರು ಜನ ಹಣದಾಸೆಗಾಗಿ ಮಾಡುತ್ತಾರೆ. ತಾಯಿಯ ಕೆಲಸದ ಗಾಂಭೀರ್ಯ, ಗೌರವ ಅನುಕೂಲಗಳೆಲ್ಲ ಮಣ್ಣುಗೂಡಿ, ಬರೀ ಕೊಡು-ಕೊಳ್ಳುವ ಮಾರಾಟದ ಗುಲ್ಲೊಂದೇ ಉಳಿಯುತ್ತದೆ.

ಹಿಂದೆ ಕಾಶ್ಮೀರದಲ್ಲಿ ಒಂದು ಬಗೆಯ ರತ್ನಕಂಬಳಿ ಆಗುತ್ತಿತ್ತು. ತುರ್ಕಿ ಟವಲಿನ ಹಾಗೆ ಮೇಲೆ ಉಣ್ಣೆಯಂತೆ ಇರುತ್ತಿತ್ತು. ಇದನ್ನು ಮಾಡಲು ಬಹಳ ಕೌಶಲ ಬೇಕಾಗಿತ್ತು. ಮಾಡಲು ಬಹಳ ಕಾಲ ಹಿಡಿಯು ತ್ತಿತ್ತು. ಅದರಿಂದ ಅದಕ್ಕೆ ಬೆಲೆಯೂ ಬಹಳ, ಇವಕ್ಕೆ ಬದಲು ಗಿರಣಿಯ ರಗ್ಗುಗಳು ಬಂದು ಆ ಕಂಬಳಿಗಳು ಮಾಯವಾಗಿಯೇ ಹೋದವು.

ಒಂದು ಕಡೆ ಕೆಲವರು ಕೂಲಿಗಾರರು ರಸ್ತೆಯ ಜಲ್ಲಿಗಾಗಿ ಕಲ್ಲನ್ನು ಒಡೆ ಯುತ್ತಿದ್ದರು. ಇದನ್ನು ಚರಖಾ ಸಂಘದ ಕೆಲಸಗಾರ ಒಬ್ಬಾತ ನೋಡಿದ. ವಿಚಾರಿಸಿದ ಮೇಲೆ ಆ ಕೂಲಿಗಳು ಈ ಕಂಬಳಿ ನೇಯುತ್ತಿದ್ದ ನೇಕಾರರೆಂದು ತಿಳಿಯಿತು. ಅವರ ಕೈಗಾರಿಕೆ ಖಿಲವಾಗಿ ಲೋಕಕ್ಕೆ ಅವರ ಕೌಶಲ ನಷ್ಟವಾಗಿ ಅವರಿಗೆ ಈ ಗತಿ ಬಂದಿತು.

ಕೆಲಸದ ಆನಂದ ಮುಖ್ಯವಲ್ಲ, ಮಾಡಿದ ಪದಾರ್ಥವೇ ಮುಖ್ಯ ಆದಾಗ ಕೈಗಾರಿಕೆಯ ಹುಲಿಗಳೆಲ್ಲ ಕಲ್ಲೊಡೆಯುವ ಕೂಲಿಗಳಾದರು. ಮಾನವ ಸಾಮರ್ಥ್ಯ, ಕೌಶಲಗಳ ಸದುಪಯೋಗವೆ ಇದು ? ಈ ನಷ್ಟ – ಹಾನಿ ಯಾವ ಆರ್ಥಿಕ ನೀತಿಗೆ ಯೋಗ್ಯ ? ಕೆಲಸದ ನಿಜ ಉದ್ದೇಶ್ಯವನ್ನು ಅಸಡ್ಡೆ ಮಾಡಿ ಹಣಗೂಲಿ ಕೊಡುವ ವ್ಯವಸ್ಥೆಯಿಂದ ಒರುವ ಸರ್ವನಾಶ ಇದು.

ಹೊರಗಿನಿಂದ ಪದಾರ್ಥಗಳನ್ನು ತರಿಸುವ ಆಮದು ಪದ್ಧತಿಯಿಂದ ಕೆಲಸಗಾರರಿಗೆ ಕೆಲಸದ ಉದಾತ್ತ ಗಾಂಭೀರ್ಯದ ಅನುಭವವಿಲ್ಲವಾಗಿದೆ. ಆ ಕೈಗಾರಿಕೆಗಳ ಪದಾರ್ಥಗಳನ್ನು ಆಮದು ಮಾಡಿ ಮಾಡಿ, ನಮ್ಮ ದೇಶದಲ್ಲಿ ನಮ್ಮ ಜನರು ಹೊಟ್ಟೆಯ ಪಾಡಿಗಾಗಿ ದನಗಳೊಡನೆ ಸ್ಪರ್ಧಗಿಳಿಯುವಂತೆ ಮಾಡಿದೇವೆ. ಯಾವ ಪಟ್ಟಣಕ್ಕೆ ಹೋದರೂ ಎತ್ತು – ಕುದುರೆಗಳ ಬದಲು ಮನುಷ್ಯನೇ ರಿಕ್‌ಷಾ ಎಳೆಯುವುದನ್ನು ನೋಡಬಹುದು. ಶ್ರಮ ತಗ್ಗಿಸುವ ಯಂತ್ರಗಳು ಬಂದುದರ ಫಲ ಇದು. ಕೆಲವರ ಶ್ರಮ ತಗ್ಗಬಹುದು. ಆದರೆ ಹಿಂದು ಸ್ಥಾನದ ಜನರು ಹೊಟ್ಟೆಯ ಪಾಡಿಗಾಗಿ ಮಾಡಬಾರದ ಕೆಲಸ ಮಾಡಬೇಕಾಗಿ ಬಂದಿದೆ. ಅದರಿಂದ ಒಂದು ಕಡೆ ಸಮೃದ್ಧಿಯಾದರೆ ಇನ್ನೊಂದು ಕಡೆ ಅಭಾವಕ್ಕೆ ಕಾರಣವಾಗಬಹುದು. ಹೊಸ ಹೊಸ ಅಭಾವದ ತೊಡಕನ್ನು ತಂದಿಡುವ ಸಮೃದ್ಧಿಯೆಂಥ ಸಮೃದ್ಧಿ ? ಕುಶಲ ಕೆಲಸಗಾರರನ್ನು ಕಲ್ಲೊಡೆಯಲು, ಗಾಡಿಯೆಳೆಯಲು ನೂಕಿ ದನಗಳ ಸಾಲಿಗೆ ದಬ್ಬುವುದೂ ಒಂದು ಪ್ರಗತಿಯೆ ?

ಕೆಲಸ ಅಥವಾ ಕರ್ಮ ಗುಣವೃದ್ಧಿಗೆ, ಆತ್ಮವಿಕಾಸಕ್ಕೆ ಸಾಧನ. 'ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇನ ಪರಿಸಮಾಪ್ಯತೇ' – ಕಾಯಕವೇ ಕೈಲಾಸ. ಕೆಲಸವನ್ನು ಆ ಗಂಭೀರ ಸ್ಥಾನಕ್ಕೆ ಮತ್ತೆ ಏರಿಸಬೇಕು. ಕೆಲಸಕ್ಕೆ ಹಾಕಿರುವ ಈ ಹಣದ ಬೇಡಿಕೆಯನ್ನು ಒಡೆದು ಕೆಲಸವು ಸಹಜ ಸ್ವತಂತ್ರ ಕರ್ಮವಾಗುವಂತೆ ಮಾಡಬೇಕು.

ಜೀವನದ ಪ್ರಕಾಶ ಬೆಳಗಲು ಮನುಷ್ಯನಿಗೇ ಅಲ್ಲದೆ ಸುತ್ತಲಿನವರಿಗೂ ಶಾಖ ಮತ್ತು ಬೆಳಕು ಕೊಡುತ್ತದೆ. ಪ್ರೇಮಮಯಿಯಾದ ತಾಯಿ ತನ್ನ ಮಕ್ಕಳಿಗಾಗಿ ಕಷ್ಟಪಟ್ಟು ದುಡಿದರೆ ಆಕೆಗೆ ಆನಂದವಾಗುವುದಲ್ಲದೆ, ಇಡೀ ಕುಟುಂಬವೇ ಆಕೆಯ ಪ್ರೀತಿ ವಾತ್ಸಲ್ಯಗಳ ಸವಿಯನ್ನು ಸವಿಯುತ್ತದೆ. ಮಕ್ಕಳ ಮೈ – ಮನಸ್ಸು ಎರಡೂ ಬಲಗೊಂಡು ದೃಢಕಾಯರೂ ದೃಢಮನಸ್ಕರೂ ಆದ ಪ್ರಜೆಗಳಾಗುತ್ತಾರೆ. ಎಷ್ಟೇ ಸಮರ್ಥಳಾದರೂ ದಾದಿ ಅಥವಾ ಪರಿಚಾರಿಕೆ ತಾಯಿಗೆ ಸಾಟಿಯಾಗಲಾರಳು.

ಹಾಗೆಯೇ, ಹಣದ ರೂಪದಲ್ಲಿ ಕೂಲಿಕೊಟ್ಟ ಮಾತ್ರಕ್ಕೆ ಕೆಲಸದ ನಿಜ

ವಾದ ಉದ್ದೇಶ್ಯ ಸಫಲವಾಗದು. ತಾಯಿಯ ಕರುಳನ್ನು ಕೊಡಲೂ ಕೊಳ್ಳಲೂ ಸಾಧ್ಯವೆ ? ಕೆಲಸದ ರುಚಿ – ಆನಂದಗಳನ್ನು ಹಣ ಕೊಟ್ಟೀತೆ ?

ರೋಗಿ, ರೋಗ ಎರಡರಲ್ಲೂ ಆಸಕ್ತಿಯಿರುವ ವೈದ್ಯ ಅತ್ಯಂತ ಶ್ರದ್ಧೆಯಿಂದ ಪರೀಕ್ಷೆ ಮಾಡಿ, ನಿಧಾನ ಮಾಡಿ ಅನುಭವ–ಜ್ಞಾನಗಳನ್ನು ಗಳಿಸುತ್ತಾನೆ. ಹಣಕ್ಕಾಗಿ ರೋಗಿಯನ್ನು ಗಮನಿಸುವ ವೈದ್ಯನಿಗೆ ಅದು ಸಾಧ್ಯವಿಲ್ಲ.ಒಬ್ಬನಿಗೆ ಕೆಲಸದಲ್ಲಿ ಆನಂದ; ಇನ್ನೊಬ್ಬನಿಗೆ ದುಡ್ಡಿನ ದಾಹ. ಅವನು ಶಾಸ್ತ್ರಾರ್ಥಿ, ಇವನು ದ್ರವ್ಯಾರ್ಥಿ. ಅವನು ವೈದ್ಯ, ಇವನು ಔಷಧ ವ್ಯಾಪಾರಿ. ಅವರಿವರು ಮಾಡಿ ಮಾರುವ 'ಸಿದ್ಧೌಷಧ' ಗಳನ್ನು ಕೊಟ್ಟರಂತೂ ಅವುಗಳ ಮಾರಾಟದ ಏಜಂಟು! ರೋಗಿ ಸಾಯುವ ಹಾಗಿದ್ದರೂ ಹಣದ ಈ ಪ್ರಪಂಚದಲ್ಲಿ ಕೈಯೊಳಗೆ ಕಾಸಿಲ್ಲದಿದ್ದರೆ ವೈದ್ಯರ ಸಹಾಯ ಸಿಗದು. ಜೇಬುತುಂಬ ದುಡ್ಡಿದ್ದವನಿಗೆ ರೋಗವಿಲ್ಲದಿದ್ದರೂ ವೈದ್ಯರು ಸದಾ ಅವನ ಸುತ್ತಲೂ ಮುಕರಿರುತ್ತಾರೆ.

ಮೊಕದ್ದಮೆಯಲ್ಲಿ ನೈತಿಕ ಆಸಕ್ತಿ ವಹಿಸಿ ನಡೆಸುವ ವಕೀಲನು ಕಸಬುದಾರ. ದುಡ್ಡು ಕೊಟ್ಟುದಕ್ಕಾಗಿ ಕಟ್ಟು ಹಿಡಿದವನು ವಕೀಲನಲ್ಲ. ಫೀಜು ಕೊಡಲಾರದವರು ಎಷ್ಟೋ ಜನ ಸೆರೆಮನೆಗೆ ಹೋಗಿದ್ದಾರೆ, ನಿಸ್ಸಹಾಯರಾಗಿ.

ಹೀಗೆ ಎಲ್ಲಾ ವೃತ್ತಿಗಳನ್ನೂ ಈ ಪೇಟೆಯಲ್ಲಿಟ್ಟು ಮಾರುತ್ತಿದ್ದೇವೆ. ಹಣದ ಹಿಡಿತ ಬಹಳ ಬಲವಾಗಿದೆ. ನಿಜವಾದ ಕಸಬುದಾರ, ಕೆಲಸಗಾರ ಸಿಗುವುದೇ ಕಷ್ಟವಾಗಿದೆ.

ನಾವು ಪರಿಶೀಲಿಸಿದ ದೃಷ್ಟಾಂತಗಳಲ್ಲೆಲ್ಲ ಕೆಲಸದ ಪ್ರಾಧಾನ್ಯತೆ ತಗ್ಗಿ ಕೂಲಿಯೇ ಪ್ರಧಾನವಾಗಿದೆ. ಕೂಲಿಯಲ್ಲಿ ಸೃಷ್ಟಿಶಕ್ತಿಯಿಲ್ಲ. ಆದುದರಿಂದ ಪ್ರಗತಿಯಿಲ್ಲ. ನಮ್ಮ ದೇಶದಲ್ಲಿ ವೈದ್ಯಶಾಸ್ತ್ರ ಪ್ರಗತಿ ಹೊಂದುತ್ತಿಲ್ಲ. ಪ್ರಯೋಗ ನಿಪುಣರು ಯಾರೂ ಇಲ್ಲ ಎನ್ನುತ್ತಾರೆ ಜನ. ಅದಕ್ಕೆ ಕಾರಣವನ್ನು ಹುಡಕು ಬೇಕಾಗಿಲ್ಲ. 'ಪರೋಪಜೀವನ' ದ ಮಟ್ಟದಲ್ಲಿದೆ ಆ ವೃತ್ತಿ. ಅಥವಾ 'ಪರಸ್ವಾಪಹಾರ'ದ ಮಟ್ಟದಲ್ಲಿ. 'ಪ್ರಯತ್ನಶೀಲ' ರಾದವರು ಬಹಳ ಸ್ವಲ್ಪ, 'ಸಂಘಜೀವಿ' ಗಳು, 'ಸೇವಾರ್ಥಿ'ಗಳು ಕೋಟಿಗೊಬ್ಬರು. ಆದುದರಿಂದ ಅವರ ವರ್ಚಸ್ಸು ಕಡಮೆ.

ಎಲ್ಲಾ ಕ್ಷೇತ್ರಗಳಲ್ಲೂ ಸತ್ಯವಂತ, ಪ್ರಾಮಾಣಿಕ ಕೆಲಸಗಾರರಿಗೆ ಅಭಾವವೇ, ಈ ಧನ ಪ್ರಧಾನವಾದ ಹಣಪ್ರಪಂಚದಲ್ಲಿ ಕೆಲಸಕ್ಕಿಂತ ಕೂಲಿ – ವಸ್ತುಗಳೇ ಮುಖ್ಯವಾದಲ್ಲಿ ಇದು ಅನಿವಾರ್ಯವೇನೋ!

ಕೆಲಸದ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಅದರಂತೆ ನಡೆದರೆ, ಮೈಗೆ ಅನ್ನ ಹೇಗೋ ಮನಸ್ಸಿಗೆ–ಗುಣಗಳಿಗೆ ಕೆಲಸ ಹಾಗೆ. ಮನುಷ್ಯನ ಉದಾತ್ತ ಗುಣಗಳನ್ನು ಬೆಳೆಸಿ ಬಲಿಯಿಸಿ. ಅವನಿಂದ ಉತ್ತಮೋತ್ತಮ ಕೃತಿ

ಯನ್ನು ಮಾಡಿಸುತ್ತದೆ–ಕೆಲಸ. ಮನುಷ್ಯನ ಇಚ್ಛಾಶಕ್ತಿಯನ್ನು ಸರಿಯಾದ ದಾರಿಯಲ್ಲಿ ನಡೆಸಿ, ಅವನ ಮೃಗ ಜೀವನವನ್ನು ನಿಗ್ರಹಿಸಿ ಪ್ರಗತಿ ಪಥದಲ್ಲಿ ಕೊಂಡೊಯ್ಯುತ್ತದೆ ಕೆಲಸ. ತನ್ನ ಬೆಲೆಗಳನ್ನು ಹೊರಗೆಡಹಿ ತನ್ನ ವ್ಯಕ್ತಿತ್ವ ವನ್ನು ರೂಪಿಸಿಕೊಳ್ಳಲು ಮನುಷ್ಯನಿಗೆ ಅವಕಾಶ ಕೊಡುತ್ತದೆ ಕೆಲಸ.

ಶ್ರಮ ವಿಭಾಗದ ಪ್ರಯತ್ನವು ಕಟ್ಟಕಡೆಗೆ ಕೆಲಸದ ಉದ್ದೇಶ್ಯವನ್ನು ಮರೆ ಮಾಡಿ ಮಾಲಿಕನಿಗೆ ಉತ್ಪಾದನೆಯನ್ನು ಮುಖ್ಯವಾಗಿಸಿತು; ಕೂಲಿಯನ್ನು ಮುಖ್ಯ ವಾಗಿಸಿತು ಕೆಲಸಗಾರನಿಗೆ. ಇದರ ಪರಿಣಾಮ ಸರ್ವನಾಶ. ಕೆಲಸದ ಪರಿಣಾಮ ಕೆಲಸಗಾರನ ಮೇಲೆ ಏನಾಗುತ್ತಿತ್ತೋ ಅದೇ ಮಾಯವಾಯಿತು.

ಪ್ರಕೃತಿಯ ವ್ಯವಸ್ಥೆಯಲ್ಲಿ ಸಹಕಾರದ ಮೂಲೋದ್ದೇಶ್ಯ ಕೆಲಸಗಾರನ ಪ್ರತ್ಯಕ್ಷ ಸ್ವಪ್ರಯೋಜನ. ದುಂಬಿಗೆ ಹೂಗಳ ಪರಾಗಸ್ಪರ್ಶ ಮುಖ್ಯವಲ್ಲ. ಮಕರಂದ ಸಂಗ್ರಹ ಮುಖ್ಯ. ಪ್ರಕೃತಿಯಲ್ಲಿ ಅದಕ್ಕೆ ಸಿಗುವ ಪ್ರತಿಫಲ ಅದೇ.

ಶ್ರಮ ವಿಭಾಗದಿಂದ ಈ ಪ್ರಯೋಜನದಲ್ಲೂ ಸಾವಿರ ವಿಭಾಗಗಳಿವೆ; ಲಾಭ, ಸಂಬಳ, ಕೂಲಿ, ಬಾಡಿಗೆ, ಬಡ್ಡಿ ಇತ್ಯಾದಿ. ಇದರಿಂದ ಕೆಲಸ ಮಾಡಿದ ವನಿಗೆ ಇಡೀ ಫಲ ಸಿಗದು: ಎಲ್ಲೋ ಒಂದಂಶ ಮಾತ್ರ. ಜೇನು ಹುಟ್ಟೆ ಜೇನುತುಪ್ಪವನ್ನು ದುಂಬಿಗಿಲ್ಲದಂತೆ ಕುಡಿದರೆ ಹೇಗೋ ಹಾಗೇ ಶೋಷಕ ನಡುವೆ ಬಂದು ಪ್ರಯೋಜನದ ಹೆಚ್ಚು ಭಾಗವನ್ನು ತಾನು ಅಪಹರಿಸುತ್ತಾನೆ.

ಸ್ವಪ್ರಯೋಜನದ ಆಸೆಯೇ ಪ್ರಕೃತಿಯಲ್ಲಿ ಸಹಕಾರದ ಮೂಲ. ಇದು ಸ್ಪಷ್ಟವಾಗಿ ಕಾಣುತ್ತದೆ. ಆ ಪ್ರಯೋಜನಗಳನ್ನೆಲ್ಲ ಕರಗಿಸಿ ಬಿಡುವುದು ಶಾಶ್ವತ ಆರ್ಥಿಕ ವಿಧಾನಕ್ಕೆ ವಿರುದ್ಧ. ಅದರಿಂದ ಒಂದು ದಿನ ಹೆಚ್ಚು ಕಡಮೆ ಹಿಂಸೆ ಹುಟ್ಟಲೇಬೇಕು.

ವಸ್ತೂತ್ಪಾದನೆ ಮತ್ತು ಕೂಲಿ ಎರಡನ್ನೇ ಮುಖ್ಯವಾಗಿ ಎಣಿಸುವ ಯಾವ ಯೋಜನೆಯೂ ಪ್ರಕೃತಿ ಸಮ್ಮತವಲ್ಲ. ನಮ್ಮ ಉದ್ದೇಶ್ಯವನ್ನು ಸಾಧಿಸಿ, ಶಾಶ್ವತ ಆರ್ಥಿಕ ವಿಧಾನವನ್ನು ರೂಪಿಸುವ ಯೋಜನೆಗೆ ಕೆಲಸವೇ ಮುಖ್ಯ ಬಿಂದುವಾಗ ಬೇಕು; ಮನುಷ್ಯನ, ಶಕ್ತಿ-ಸಾಮರ್ಥ್ಯಗಳಿಗೆ ಅನುಸಾರವಾಗಿರಬೇಕು ಈ ಕೆಲಸ.

ಒಬ್ಬ ರೈತ ಸುಗ್ಗಿಯಲ್ಲಿ ದವಸವನ್ನು ಕುಯಿದು ಕಣಜದಲ್ಲಿ ಕಾಳನ್ನು ಕೂಡಿಟ್ಟ. ಇಲಿಗಳು ಆ ಕಾಳನ್ನು ಮುತ್ತಿದವು, ಇದಕ್ಕೆ ಉಪಾಯವೇನೆಂದು ಯೋಚಿಸಿ ಒಂದು ಬೆಕ್ಕನ್ನು ಸಾಕಿದ. ಬೆಕ್ಕು ಇಲಿಗೆ ವೈರಿ. ಅವನ ಉಪಾಯ ಪ್ರಕೃತಿ ಸಹಜ. ಆ ಬೆಕ್ಕಿಗೆ ಹಾಲಿಗಾಗಿ ಒಂದು ಹಸುವನ್ನು ತಂದ. ಆ ಹಸು ವನ್ನು ನೋಡಿಕೊಳ್ಳಲು ಒಬ್ಬ ಹೆಂಗಸು ಬೇಕಾಯಿತು. ಅವಳನ್ನು ಮದುವೆ ಯಾದ! ಹೀಗ ಪ್ರಕೃತಿಯ ವಿಧಾನವನ್ನರಿತು, ಉದ್ದೇಶ್ಯವನ್ನರಿತು ಮಾಡಿದ ಕೆಲಸ ಸಫಲವಾಗುತ್ತದೆ.

ಶಾಶ್ವತ ಅರ್ಥಶಾಸ್ತ್ರ

ಭಾಗ ೨

ಪ್ರಸ್ತಾವನೆ

ಮೊದಲನೆ ಭಾಗದಲ್ಲಿ ಮನುಷ್ಯನನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಶೀಲಿಸಿದ್ದೇವೆ. ಪ್ರಕೃತಿಯ ಕೆಲಸದ ವಿಧಾನದ ಅಧ್ಯಯನವೇ ವಿಜ್ಞಾನ. ವಿಶ್ವ ಯಾವ ನಿಯಮಗಳಂತೆ ಚಲಿಸುತ್ತಿದೆಯೋ ಮನುಷ್ಯನೂ ಅದರಂತೆಯೇ ನಡೆಯಲು ಸಾಧ್ಯವಾಗುವಂತೆ ಮಾಡುವುದು ವಿಜ್ಞಾನದ ಗುರಿ ಎಂಬುದನ್ನೂ ಗಮನಿಸಿದ್ದೇವೆ ಈ ನಿಯಮಗಳಿಗೆ ಸ್ವಲ್ಪ ತಪ್ಪಿ ನಡೆದರೂ ಹಿಂಸೆ, ಅವ್ಯವಸ್ಥೆ, ಗೊಂದಲ ಸಿದ್ಧ. ಅನೇಕ ಪ್ರಾಣಿಗಳು ಕೇವಲ ಸ್ವಭಾವ ಬಲದಿಂದಲೇ ಪ್ರಕೃತಿಗೆ ಅನುಸಾರವಾಗಿ ನಡೆಯುತ್ತವೆ. ಆದರೆ ಮನುಷ್ಯನಿಗೆ ಇಚ್ಛಾಶಕ್ತಿ, ಬುದ್ಧಿಬಲ ಇರುವುದರಿಂದ ಪ್ರಕೃತಿಯೊಡನೆ ಇಚ್ಛಾಪೂರ್ವಕ ಸಹಕರಿಸುತ್ತಾನೆ. ಮನುಷ್ಯನಿಗೂ ಕೆಳಗಿನ ಪ್ರಾಣಿ ವರ್ಗಕ್ಕೂ ಇರುವ ಮುಖ್ಯ ಭೇದ ಇದೇ. ಈ ಪ್ರಜ್ಞಾಮಯ ಜೀವನದಲ್ಲಿ, ತನ್ನ ಕೃತಿಯನ್ನು ಅಳೆಯಲು ಮನುಷ್ಯ ಯಾವ ರೀತಿಯ ಅಳತೆಗಳನ್ನು-ಮೌಲ್ಯಗಳನ್ನು ಉಪಯೋಗಿಸುತ್ತಾನೆಯೋ ನೋಡಿದೆವು. ಮನುಷ್ಯನ ಶಕ್ತಿ-ಸಾಮರ್ಥ್ಯಗಳನ್ನು ಬೆಳೆಸಲು ಕೆಲಸ ಎಷ್ಟರ ಮಟ್ಟಿಗೆ ಸಹಾಯಕವೋ ಕಂಡೆವು.

ಹೀಗೆ ಮನುಷ್ಯ ಕೆಲಸ ಮಾಡಿದರೆ ಶಾಶ್ವತ ಅರ್ಥವ್ಯವಸ್ಥೆಯನ್ನು ರಚಿಸುತ್ತಾನೆ. ಅದರಿಂದ ಕಾಲಕಾಲಕ್ಕೆ ಉಂಟಾಗುವ ಜಗತ್-ಸಂಗ್ರಾಮಗಳ ಉಲ್ಬಣ ನಿಂತುಹೋಗುತ್ತದೆ.

ಈ ಎರಡನೆಯ ಭಾಗದಲ್ಲಿ ಮನುಷ್ಯನು ಗುಂಪಿನಲ್ಲಿ ಹೇಗೆ ಬಾಳುತ್ತಾನೆಯೋ ನೋಡೋಣ.

ಪ್ರಾಣಿಗಳಲ್ಲಿಯೂ ಸಮಾನ ಧರ್ಮದ ಜೀವಿಗಳನ್ನು ಕೆಲವು ಉದ್ದೇಶ್ಯಗಳಿಗಾಗಿ ಒಟ್ಟಿಗೆ ಸೇರಿಸುವ ಕೆಲವು ಶಕ್ತಿಗಳಿವೆ. ತೋಳದಂಥ ಬೇಟೆಗಾರ ಮೃಗವು ಗುಂಪಾಗಿ ಸೇರಿ ಬೇಟೆಯಾಡುತ್ತದೆ. ಆದರ ಉದ್ದೇಶ್ಯ ಬರೀ ಸ್ವಾರ್ಥ, ಆದರ ಜೀವನ ಪರೋಪಜೀವನ.

ಹಾಗೆ ಪರಪೀಡೆಗಲ್ಲದೆ ಬೇರೆ ಕಾರಣಗಳಿಗಾಗಿ, ಹೆಚ್ಚಾಗಿ ಆತ್ಮಸಂರಕ್ಷಣೆಗಾಗಿ ಹಿಂಡು ಕಟ್ಟಿಕೊಳ್ಳುವ ಪ್ರಾಣಿಗಳೂ ಇವೆ. ಉದಾಹರಣೆಗೆ: ದನ, ಆನೆ. ಪ್ರತಿಯೊಂದಕ್ಕೂ ವೈಯಕ್ತಿಕವಾಗಿ ಆತ್ಮರಕ್ಷಣೆಯ ಸ್ವಾರ್ಥವಿದ್ದರೂ, ಒಟ್ಟಿನಲ್ಲಿ ಪ್ರತಿಯೊಂದೂ ಹಿಂಡನ್ನು ರಕ್ಷಿಸಲು ಪ್ರಯತ್ನಿಸುತ್ತವೆ.

ಮೊದಲನೆ ಭಾಗದಲ್ಲಿ ನಾವು ನೋಡಿದಂತೆ ಪಶ್ಚಿಮ ದೇಶಗಳ ಸಾಮಾಜಿಕ-ಆರ್ಥಿಕ ವ್ಯವಸ್ಥೆ ಪರೋಪಜೀವನದ ವಿಧಾನದ್ದು. ಇತರರಿಗೆ ಎಷ್ಟು ಹಾನಿ-ನಷ್ಟ ಮಾಡಿದರೆ ಅಷ್ಟು ಈ ತಂಡಕ್ಕೆ ಅನುಕೂಲ. ಆದುದರಿಂದ ಇದನ್ನು ತೋಳಗಳ ತಂಡದ ವರ್ಗಕ್ಕೆ ಸೇರಿಸಬಹುದು. ಈ ಪರೋಪಜೀವನದ ಸ್ಥಿತಿಯಿಂದ ಪರಾಪಹಾರ, ಪ್ರಯತ್ನಶೀಲ, ಸಂಘ ಜೀವನದ ಸ್ಥಿತಿಗಳಿಗೆ ನಾವು ಮುಂಬರಿದು ಬರುತ್ತೇವೆ.

ಸಂಘಜೀವನದ ಹಂತದಲ್ಲಿ ಎರಡು ಬಗೆ ಇರಬಹುದು: ಹಕ್ಕು ಮತ್ತು ಅಧಿಕಾರಗಳ ಆರ್ಥಿಕ ವಿಧಾನದ 'ತಂಡ'ದ ಬಗೆ ಒಂದು; ಕರ್ತವ್ಯ ಆರ್ಥಿಕ ವಿಧಾನದ 'ಹಿಂಡಿ'ನ ಬಗೆ ಇನ್ನೊಂದು.

ಮನುಷ್ಯ ವಿಕಾಸಗೊಂಡ ಹಾಗೆಲ್ಲ ಅವನ ಕರ್ತವ್ಯ ಜ್ಞಾನ ಹೆಚ್ಚುತ್ತದೆ. ಸಮಾಜದ ಒಬ್ಬ ಸದಸ್ಯನಾಗಿ ತನಗೆ ಆಗುವ ಲಾಭಗಳಿಗಿಂತ ಹೆಚ್ಚಾಗಿ, ಆ ಸಮಾಜದ ಯೋಗಕ್ಷೇಮಕ್ಕಾಗಿ ತಾನು ಮಾಡಬೇಕಾದ ಕರ್ತವ್ಯಗಳೇನು ಎಂಬುದು ಹೆಚ್ಚು ಹೆಚ್ಚಾಗಿ ಅವನಿಗೆ ತಿಳಿಯುತ್ತದೆ. ಕಟ್ಟಕಡೆಗೆ ಪರೋಪಕಾರದ, ಸೇವೆಯ ಆರ್ಥಿಕ ವಿಧಾನವನ್ನು ಮುಟ್ಟಿ, ಅಲ್ಲಿ ಲೋಕ ಸೇವೆಯಲ್ಲಿ ಆತ್ಮಸಾಕ್ಷಾತ್ಕಾರ ಪಡೆಯುತ್ತಾನೆ.

ಇಂದು ಲೋಕಕ್ಕೆ ಬೇಕಾಗಿರುವುದು - ಜನರು ಹೇಗೆ 'ಸಹವೀರ್ಯ' ಮಾಡಿಯಾರು, ಸಹಕರಿಸಿ ದುಡಿದು ಇತರರನ್ನು ನಾಶಮಾಡದೆಯೆ ಮಾನವ ವರ್ಗದ ಸಾಮೂಹಿಕ ಕಲ್ಯಾಣವನ್ನು ಹೇಗೆ ಸಾಧಿಸಿಯಾರು ಎಂಬುದರ ಅರಿವು. ಈ ಬಗೆಯ ಆರ್ಥಿಕ ವಿಧಾನದಲ್ಲಿ ಯೋಗಕ್ಷೇಮ ಕಾರ್ಯವು ಆಡಂಬರವಾಗಿ ಕಾಣದಿರಬಹುದು. ಆದರೆ ಶಾಶ್ವತವಾಗಿದ್ದೀತು.

ಆ ರೀತಿ ನಡೆಯದಿದ್ದರೆ ಏನು ಆದೀತೆಂಬುದಕ್ಕೆ ಪಶ್ಚಿಮ ದೇಶಗಳ ಪರೋಪಜೀವನದ ಸಾಂಘಿಕ ವಿಧಾನವೇ ಸಾಕ್ಷಿ. ಈ ವಿಧಾನದ ಪರಿಣಾಮವನ್ನು ಅರಿತುಕೊಳ್ಳಲು ಕಣ್ಣಿದ್ದವರು ಯುರೋಪಿನ ಕಡೆ ನೋಡಲಿ. ೧೫೦ ವರ್ಷ ಅತಿ ವೇಗವಾಗಿ ಮಾಡಿದ ಗಿರಣಿಗಾರಿಕೆ-ಕಾರಖಾನೆಗಳ ವಿಶೇಷೋತ್ಪತ್ತಿಯಿಂದ ಆದುದೇನು? ಹಸಿವು, ಬೆತ್ತಲು. ದಿನ ಬಳಕೆಯ ಪದಾರ್ಥಗಳ ಅಭಾವ. ಜೊತೆಗೆ, ನಾಶವಾಗಿ ಹೋದ ಕೋಟಿಗಟ್ಟಲೆ ಜನ; ಗಾಳಿಯಲ್ಲಿ ಸುಟ್ಟೋ, ನೀರಿನಲ್ಲಿ ಮುಳುಗಿಸಿಯೋ ಹಾಳುಮಾಡಿದ ಅಪಾರ ಸಂಪತ್ತು. ಮುಂದೇನು ಗತಿ ಎಂದು ಮನುಷ್ಯನನ್ನು ದಿಗ್ಭ್ರಾಂತನನ್ನಾಗಿ ಮಾಡಿವೆ. ನಮಗೆ ಬೇಕಾದುದು ಶಾಶ್ವತ ಆರ್ಥಿಕ ವಿಧಾನ. ಒಂದೆರಡು ದಿನದ ವೈಭವ ಚಮತ್ಕಾರ ಕಂಡರೂ ಕಡೆಗೆ ಎಲ್ಲಾ ಬೆಂಕಿಯ ಪಾಲೇ. ಆ ವಿಧಾನ ಕೊನೆಗೂ ಅಶಾಶ್ವತವೇ ಆದುದರಿಂದ ಅದನ್ನು ಅಧ್ಯಯನ ಮಾಡಿ ಕಾಲಹರಣ ಮಾಡಬೇಕಾಗಿಲ್ಲ.

ಪ್ರಸ್ತಾವನೆ

ನಮಗೆ ಬೇಕಾದುದು ಶಾಶ್ವತ ವ್ಯವಸ್ಥೆ. ಆದುದರಿಂದ ಮನುಷ್ಯನು ಗುಂಪಿನಲ್ಲಿ ಹೇಗೆ ನಡೆದುಕೊಳ್ಳಬೇಕೋ ಮತ್ತು ಆ ಮನುಷ್ಯರ ಗುಂಪು ಈ ಶಾಶ್ವತ ರಚನೆಯನ್ನು ಸಾಧಿಸಲು ಹೇಗೆ ಕೆಲಸಮಾಡಬೇಕೋ ನೋಡೋಣ.

ಮನುಷ್ಯನು ಗುಂಪಿನಲ್ಲಿ ಕೆಲಸ ಮಾಡುವ ಬಗೆ ಮೂರು ಇವೆ :

೧. ಒಬ್ಬನೇ ಉತ್ಪಾದನೆ ಮಾಡುತ್ತಾನೆ ; ಕೆಲ ಕೆಲವು ಅಂಶಗಳನ್ನು ತನ್ನ ನೆರೆಹೊರೆಯವರ ಜೊತೆಗೆ ಸೇರಿಕೊಂಡು ಮಾಡುತ್ತಾನೆ. ಹೀಗೆ ನೆರೆಯವ ರೊಡನೆ ಜೊತೆಗೂಡಿ ಮಾಡಿದ ಕೆಲಸದಲ್ಲಿ ಅವನ ಹಿತವೂ ಇದೆ, ಭವಿಷ್ಯದ ಹಿತವೂ ಇದೆ.

೨. ಒಂದೇ ಕಸಬು, ಒಂದೇ ಬಗೆಯ ಬಾಳು–ಬದುಕು ಇರುವ ಜನ ಒಟ್ಟಿಗೆ ಸೇರಿ ಕೆಲಸಮಾಡುತ್ತಾರೆ : ಇದು ಸಹಕಾರ ಪ್ರಯತ್ನ. ಸಂಘ ಜೀವನದಲ್ಲಿ ಎರಡನೆಯ ನೀತಿ.

೩. ತಾತ್ಕಾಲಿಕವಾದ ಕೆಲಸಗಳನ್ನು ವ್ಯಕ್ತಿಗಳಿಗೂ ಸಹಕಾರ ಸಂಸ್ಥೆ ಗಳಿಗೂ ಒಪ್ಪಿಸಿ, ಮುಂದಿನ ಕಾಲಕ್ಕೆ ಫಲಕೊಡುವ ದೀರ್ಘಕಾಲದ ಕೆಲಸ ಗಳನ್ನು ನಿಃಸ್ವಾರ್ಥಿಗಳ ಗುಂಪೊಂದು ವಹಿಸಿಕೊಳ್ಳುತ್ತದೆ. ಇವರಿಗೆ ಕರ್ತವ್ಯ–ಧರ್ಮದ ಪಾಲನೆ ಮುಖ್ಯ. ಸಮಾಜಕ್ಕೆ ಹಿತವಾಗಲಿ ಎಂಬುದೊಂದೇ ಅವರ ಉದ್ದೇಶ. ಇಂಥ ಗುಂಪನ್ನು ರಾಜ್ಯ ಅಥವಾ ಸರಕಾರ ಎನ್ನುತ್ತೇವೆ. ಈ ಕಾಲದಲ್ಲಿ ಯಾವ ದೇಶದಲ್ಲಾದರೂ ಇಂಥ ಯೋಗ್ಯ ಜನ ಇದ್ದಾರೆಯೋ ಎಂಬ ಪ್ರಶ್ನೆಗೆ ಉತ್ತರ ಕಷ್ಟಸಾಧ್ಯ. ಈಗಿನ ರಾಜ್ಯಪದ್ಧತಿಗಳೆಲ್ಲ ಜನ ಸಾಮಾನ್ಯರ ಬಗ್ಗೆ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿಲ್ಲ : ನಿಷ್ಫಲವಾಗಿವೆ.

ಮೊದಲು ಗುಂಪಿಗಾಗಿ ಸಾಮೂಹಿಕ ಯೋಜನೆಯನ್ನು ಪರಿಶೀಲಿಸೋಣ; ಆಮೇಲೆ, ಮನುಷ್ಯ ತನ್ನ ಸಂಗಾತಿಗಳೊಡನೆ ಸಹಕರಿಸಿ ಹೇಗೆ ಆರ್ಥಿಕ ಕಾರ್ಯ ಕ್ರಮವನ್ನು ನಡೆಸುತ್ತಾನೆಯೋ ನೋಡೋಣ. ಅನಂತರ, ಸಹಕಾರ ಪದ್ಧತಿ ಯಿಂದ ಏನೇನು ಕೆಲಸಮಾಡಬಹುದೋ ಊಹಿಸೋಣ. ಕಡೆಗೆ, ಲೋಕವೆಲ್ಲ ಯಾವುದಕ್ಕಾಗಿ ಪಾಡುಪಡುತ್ತಿದೆಯೋ, ಯಾವುದನ್ನು ಅರಸುತ್ತಿದೆಯೋ, ಅದನ್ನು ಸಾಧಿಸಲು ರಾಜ್ಯ ಏನು ಮಾಡಬಲ್ಲದು, ಹೇಗೆ ಮಾಡಬಲ್ಲದು ಎಂಬುದನ್ನು ವಿಚಾರಿಸೋಣ. ಇದೆಲ್ಲದರಲ್ಲಿಯೂ ನಾವು ಮೊದಲನೆ ಭಾಗ ದಲ್ಲಿ ಅಧ್ಯಯನ ಮಾಡಿದ ತತ್ವ – ಸೂತ್ರಗಳನ್ನು ಮನಸ್ಸಿನಲ್ಲಿಟ್ಟಿರಬೇಕು. ಒಂಟಿಯಾಗಿದ್ದರೆ ಹೇಗೋ ಗುಂಪಿನಲ್ಲಿದ್ದಾಗಲೂ ಮನುಷ್ಯರ ಕಾರ್ಯಕಲಾಪ ಗಳಿಗೆ ಆ ಸೂತ್ರಗಳು ಅನ್ವಯಿಸುತ್ತವೆ.

ಈ ಎರಡು ಭಾಗಗಳಲ್ಲಿಯೂ ವಿವರಿಸಿದ ಯೋಜನೆಯನ್ನು ಅನುಸರಿಸಿದರೆ ಅಹಿಂಸಕ ಸಮಾಜ ಸ್ಥಾಪನೆಯಾದೀತು. ಜನತೆಗೆ ಅವರ ದಿನ ಬಳಕೆಗೆ, ನಿತ್ಯಯಾತ್ರೆಗೆ ಬೇಕಾದ ಪದಾರ್ಥಗಳನ್ನು ಯಥೇಚ್ಛವಾಗಿ ಒದಗಿಸಿ ರಾಷ್ಟ್ರ-ರಾಷ್ಟ್ರಗಳ ನಡುವೆ ಶಾಂತಿಯನ್ನು ನೆಲೆಗೊಳಿಸೀತು.

೧೪. ಯೋಜನೆಯ ಅಗತ್ಯತೆ ಹಾಗೂ ಸ್ವರೂಪ

ಯೋಜನೆ ಮಾಡಲೇಕೆ? ರಾಷ್ಟ್ರೀಯ ಯೋಜನೆ ಅಂದರೆ ಏನೋ ಕಗ್ಗಂಟು, ಕೇವಲ ತಜ್ಞರಿಗೆ, ಪಂಡಿತರಿಗೆ ಮಾತ್ರವೇ ಅದು ಅರ್ಥವಾಗುತ್ತದೆ ಎಂದು ಅನೇಕರು ತಿಳಿದಿದ್ದಾರೆ. ಬೀದಿಯಲ್ಲಿ ಓಡಾಡುವ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ನಾವು ಏಕೆ ಯೋಜನೆ ಮಾಡುತ್ತಿದ್ದೇವೆ ಎಂಬುದು ತಿಳಿಯದಿದ್ದರೆ ಆ ಯೋಜನೆ ನಿರ್ಜೀವವಾಗುತ್ತದೆ. ನಮ್ಮ ರೈತರಿಗೆ ಯೋಜನೆ ಅರ್ಥವಾಗದಿದ್ದರೆ ಅದನ್ನು ನೆರವೇರಿಸಲು ಅವರು ಮನಸಾರೆ ನೆರವಾಗದಿದ್ದರೆ, ಅಂಥ ಯೋಜನೆ ರಾಷ್ಟ್ರೀಯ ಯೋಜನೆಯಲ್ಲ. ಜನರ ಬುದ್ಧಿಗೆ ಎಟುಕದಿದ್ದರೆ ಅಂಥ ಯೋಜನೆಯನ್ನು ನಿರ್ವಹಿಸುವುದು ಅಸಾಧ್ಯ. ರಷ್ಯಾದಲ್ಲಿ ಮಾಡಿದಂತೆ ಅಪಾರ ಹಿಂಸೆ–ಬಲಾತ್ಕಾರಗಳಿಂದ ಅದನ್ನು ಸಾಧಿಸಬೇಕಾದೀತು. ನಮಗೆ ಯೋಜನೆಯನ್ನು ಸಾಧಿಸಲು ಬಲಾತ್ಕಾರ ರಕ್ತಪಾತಗಳು ಬೇಕಾಗಿಲ್ಲ. ಜನಕ್ಕೆ ಯೋಜನೆಯಲ್ಲಿ ತಮ್ಮ ಹಿತವಿದೆಯೋ ಇಲ್ಲವೋ ತಿಳಿಯಬೇಕು. ಅವರಿಗೆ ಅದು ಒಪ್ಪಿಗೆಯಾದರೆ ಅವರ ಮನಃಪೂರ್ಣ ಸಹಕಾರ ಸಿಗುತ್ತದೆ.

ಭಾರತದ ಹಳ್ಳಿಗಳು ಸಮೃದ್ಧವಾಗಬೇಕು, ಸುಖಮಯವಾಗಿ ಪೂರ್ಣ ಜೀವನವನ್ನು ಅನುಭವಿಸಬೇಕು; ಪ್ರತಿಯೊಬ್ಬ ಗ್ರಾಮಸ್ಥನಿಗೂ ವೈಯಕ್ತಿಕವಾಗಿ ಸುಸಂಘಟಿತ ಸಮಾಜದ ಒಬ್ಬ ಸದಸ್ಯನಾಗಿ ವಿಕಾಸಗೊಳ್ಳಲು ಪೂರ್ಣ ಅವಕಾಶವಿರಬೇಕು. ಇಂಥ ಹಳ್ಳಿಗಳನ್ನು ರೂಪಿಸಬೇಕೆಂಬುದೇ ನಮ್ಮ ಉದ್ದೇಶ. ಇದನ್ನು ಸಾಧಿಸಲು ಆಯಾ ಹಳ್ಳಿಯ ಶಕ್ತಿ–ಸಾಮರ್ಥ್ಯಗಳನ್ನು, ಅನುಕೂಲತೆಗಳನ್ನು ಆರ್ಥಿಕ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಉಪಯೋಗಿಸಿಕೊಳ್ಳಬೇಕು; ಅದನ್ನು ಸಹಕಾರ ಪದ್ಧತಿಯಂತೆ ಬೆಳೆಸಬೇಕು. ಸ್ವಸಂಪೂರ್ಣ ಸುಸಂಘಟಿತ ಗ್ರಾಮಗಳ ರಚನೆಯೇ ನಮ್ಮ ಯೋಜನೆಯ ಗುರಿ ಆಯಾ ಸ್ಥಳದಲ್ಲಿ ಮಾಡುವ ಕೆಲಸ ಅಲ್ಲಿಗೆ ಮಾತ್ರವೇ ಉಪಯುಕ್ತವಾಗಿದ್ದರೆ ಸಾಲದು. ಇಡೀ ಯೊಜನೆಗೆ ಹೊಂದಿಕೊಳ್ಳುವಂತಿರಬೇಕು. ಆ ಕೆಲಸ ಕಟ್ಟಕಡೆಯಲ್ಲಿ ನ್ಯಾಯಪೂರ್ಣ ಪ್ರಜಾತಂತ್ರ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆಗೆ ದೋಹದವಾಗಬೇಕು.

ಯೋಜನೆ ಅಂದರೆ ಉದ್ದೇಶ್ಯದ ಸಾಧನೆಗಾಗಿ ಕೆಲವು ಅಂಶಗಳನ್ನು ಒಟ್ಟುಗೂಡಿಸುವುದು, ಪೋಣಿಸುವುದು. ಭಾರತದಲ್ಲಿ ನಾವು ಯಾವ ಅಂಶ

ಗಳನ್ನು ಪೋಣಿಸಬೇಕು? ಇತರ ದೇಶಗಳಲ್ಲಿ ಇಲ್ಲದ ಅಂಶಗಳು ನಮ್ಮ ಯೋಜನೆಯಲ್ಲಿರಬಹುದು. ಆದುದರಿಂದ ರಷ್ಯಾದ ಯೋಜನೆಯಾಗಲಿ, ಇಂಗ್ಲೆಂಡು, ಅಮೆರಿಕಗಳ ಯೋಜನೆಗಳಾಗಲೀ ನಮಗೆ ಮೇಲ್ಪಂಕ್ತಿಯಾಗಬೇಕಾಗಿಲ್ಲ. ಆ ದಾರಿ ನಮ್ಮನ್ನು ಗುರಿಗೆ ಒಯ್ಯಲಿಕ್ಕೂ ಇಲ್ಲ.

ರಷ್ಯಾದ್ದೋ, ಅಮೆರಿಕದ್ದೋ ಇಂಗ್ಲೆಂಡಿನದ್ದೋ ಆ ಯೋಜನೆಗಳಿಗೆಲ್ಲ ಒಂದು ಹಿನ್ನೆಲೆಯಲ್ಲಿರುವ ಅಂಶಗಳು ನಮ್ಮ ದೇಶದಲ್ಲಿದ್ದರೂ ಅದೇ ರೀತಿಯ ಯೋಜನೆ ಮಾಡಿದರೆ ನಮಗೆ ನಷ್ಟ ವಿಫಲತೆ ತಪ್ಪಿದ್ದಲ್ಲ.

ಕ್ರಿಯಾತ್ಮಕ ಯೋಜನೆ : ಹಿಂದೂಸ್ಥಾನದಲ್ಲಿ, ಬಡತನ, ಕೊಳಕು, ಕಾಯಿಲೆ, ಅಜ್ಞಾನ ತುಂಬಿವೆ. ಆದುದರಿಂದ ನಮ್ಮ ಯೋಜನೆ ಈ ಕೆಲಸಗಳನ್ನು ಮುಖ್ಯವಾಗಿ ಗಮನಿಸಬೇಕು.

೧. ವ್ಯವಸಾಯ ೨. ಗ್ರಾಮೋದ್ಯೋಗ ೩. ವಸತಿ ೪. ಆರೋಗ್ಯ ೫. ಗ್ರಾಮ ಶಿಕ್ಷಣ ೬. ಗ್ರಾಮ ಜೀವನದ ವ್ಯವಸ್ಥೆ ೭. ಗ್ರಾಮ ಸಂಸ್ಕೃತಿ.

ಬಡತನವನ್ನು ತೊಲಗಿಸಬೇಕು ಎಂದು ಪದೇ ಪದೇ ಹೇಳುತ್ತಾರೆ. ಬಡತನ ಎಂದರೇನು? ಯಾರೋ ಹೇಳಿದಂತೆ – ಬಡತನ ಎಂದರೆ ನಿಮಗೇನು ಬೇಕೋ ಅದರ ಅಭಾವ. ಆದರೆ ನಿಮಗೆ ಏನು ಬೇಕು? ರೋಲ್ಸ್‌ರಾಯ್ಸ್ ಮೋಟಾರು ಬೇಕೆ? ಅದಕ್ಕೆ ಅಭಾವವಾದರೆ ನೀವು ಬಡವರೆ? ಒಬ್ಬ ಹುಡುಗಿಗೆ ತುಟಿಗೆಂಪಿನ ಡಬ್ಬಿ ಬೇಕು. ಅದನ್ನು ಕೊಳ್ಳಲು ಸಾಕಷ್ಟು ಹಣವಿಲ್ಲ. ಅವಳು ಬಡವಿಯೆ? ನಮಗೆ ಬೇಕಾದುದರಲ್ಲಿ ಅನಿವಾರ್ಯವಾದ ಪ್ರಾಥಮಿಕ ಪದಾರ್ಥಗಳೂ ಇವೆ. ಕೆಲವು ಪದಾರ್ಥಗಳಿಲ್ಲದೆ ಮನುಷ್ಯ ಬದುಕಲೇ ಆರ. ಇವು ಅನಿವಾರ್ಯ. ಅವನ ದೇಹ ಇರಲು, ಅವನ ವ್ಯಕ್ತಿತ್ವ ಬೆಳಗಲು ಇವು ಬೇಕೇಬೇಕು. ಇವು ಸ್ವಾಭಾವಿಕವಾದ ಅಗತ್ಯಗಳು. ಇವನ್ನು ನಾವು ತೃಪ್ತಿಪಡಿಸಲೇಬೇಕು, ಆ ಕೃತಕ ಚಟಗಳನ್ನಲ್ಲ.

ಪ್ರಾಥಮಿಕ ಅಥವಾ ಮೂಲ ಅಗತ್ಯಗಳಲ್ಲಿ ಅತ್ಯಂತ ಮುಖ್ಯವಾದುದು ಯಾವುದು? ಮೊದಲನೆಯದು ಅನ್ನ–ಆಹಾರ. ಬಟ್ಟೆಯಿಲ್ಲದಿದ್ದರೂ ಬದುಕಬಹುದು. ಅನ್ನವಿಲ್ಲದೆ ಬದುಕಲಾರೆವು. ನಮ್ಮ ದೇಶದಲ್ಲೋ ಪದೇಪದೇ ಕ್ಷಾಮ. ಆದುದರಿಂದ ನಮ್ಮ ಯೋಜನೆಯಲ್ಲಿ ಮೂಲಭೂತ ಅಂಶ ಈ ಪೀಡೆಯ ನಿವಾರಣೆ. ಆಹಾರೋತ್ಪತ್ತಿಯನ್ನು ಹೇಗೆ ಸಾಧಿಸಬೇಕು? ಬಂಡವಾಳವನ್ನು ಚೆಲ್ಲಿಯೆ? "ಬಂಡವಾಳ ಹಾಕಿ ನೋಡಿ, ಇಷ್ಟು ಬಂಡವಾಳ ಹಾಕಿದರೆ ಇಷ್ಟು ಹೆಚ್ಚು ಆಹಾರೋತ್ಪತ್ತಿಯಾಗುತ್ತದೆ" ಎಂದು ಪಂಡಿತರು ಲೆಕ್ಕ ಕೊಟ್ಟಿದ್ದಾರೆ. ನೆಲದಲ್ಲಿ ಹಣ ಸುರಿದರೆ ಸಾಕು, ಕೈಗೆ ಬೆಳೆ ಎದ್ದು ಬರುತ್ತದೆಯೇನೋ!

ನಮ್ಮ ದೇಶದಲ್ಲಿ ಉತ್ಪಾದನೆಯ ಮುಖ್ಯ ಹಾಗೂ ಮಹತ್ತರ ಅಂಶ ಮಾನವನ ಪರಿಶ್ರಮ. ನಮಗೆ ಬೇಕಾದುದನ್ನು ಉತ್ಪತ್ತಿ ಮಾಡಿಕೊಳ್ಳಲು ನಮ್ಮ ಹಸಿವನ್ನು ಹಿಂಗಿಸಲು ಪರಿಶ್ರಮವೆಂಬ ಬೃಹತ್ ಅಂಶವನ್ನು ಬಳಸ ಬೇಕಾಗುತ್ತದೆ.

ಉತ್ಪಾದನೆಯ ವಿಧಾನದ ಬಗ್ಗೆ ಜನರಲ್ಲಿ ಒಂದು ಭಾವನೆ ಹರಡಿದೆ: ಆಧುನಿಕ ಯಂತ್ರಗಳನ್ನು ತಂದು ದೊಡ್ಡ ದೊಡ್ಡ ಕೇಂದ್ರೀಯ ಉದ್ಯೋಗಗಳನ್ನು, ಕಾರ್ಖಾನೆಗಳನ್ನು ಸ್ಥಾಪಿಸಿದರೆ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆಂದು. ಅಂಥ ವಿಚಾರಕ್ಕೆ ಮಣಿಯುವ ಮೊದಲು ಅದನ್ನು ಸೂಕ್ಷ್ಮವಾಗಿ ಪರಿಶೀಲಿಸ ಬೇಕು. ಆರ್ಥಿಕ ಉತ್ಪಾದನೆಯ ವ್ಯವಸ್ಥೆ ಮಾಡಲು ಅನೇಕ ಅಂಶಗಳನ್ನು ಒಟ್ಟಿಗೆ ಸೇರಿಸಿ ಸರಿಯಾಗಿ ಜೋಡಿಸಬೇಕು. ಆ ಅಂಶಗಳಲ್ಲಿ ಮುಖ್ಯವಾದುವು ಪ್ರಾಕೃತಿಕ ಸಾಧನಗಳು, ಬಂಡವಾಳದ ಏರ್ಪಾಟು, ಶ್ರಮ. ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಇವನ್ನು ಬೇರೆ ಬೇರೆ ಪ್ರಮಾಣದಲ್ಲಿ ಜೋಡಿಸಬೇಕು. ಇಂಗ್ಲೆಂಡಿನಲ್ಲಿ ಔದ್ಯೋಗಿಕ ಕ್ರಾಂತಿಯಾದಾಗ ಬಂಡವಾಳ ಸಮೃದ್ಧಿಯಾಗಿತ್ತು. ಆದುದರಿಂದ ಅವರ ಉತ್ಪಾದನೆಯ ಪದ್ಧತಿಯಲ್ಲಿ ಬಂಡವಾಳದ ಪ್ರಭಾವ ಹೆಚ್ಚು. ಅಮೆರಿಕದಲ್ಲಿ ದುಡಿಯುವ ಜನ ಕಡಮೆ, ಪ್ರಾಕೃತಿಕ ಸಾಧನ ಸಾಮಗ್ರಿ ಯಥೇಷ್ಟ ಆಗಿತ್ತು. ಆದುದರಿಂದ ಅವರು ಸ್ವಲ್ಪ ದುಡಿದರೆ ಹೆಚ್ಚು ಫಲ ಬರುವ ಉಪಾಯ ಕಂಡು ಹಿಡಿದರು: ಯಂತ್ರಗಳು ಬಂದವು. ಆ ರೀತಿಯ ಆರ್ಥಿಕ ವ್ಯವಸ್ಥೆಯನ್ನು ಮಾಡಿದರೆ ಹೆಚ್ಚು ದುಡಿತ ಬೇಕಾದಂಥ ಸ್ಥಿತಿ ಬರುತ್ತದೆ. ಎಂದರೆ ದುಡಿತ ಇಲ್ಲದಾಗಿ ನಿರುದ್ಯೋಗ ಹೆಚ್ಚುತ್ತದೆ. ಆದುದರಿಂದ ಬಂಡವಾಳ ಕಡಮೆ, ದುಡಿಯುವ ಜನ ಹೆಚ್ಚು ಇರುವ ನಮ್ಮ ದೇಶದಲ್ಲಿ ಇಂಗ್ಲೆಂಡು ಅಮೆರಿಕಗಳ ರೀತಿ ಅಸಂಗತವಾಗುತ್ತದೆ.

ಮನುಷ್ಯನೇ ಒಂದು ಸೂಕ್ಷ್ಮ, ಕುಶಲತಮ ಯಂತ್ರ. ಜಡ ಯಂತ್ರಕ್ಕೂ ಮನುಷ್ಯನಿಗೂ ಒಂದು ಭೇದವಿದೆ. ಮನುಷ್ಯನು ದುಡಿಯಲಿ ಬಿಡಲಿ ಅವನ ಹೊಟ್ಟೆಗೆ ಹಾಕುತ್ತಿರಬೇಕು. ಒಂದು ವೇಳೆ ಯಾಂತ್ರಿಕ ಉಪಕರಣಗಳಿಂದಲೇ ದಿನ ಬಳಕೆಯ ಪದಾರ್ಥಗಳನ್ನು ನಿರ್ಮಿಸಿದರೂ ಮನುಷ್ಯರ ಹೊಟ್ಟೆಗೆ ಹಾಕುವುದೇನು ತಪ್ಪದು. ಆದುದರಿಂದ ನಮ್ಮಲ್ಲಿ ಮುಖ್ಯವಾಗಿ ಇರುವ ಅಂಶಗಳನ್ನು ಸರಿಯಾಗಿ ಸಾರ್ಥಕವಾಗಿ ಉಪಯೋಗಿಸಬೇಕಾದರೆ ನಮ್ಮ ದೇಶದ ಉತ್ಪಾದನಾ ಕ್ರಮದಲ್ಲಿ ವಿಶೇಷವಾಗಿ ಮನುಷ್ಯನ ಬಲವನ್ನು ಉಪಯೋಗಿಸುವ ಪದ್ಧತಿ ಸರ್ವ ಸಾಮಾನ್ಯ ವಾಗಬೇಕು. ಈ ಪದ್ಧತಿಯನ್ನು ಅನುಸರಿಸದಿದ್ದರೆ ನಮ್ಮ ದೇಶದ ಅಪಾರವಾದ ಶ್ರಮ ಸಂಪತ್ತನ್ನು ಕಡಲಿಗೆ ಸುರಿದ ಪಾಪಕ್ಕೆ ನಾವು ಗುರಿಯಾಗುತ್ತೇವೆ. ಹಾಗೆ ಮಾಡಿದರೆ ಎಂದಿಗೂ ನಮಗೆ ಪುರೋಭಿವೃದ್ಧಿಯಿಲ್ಲ.

ಬರೀ ಪದಾರ್ಥಗಳ ಉತ್ಪತ್ತಿಯಿಂದಲೇ ಒಂದು ರಾಷ್ಟ್ರ ಸುಖವಾಗಿ, ಕ್ಷೇಮವಾಗಿ ಇರಲಾರದು. ಜನರಿಗೆ ಬೇಕಾದುದನ್ನು ಒದಗಿಸುವ ಕೆಲಸದಲ್ಲಿ ಮಾತ್ರ ಉತ್ಪಾದನೆಗೆ ಪ್ರಾಧಾನ್ಯತೆ. ಆದುದರಿಂದ ಜನರು ತಮಗೆ ಬೇಕಾದ ಪದಾರ್ಥಗಳನ್ನು ತಾವೇ ಉತ್ಪತ್ತಿ ಮಾಡಿಕೊಳ್ಳುವಂತೆ ಸಮಾಜವನ್ನು ರೂಪುಗೊಳಿಸಬೇಕಾದುದು ಮೊದಲನೆಯ ಕೆಲಸ. ಅವರ. ಹೊಟ್ಟೆಗೆ ಸಾಕಾಗುವಷ್ಟು ಆಹಾರ, ಚಳಿ-ಮಳೆಗಳ ಬಾಧೆಗೆ ತಡೆದುಕೊಳ್ಳಲು ಬಟ್ಟೆ, ಇರಲು ತಕ್ಕ ವಸತಿ-ಇಷ್ಟನ್ನು ಅವರು ಮಾಡಿಕೊಳ್ಳಬೇಕು. ಆಮೇಲೆ ಅವರಿಗೆ ಔಷಧೋಪಚಾರ, ಶಿಕ್ಷಣ, ಇತರ ಸಾಮಾಜಿಕ ಅನುಕೂಲತೆಗಳನ್ನು ಒದಗಿಸಿ ಕೊಟ್ಟು ಜನರ ದೈಹಿಕ, ಮಾನಸಿಕ. ನೈತಿಕ ಯೋಗಕ್ಷೇಮಕ್ಕೆ ಏರ್ಪಾಟು ಮಾಡಬೇಕು. ಈ ಮೂಲಭೂತ ಅಗತ್ಯಗಳನ್ನು ತೃಪ್ತಿಗೊಳಿಸುವ ಮೊದಲೇ ಪರದೇಶಗಳಲ್ಲಿ ವ್ಯಾಪಾರ ಮಾಡಲು ಪದಾರ್ಥಗಳನ್ನು ಉತ್ಪತ್ತಿ ಮಾಡುವುದು ಮೂರ್ಖತನ. ಬರೀ ಹಣಕ್ಕೇನು ಯೋಗ್ಯತೆ ? ಯಾರಿಗೆ ತೃಪ್ತಿ ? ಹಣವನ್ನೆಣಿಸುವ ಲೋಭಿಯ ಆಸೆಯೊಂದು ತೃಪ್ತಿಯಾದೀತು. ಹಣವೇ ಗುರಿಯಲ್ಲ. ಜನರಿಗೆ ಕೈ ತುಂಬಾ ಹಣ ಸಿಗುವಂತೆ ಮಾಡಿ, ಅವರು ಹೊಟ್ಟೆಗಿಲ್ಲದೆ ಒಣಗುವಂತೆ ಮಾಡಿದರೆ ನಮ್ಮ ವ್ಯವಸ್ಥೆ ಅವಿವೇಕದ್ದು ಎನಿಸಿಕೊಳ್ಳುತ್ತದೆ. ಆದುದರಿಂದ ಜನರಿಗೆ ಮೊಟ್ಟ ಮೊದಲು ಸಮೃದ್ಧಿಯಾಗಿ ಅನ್ನ, ಧಾರಾಳವಾಗಿ ಬಟ್ಟೆ, ಅನುಕೂಲವಾದ ಮನೆ ಸಿಗುವಂತೆ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಇವೆಲ್ಲವೂ ಸಾಕಷ್ಟು ತೃಪ್ತಿಯಾದ ಮೇಲೆ ಉಳಿದ ಉತ್ಪಾದನೆ. ದೇಶದ ಆರ್ಥಿಕ ವ್ಯವಹಾರವನ್ನು ಈ ದಾರಿಗೆ ತಿರುಗಿಸುವುದು ಸರಕಾರದ ಕೆಲಸ. ಇಲ್ಲದಿದ್ದರೆ ಆದಕ್ಕೆ ಆ ಹೆಸರೇ ಸಲ್ಲದು.

ಬರೀ ದೈಹಿಕ ಅವಶ್ಯಕತೆಗಳ ತೃಪ್ತಿಯಾದರೆ ಸಾಲದು. ಜನರಲ್ಲಿ ಸ್ವಸಹಾಯ, ಪರಸ್ಪರ ಸಹಕಾರ, ಸಾಮಾಜಿಕ ಸಂಘಟನೆಯ ಅರಿವು ಮೂಡುವಂತೆ ಮಾಡಬೇಕು. ಇದನ್ನು ಮಾಡಿದರೆ ಸ್ವಸಂಪೂರ್ಣತೆಯ ಮೂಲಕ ಸ್ವರಾಜ್ಯದ ಹಾದಿಯಲ್ಲಿ ಬಹಳ ದೂರ ಸಾಗಿ ಹೋದಂತೆ.

ಇನ್ನೊಂದು ಮಾತನ್ನು ನೆನಪಿಡಬೇಕು, ನಮ್ಮ ಯೋಜನೆ ಕೆಲವರಿಗಾಗಿ ಮಾತ್ರವಲ್ಲ, ದೇಶದಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೂ ನಾವು ಮಾಡುವ ಯೋಜನೆ ಸಾರ್ಥಕವಾಗಬೇಕಾದರೆ ಅದು ಭಾರತದ ಪ್ರತಿಯೊಬ್ಬ ಜೀವಂತ ಮನುಷ್ಯನಿಗೂ ಸಂಬಂಧಿಸಿದುದಾಗಿರಬೇಕು. ಬಂಡವಾಳ ಅಭಾವವಾಗಿರುವ ಈ ಬಡದೇಶದಲ್ಲಿ ಹೀಗೆ ವಿಶಾಲವಾಗಿ ಮಾಡಿದ ಯೋಜನೆಗೆ ಎಲ್ಲಿಂದಲೋ ಬಂಡವಾಳ ಬರುತ್ತದೆ ಎಂಬ ಭರವಸೆಯಿಂದಿರಬಾರದು. ಬಂಡವಾಳದ ತಳಹದಿಯ ಮೇಲೆ ಹಾಕಿದ ಯೋಜನೆಗಳು ಭಾರತದಲ್ಲಿ ಅಸಂಬದ್ಧ, ಹಾಗೆಯೇ ಪ್ರಾಥಮಿಕ ಅಗತ್ಯವಾದ

ಆಹಾರವನ್ನು ಒದಗಿಸುವ ಯೋಜನೆ ಮಾಡದ. ಭಾರತದ ಅಖಂಡ ಶ್ರಮ ಸಂಪತ್ತನ್ನು ಉಪಯೋಗಿಸದ ಯಾವ ಯೋಜನೆಯೂ ಸುಸಂಗತವಲ್ಲ. ಪಶ್ಚಿಮ ದೇಶದ ಯೋಜನೆಗಳೆಲ್ಲವೂ ಪದಾರ್ಥ ಪ್ರಧಾನ. ಪ್ರಕೃತಿಸಂಪತ್ತನ್ನು ಬಾಚಿ ಕೊಳ್ಳಬೇಕೆಂಬುದು ಅದರ ಉದ್ದೇಶ್ಯ. ಏತಕ್ಕಾಗಿಯೋ ? ಅವರಿಗೆ ಅದು ಗೊತ್ತಿಲ್ಲ. ಕುರ್ಚಿ–ಮೇಜುಗಳು ನಮ್ಮ ಪ್ರಾಥಮಿಕ ಅವಶ್ಯಕತೆಗಳನ್ನು ತೃಪ್ತಿ ಪಡಿಸುತ್ತವೆಯೆ?

ಭಾರತಕ್ಕೆ ಯೋಜನೆ ಮಾಡಬೇಕೆಂದರೆ ಅದು ಮೊಟ್ಟಮೊದಲು ಪ್ರತಿಯೊಬ್ಬ ಶ್ರಮಜೀವಿಯ ಸುತ್ತಲೂ ಹರಡಬೇಕು. ಆಮೇಲೆ ಅಲ್ಲಿಂದ ಇಡೀ ದೇಶಕ್ಕೇ ವ್ಯಾಪಿಸಬಹುದು. ಕಡೆಗೂ ನಾವು ಇಂಗ್ಲೆಂಡು, ಅಮೇರಿಕಗಳಷ್ಟು ಹಣಗಾರರಾಗದಿರಬಹುದು. ಆದರೆ ಆಹಾರದಲ್ಲಿ ಸಮೃದ್ಧರಾಗುತ್ತೇವೆ. ಐದು ವರ್ಷದ ಕೆಳಗೆ ಇಂಗ್ಲೆಂಡು ಹೊಟ್ಟೆಗೇ ಇಲ್ಲದೇ ತೊಳಲುತ್ತಿತ್ತು.

ಆದುದರಿಂದ ಹಿಂದುಸ್ಥಾನಕ್ಕೆ ಯಾವ ಯೋಜನೆಯನ್ನೇ ಮಾಡಲಿ, ಅನ್ನ – ಬಟ್ಟೆಗಳ ಸ್ವಯಂಪೂರ್ಣತೆ ಅದರ ಮುಖ್ಯ ಲಕ್ಷಣವಾಗಿರಬೇಕು. ಪ್ರತಿಯೊಂದು ಹಳ್ಳಿಯೂ ಅನ್ನ ಬಟ್ಟೆಗಳಲ್ಲಿ ಸ್ವಸಂಪೂರ್ಣವಾಗದಿದ್ದರೆ ಸ್ವರಾಜ್ಯವಿದ್ದೂ ಪ್ರಯೋಜನವಿಲ್ಲ. ತಾತಾ–ಬಿರ್ಲಾ ಯೋಜನೆಗಳಿಗೆ ಕೋಟಿ ಕೋಟಿ ರೂಪಾಯಿ ಬೇಕು ಮೊದಲಿಡಲಿಕ್ಕೆ. ನಮ್ಮ ಯೋಜನೆಗೆ ಅಷ್ಟು ಹಣ ಬೇಕಾಗಿಲ್ಲ. ನಮ್ಮಲ್ಲಿಲ್ಲದ ಪದಾರ್ಥ ಮುಖ್ಯವಲ್ಲವಲ್ಲ ನಮ್ಮ ಯೋಜನೆಯಲ್ಲಿ! ನಮ್ಮ ಜನರ ಚಟುವಟಿಕೆಯನ್ನು, ಕೆಲಸವನ್ನು ಮತ್ತೆ ಸರಿಯಾದ ದಾರಿಗೆ ತಿರುಗಿಸುತ್ತೇವೆ, ಅವರಿಗೆ ಮಾರ್ಗದರ್ಶನ ಮಾಡುತ್ತೇವೆ. ಅವರ ಸಹಜ ಕಾರ್ಯಗಳನ್ನೆ ನಿಯಮಗೊಳಿಸುತ್ತೇವೆ. ಈ ಮೂಲಕ ಕೋಟಿಗಟ್ಟಲೆ ಜನರ ಕಾರ್ಯಶಕ್ತಿಯನ್ನು ಯೋಗ್ಯವಾದ ಹಾಗೂ ಅಪೇಕ್ಷಣೀಯ ಮಾರ್ಗದಲ್ಲಿ ನಡೆಸುತ್ತೇವೆ.

೧೫. ವ್ಯವಸಾಯ

ಪ್ರಥಮ ಆದ್ಯತೆ ಅನ್ನಬಟ್ಟೆಯದು. ಇದಕ್ಕಾಗಿ ನಾವು ವ್ಯವಸಾಯ–ಗ್ರಾಮೋದ್ಯೋಗಗಳ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಬೇಕು. ವ್ಯವಸಾಯದ ಉತ್ಪತ್ತಿಯನ್ನು ನಿರ್ದಿಷ್ಟಗೊಳಿಸಿ ನಿಯಂತ್ರಣ ಮಾಡಬೇಕು. ಹಾಗೆ ಮಾಡುವಾಗ ಎರಡು ಮಾತನ್ನು ಗಮನಿಸಬೇಕು :

೧. ಆಯಾ ಸ್ಥಳಕ್ಕೆ ಬೇಕಾದ ಆಹಾರವನ್ನೂ, ದಿನ ಬಳಕೆಯ ಪದಾರ್ಥಗಳಿಗೆ ಅಗತ್ಯವಾದ ಮೂಲವಸ್ತುಗಳನ್ನೂ ಉತ್ಪತ್ತಿ ಮಾಡಬೇಕೆ ವಿನಾ ಗಿರಣಿ–ಕಾರ್ಖಾನೆಗಳಿಗಲ್ಲ. ಉದಾ : ಗಿರಣಿಗಳಿಗೆ ಬೇಕಾದ ಮರಗಬ್ಬನ್ನೋ, ಉದ್ದ ತೊಳೆಯ ದೊಡ್ಡ ಹತ್ತಿಯನ್ನೋ ಬೆಳೆಯದೆ ಹಳ್ಳಿಯ ಆಲೆಮನೆಯಲ್ಲಿ ಗಾಣ ವಾಡಲು ಅನುಕೂಲವಾದ ಕಬ್ಬನ್ನೂ, ಕೈರಾಟೆಯಿಂದ ನೂಲಲು ಅನುಕೂಲವಾದ ಸಣ್ಣ ತೊಳೆ ಹತ್ತಿಯನ್ನೂ ಬೆಳೆಯಬೇಕು. ಹೆಚ್ಚು ಭೂಮಿಯಿದ್ದರೆ ಪಕ್ಕದ ಜಿಲ್ಲೆಗಳವರಿಗೆ ಬೇಕಾದ ಬೆಳೆಗಳನ್ನು ಬೆಳೆಯಬಹುದು.

೨. ಕಾರ್ಖಾನೆ ಕಬ್ಬು, ಹೊಗಸೊಪ್ಪು, ಸೆಣಬು ಮುಂತಾದ ವ್ಯಾಪಾರದ ಪೈರನ್ನು ಆದಷ್ಟೂ ಕಡಮೆ ಮಾಡಬೇಕು. ಅಗತ್ಯವಾದರೆ ಪೂರಾ ನಿಲ್ಲಿಸಿಯೇ ಬಿಡಬೇಕು. ಹೊಗೆಸೊಪ್ಪು, ಸೆಣಬು, ಕಬ್ಬು ಮುಂತಾದವು ಎರಡು ರೀತಿ ನಷ್ಟ ಮಾಡುತ್ತವೆ. ಮನುಷ್ಯನಿಗೂ ಆಹಾರ ಕಡಮೆ ಮಾಡುತ್ತವೆ, ದನಗಳಿಗೂ ಆಹಾರ ಲೋಪ ಮಾಡುತ್ತವೆ. ಇವನ್ನು ಬಿಟ್ಟು ಆಹಾರದ ಪೈರನ್ನು ಬೆಳೆದರೆ ದನಕ್ಕೆ ಮೇವು ಆಗುತ್ತದೆ. ರೈತರು ಈ ನಿಯಮವನ್ನು ಅನುಸರಿಸುವಂತೆ ಮಾಡಲು ಸರಕಾರ ಆಯಾ ಪ್ರದೇಶದ ಯೋಜನೆಗೆ ಅನುಸಾರವಾಗಿ ಇಂಥದೆ ಬೆಳೆ ಬೆಳೆಯಬೇಕೆಂದು ನಿಗದಿ ಮಾಡಬೇಕು, ಅಪ್ಪಣೆ–ಚೀಟಿಗಳನ್ನು ಕೊಡಬೇಕು. ವ್ಯಾಪಾರದ ಬೆಳೆ ಬೆಳೆದರೆ ಆ ಭೂಮಿಗೆ ಹೆಚ್ಚು ಕಂದಾಯ ಹಾಕಬೇಕು. ಕೈಗಾರಿಕೆಯ ಪದಾರ್ಥಗಳಿಗೂ ವ್ಯವಸಾಯದ ಪದಾರ್ಥಗಳಿಗೂ ಬೆಲೆ ಸಮಾನವಾಗಿರುವಂತೆ ಬೆಲೆಯ ನಿಗದಿ–ನಿಯಂತ್ರಣ ಮಾಡಬೇಕು.

ಧಾನ್ಯ ಮತ್ತು ಹಾಲು ಎರಡೂ ಮೂಲ ಪದಾರ್ಥಗಳು, ಪ್ರಾಥಮಿಕ ಪದಾರ್ಥಗಳು. ಪಿಷ್ಟಕ್ಕಾಗಿ ಅದನ್ನು, ಕೇಸಿನ್‌ಗಾಗಿ ಇದನ್ನು ಬಳಸಿ ದುಡ್ಡು ಮಾಡಲು ಬಿಡಬಾರದು. ಕಾರ್ಖಾನೆಗೆ ಬೇಕಾದ ಕಬ್ಬಿನ ಬೆಳೆ ಕಡಮೆಯಾದರೆ ಬೆಲ್ಲದ ಉತ್ಪತ್ತಿ ಕಡಮೆ ಬೀಳಬಹುದು. ಈಗ ಹೆಂಡಕ್ಕಾಗಿ ಉಪಯೋಗಿಸುತ್ತಿರುವ

ತಾಳೆಗಿಡಗಳಿಂದ ಬೆಲ್ಲ ಮಾಡಬಹುದು. ಬಂಜರುಭೂಮಿಯಲ್ಲಿ ಬೇಕಾದ ಹಾಗೆ ಬೆಳೆಯುವ ಬೇರೆ-ಬೇರೆ ಮರಗಳಿಂದ ಬೆಲ್ಲವನ್ನು ಮಾಡಿ ಈಗ ಕಬ್ಬು ಬೆಳೆಯುವ ಉತ್ತಮ ಭೂಮಿಯನ್ನು ಧಾನ್ಯ, ಹಣ್ಣು-ಹಂಪಲು, ಕಾಯಿಪಲ್ಯ ಬೆಳೆಸಲು ಉಪಯೋಗಿಸಬಹುದು. ದೇಶಕ್ಕೆ ಈ ಪದಾರ್ಥ ಈಗ ಅತ್ಯಗತ್ಯ.

ಪ್ರಥಮತಃ ದೊರೆಯಬೇಕಾದುದು ಸಮತೋಲನವಾದ ಆಹಾರ. ಭಾರತದಲ್ಲಿ ಈಗ ಬರೀ ಧಾನ್ಯ ತಿನ್ನುವವರು ಅನೇಕರಿದಾರೆ. ಬರೀ ಧಾನ್ಯಗಳಿಂದ ದೇಹಕ್ಕೆ ಬೇಕಾದುದೆಲ್ಲವೂ ಒಂದೇ ಕಡೆ ಸಿಗದು. ಎಲ್ಲಾ ಅಂಶಗಳೂ ಇರುವ ಪೂರ್ಣಾಹಾರಕ್ಕೆ ಬೇಕಾದುದನ್ನು ಬೆಳೆಯುವ ಹಾಗೆ ಪ್ರತಿಯೊಂದು ಹಳ್ಳಿಯ ವ್ಯವಸಾಯವನ್ನೂ ವ್ಯವಸ್ಥೆಗೊಳಿಸಿದರೆ, ಆಗ ಸರ್ವಾಂಶ ಪೂರ್ಣ ಆಹಾರ ನಮಗೆ ಸಿಗುತ್ತದೆ. ಒಂದೊಂದು ಬಗೆಯ ಆಹಾರ ಪದಾರ್ಥಕ್ಕೆ ಎಷ್ಟು ಎಕರೆ ಬೇಕೆಂಬುದನ್ನು ಲೆಕ್ಕ ಹಾಕಿ ನಿರ್ದಿಷ್ಟಗೊಳಿಸಬಹುದು.

ಸಾಧಾರಣವಾಗಿ ಒಂದು ಎಕರೆ ನೆಲದಲ್ಲಿ ಬೇರೆ ಏನು ಬೆಳೆದರೂ ಧಾನ್ಯವನ್ನು ಬೆಳೆದರೆ ಸಿಗುವಷ್ಟು ಆಹಾರ ಸಿಗುವುದಿಲ್ಲವೆಂದು ಜನರು ತಿಳಿದಿದ್ದಾರೆ. ಧಾನ್ಯದಿಂದ ಆಹಾರದಲ್ಲಿ ಉರವಲು ಹೆಚ್ಚೇ ವಿನಾ ಪುಷ್ಟಿ ಹೆಚ್ಚಲ್ಲ. ಬರೀ ಧಾನ್ಯದಿಂದಲೇ ಉಷ್ಣ-ಪುಷ್ಟಿ ಎರಡೂ ಬೇಕು ಎಂದರೆ ಬಹಳ ಹೆಚ್ಚು ಧಾನ್ಯವನ್ನು ಬಳಸಬೇಕಾಗಿ ಬರುತ್ತದೆ. ಅದರ ಜೊತೆಗೆ ಹಣ್ಣು-ಹಂಪಲು, ಕಾಯಿಪಲ್ಯ, ಹಾಲು-ಮೊಸರು, ಬೆಣ್ಣೆ-ತುಪ್ಪ, ಕಾಯಿ-ಬೆಲ್ಲ, ಎಣ್ಣೆಬೀಜ ಮುಂತಾದುವನ್ನು ಸೇರಿಸಿಕೊಂಡರೆ ಧಾನ್ಯಕ್ಕಿಂತ ಬಹಳ ಕಡಮೆ ಪ್ರಮಾಣದಲ್ಲಿ ಬಳಸಿದರೂ ಇವುಗಳಿಂದ ಹೆಚ್ಚು ಪುಷ್ಟಿ ಬರುತ್ತದೆ. ಒಂದು ಎಕರೆ ಧಾನ್ಯದ ಪೈರಿಗಿಂತ ಉಷ್ಣದ ಉತ್ಪತ್ತಿಯಲ್ಲಿಯೂ ಒಂದೆಕರೆ ಆಲೂಗೆಡ್ಡೆಯಂಥ ಗಡ್ಡೆಗೆಣಸು, ಬೆಲ್ಲದ ಪೈರು ಸ್ವಲ್ಪ ಹೆಚ್ಚೇ. ಆದುದರಿಂದ ಸರ್ವಾಂಶ ಪೂರ್ಣವಾದ ಸಮಗ್ರ ಆಹಾರ ಪದ್ಧತಿ ನಮಗೆ ಉಭಯ ಫಲ ಕೊಟ್ಟೀತು, ನಮ್ಮ ಸಮಸ್ಯೆಯನ್ನು ಬಿಡಿಸೀತು. ದೇಹಕ್ಕೆ ಬೇಕಾದ ಪದಾರ್ಥಗಳನ್ನೆಲ್ಲ ಸರಿಯಾದ ಪ್ರಮಾಣದಲ್ಲಿ ಕೊಟ್ಟು ಅದನ್ನು ಆರೋಗ್ಯವಂತವಾಗಿ ಸಶಕ್ತವಾಗಿ ಇಟ್ಟೀತು; ತಲಾ ಎಷ್ಟು ಭೂಮಿ ಬೇಕೆಂಬುದರ ಪ್ರಮಾಣವನ್ನೂ ಕಡಮೆ ಮಾಡೀತು. ಒಂದು ಎಕರೆ ನೆಲದಲ್ಲಿ ಮಾಂಸದ ಉತ್ಪತ್ತಿ ೨೫೦ ಪೌಂಡು, ಧಾನ್ಯದ ಉತ್ಪತ್ತಿ ೨,೫೦೦ ಪೌಂಡು, ಕಾಯಿಪಲ್ಯದ ಉತ್ಪತ್ತಿ ೨೫,೦೦೦ ಪೌಂಡು. ಈಗ ಭಾರತದಲ್ಲಿ ಆಹಾರದ ಉತ್ಪತ್ತಿಗಾಗಿ ಸಿಗುತ್ತಿರುವ ಭೂಮಿ ತಲಾ ೦.೭ ಎಕರೆಯಷ್ಟು. ಈಗಿನ ಬೇಸಾಯದ ಪ್ರಕಾರ ನಮ್ಮ ಆಹಾರಕ್ಕೇ ಸಾಲದ ಈ ೦.೭ ಎಕರೆ ಭೂಮಿಯೇ ವ್ಯವಸಾಯವನ್ನು ಪುನರ್ವ್ಯವಸ್ಥೆಗೊಳಿಸಿದಾಗ ಸಾಕಾಗಬಹುದು. ಅಲ್ಲಲ್ಲಿಯ ಭೂಮಿಯನ್ನು ಆಯಾ ಸ್ಥಳದ ಜನರಿಗೆ ಅಗತ್ಯವಾದ ಸಮಗ್ರ ಆಹಾರ, ಬಟ್ಟೆ

ಮತ್ತು ಇತರ ಅವಶ್ಯಕತೆಗಳಿಗೆ ಸರಿಯಾಗಿ ಕೃಷಿ ಮಾಡುವಂತೆ ಏರ್ಪಡಿಸಬೇಕು. ಈ ಬೆಳೆಗಳ ಪ್ರಮಾಣವನ್ನು ನಿರ್ಧರಿಸಿ ರೈತರು ತಮ್ಮ ಹೊಲಗಳಲ್ಲಿ ಇಂಥಿಂಥ ಬೆಳೆಯನ್ನೇ ಬೆಳೆಯಬೇಕೆಂದು ಗೊತ್ತು ಮಾಡಬೇಕು. ಒಂದು ಲಕ್ಷ ಜನರಿಗೆ ಸಮಗ್ರ ಆಹಾರವನ್ನು ಒದಗಿಸಲು ವ್ಯವಸಾಯವನ್ನು ಯಾವ ಪ್ರಕಾರ ವ್ಯವಸ್ಥೆಗೊಳಿಸಬೇಕೋ ಎಂಬುದನ್ನು ಮುಂದೆ ಕೊಟ್ಟಿರುವ ಪಟ್ಟಿಯಲ್ಲಿ ತೋರಿಸಲಾಗಿದೆ. ಸಸ್ಯಾಹಾರಿಗಳಾದ ಜನರಿಗೆ ದಿನವೊಂದಕ್ಕೆ ತಲಾ ೨,೮೦೦ ಕ್ಯಾಲರಿಗಳನ್ನೂ, ವರ್ಷಕ್ಕೆ ೨೫ ಗಜ ಬಟ್ಟೆಯನ್ನೂ ಒದಗಿಸಲು ಅದರಲ್ಲಿ ಏರ್ಪಾಟು ಇದೆ. ಮಾಂಸಾಹಾರಿಗಳು ೬ ಔನ್ಸು ಹಾಲಿಗೆ ಬದಲಾಗಿ ೯ ಔನ್ಸು ಮಾಂಸವನ್ನೋ, ಮೊಟ್ಟೆಯನ್ನೋ, ಮೀನನ್ನೋ ಬಳಸಬಹುದು.

ಇಡೀ ಭಾರತದ ಅಂಕಿ ಅಂಶಗಳ ಆಧಾರದಿಂದ ಸ್ಥೂಲವಾಗಿ ಲೆಕ್ಕಮಾಡಿ ಕೊಟ್ಟಿದೆ. ಇದು ಆಯಾ ಸ್ಥಳಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತದೆ. ತಲಾ ೧೬ ಔನ್ಸು ಧಾನ್ಯ ಎಂದರೆ ನಮ್ಮ ಭೂಮಿಯಲ್ಲಿ ೬೫.೨೦% ರಷ್ಟು ಪ್ರದೇಶ ಧಾನ್ಯದ ಬೆಳೆಗೇ ಆಗುತ್ತದೆ. ಅದೇ ರೀತಿ, ತಲಾ ೨ ಔನ್ಸು ಬೆಳೆ ಎಂದರೆ ಶೇ ೮ರಷ್ಟು ಭೂಮಿ ಆ ಬೆಳೆಗೆ.

ಒಂದು ಲಕ್ಷ ಜನರಿಗಾಗಿ ಈ ಪಟ್ಟಿಯಲ್ಲಿ ಲೆಕ್ಕ ಹಾಕಿದೆ. ಒಂದು ಹಳ್ಳಿ ಅಥವಾ ನಾಲ್ಕಾರು ಹಳ್ಳಿಗಳ ಗುಂಪು ಈ ಪ್ರಮಾಣದಲ್ಲಿ ಬೆಳೆ ಬೆಳೆದರೆ ಜನರ ಸಾಮಾನ್ಯ ಪ್ರಾಥಮಿಕ ಅಗತ್ಯಗಳೆಲ್ಲ ತೃಪ್ತಿಯಾಗುತ್ತವೆ. ಆದುದರಿಂದ ನಾವು ಇವನ್ನು ಬೆಳೆಯಲು ಯತ್ನಿಸಬೇಕು. ಭೂಮಿ ಸಮಾಜದ ಸೊತ್ತು. ಅದನ್ನು ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿಯೇ ಉಪಯೋಗಿಸಬೇಕು. “ನನಗೆ ಇಷ್ಟು ಎಕರೆ ಹೊಲವಿದೆ. ನಾನು ಹೊಗೆಸೊಪ್ಪನ್ನು ಬೆಳೆಯುತ್ತೇನೆ” ಎಂದರೆ ಆಗದು. ತನಗೆ ಹೆಚ್ಚು ದುಡ್ಡು ಬರುತ್ತದೆ ಎಂದು ಅವನು ತನ್ನ ಮನಸ್ಸಿಗೆ ಬಂದ ಹಾಗೆ ಹೊಗೆಸೊಪ್ಪನ್ನು ಬೆಳೆಯುವಂತಿಲ್ಲ. ವೈಯಕ್ತಿಕವಾಗಿ ನಮಗೆ ಎಷ್ಟೋ ಆಸೆ-ಆಕಾಂಕ್ಷೆಗಳು ಇರುತ್ತವೆ. ಸಮಾಜದಲ್ಲಿ ಎಲ್ಲವನ್ನೂ ನಮ್ಮ ಇಷ್ಟದಂತೆಯೇ ನಡೆಸುವ ಹಾಗಿಲ್ಲ. ರಸ್ತೆಯಲ್ಲಿ ಬಲಗಡೆ ಗಾಡಿ ಹೊಡೆಯುತ್ತೇನೆ ಎಂದರೆ ಆದೀತೇ? ಭೂಮಿ ವ್ಯಕ್ತಿಯ ಅಧೀನದಲ್ಲಿದೆಯೇನೋ ನಿಜ. ಆದರೆ ಅದನ್ನು ಸರ್ವಜನೋಪಯೋಗವಾಗುವಂತೆ ಉಪಯೋಗಿಸಬೇಕು. ಆದುದರಿಂದಲೇ ಇಂಥಿಂಥ ಬೆಳೆಯನ್ನು ಬೆಳೆಯಲು ಅಪ್ಪಣೆ ಪಡೆಯಬೇಕು ಎನ್ನುವುದು. ಎಳ್ಳು ಬೆಳೆಯಲು ಅಪ್ಪಣೆ ಪಡೆದವನು ಹೊಗೆಸೊಪ್ಪು ಬೆಳೆಯಕೂಡದು. ಅದರಿಂದ ಹತ್ತು ಪಟ್ಟು ಹೆಚ್ಚು ಲಾಭ ಬಂದರೂ ಬೆಳೆಯಕೂಡದು.

ಹಳ್ಳಿಗಳಲ್ಲಿ ಬೆಳೆದುದನ್ನು ಹಳ್ಳಿಗಳಲ್ಲಿಯೇ ನಮಗೆ ಬೇಕಾದಷ್ಟನ್ನೆಲ್ಲ ಬಳಸುವುದು ನಮ್ಮ ಉದ್ದೇಶ್ಯ. ನಮಗೆ ಆಗಿ ಉಳಿದುದನ್ನು ನಮ್ಮಲ್ಲಿ ಬೆಳೆ

ಒಂದು ಲಕ್ಷ ಜನರಿಗೆ ವ್ಯವಸಾಯದ ಹಂಚಿಕೆ

	ದಿನಕ್ಕೆ ಔನ್ಸ್	ಕಾಲರಿ	ವರ್ಷಕ್ಕೆ ಪೌಂಡು	ಲಕ್ಷ ಜನಕ್ಕೆ ಬೇಕಾದಹೊಲ	ಬೀಜಬೀಳು 15%	ಒಟ್ಟು	ಹಂಚಿಕೆ ಶೇಕಡೆ
೧. ಆಹಾರ							
ಧಾನ್ಯ	೧೬	೧೬೦೦೦	೩೬೫.೦೦	೪೩,೪೦೦	೬,೫೦೦	೪೯,೯೧೦	೬೫.೨
ಬೇಳೆ	೨	೨೦೦	೪೫,೬೦	೫.೪೦೦	೮೧೦	೬,೨೧೦	೮.೦
ಬೆಲ್ಲ	೨	೨೦೦	೪೫.೬೦	೧,೨೦೦	೧೮೦	೧,೩೮೦	೧.೮
ಬೀಜ	೧	೧೪೫	೨೨.೮೦	೨.೬೦೦	೩೯೦	೨,೯೯೦	೮.೪
ಎಣ್ಣೆ	೧/೨	೨೫೫	೧೧.೪೦	೩,೦೦೦	೪೫೦	೩,೪೫೦	—
ತುಪ್ಪ	೧/೨	—	೧೧.೪೦	—	—	—	—
ಹಾಲು	೧೨	೨೪೦	೨೭೩.೭೫	—	—	—	—
ಕಾಯಿ ಪಲ್ಯ	೮	೬೮	೧೮೨.೫೦	೧,೬೦೦	೨೪೦	೧,೮೪೦	೨.೪
ಗೆಡ್ಡೆ ಗೆಣಸು	೪	೧೦೦	೯೧.೨೫	೧,೦೦೦	೧೫೦	೧,೧೫೦	೧.೫
ಹಣ್ಣು	೪	೫೨	೯೧,೨೫	೯೦೦	೧೩೫	೧,೦೩೫	೧.೪
೨. ಬಟ್ಟೆ							
ಹತ್ತಿ			೧೨.೫೦	೭.೫೦೦	೧,೧೨೫	೮,೬೨೫	೧೧.೩
ಒಟ್ಟು				೬೬.೬೦೦	೯,೯೯೦	೭೬,೫೯೦	೧೦೦

ಯದ ಧಾನ್ಯಗಳನ್ನು ಬೇರೆ ಕಡೆಯಿಂದ ತರಿಸಬೇಕಾದುದಕ್ಕೆ ವಿನಿಮಯ ಮಾಡಬೇಕು. ಉದಾ: ಒಂದು ಹಳ್ಳಿಯಲ್ಲಿ ಹತ್ತಿಯನ್ನು ಬೆಳೆದರೆ ಅದನ್ನು ಗಿರಣಿಗೆ ಕಳಿಸಿ ಬಟ್ಟೆ ಮಾಡಿಸಿ ತರಿಸಬೇಕಾಗಿಲ್ಲ. ಹತ್ತಿಯನ್ನು ಬಟ್ಟೆಯಾಗಿ ಮಾಡಿಸಿದುದಕ್ಕೆ ನಾವು ಮತ್ತೇನಾದರೂ ಪದಾರ್ಥವನ್ನು ಕೊಡಬೇಕಲ್ಲವೆ, ವಿನಿಮಯವಾಗಿ? ಅದಕ್ಕಾಗಿ ನಮ್ಮ ಧಾನ್ಯವನ್ನು ಕಳೆದುಕೊಳ್ಳಬಾರದೆಂದರೆ ನಮ್ಮ ಹತ್ತಿಯನ್ನು ನಾವೇ ಬಿಡುವಿದ್ದಾಗ ಬಟ್ಟೆಯಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡಿದರೆ ನಮ್ಮ ಧಾನ್ಯವೆಲ್ಲ ನಮಗೇ ಉಳಿದೀತು. ಜೊತೆಗೆ ಬಟ್ಟೆಯೂ ಆಯಿತು. ಎರಡೂ ರೀತಿಯಲ್ಲಿ ಲಾಭ. ಈ ರೀತಿ ಮಾಡಿದರೇನೇ ಹಳ್ಳಿಗಳು ಅನ್ನ-ಬಟ್ಟೆಗಳಲ್ಲಿ ಪರಿಪೂರ್ಣವಾಗಬಲ್ಲವು.

ಹೀಗೆ ಸಮಗ್ರ ಆಹಾರದ ಅಂಶಗಳನ್ನು ಗಮನಿಸಿ, ಅದನ್ನು ಒದಗಿಸಿಕೊಂಡು ಜನರಿಗೆ ಆಹಾರ ನೀಡಲು ಏನೇನು ಬೆಳೆಯಬೇಕೋ ನಿರ್ಧರಿಸಬೇಕು. ಆ ಸ್ಥಳದ ಜನರಿಗೆ ಹೊಟ್ಟೆ ತುಂಬಾ ಆಗಿ ಮಿಕ್ಕರೆ ಅದನ್ನು ಹೊರಗೆ ಕಳುಹಿಸಬಹುದು. ಅಲ್ಲಿಯವರೆಗಲ್ಲ. ಅಲ್ಲಿಯ ಜನರಿಗೇ ಸಾಲದೇ ಇರುವ ಪದಾರ್ಥಗಳನ್ನು ಹೊರಗೆ ಕಳುಹಿಸುವುದೆಂದರೆ ಸಾಗಾಣಿಕೆಯ ವ್ಯವಸ್ಥೆಗೆ, ಭೂಮಿಗೆ, ಬೇಸಾಯಕ್ಕೆ ಮಾಡಿದ ದ್ರೋಹ. ಅದೇ ರೀತಿ ಜನರು ಯಾವುದಾದರೂ ರೀತಿಯಲ್ಲಿ ಪ್ರಯೋಜನಕರವಾದ ಕೆಲಸದಲ್ಲಿ ತೊಡಗಲು ಅಗತ್ಯವಾದ ಸಾಮಗ್ರಿಯನ್ನು ಒದಗಿಸುವ ಪ್ರಯತ್ನಗಳು ನಡೆಯಬೇಕು.

೧೬. ವಿನಿಮಯ

ವಿವಿಧೋದ್ದೇಶ್ಯ ಸಹಕಾರ ಸಂಘಗಳು :

ಗ್ರಾಮೋದ್ಯೋಗಗಳನ್ನು ಬೆಳೆಸಲಾಗಲಿ, ಗ್ರಾಮಸ್ಥರು ಊರೊಟ್ಟಿನ ಕೆಲಸ ಮಾಡಲಾಗಲಿ ಸಹಕಾರ ಸಂಘಗಳು ಬಹಳ ಮುಖ್ಯ ಸಾಧನ. ವಿವಿಧೋದ್ದೇಶ್ಯದ ಗ್ರಾಮ ಸಹಕಾರ ಸಂಘವೊಂದಿದ್ದರೆ ಹಲವು ಬಗೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು :

೧. ಹಳ್ಳಿಯವರಿಗೆ ಬೇಕಾದ ಧಾನ್ಯವನ್ನು, ಗ್ರಾಮೋದ್ಯೋಗಗಳಿಗೆ ಅಗತ್ಯವಾದ ಸಾಮಗ್ರಿಯನ್ನು ಸಂಗ್ರಹಿಸಿಡಬಹುದು ;

೨. ಹಳ್ಳಿಗೆ ಸಾಕಾಗಿ ಉಳಿದ ಪದಾರ್ಥಗಳನ್ನು ಹೊರಗೆ ಸಾಗಿಸುವುದು, ಹಳ್ಳಿಯವರಿಗೆ ಅಗತ್ಯವಾದುದನ್ನು ಹಂಚುವುದು ;

೩. ಬೀಜದಕಾಳು, ಸುಧಾರಿಸಿದ ಮುಟ್ಟು, ಉಪಕರಣಗಳು, ಮೂಳೆ ಗೊಬ್ಬರ, ಮೀನು ಗೊಬ್ಬರ ಒದಗಿಸುವುದು ;

೪. ಸುತ್ತಮುತ್ತಲಿನ ಪ್ರದೇಶಕ್ಕೆ ಒಂದು ಬೀಜದ ಹೋರಿಯನ್ನು ಸಾಕುವುದು ;

೫. ಕಂದಾಯ, ತೆರಿಗೆ ವಸೂಲಿಯಲ್ಲಿ ಜನಕ್ಕೂ ಸರಕಾರಕ್ಕೂ ಮಧ್ಯವರ್ತಿಯಾಗಿ ಇರುವುದು ಇತ್ಯಾದಿ.

ಧಾನ್ಯವನ್ನು ಸಾಗಿಸುವಾಗ ಆಗುವ ನಷ್ಟ, ಅದನ್ನೆಲ್ಲ ಒಂದು ಕಡೆ ತಂದು ಹಾಕಿ ಅಲ್ಲಿಂದ ಮತ್ತೆ ಹಳ್ಳಿಗಳಿಗೆ ಒಯ್ದು ಒದಗಿಸುವ ವೆಚ್ಚವೆಲ್ಲ ಈ ಸಹಕಾರ ಸಂಘಗಳ ಮೂಲಕ ತಪ್ಪುತ್ತದೆ. ಸರಕಾರಕ್ಕೂ ಜನರಿಗೂ ಮಧ್ಯ ಸಹಕಾರ ಸಂಘಗಳು ಉತ್ತಮ ವ್ಯಾವಹಾರಿಕ ವ್ಯವಸ್ಥೆ.

ಒಬ್ಬ ರೈತ ತಾನು ಬೆಳೆದ ಗೋಧಿಯಲ್ಲಿ ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ಹೆಚ್ಚಾದುದನ್ನು ಸಹಕಾರ ಸಂಘಕ್ಕೆ ಕೊಡುತ್ತಾನೆ. ಆ ಧಾನ್ಯದ ಆಧಾರದ ಮೇಲೆ ಸಂಘದಿಂದ ತನಗೆ ಬೇಕಾದ ಉಳಿದ ಪದಾರ್ಥಗಳನ್ನು ತೆಗೆದುಕೊಳ್ಳುತ್ತಾನೆ. ಸರಕಾರದ ಕಂದಾಯವನ್ನೂ ಕಾಳಿನ ರೂಪದಲ್ಲಿ ಕೊಡಬಹುದು, ಹಣವಾಗಿ ಕೊಡಬೇಕಾದುದಿಲ್ಲ. ಈಗ ಹಣದ ರೂಪದಲ್ಲಿ ಕಂದಾಯವನ್ನು ತೆಗೆದುಕೊಳ್ಳುತ್ತಿರುವುದು ಹಳ್ಳಿಯವರಿಗೆ ಬಹಳ ತೊಂದರೆಯಾಗಿದೆ.

ಸಹಕಾರ ಸಂಘವು ಹಳ್ಳಿಗಳಲ್ಲಿ ಸ್ಥಳೀಯ ಅಧಿಕಾರಿಗಳ ಸಂಬಳವನ್ನು ಸ್ವಲ್ಪಭಾಗದಲ್ಲಿ ಧಾನ್ಯ ರೂಪದಲ್ಲಿಯೆ ಕೊಡಬಹುದು.

ಹಣದ ಅರ್ಥವ್ಯವಸ್ಥೆ ನಿಜವಾದ ಬೆಲೆಗಳನ್ನು ತಿಳಿಸದು. ಒಬ್ಬರ ಕೈಯಿಂದ ಒಬ್ಬರಿಗೆ ಸಾಗಿಹೋದಾಗ ಹಣದ ಬೆಲೆ ವ್ಯತ್ಯಾಸವಾಗುತ್ತದೆ. ಬಡವನ ಕೈಯಲ್ಲಿ ಒಂದು ರೂಪಾಯಿ ಇದ್ದರೆ ಅದರ ಬೆಲೆ ಬೇರೆ, ಹಣವಂತನ ಕೈಯಲ್ಲಿದ್ದರೆ ಅದರ ಬೆಲೆಯೇ ಬೇರೆ. ಈ ಬಗೆಯ ಹಸ್ತಾಂತರಗಳು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲೂಬಹುದೂ, ತಗ್ಗಿಸಲೂಬಹುದು. ಮೇಲೆ ನೋಡಲಿಕ್ಕೆ ರೂಪಾಯಿ ರೂಪಾಯಿಯೇ, ಆದರೆ ವ್ಯವಹಾರದಲ್ಲಿ ಹಾಗಲ್ಲ. ಒಬ್ಬ ಬಡವನ ಕೈಯಲ್ಲಿ ಒಂದು ರೂಪಾಯಿ ಇದ್ದರೆ ೪-೫ ದಿನದ ಅನ್ನವಾಯಿತು. ಒಬ್ಬ ಭಾಗ್ಯವಂತನ ಕೈಯಲ್ಲಿದ್ದರೆ ಅದರ ಯೋಗ್ಯತೆ ಒಂದು ಚುಟ್ಟಾ. ಹೀಗೆ, ಒಂದು ರೂಪಾಯಿ ಬಡವನ ಕೈಯಿಂದ ಭಾಗ್ಯವಂತನ ಕೈಗೆ ಹೋದರೆ ಅದರ ಬೆಲೆ ಬಹಳ ಮಟ್ಟಿಗೆ ತಗ್ಗಿತು. ಅದೇ ರೀತಿ ಹಣವಂತನ ಕೈಯಿಂದ ಬಡವನ ಕೈಗೆ ಬಂದರೆ ಅದರ ಬೆಲೆ ಹೆಚ್ಚು. ಆದುದರಿಂದ ಯಾರ ಕೈಗೆ ಹೋದರೆ ಹಣದ ಬೆಲೆಯೇ ಕಡಿಮೆಯಾಗುತ್ತದೆಯೋ ಅಂಥವರ ಕೈಗೆ ಹಣ ಹೋಗದ ಹಾಗೆ ನಮ್ಮ ಆರ್ಥಿಕ ರಚನೆ ಮಾಡಬೇಕು. ವಿವಿಧೋದ್ದೇಶ್ಯದ ಸಹಕಾರ ಸಂಘಗಳು ಮಾಡಬೇಕಾದ ಕೆಲಸ ಇದೇ. ಹಳ್ಳಿಯವರಿಂದ ಜೋಳ, ರಾಗಿಯನ್ನು ಸಂಗ್ರಹಿಸಿ ಸರಕಾರಕ್ಕೆ ಕಾಳಿನ ರೂಪದಲ್ಲಿಯೆ ಕಂದಾಯ ಕೊಡಬಹುದು. ಸರಕಾರದ ಲೆಕ್ಕದಲ್ಲಿ ಅಧಿಕಾರಿಗಳಿಗೆ ಆಹಾರ ಪದಾರ್ಥಗಳನ್ನು ಕೊಡಬಹುದು. ಅದರಿಂದ ಜನರಿಗೆ ಸಮಗ್ರ ಆಹಾರ ಸಿಗುತ್ತದೆ. ಇದನ್ನೆಲ್ಲಾ ಸರಿಯಾಗಿ ನಡೆಸಿದರೆ ಕಡೆಗೆ ಸರಕಾರಕ್ಕೆ ಕೊಡಬೇಕಾದ ಹಣ ಬಹಳ ಸ್ವಲ್ಪ ಆಗುತ್ತದೆ. ಅದನ್ನೂ ಕೂಡ ಬೇರೆ ಬೇರೆ ಜಿಲ್ಲೆಗಳಿಗೆ, ಇಲ್ಲಿ ಹೆಚ್ಚಾಗಿರುವ ಆದರೆ ಅಲ್ಲಿ ಬೇಕಾದ ಧಾನ್ಯವನ್ನು, ಕಳಿಸಿ ಮುಟ್ಟಿಸಬಹುದು. ಹೀಗೆ ಮಾಡಲು ಸಾಧ್ಯವಾದರೆ ಹಣ ಪ್ರಪಂಚದ ಕೆಡುಕನ್ನು ಪೂರ್ಣವಾಗಿ ತೊಡೆದು ಹಾಕಲಾಗದಿದ್ದರೂ ಬಹುಮಟ್ಟಿಗೆ ಕಡಮೆ ಮಾಡಬಹುದು. ಆಗ ಹಣದ ಮಾಯಾ ಪ್ರಪಂಚ ಅಳಿದು ಹೋಗಿ ವಸ್ತುಗಳ ವಾಸ್ತವ ಪ್ರಪಂಚ ದೃಢವಾಗುತ್ತದೆ.

೧೭. ಸಹಕಾರ

ಸಹಕಾರ ಎಂದರೇನೇ ಪೈಪೋಟಿ ಇಲ್ಲದೆ ಎಲ್ಲರಿಗೂ ಹಿತವಾಗುವಂತೆ ಪಾಲುಗಾರಿಕೆಯಲ್ಲಿ ಕೆಲಸ ಮಾಡುವುದು. ಆ ವ್ಯವಹಾರಕ್ಕೆ ಸಂಬಂಧಿಸಿದ ಜನರೆಲ್ಲ ರಲ್ಲಿಯೂ ಒಂದೇ ಬಗೆಯ ಆಸಕ್ತಿಯಿರಬೇಕು. ಇದು ಸಹಕಾರದ ಮೂಲಸ್ತಂಭ. ಸಹಕಾರದಲ್ಲಿ ಶೋಷಣೆಗೆ ಎಡೆಯೇ ಇಲ್ಲ. ಆದುದರಿಂದ ಶೋಷಕನಿಗೂ, ಶೋಷಿತ ನಿಗೂ ಸಹಕಾರ ಸಾಧ್ಯವೇ ಇಲ್ಲ. ವಿದೇಶಿಯರು ತಮ್ಮ ಪದಾರ್ಥಗಳನ್ನು ನಮಗೆ ಮಾರಲು ಬರುತ್ತಾರೆ. ನಮ್ಮ ಸಂಪರ್ಕದಲ್ಲಿ ಅವರಿಗಿರುವ ಆಸಕ್ತಿ ಅಷ್ಟೇ. ಅವರು ಇತರರನ್ನು ರಾಜಕೀಯ ಬಂಧನದಲ್ಲಿ ಹಿಡಿದಿರುವುದೂ ಅದಕ್ಕಾಗಿಯೇ. ಸಹಕಾರ ಸಂಘಗಳು ಕೈಮಗ್ಗದ ನೇಕಾರರಿಗೆ ಅಮೆರಿಕದ ನೂಲನ್ನು ತರಿಸಿಕೊಡುವ ಕೆಲಸ ಮಾಡುತ್ತಿದ್ದರೆ ಅದು ಹುಲಿ–ಮೇಕೆಯನ್ನು ಒಟ್ಟಿಗೆ ಕಟ್ಟುವ ಅಸಾಧ್ಯವಾದ ಕೆಲಸವೇ ಹೌದು. ಅದು ನಿಜವಾದ ಸಹಕಾರ ಪದ್ಧತಿಯಿಂದ ನಡೆಯುವ ಕೆಲಸ ವಲ್ಲ. ಆಯಾ ಸ್ಥಳದ ನೂಲುಗಾರರನ್ನೂ, ನೇಕಾರರನ್ನೂ ಜೊತೆಗೂಡಿಸಿ ಅವ ರವರ ಸಂಪರ್ಕ ಬೆಳೆಸಬೇಕಾದುದು ಸಹಕಾರ ಸಂಘಗಳ ಧರ್ಮ. ಹಳ್ಳಿಯಲ್ಲಿ ಬೆಳೆದ ಮೂಲ ಪದಾರ್ಥ, ಹಳ್ಳಿಯ ಉದ್ಯೋಗಿ ಮತ್ತು ಸಿದ್ಧವಾದ ಪದಾರ್ಥ ಗಳನ್ನು ಬಳಸುವ ಜನ ಹೀಗೆ ಇವರೆಲ್ಲರನ್ನೂ ಸಹಕಾರ ಸಂಘಗಳು ಎಳೆಗೂಡಿಸ ಬೇಕು. ಮುತ್ತಿನ ಸರವನ್ನು ಒಟ್ಟಾಗಿ ಹಿಡಿದಿರುವ ದಾರದಂತೆ ಸಹಕಾರ ಸಂಘಗಳು ಎಲ್ಲಾ ಗುಂಪುಗಳನ್ನೂ ಒಟ್ಟಾಗಿ ಜೋಡಿಸಿ ಹಿಡಿಯಬೇಕು.

ಇಂಥ ಸಹಕಾರ ಸಂಘಗಳೆಲ್ಲಾ ನಿಷ್ಕಪಟಿಗಳಾದ ಹಳ್ಳಿಯವರನ್ನು ಸರಕಾರಿ ಅಧಿಕಾರಿಗಳ ಮೋಸಕ್ಕೆ ಬಲಿಯಾಗದಂತೆ ಕಾಪಾಡಬಲ್ಲವು. ಬೆಳೆದ ಬೆಳೆಯನ್ನು ಶೇಖರಿಸಿಟ್ಟುಕೊಂಡು ಸಾಲ, ತೆರಿಗೆ–ಕಂದಾಯ ಎಲ್ಲವನ್ನೂ ಕೊಟ್ಟು, ಬೆಳೆಯ ನ್ನೆಲ್ಲಾ ಒಂದೇ ಸಲ ಸಂತೆಗೆ ಹಾಕಿ, ಧಾರಣೆಯನ್ನು ಅತಿಯಾಗಿ ಏರುಪೇರಿಗೆ ಸಿಗಿಸದಂತೆ ತೆಗೆದಿಟ್ಟುಕೊಂಡು, ಸಕಾಲದಲ್ಲಿ ಹಾಗೂ ಸರಿಯಾದ ಧಾರಣೆಗೆ ಮಾರಿ ರೈತರಿಗೆ ಅನುಕೂಲ ಮಾಡಬಲ್ಲವು. ಈ ಸಂಸ್ಥೆಗಳು. ಆರ್ಥಿಕ ಕ್ಷೇತ್ರದಲ್ಲಿ ಏನೇ ಪೆಟ್ಟು ತಗಲಿದರೂ ಸೈರಿಸಿಕೊಂಡು ಆ ಪೆಟ್ಟು ರೈತರಿಗೆ ತಗಲದಂತೆ ಈ ಸಂಘಗಳು ಮಾಡಬಲ್ಲವು.

ಸಹಕಾರ ಸಂಸ್ಥೆಗಳು ನಡೆಯುತ್ತಿವೆಯೇ ಎಂಬುದರ ಪರೀಕ್ಷೆ

ಅವುಗಳ ಆದಾಯ–ವ್ಯಯದ ಪಟ್ಟಿಗಳಲ್ಲಿಲ್ಲ; ಅದು ಸುತ್ತಲಿನ ಪೇಟೆಯಲ್ಲಿ ಕಾಣುತ್ತದೆ. ಊರಿನ ಅಂಗಡಿಗಳಲ್ಲಿ ಕಾರ್ಖಾನೆಯ ಪದಾರ್ಥಗಳೂ ಪರದೇಶಿ ವಸ್ತುಗಳೂ ತುಂಬಿದ್ದರೆ ನಮ್ಮ ಅಗತ್ಯಗಳನ್ನು ತೃಪ್ತಿಪಡಿಸಲು ಸ್ಥಳೀಯ ಸಾಧನಗಳನ್ನು ಒಟ್ಟುಗೂಡಿಸಿ ಉತ್ಪತ್ತಿ ಮಾಡಿಸುವ ಸಹಕಾರಿ ಪ್ರಯತ್ನ ನಡೆದಿಲ್ಲವೆಂಬುದು ಸ್ಪಷ್ಟ, ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಿದರೆ ನಮ್ಮ ಪ್ರಾಥಮಿಕ ಅಗತ್ಯಗಳಾದ ಅನ್ನ, ಬಟ್ಟೆ, ವಸತಿಗಳ ಬಗ್ಗೆ ನಾವು ಸ್ವಾವಲಂಬಿಯಾಗಲು ನೆರವಾಗುತ್ತದೆ. ಇದನ್ನು ಸಾಧಿಸಿದರೆ ಹೊರದೇಶದ ಉತ್ಪಾದಕರ ದುರಾಸೆಯನ್ನು ಸೆಳೆಯುವ ಸಂದರ್ಭ ಯಾವುದೂ ಇರದು. ಆಗ ದೇಶದೇಶಗಳ ನಡುವೆ ಅಸೂಯೆಯಿಲ್ಲದೆ, ಜಗತ್ ಯುದ್ಧಗಳಿಗೆ ಅವಕಾಶವಿಲ್ಲದೆ ಹೋಗುತ್ತದೆ. ಸಹಕಾರ ಸಂಸ್ಥೆಗಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸಿದರೆ ದೇಶದ ಸ್ವಾತಂತ್ರ್ಯ ಸಿದ್ಧಿಯಾಗಿ ಅಂತರ್‌ರಾಷ್ಟ್ರೀಯ ಶಾಂತಿಗೆ ಸಾಧನವಾಗುತ್ತದೆ.

ಬ್ಯಾಂಕಿನ ಕೆಲಸ;

ವ್ಯಾಪಾರ–ಉದ್ಯೋಗಗಳೆಂಬ ರಥದ ಚಕ್ರ ಸರಾಗವಾಗಿ ತಿರುಗುವಂತೆ, ಸುಲಭವಾಗಿ ತಿಕ್ಕಾಟವಿಲ್ಲದೆ ಮುಂದೆ ಉರುಳುವಂತೆ ಕೀಲೆಣ್ಣೆ ಸವರುವುದೇ ಬ್ಯಾಂಕುಗಳ ಕೆಲಸ. ಸಹಕಾರಿ ಸಂಸ್ಥೆಯಾದರೆ ಈ ಕೆಲಸವನ್ನು ಸ್ವತಃ ಮಾಡುವುದರ ಜೊತೆಗೆ ಇಡೀ ಆರ್ಥಿಕ ರಚನೆಯಲ್ಲಿನ ಬೇರೆ ಬೇರೆ ಅಂಗಗಳೆಲ್ಲಾ ಪರಸ್ಪರ ಸಹಕರಿಸುವಂತೆಯೂ ಮಾಡಬೇಕು.

ಪಶ್ಚಿಮ ದೇಶದ ಬ್ಯಾಂಕುಗಳು ಹಣ ಪ್ರಪಂಚದವು. ಬ್ಯಾಂಕಿಗೆ ಎಷ್ಟು ಠೇವಣಿ ಬಂತು, ಎಷ್ಟು ಲಾಭ ಬಂತು ಎಂಬುದೇ ಅವರ ಪ್ರಗತಿಯ ಅಳತೆ, ನಾವು ಹಾಗೆ ಮಾಡಲಾಗುವುದಿಲ್ಲ. ಸುತ್ತಲಿನ ಜನಜೀವನಕ್ಕೆ ಎಷ್ಟು ಸುಖ–ಸಂತೋಷಗಳನ್ನು ಕೊಟ್ಟೀತು ಬ್ಯಾಂಕು ಎಂಬುದು ನಮ್ಮ ಅಳತೆ. ಜನರ ಆರ್ಥಿಕ ಜೀವನಕ್ಕೆ ಸಂಬಂಧಿಸಿದ ಹಲವು ಕೆಲಸಗಳನ್ನು ಅದು ನಿರ್ವಹಿಸಬೇಕು. ಹಣ ನಷ್ಟವಾದರೂ ಚಿಂತೆಯಿಲ್ಲ, ಜನರಿಗೆ ಸೌಕರ್ಯ ಮಾಡಬೇಕು. ಬರೀ ರೂಪಾಯಿ–ಆಣೆ–ಕಾಸಿನ ಲೆಕ್ಕ ಮಾಡಿ ಜನಜೀವನದಲ್ಲಿ ಬ್ಯಾಂಕು ಏನು ಪಾತ್ರ ವಹಿಸಿತು ಎಂಬುದನ್ನು ತಿಳಿಯಲು ಸಾಧ್ಯವಿಲ್ಲ.

ಮನುಷ್ಯನ ಮೈಯಿಂದ ರಕ್ತವನ್ನು ತೆಗೆದುಕೊಳ್ಳಲು ಒಂದು ಬಗೆಯ ಪಿಚಕಾರಿ, ಅದಕ್ಕೊಂದು ಸೂಜಿ ಇರುತ್ತವೆ. ಪಶ್ಚಿಮ ದೇಶಗಳ ಬ್ಯಾಂಕು–ಲೇವಾದೇವಿ ಪದ್ಧತಿಯು ಉತ್ಪಾದಕರ ಮೈಯಿಂದ ಪ್ರಾಣವನ್ನೇ ಹೀರುವ ಪಿಚಕಾರಿ ಸೂಜಿ ಇದ್ದಂತೆ. ಬಂಡವಾಳಗಾರರು ಅದನ್ನು ಉಪಯೋಗಿಸುತ್ತಾರೆ. ೧೯೪೩ ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ಉಂಟಾಗಿ ೩೦ ಲಕ್ಷ ಜನ ಸತ್ತರಲ್ಲ, ಅದು ರಿಸರ್ವ್ ಬ್ಯಾಂಕಿನ ಅಧಿಕಾರದ ದುರುಪಯೋಗದ ಫಲ. ಸಾರ್ವಜನಿಕರ ಹಣ,

ರಾಷ್ಟ್ರದ ಹಣ ಆ ಬ್ಯಾಂಕಿನಲ್ಲಿ ಇರುತ್ತದೆ. ಅವುಗಳ ಕೆಲಸದಿಂದ ದೇಶದ ಜನಕ್ಕೆ ಅಪಾರ ಹಾನಿಯಾಗುತ್ತದೆ. ಹಣದ ದುರುಪಯೋಗವೇ ಇದಕ್ಕೆ ಕಾರಣ.

ಹಣವನ್ನು ವಿನಿಮಯದ ಸಾಧನವನ್ನಾಗಿ ಅಥವಾ ಕ್ರಯಶಕ್ತಿಯ ಮುಡಿಪನ್ನಾಗಿ ಬಳಸಿದರೆ ಆಗ ಅದು ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತದೆ. ಸಾಧಾರಣವಾಗಿ ಹಣವೆಂದು ಬಳಸುವ ನಾಣ್ಯ ಶಾಶ್ವತ ; ಅದರಿಂದ ಕೊಳ್ಳುವ ಪದಾರ್ಥ ಅಶಾಶ್ವತ, ಬೇಗ ಕೆಡುತ್ತವೆ. ಆದುದರಿಂದ ಹಣವಿದ್ದವನಿಗೆ ಚೌಕಾಸಿ ಮಾಡಲು ಹೆಚ್ಚು ಅನುಕೂಲ. ಬಾಳೆಹಣ್ಣು ಮಾರುವವನು ಅದು ಕೊಳೆಯುವ ಮೊದಲೇ ಮಾರಿಕೊಳ್ಳಬೇಕು. ದುಡ್ಡೇನು ಕೊಳೆಯುವುದಿಲ್ಲ. ದುಡ್ಡಿರುವವನಿಗೆ ಅಂಥ ಅಪಾಯವೇನೂ ಇಲ್ಲ. ಎಷ್ಟು ಕಾಲ ಬೇಕಾದರೂ ಅದನ್ನು ಇಟ್ಟುಕೊಂಡಿರಬಲ್ಲ. ಈ ಭೇದ ಇರುವುದರಿಂದ ಹಣವಿದ್ದವನದೇ ಮೇಲುಗೈ. ಪದಾರ್ಥ ಇರುವವನದು ಯಾವಾಗಲೂ ಅಡಿಗೈಯೇ. ಇವನನ್ನು ಅವನು ಶೋಷಿಸಬಲ್ಲ. ಬ್ಯಾಂಕುಗಳು ಹಣ-ಹದ್ದುಗಳು. ತಮ್ಮ ಧನಬಲವನ್ನು ಅವು ಹೇಗೆ ಉಪಯೋಗಿಸಿದರೆ ಹಾಗೆ ತಿರುಗಬೇಕು ವ್ಯಾಪಾರ-ಉದ್ಯೋಗ. ತನ್ನ ಗಿರಾಕಿಗಳು ಹಾಳಾದರೂ ಚಿಂತೆಯಿಲ್ಲ, ತನ್ನ ಸ್ಥಿತಿ ಭದ್ರವಾಗಿರಲಿ ಎಂದು ಬ್ಯಾಂಕು ಪ್ರಯತ್ನಿಸಿದರೆ ಆ ಬ್ಯಾಂಕು ತನ್ನ ಕರ್ತವ್ಯಮಾಡಿದಂತಾಗಲಿಲ್ಲ. ಆರ್ಥಿಕ ರಚನೆಯಲ್ಲಿ ವಿನಿಮಯ ಸಾಧನವಾದ ಹಣದ ಬಗ್ಗೆ ಇಷ್ಟು.

ಕ್ರಯಶಕ್ತಿಯ ನಿಧಿ : ಹಣ

ಉಳಿದ ಪದಾರ್ಥಗಳಿಗಿಂತ ಹಣ ಹೆಚ್ಚು ಶಾಶ್ವತ. ಅದರ ಈ ಗುಣವನ್ನು ಸರಿಯಾಗಿ ಉಪಯೋಗಿಸಿದರೆ ಜನರಿಗೆ ಅದು ಕ್ರಯಶಕ್ತಿಯ ನಿಧಿಯಾಗಬಲ್ಲದು. ರೈತ ತನ್ನ ಹೊಲದಲ್ಲಿ ಬೇಸಾಯಮಾಡಿ ಸುಗ್ಗಿಯಾದ ಮೇಲೆ ಬೆಳೆಯನ್ನೆಲ್ಲ ಮಾರಿಬಿಡುತ್ತಾನೆ. ಅವನ ಕೈಗೆ ಸ್ವಲ್ಪ ಹಣ ಬರುತ್ತದೆ. ಮುಂದಿನ ಸುಗ್ಗಿಯವರೆಗೆ ಅವನಿಗೆ ಈ ಹಣದಿಂದಲೇ ನಿರ್ವಾಹ. ಮುಂದಿನ ೧೨ ತಿಂಗಳು ಕಾಲ ಅವನು ಬೇರೆ ಪದಾರ್ಥಗಳನ್ನು ಮಾರದೆ ತಡೆಯಲು ಈ ಹಣವನ್ನು ವಿನಿಮಯ ಮಾಡಬೇಕು. ಈ ೧೨ ತಿಂಗಳ ಅವಧಿಯಲ್ಲಿ ಆ ಕ್ರಯಶಕ್ತಿಯಲ್ಲಿ ಏನಾದರೂ ವ್ಯತ್ಯಾಸವಾದರೆ ರೈತನ ಪರಿಸ್ಥಿತಿಯೂ ಅಷ್ಟರ ಮಟ್ಟಿಗೆ ವ್ಯತ್ಯಾಸವಾಗುತ್ತದೆ. ಆದುದರಿಂದ ನಮ್ಮ ದೇಶದಂಥ ವ್ಯವಸಾಯ ಪ್ರಧಾನ ದೇಶದಲ್ಲಿ ಅಚಲವಾದ, ವ್ಯತ್ಯಾಸವಾಗದಂಥ ಕ್ರಯಶಕ್ತಿಯ ನಿಧಿ ಇರಬೇಕು. ವಿವಿಧೋದ್ದೇಶದ ಸಹಕಾರ ಸಂಘಗಳು ಈ ಕೆಲಸದಲ್ಲಿ ನೆರವಾಗಬಲ್ಲವು. ಹಣದ ಕಾರುಬಾರನ್ನು ತಡೆಗಟ್ಟಿ, ವ್ಯತ್ಯಾಸ ಏರಿಳಿತಗಳಿಗೆ ಅವಕಾಶವನ್ನು ಕಡಮೆಮಾಡಿ, ಪದಾರ್ಥಗಳ ಆಧಾರದ ಮೇಲೆ ಯೋಗ್ಯ ಲೇವಾದೇವಿ

ಮಾಡುತ್ತ ಒಂದೇ ಸಲಕ್ಕೆ ರೈತ ತನ್ನ ಬೆಳೆಯನ್ನೆಲ್ಲಾ ಮಾರಿಕೊಳ್ಳುವುದನ್ನು ಈ ಸಂಘಗಳು ನಿಲ್ಲಿಸಬಹುದು.

ಗೊಬ್ಬರ :

ಕಸ-ಕಡ್ಡಿ, ಮೂಳೆ, ಮಲಮೂತ್ರ ಎಲ್ಲವೂ ಈಗ ಹಳ್ಳಿಗರಿಗೆ ಅನಾರೋಗ್ಯಕರವಾಗಿವೆ. ಅದೆಲ್ಲವನ್ನೂ ಕಂಪೋಸ್ಟ್ ಮಾಡಿ ಗೊಬ್ಬರವಾಗಿ ಬಳಸಬಹುದು. ದನದ ಗೊಬ್ಬರದಷ್ಟೇ ಒಳ್ಳೆಯ ಗೊಬ್ಬರ ಇದು. ಇದನ್ನು ಬಹಳ ಸುಲಭವಾಗಿ ಮಾಡಬಹುದು. ಸಾಧಾರಣವಾಗಿ ಮೂಳೆಗಳನ್ನೂ ಗಾಣದ ಹಿಂಡಿಯನ್ನೂ ದೇಶದಿಂದ ಹೊರಗೆ ಸಾಗಿಸುತ್ತಾರೆ. ಅವನ್ನು ಹಳ್ಳಿಗಳಿಂದ ಹೊರಗೆ ಸಾಗಿಸದ ಹಾಗೆ ನೋಡಿಕೊಳ್ಳಬೇಕು. ಮೂಳೆಗಳನ್ನು, ಹಳ್ಳಿಗಳಲ್ಲಿಯೇ ಪುಡಿ ಮಾಡಬೇಕು. ಅವನ್ನು ಸುಣ್ಣದ ಭಟ್ಟಿಗಳಲ್ಲಿ ಸ್ವಲ್ಪ ಸುಟ್ಟು ಗಾಣಕ್ಕೆ ಹಾಕಿ ತಿರುವಿದರೆ ಸಾಕು. ಆ ಪುಡಿಯನ್ನು ರೈತರಿಗೆ ಹಂಚಬೇಕು. ಊರಿನ ಕಸ-ಕಡ್ಡಿಯನ್ನು ಗೊಬ್ಬರ ಮಾಡಲು ಯಾರಿಗಾದರೂ ಗುತ್ತಿಗೆ ಕೊಡಬಹುದು. ಮೊದಮೊದಲು ಆ ಗುತ್ತಿಗೆದಾರರಿಗೆ ಸಹಾಯ ಧನವನ್ನು ಕೂಡ ಕೊಡಬಹುದು. ಇದರಿಂದ ಊರು ಚೊಕ್ಕಟವಾಯಿತು. ಕಸಗುಡಿಸುವವರ ಮರ್ಯಾದೆ ಹೆಚ್ಚಾಯಿತು. ಗೊಬ್ಬರ ಮಾಡಿ ಮಾರುವ ಅಂತಸ್ತಿಗೆ ಅವರು ಬಂದಂತಾಯ್ತು.

ಹಳ್ಳಿಯ ಎಣ್ಣೆ ಬೀಜಗಳನ್ನೆಲ್ಲ ದೋಚಿಕೊಂಡೊಯ್ದು ಹಳ್ಳಿಗಳಿಗೆ ಬರೀ ಎಣ್ಣೆಯನ್ನು ಕೊಟ್ಟು, ಹಿಂಡಿಯನ್ನೆಲ್ಲ ಪರದೇಶಗಳಿಗೆ ಕಳಿಸುವ ಎಣ್ಣೆಗಿರಣಿಗಳು ನಮ್ಮ ಭೂಮಿಯ ಹುಲುಸನ್ನು ಕಾಪಾಡುವ ಮುಖ್ಯ ವಸ್ತುವನ್ನೇ ನಾಶ ಮಾಡುತ್ತಿವೆ. ಇದನ್ನು ಪೂರ್ಣವಾಗಿ ನಿಲ್ಲಿಸಲೇಬೇಕು. ಎಣ್ಣೆಬೀಜಗಳು ಊರಿನಿಂದಹೊರಗೆ ಹೋಗಬಾರದು. ಅಲ್ಲೇ ಗಾಣದಲ್ಲಿ ಎಣ್ಣೆಯಾಗಬೇಕು ಎನ್ನಲು ಇದೂ ಒಂದು ಮುಖ್ಯ ಕಾರಣ. ಅದರಿಂದ ಹಳ್ಳಿಯಲ್ಲಿ ಎಣ್ಣೆ ಉಳಿಯಿತು. ಹಿಂಡಿಯೂ ಸಿಕ್ಕಿತು, ಭೂಮಿ ಹುಲುಸಾಯಿತು, ದನಕ್ಕೆ ತಿನಿಸಾಯಿತು, ಜನಕ್ಕೆ ಲಾಭವಾಯಿತು.

ಭೂಮಿಯ ಸಾರವನ್ನು ಹೆಚ್ಚಿಸುತ್ತೇವೆ ಎಂದು ರಾಸಾಯನಿಕ ಗೊಬ್ಬರಗಳನ್ನು ತಂದು ಹಾಕುವ ಪ್ರಯತ್ನಗಳು ಈಗ ನಡೆಯುತ್ತಿವೆ. ಜಗತ್ತಿನಲ್ಲಿ ನಾನಾ ಪ್ರದೇಶಗಳಲ್ಲಿ ಈ ಗೊಬ್ಬರದಿಂದ ಆದ ಪರಿಣಾಮ ನಮಗೆ ಎಚ್ಚರಿಕೆ ಹೇಳುತ್ತಲೇ ಇದೆ. ಅವು ನೆಲಕ್ಕೆ ಸಾರವನ್ನು ಕೊಡುವುದಂತೂ ಇಲ್ಲ. ತಾತ್ಕಾಲಿಕ ಸ್ಫೂರ್ತಿ ಕೊಡುವ ಔಷಧಗಳಂತೆ ಒಡನೆಯೇ ಹೆಚ್ಚಾಗಿ ಬೆಳೆ ಕೊಡುವಂತೆ ಅವು ಮಾಡುತ್ತವೆ. ಆದರೆ ಕ್ರಮೇಣ ಭೂಮಿ ನಿಸ್ಸಾರವಾಗಿ ಬೇಕಲಾಗುತ್ತದೆ. ರಾಸಾಯನಿಕ ಗೊಬ್ಬರದ ಪ್ರಚಾರ ಮಾಡುವವರಿಗೆ ತಮ್ಮ ಗೊಬ್ಬರದ ಕಾರಖಾನೆಯ ಪದಾರ್ಥವನ್ನು ಮಾರುವ ಚಿಂತೆಯೊಂದೇ ಗೊತ್ತು; ಅದರಿಂದ ವ್ಯವ

ವ್ಯವಸಾಯಕ್ಕೆ ಏನೇ ಬಾಧಕವಾಗಲಿ.

ಬೀಜ :

ವ್ಯವಸಾಯ ವೃದ್ಧಿಯಾಗಬೇಕಾದರೆ ಆರಿಸಿದ ಮತ್ತು ಸುಧಾರಿಸಿದ ಬೀಜ ಬಹಳ ಅಗತ್ಯ. ಸಹಕಾರ ಸಂಘಗಳು ಬೀಜದ ಉತ್ಪತ್ತಿಗಾಗಿಯೆ ತಜ್ಞರ ಮೂಲಕ ಪ್ರತ್ಯೇಕ ಕ್ಷೇತ್ರಗಳಲ್ಲಿ ಬೇಸಾಯ ಮಾಡಿಸಿ ಆ ಬೀಜವನ್ನು ರೈತರಿಗೆ ಹಂಚಬೇಕು.

ಧಾನ್ಯ ಸಂಗ್ರಹ :

ದವಸವನ್ನು ಸಂಗ್ರಹಿಸಿಡುವ ಪದ್ಧತಿಯಿಂದ ಬಹಳ ನಷ್ಟವಾಗುತ್ತದೆ. ಬಹಳ ಕಡಮೆಯೆಂದರೂ ಈ ನಷ್ಟ ೩೫ ಲಕ್ಷ ಟನ್ ಎಂದು ಲೆಕ್ಕ ಹಾಕಿದ್ದಾರೆ. ೧೯೫೬ ರಲ್ಲಿ ನಮ್ಮ ದೇಶಕ್ಕೆ ಕಡಮೆ ಬಿದ್ದ ಧಾನ್ಯದ ಲೆಕ್ಕವೂ ಇಷ್ಟೇ. ಇದಲ್ಲದೆ ದವಸಕ್ಕೆ ಹುಳ ಬಿದ್ದು, ನೀರು ತಗಲಿ ದವಸ ಕೆಡುವುದರಿಂದಾಗುವ ನಾನಾ ರೀತಿಯ ಕಾಯಿಲೆಗಳ ಬಾಧೆಯ ನಷ್ಟವೂ ಹೆಚ್ಚೇ. ಆಯಾ ಸ್ಥಳದಲ್ಲಿಯೇ ದವಸದ ಸಂಗ್ರಹ ಮಾಡಿದರೆ ಈ ನಷ್ಟವೂ, ಅಲ್ಲಿಂದಿಲ್ಲಿಗೆ ಸಾಗಿಸುವ ಬಾಡಿಗೆಯೂ ಉಳಿಯುತ್ತದೆ. ಧಾನ್ಯ ಸಂಗ್ರಹದ್ದು ಬಹಳ ಅವಸರದ ಪ್ರಶ್ನೆ, ಸದಾ ಕಾಲದ ಸಮಸ್ಯೆ. ಅದನ್ನು ಗಂಭೀರವಾಗಿ ಪರಿಹರಿಸಬೇಕು. ಈಗಿನ ಹಾಗೆ ಅವ್ಯವಸ್ಥಿತವಾದ ಗಡಂಗುಗಳಲ್ಲಿ ದವಸ ತುಂಬುವುದನ್ನು ತಪ್ಪಿಸಬೇಕು. ಹೆಚ್ಚು ಧಾನ್ಯವನ್ನು ಸಂಗ್ರಹಿಸಬೇಕಾದ ದೊಡ್ಡ ಪಟ್ಟಣಗಳಲ್ಲಿ ಶಾಶ್ವತವಾದ ಸಿಮೆಂಟು ಗಡಂಗುಗಳನ್ನೇ ಕಟ್ಟಬಹುದು. ಪೌರಸಭೆಯವರೋ, ಖಾಸಗಿ ಜನರೋ ಕಟ್ಟಿಸಿ ಬಾಡಿಗೆಗೆ ಕೊಡಬಹುದು. ಸಹಕಾರ ಸಂಸ್ಥೆಗಳವರು ಕಟ್ಟಿಸಿದರೆ ಇನ್ನೂ ಒಳ್ಳೆಯದು. ಈ ಗಂಡಗುಗಳನ್ನು ಆಗಾಗ ಪರೀಕ್ಷೆ ಮಾಡಲು ಅವಕಾಶವಿರುವಂತೆ ಮಾಡಬೇಕು. ಈಗ ಕಾರಖಾನೆಯ ಯಂತ್ರಗಳ ಪರೀಕ್ಷೆಯ ವ್ಯವಸ್ಥೆಯಿರುವಂತೆ ದವಸ ಬೆಳೆದ ಹಳ್ಳಿಗಳಲ್ಲಿಯೇ ಸಂಗ್ರಹಕ್ಕೂ ಏರ್ಪಾಟು ಮಾಡಿದರೆ ಅದನ್ನು ಮೊದಲು ಪಟ್ಟಣಗಳಿಗೂ, ಆಮೇಲೆ ಮತ್ತೆ ಹಳ್ಳಿಗಳಿಗೂ ಸಾಗಿಸುವುದು ತಪ್ಪಿ. ದವಸ ಕೆಡುವ ಅವಕಾಶ ಕಡಮೆಯಾಗುತ್ತದೆ. ಪ್ರತಿಯೊಬ್ಬರಿಗೂ ದವಸವನ್ನು ಹೇಗೆ ತೆಗೆದಿಡಬೇಕೆಂಬುದನ್ನು ಹೇಳಿಕೊಡಬೇಕು. ಹಳ್ಳಿಗಳಲ್ಲಿ ಕಚ್ಚಾಮಾಲನ್ನು ಉಳಿಸಬೇಕು.

ಗ್ರಾಮೋದ್ಯೋಗಗಳಿಗಿರುವ ಮುಖ್ಯ ಆತಂಕ ಕೆಲಸಗಾರನ ನಿಃಸ್ಸಹಾಯಕತೆ. ಸಂಘಟಿತ ಗಿರಣಿಗಳ ಸ್ಪರ್ಧೆಯ ಇದಿರು ಅವನು ಗೆಲ್ಲಲಾರ. ಬೇಕಾದಷ್ಟು ಅನುಕೂಲವಿರುವುದರಿಂದ ಗಿರಣಿಗಳು ಕಚ್ಚಾಮಾಲನ್ನೆಲ್ಲಾ ತಾವೇ ಆಕ್ರಮಿಸಿಕೊಂಡು ನಿಃಸ್ಸಹಾಯಕನಾದ ಕೆಲಸಗಾರನ ಪದಾರ್ಥಗಳಿಗೆ ಪೇಟೆಯಲ್ಲಿಯೂ ಸ್ಥಳವಿಲ್ಲದ ಹಾಗೆ ವ್ಯಾಪಿಸಿಕೊಂಡು ಬಿಡುತ್ತವೆ. ಬ್ಯಾಂಕುಗಳ ಹಣಕಾಸಿನ ಧೋರಣೆ,

೧೩

ರೈಲಿನ ಬಾಡಿಗೆಯಲ್ಲಿ ಅವು ಗಿರಣಿಗಳಿಗೆ ತೋರಿಸುವ ಪಕ್ಷಪಾತ, ಬಂಡವಾಳಗಾರಿಕೆಯ ವ್ಯಾಪಾರಿ ಸಂಸ್ಥೆ ಇವೆಲ್ಲವೂ ಚಿಕ್ಕಪುಟ್ಟ ಮತ್ತು ಒಂಟಿ ಕೆಲಸಗಾರರನ್ನು ಹಿಸುಕಿಹಾಕಿ ದೊಡ್ಡ ಪ್ರಮಾಣದ ಉತ್ಪಾದನೆಯನ್ನೇ ಬೆಳೆಸುತ್ತವೆ. ಹಳ್ಳಿಗಳಲ್ಲಿ ಕೆಲಸಗಾರನಿಗೆ ಬೇಕೆಂದರೂ ಕಚ್ಚಾಮಾಲು ಸಿಗದು. ಈ ಕ್ರಮ ತಿರುಗುಮುರುಗಾಗಬೇಕು. ಹಳ್ಳಿಯಲ್ಲಿ ಬೆಳೆದ ಪದಾರ್ಥವೆಲ್ಲ ಅಲ್ಲಿಯೆ ವಿನಿಯೋಗವಾಗಬೇಕು. ಸ್ಥಳೀಯ ಅವಶ್ಯಕತೆಗಳನ್ನೆಲ್ಲ ಪೂರಯಿಸಿದ ಮೇಲೆ, ಉಳಿದುದನ್ನು ಮಾತ್ರವೇ ಹೊರಗೆ ಕಳಿಸಲು ಬಿಡಬೇಕು. ಗ್ರಾಮೋದ್ಯೋಗಗಳಿಗೆ ಅಗತ್ಯವಾದ ವಸ್ತುಗಳನ್ನು ರೈತರು ಉತ್ಪತ್ತಿ ಮಾಡಬೇಕೇ ವಿನಾ ಗಿರಣಿಗಳಿಗೆ ಬೇಕಾದುದನ್ನು ಬೆಳೆಯಲಾಗದು.

ಉಪಕರಣಗಳ ಸರಬರಾಜು :

ಗ್ರಾಮೋದ್ಯೋಗಗಳಿಗೆ ಬೇಕಾದ ಉಪಕರಣಗಳು ದೇಶದಲ್ಲಿ ಒಂದೇ ಬಗೆಯಾಗಿಲ್ಲ. ಒಂದೇ ಪ್ರಾಂತದಲ್ಲೂ ಒಂದೇ ಪ್ರಕಾರದ ಉಪಕರಣಗಳು ಇಲ್ಲ. ಉಪಯುಕ್ತವಾದ ಉಪಕರಣಗಳನ್ನು ಸಿದ್ಧಗೊಳಿಸಲು ತಕ್ಕ ಸಂಶೋಧನೆ ನಡೆಯಬೇಕು.

ಜಿಲ್ಲಾ ಪ್ರದರ್ಶನ ಕೇಂದ್ರ :

ಸಹಕಾರ ಸಂಘಗಳ ಪ್ರದರ್ಶನ ಕೇಂದ್ರಗಳು ಹಳ್ಳಿಗಳಲ್ಲಿ ಇರಬೇಕು. ಅವುಗಳ ಕರ್ತವ್ಯ ಈ ರೀತಿ :

೧. ಹಳ್ಳಿಯ ಕೈಗಾರಿಕೆಯ ಕಸಬುದಾರರಿಗೆ ಬೇಕಾದ ಮುರಮುಟ್ಟು, ಉಪಕರಣಗಳ ಉತ್ಪತ್ತಿ ಮಾಡಿ ಸರಬರಾಜು ಮಾಡುವುದು; ಹಳೆಯ ಉಪಕರಣಗಳ ಸ್ಥಾನದಲ್ಲಿ ಸುಧಾರಿಸಿದ ಹೊಸದನ್ನು ರೂಢಿಗೆ ತರುವುದು;

೨. ಬಡಗಿಗಳನ್ನೂ, ಇತರ ಕೆಲಸಗಾರರನ್ನೂ ತರಬೇತು ಮಾಡಿ ಬೇರೆ ಬೇರೆ ಉದ್ಯೋಗಗಳಲ್ಲಿ ರೂಢಿಗೆ ಬಂದ ಹೊಸ ಪದ್ಧತಿಗಳನ್ನು ಅವರಿಗೆ ಕಲಿಸುವುದು;

೩. ಉಪಕರಣಗಳನ್ನೂ, ಸ್ಥಳದ ಕಲಾಕೃತಿಗಳನ್ನೂ ಸಂಗ್ರಹಿಸಿ ಒಂದು ಸಂಗ್ರಹಾಲಯದಲ್ಲಿಟ್ಟು ಪ್ರದರ್ಶಿಸುವುದು;

೪. ಜಿಲ್ಲೆಯಲ್ಲಿ ಔದ್ಯೋಗಿಕ, ಆರೋಗ್ಯ ವಿಷಯಕ ಪರಿಶೀಲನೆ ನಡೆಸುವುದು ;

೫. ಇತರ ಸಹಕಾರ ಸಂಘಗಳೊಡನೆ, ಮೂಲಶಿಕ್ಷಣ ಶಾಲೆಯೊಡನೆ ಕೂಡಿ ಹಳ್ಳಿಯ ಪುರೋಭಿವೃದ್ಧಿಗಾಗಿ ದುಡಿಯುವುದು.

೧೫. ಗ್ರಾಮೋದ್ಯೋಗಗಳು

ವಿವಿಧೋದ್ದೇಶ ಸಹಕಾರ ಸಂಘಗಳು ಕಚ್ಚಾಮಾಲನ್ನು ಒದಗಿಸಬಹುದು. ಸಿದ್ಧವಾದ ಸಾಮಾನನ್ನು ಶೇಖರಿಸಬಹುದು, ಗ್ರಾಮೋದ್ಯೋಗಗಳಿಂದ ಉತ್ಪತ್ತಿಯಾದ ಪದಾರ್ಥಗಳನ್ನು – ಮುಖ್ಯವಾಗಿ ಆಹಾರ, ವಸ್ತ್ರ, ಇತರ ಪ್ರಾಥಮಿಕ ಅವಶ್ಯಕತೆಗಳಿಗೆ ಸಂಬಂಧಿಸಿದವುಗಳನ್ನು ಜನರಿಗೆ ಒದಗಿಸಿ ಹಂಚುವುದರಲ್ಲಿ ನೆರವಾಗಬಹುದು. ಹಳ್ಳಿಯವರ ಹಿತವನ್ನು ಸದಾ ಗಮನಿಸುತ್ತಲೇ ಇರಬೇಕು. ಮುಖ್ಯವಾಗಿ ಮುಂದೆ ಹೇಳುವ ಮಾತನ್ನು ಗಮನಿಸಬೇಕು.

೧, ಭತ್ತ :

೧. ಭತ್ತದ ಗಿರಣಿಗಳನ್ನು ನಿಲ್ಲಿಸಿ ಆ ಇಂಜಿನುಗಳನ್ನು ನೀರಾವರಿ ಕೆಲಸಕ್ಕೆ ಉಪಯೋಗಿಸಬೇಕು.

೨. ಭತ್ತವನ್ನು ತೊಳೆಸುವ ಹಲ್ಲರ್ ಯಂತ್ರಗಳನ್ನು ನಿಷೇಧಿಸಬೇಕು.

೩. ಗಿರಣಿಯಲ್ಲಿ ತೊಳೆಸದ ಅಕ್ಕಿಯಲ್ಲಿರುವ ಸತ್ವದ ವಿಷಯವನ್ನು ಜನರಿಗೆ ತಿಳಿಸಬೇಕು. ಆ ಅಕ್ಕಿಯನ್ನು, ಅಡಿಗೆ ಮಾಡುವ ವಿಧಾನವನ್ನು ಪ್ರತ್ಯಕ್ಷವಾಗಿ ತೋರಿಸಬೇಕು. ಅಕ್ಕಿಯನ್ನು ಪಾಲಿಷು ಮಾಡುವುದನ್ನು ನಿಲ್ಲಿಸಬೇಕು. ಅಥವಾ ಇಷ್ಟಕ್ಕಿಂತ ಹೆಚ್ಚು ಪಾಲಿಷು ಮಾಡಬಾರದೆಂದು ಕಟ್ಟುಮಾಡಬೇಕು. ಭತ್ತವನ್ನು ಕುಸುಬಲಕ್ಕಿಯಾಗಿ ಮಾಡುವಂತೆ ಪ್ರೋತ್ಸಾಹಿಸಬೇಕು.

೪. ಪ್ರಧಾನವಾಗಿ ಭತ್ತವನ್ನೇ ಬೆಳೆವ ಗದ್ದೆಯ ಸೀಮೆಯಲ್ಲಿ ವ್ಯಾಪಾರದ ಉದ್ದೇಶ್ಯದಿಂದ ಭತ್ತ ಕುಟ್ಟುವುದನ್ನೇ ಒಂದು ದೊಡ್ಡ ಉದ್ಯೋಗವಾಗಿ ಮಾಡಿದ ಕಡೆ ಬೇರೆ ಬೇರೆ ಯಂತ್ರೋಪಕರಣಗಳನ್ನು ಸಹಕಾರ ಸಂಘದ ಮೂಲಕ ಕೆಲಸಗಾರರಿಗೆ ಬಾಡಿಗೆಯ ಮೇಲೆ ಒದಗಿಸಬೇಕು.

೫. ಪಾಲಿಷ್ ಮಾಡದ ಅಕ್ಕಿಯನ್ನು ಬಳಸಿ ಎಂದು ಪ್ರಚಾರ ಮಾಡಿದರೆ ಅಕ್ಕಿಯ ಬದಲು ಭತ್ತವನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಬೇಕಾಗುತ್ತದೆ. ಆಗ ಅದನ್ನು ಸಾಗಿಸುವ ವೆಚ್ಚ ಹೆಚ್ಚಾಗಿ ಅಕ್ಕಿಯ ಬೆಲೆ ಏರದಂತೆ ಸಾಗಣೆಯ ಬಾಡಿಗೆಯನ್ನು ವ್ಯವಸ್ಥೆ ಮಾಡಬೇಕು.

೬. ಭತ್ತ ಸುಲಿಯುವುದು, ಅಕ್ಕಿ ತೊಳೆಸುವುದು ಎರಡನ್ನೂ ಸಾಧಿಸುವ ಭತ್ತದ ಕುಟ್ಟುವಿಕೆಯನ್ನು ನಿಲ್ಲಿಸಲು, ಆಯಾ ಸ್ಥಳಗಳಲ್ಲಿ ಭತ್ತ ಸುಲಿಯುವ ಕಲ್ಲುಗಳನ್ನು ಪ್ರಚಾರಕ್ಕೆ ತರಬೇಕು. ಜಿಲ್ಲಾ ಪ್ರದರ್ಶನ ಕೇಂದ್ರಗಳ ಮೂಲಕ ಆ

ಉಪಕರಣಗಳನ್ನು ಒದಗಿಸಬೇಕು. ಅಕ್ಕಿಯನ್ನು ಬೆಳ್ಳಗೆ ತೊಳೆಸುವ ಯಂತ್ರಗಳ ಉಪಕರಣಗಳ ಮೇಲೆ ತೆರಿಗೆ ಹಾಕಿ, ಅಕ್ಕಿಯನ್ನು ಪಾಲಿಷ್ ಮಾಡುವ ಪದ್ಧತಿಯನ್ನು ತಪ್ಪಿಸಬೇಕು. ಈ ಉಪಕರಣಗಳಿಂದ ಇಷ್ಟೇ ಪ್ರಮಾಣದಲ್ಲಿ ಪಾಲಿಷ್ ಮಾಡಬಹುದೆಂದು ನಿಯಂತ್ರಣ ಮಾಡಬೇಕು.

ಹಳ್ಳಿಗೆ ಅಗತ್ಯವಾದ ಭತ್ತ, ಬೇರೆ ದವಸ, ಬೀಜದ ದವಸಗಳನ್ನು ಹಳ್ಳಿಯಲ್ಲಿಯೇ ಶೇಖರಿಸಿಡಬೇಕು. ಹೆಚ್ಚಾದುದನ್ನು ಸಹಕಾರ ಸಂಘದ ಮೂಲಕ ಹೊರಗೆ ಕಳಿಸಬಹುದು.

೨. ಹಿಟ್ಟು ಬೀಸುವುದು :

೧. ಜಿಲ್ಲಾ ಪ್ರದರ್ಶನ ಕೇಂದ್ರಗಳ ಮೂಲಕ ಒಳ್ಳೆಯ ಬೀಸುವ ಕಲ್ಲುಗಳನ್ನೂ, ಎತ್ತನ್ನು ಕಟ್ಟಿ ತಿರುಗಿಸುವ, ನೀರಿನಿಂದ ನಡೆಸುವ ಬೀಸುವ ಕಲ್ಲುಗಳಿಗೆ ಬೇಕಾದ ಸಾಮಗ್ರಿಯೆಲ್ಲವನ್ನೂ ಒದಗಿಸಬೇಕು.

೨. ಬಿಳೀ ಮೈದಾಹಿಟ್ಟನ್ನು ಬೀಸದ ಹಾಗೆ ನಿಷೇಧಿಸಬೇಕು.

೩. ಹಿಟ್ಟಿನ ಗಿರಣಿಗಳು ಮೂಟೆ ಮೂಟೆ ದವಸವನ್ನು ಹಿಟ್ಟುಮಾಡಿ ಬಹಳ ದಿನ ತಮ್ಮಲ್ಲಿಯೇ ಸಂಗ್ರಹಿಸಿ ಇಟ್ಟುಕೊಳ್ಳುತ್ತವೆ. ಇದರಿಂದ ಆ ಹಿಟ್ಟಿನಲ್ಲಿ ಸಾರವೆಲ್ಲ ನಾಶವಾಗುತ್ತದೆ, ಹಿಟ್ಟು ಕೆಡುತ್ತದೆ. ಆದುದರಿಂದ ಅಂಥ ಗಿರಣಿಗಳನ್ನು ಪ್ರೋತ್ಸಾಹಿಸಬಾರದು.

೪. ಎಲ್ಲಿ ಅನುಕೂಲಗಳಿವೆಯೋ ಅಲ್ಲಿ ಎತ್ತು ಕಟ್ಟಿ ಹಿಟ್ಟು ಬೀಸುವ ವ್ಯವಸ್ಥೆ ಮಾಡಬೇಕು.

೫. ನದಿ ಅಥವಾ ಕಾಲುವೆ ಹರಿಯುವ ಕಡೆ ಅದರಿಂದ ಜಲಶಕ್ತಿ ಸಿಗುವಂತಿದ್ದರೆ ಅದನ್ನು ಉಪಯೋಗಿಸಿ ಹಿಟ್ಟು ಬೀಸುವ ದೊಡ್ಡ ಕಲ್ಲುಗಳನ್ನು ಏರ್ಪಾಟು ಮಾಡಬೇಕು.

೬ ಪಂಜಾಬಿನಲ್ಲಿ ಇಂಥ ದೊಡ್ಡ ಕಲ್ಲುಗಳನ್ನು ಊರೊಟ್ಟಿನಲ್ಲಿ ಇಟ್ಟುಕೊಂಡಿದ್ದಾರೆ. ಉಳಿದ ಕಡೆಯಲ್ಲಿಯೂ ಹಾಗೆಯೆ ಮಾಡಬಹುದು.

೩. ಎಣ್ಣೆಯ ಗಾಣ :

ಹಳ್ಳಿಯ ಎಣ್ಣೆಗಾಣಗಳನ್ನು ಪುನರುಜ್ಜೀವನಗೊಳಿಸುವುದರಲ್ಲಿ ಇರುವ ಅಡಚಣೆಗಳು ಮುಖ್ಯವಾಗಿ ಇವು :

ಸುಗ್ಗಿಯಲ್ಲಿಯೇ ಹಳ್ಳಿಯಲ್ಲಿ ಬೆಳೆದ ಎಣ್ಣೆಯ ಬೀಜವೆಲ್ಲ ನಿಶ್ಶೇಷವಾಗಿ ಹೊರಗೆ ಸಾಗಿಹೋಗುತ್ತದೆ. ಊರಿನ ಗಾಣಗಳಿಗೆ ಸಾಕಾಗಿ ಉಳಿದ ಎಣ್ಣೆಯ ಬೀಜ ಮಾತ್ರವೇ ಊರಿನಿಂದ ಹೊರಗೆ ಹೋಗುವಂತೆ ಮೊಟ್ಟಮೊದಲು ವ್ಯವಸ್ಥೆ ಮಾಡಬೇಕು.

ಹಲವು ಕಡೆ ಹಳ್ಳಿಯ ಗಾಣಗಳು ಬಹಳ ಚಿಕ್ಕವು. ಸರಿಯಾದ ಪ್ರಮಾಣದಲ್ಲಿ ಎಣ್ಣೆಕೊಡುತ್ತಿಲ್ಲ, ಅವನ್ನು ನಡೆಸಿ ಬದುಕು ನಡೆಸುವ ಹಾಗಿಲ್ಲ. ಒಂದೊಂದು ಪ್ರಾಂತದಲ್ಲಿಯೂ ಹಲವಾರು ಬಗೆಯ ಗಾಣಗಳಿವೆ. ಇವೆಲ್ಲ ಗಾಣಗಳನ್ನು ವಿಶದವಾಗಿ ಪರಿಶೀಲಿಸಬೇಕು. ಸುಧಾರಿತವಾದ ಹೊಸ ಗಾಣಗಳ ವಿಶೇಷ ಗುಣಗಳನ್ನೂ ಅದನ್ನು ನಡೆಸುವ ರೀತಿಯನ್ನೂ ಪ್ರದರ್ಶಿಸಬೇಕು. ಹಳೆಯ ರೀತಿಯ ಗಾಣಗಳನ್ನು ಮಾಡುವ ಬಡಗಿಗಳೂ ಸಹ ಈಗ ಹೆಚ್ಚಾಗಿಲ್ಲ. ಅನೇಕ ವೇಳೆ ಗಾಣಿಗರಿಗೆ ಸಕಾಲಕ್ಕೆ ಬಡಗಿಗಳ ನೆರವು ಸಿಗದು. ಗಾಣದ ಚಿಲ್ಲರೆ ಭಾಗಗಳಾಗಲಿ ತತ್ಸಂಬಂಧವಾದ ಸಾಮಗ್ರಿಯಾಗಲಿ ಸಿಗುವುದು ಬಹಳಕಷ್ಟ. ಆದುದರಿಂದ ಗಾಣವಾಡುವವರಿಗೂ ಬಡಗಿಗಳಿಗೂ ಈ ಸುಧಾರಿಸಿದ ಗಾಣಗಳ ಬಗ್ಗೆ ಶಿಕ್ಷಣ ಕೊಡಬೇಕು. ಆ ಪ್ರಶಿಕ್ಷಣ ಕೇಂದ್ರಗಳಲ್ಲಿ ಗಾಣದ ಭಾಗಗಳೂ, ಚಿಲ್ಲರೆ ಮರಮುಟ್ಟುಗಳೂ ಸಿಗುವಂತಿರಬೇಕು.

೪. ಬೆಲ್ಲದ ಕೈಗಾರಿಕೆ :

ಬಂಗಾಳದಲ್ಲಿ ಮತ್ತು ಮದರಾಸಿನಲ್ಲಿ ತಾಳೆ ಬೆಲ್ಲವನ್ನು ಮಾಡುವ ಕೈಗಾರಿಕೆ ಸ್ಥಿರಗೊಂಡಿದೆ. ಒಂದು ವ್ಯಾಪಾರವಾಗಿಯೆ ನಡೆಯುತ್ತಿದೆ.

ತಾಳೆ ಗಿಡಗಳನ್ನು ಕಡಿಯುವುದನ್ನು ತಡೆಯಬೇಕು. ಸಾಗುವಳಿಗೆ ಯೋಗ್ಯವಲ್ಲದ ಸರಕಾರಿ ಭೂಮಿಯಲ್ಲಿ ತಾಳೆವನಗಳನ್ನು ಬೆಳೆಸಲು ಉಪಯೋಗಿಸಬೇಕು. ಕ್ರಮೇಣ ಕಬ್ಬಿನ ಬೆಲ್ಲದ ಬದಲು ತಾಳೆಯ ಬೆಲ್ಲವನ್ನೇ ಬಳಕೆಗೆ ತರಬೇಕು. ಖಾಸಗಿ ಹೊಲಗಳಲ್ಲಿಯೂ, ಹೊಲದ ಬದುಗಳಲ್ಲಿಯೂ ತಾಳೆಗಿಡಗಳನ್ನು ಬೆಳೆಯುವಂತೆ ಪ್ರೋತ್ಸಾಹಿಸಬೇಕು. ಸರಿಯಾದ ಬೀಜಗಳನ್ನು ಒದಗಿಸಿ ಯೋಗ್ಯ ಕೃಷಿ ವಿಧಾನವನ್ನು ತಿಳಿಸಬೇಕು.

ಸಹಕಾರ ಸಂಘಗಳು ಈ ಉತ್ಪಾದನೆ ಮತ್ತು ಈ ವ್ಯಾಪಾರಗಳನ್ನು ಕೈಗೆ ತೆಗೆದುಕೊಳ್ಳಬೇಕು. ಅಗತ್ಯವಿದ್ದಲ್ಲೆಲ್ಲ ಬೆಲ್ಲಮಾಡುವ ಕಡಾಯಿ, ಕೊಪ್ಪರಿಗೆ ಮುಂತಾದ ಸಾಮಗ್ರಿಗಳನ್ನು ಒದಗಿಸಬೇಕು.

೫. ಜೇನುಸಾಕಣೆ :

ಜೇನು ಸಾಕುವುದು ಎರಡು ಬಗೆಯಲ್ಲಿ ಲಾಭಕರ. ಅದರಿಂದ ಪೈರು ಹೆಚ್ಚು ಹುಲುಸಾಗಿ ರೈತರಿಗೆ ಅಧಿಕ ಬೆಳೆ ಸಿಗುತ್ತದೆ. ಜೊತೆಗೆ ಪುಷ್ಟಿಕರ ಆಹಾರವಾದ ಜೇನುತುಪ್ಪವೂ ಸಿಗುತ್ತದೆ. ಪ್ರದರ್ಶನ ಕೇಂದ್ರಗಳಲ್ಲಿ ಒಂದೆರಡು ಪೆಟ್ಟಿಗೆ ಇಟ್ಟು ಜೇನು ಸಾಕಣೆ ನಡಸಬೇಕು. ಆಮೇಲೆ ಜೇನು ಸಾಕಣೆಗೆ ಯೋಗ್ಯವಾದ ಬನಸಿರಿ ಇರುವಲ್ಲೆಲ್ಲ ಅದನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಜೇನು ಸಾಕಣೆಯ ವಿದ್ಯೆಯನ್ನು ಬಲ್ಲವರೊಬ್ಬರಿಂದ ಮೊದಲು ಆ ಕ್ಷೇತ್ರ ಪರಿಶೀಲನೆ ಮಾಡಿಸಬೇಕು. ಜೇನುನೊಣಗಳನ್ನು ಸ್ವಲ್ಪ ಪಳಗಿಸಿಬಿಟ್ಟರೆ ಆ

ಕೇಂದ್ರದಲ್ಲಿ ಹಳ್ಳಿಯವರಿಗೆ ಶಿಕ್ಷಣಕೊಟ್ಟು ಅವರಿಗೆ ಸುಲಭ ಬೆಲೆಗೆ ಸಲಕರಣೆಗಳನ್ನು ಒದಗಿಸಬಹುದು.

೬. ಹತ್ತಿ–ಉಣ್ಣೆ :

ಹತ್ತಿ ಬೆಳೆಯುವ ಪ್ರದೇಶದಲ್ಲಿ ಕನಿಷ್ಠ ಪಕ್ಷ ತಲಾ ೧೨-೧/೨ ಎಕರೆ ಆಗುವಷ್ಟು ನೆಲವನ್ನು ಆಯಾ ಸ್ಥಳದ ಜನಸಂಖ್ಯೆಗನುಗುಣವಾಗಿ ಬಿಡಬೇಕು. ಅಖಿಲ ಭಾರತ ಚರಖಾ ಸಂಘದ ನಿಯಮದಂತೆ ನೂಲುವಿಕೆ ಮತ್ತು ನೇಕಾರಿಕೆಯನ್ನು ಕಲಿಸಬೇಕು.

ಇದೇ ರೀತಿ ಕುರಿ ಸಾಕುವ ಸ್ಥಳಗಳಲ್ಲಿ ಕುರಿ–ಸಾಕಣೆ, ಉಣ್ಣೆ ಶೋಧನೆ ಮುಂತಾದವುಗಳಿಗೆ ನೆರವನ್ನು ನೀಡಿ ಉಣ್ಣೆ ಬಟ್ಟೆಗಳ ಉತ್ಪತ್ತಿಯನ್ನು ವೃದ್ಧಿಗೊಳಿಸಬೇಕು.

೭. ಚರ್ಮ ಹದಮಾಡುವಿಕೆ :

ದೇಶದಿಂದ ಹೊರಕ್ಕೆ ತೊಗಲು–ಚರ್ಮಗಳನ್ನು ರಫ್ತು ಮಾಡುವುದರಲ್ಲಿ ಜಗತ್ತಿನಲ್ಲೆಲ್ಲ ಭಾರತವೇ ಮೊದಲನೆಯದು. ಈ ಪದಾರ್ಥವನ್ನೆಲ್ಲಾ ನಾವೇ ಹದಮಾಡಿದರೆ ಲಕ್ಷಗಟ್ಟಲೆ ಜನರಿಗೆ ಆದರಿಂದ ಜೀವನೋಪಾಯ ಸಿಗುತ್ತದೆ. ಇದರಲ್ಲಿ ಹದಮಾಡುವ ಕೌಶಲವೇ ಮುಖ್ಯ. ಇದಕ್ಕೆ ಹೇರಳವಾಗಿ ಹಣಬೇಕು. ಆದುದರಿಂದ ಈ ಕೆಲಸ ಸಹಕಾರ ಪದ್ಧತಿಯಿಂದ ನಡೆದರೆ ಉತ್ತಮ. ಸಂಘಗಳು ಸತ್ತ ಪ್ರಾಣಿಗಳ ಚರ್ಮವನ್ನು ಕೊಂಡು, ಉಳಿದ ಎಲ್ಲಾ ಕೆಲಸಗಳಿಗೂ ಕೂಲಿಕೊಟ್ಟು, ಆ ಪದಾರ್ಥಗಳನ್ನು ಪೇಟೆಯಲ್ಲಿ ಮಾರಬೇಕು.

೧. ಎಲ್ಲಾ ಪ್ರಾಂತಗಳಲ್ಲಿಯೂ ಚರ್ಮವನ್ನು ಹದಮಾಡುತ್ತಾರೆ. ಈ ಕೆಲಸ ಎಲ್ಲಾ ಕಡೆಯಲ್ಲಿಯೂ ಒಂದೇ ಮಟ್ಟದಲ್ಲಿಲ್ಲ. ಕಲ್ಕತ್ತೆಯ 'ಕ್ರೋಮ್' ಮತ್ತು ಮದರಾಸಿನ 'ಗಾವಿ' ಗಳು ಉತ್ತಮವಾಗಿವೆ. ಅವನ್ನು ಎಲ್ಲಾ ಕಡೆ ಮಾಡರು. ಉಳಿದ ಮಾದರಿಗಳು ಇವೆರಡಕ್ಕಿಂತ ಕೆಳಮಟ್ಟದವು. ಇದಕ್ಕೆ ಕಾರಣವನ್ನು ತಿಳಿದುಕೊಂಡು ಎಲ್ಲಾ ಕಡೆಯೂ ಒಂದೇ ರೀತಿಯ ಹದವನ್ನು ತರಬೇಕು.

೨. ಹದಮಾಡದ ಚರ್ಮ, ತೊಗಲುಗಳನ್ನು ರಫ್ತು, ಮಾಡದಂತೆ ಅದರ ಮೇಲೆ ಹೆಚ್ಚಿನ ಸುಂಕ ಹಾಕಿ ನಿಲ್ಲಿಸಬೇಕು.

೩. ಸತ್ತ ಪ್ರಾಣಿಗಳನ್ನು ಸಾಗಿಸಲು ಪ್ರತಿ ಗುಂಪು ಕೆಲಸಗಾರರಿಗೆ ಒಂದು ಗಾಡಿಯನ್ನು ಸಹಕಾರ ಸಂಘಗಳು ಒದಗಿಸಬೇಕು. ಈಗ ಈ ಸೌಕರ್ಯವಿಲ್ಲದೆ ಸತ್ತ ಪ್ರಾಣಿಯನ್ನು ನೆಲದ ಮೇಲೆ ಎಳೆಯುತ್ತಾರೆ. ಇದರಿಂದ ಚರ್ಮದ ಬೆಲೆ ರೂಪಾಯಿಗೆ ಎಂಟಾಣೆ ಕಡಮೆಯಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ.

೪. ಈಗ ಈ ಕೈಗಾರಿಕೆ ನಡೆಯುತ್ತಿರುವ ಸನ್ನಿವೇಶ ತೀರಾ ಅನಾರೋಗ್ಯಕರ. ಕೂಡಲೇ ಅದನ್ನು ಸರಿಪಡಿಸಬೇಕು. ಹಳ್ಳಿಯ ವಸತಿಗೆ ಸ್ವಲ್ಪ ದೂರ

ಹೋಗಿ ಒಂದು ಸ್ಥಳದಲ್ಲಿ ಸರಿಯಾದ ಗುಡಿಸಲುಗಳು, ಗುಂಡಿಗಳು, ನೀರು ಹರಿಯಲು ಕಾಲುವೆಗಳು, ನೀರಿನ ಸರಬರಾಜು ಮುಂತಾದ ಏರ್ಪಾಟು ಮಾಡಿ ಕೆಲವು ಅಶಾಸ್ತ್ರೀಯ ಪದ್ಧತಿಗಳನ್ನು ಬದಲಿಸಿ ಚಿಕ್ಕ ಪುಟ್ಟ ಯಂತ್ರ-ಸಲಕರಣೆಗಳನ್ನು ಬಳಸಿದರೆ ಇದು ಸಾಧ್ಯ. ಹಳ್ಳಿಗೊಬ್ಬರಂತೆ, ಇಬ್ಬರಂತೆ ಚದರಿ ಹೋಗಿರುವ ಚಮ್ಮಾರನನ್ನು ಈ ಕೈಗಾರಿಕೆಗಾಗಿ ಒಂದೊಂದು ಹೋಬಳಿಯಲ್ಲೂ ಒಂದೇ ಕಡೆ ಒಂದು ಚರ್ಮಾಲಯದ ಸುತ್ತಲೂ ಸೇರಿಸಬೇಕಾದರೆ ಅದೂ ಒಳಿತೆ. ಅಂಥ ಚರ್ಮಾಲಯಗಳನ್ನು ಸಹಕಾರ ಸಂಘಗಳು ಸ್ಥಾಪಿಸಿ ನಡೆಸಬಹುದು.

೫. ಈಗ ಒಂದೆರಡು ಸ್ಥಳಗಳಲ್ಲಿ ಮಾತ್ರ ಚರ್ಮದ ಪದಾರ್ಥ ಬಹಳ ದೊಡ್ಡ ಪ್ರಮಾಣದಲ್ಲಿ ತಯಾರಾಗುತ್ತಿದೆ. ಅಲ್ಲಿಂದ ಅವನ್ನು ಇಡೀ ದೇಶದ ಮೂಲೆ ಮೂಲೆಗೂ ಸರಬರಾಜು ಮಾಡುತ್ತಾರೆ. ಈ ವ್ಯವಸ್ಥೆಯನ್ನು ತಪ್ಪಿಸಿ ಆಯಾ ಸ್ಥಳದಲ್ಲಿಯೇ ಸಾಮಾನ್ಯವಾಗಿ ಚರ್ಮದ ಎಲ್ಲಾ ಪದಾರ್ಥಗಳನ್ನೂ ಉದಾಹರಣೆಗೆ:- ಎಕ್ಕಡ, ಹಣದ ಚೀಲ, ಕೈಪೆಟ್ಟಿಗೆ, ನಡುಕಟ್ಟು ಇತ್ಯಾದಿ ಮಾಡುವಂತೆ ಪ್ರಯತ್ನಿಸಬೇಕು. ಸ್ಥಳೀಯ ಪದಾರ್ಥಗಳಿಗೆ ದ್ರವ್ಯ ಸಹಾಯವನ್ನಾದರೂ ಕೊಡಬಹುದು. ಹೊರಗಿನಿಂದ ತರಿಸುವ ಪದಾರ್ಥಗಳಿಗೆ ಸುಂಕವನ್ನಾದರೂ ಹಾಕಬಹುದು.

ಸತ್ತ ಪ್ರಾಣಿಗಳ ಮಾಂಸ, ರಕ್ತ, ಮೂಳೆಗಳಿಂದ ಗೊಬ್ಬರ ಮಾಡಲು ಖಾಸಗಿ ಗುತ್ತಿಗೆದಾರರಿಗಾಗಲೀ, ಸಹಕಾರ ಸಂಘಗಳಿಗಾಗಲೀ ಸಹಾಯಧನ ಕೊಡಬೇಕು. ಎಷ್ಟು ಗೊಬ್ಬರ ಮಾಡಿದರೆ ಅಷ್ಟು ಪ್ರಮಾಣದಲ್ಲಿ ಸಹಾಯವಾಗುತ್ತದೆ.

೬. ಗೋಂದು, ಬ್ರಷ್ಕು ಮುಂತಾದ ಇತರ ಪದಾರ್ಥಗಳನ್ನೂ ಈ ಸಂಘಗಳು ತಯಾರು ಮಾಡಬಹುದು. ಚಮ್ಮಾರರ ಮನೆಗಳಲ್ಲಿ ಕೊಂಬಿನ ಕೈಗಾರಿಕೆಯನ್ನು ಪ್ರವೇಶ ಮಾಡಿಸಿ ಲಾಭದಾಯಕವಾಗಿ ಮಾಡಬಹುದು. ಕೆಲವು ಕಾಲ ಆ ಕೈಗಾರಿಕೆಗೆ ಸರಕಾರದ ಸಹಾಯ ನೀಡಬೇಕು ಮತ್ತು ತಯಾರಾದ ಪದಾರ್ಥಗಳನ್ನು ಕೊಳ್ಳಬೇಕು. ಅದು ಕೈಗಾರಿಕೆಗೆ ಬೇಕಾದ ಉಪಕರಣಗಳನ್ನು ಬಾಡಿಗೆಗೆ ಅಥವಾ ಕಂತುಗಳಲ್ಲಿ ಸಹ ಒದಗಿಸಬೇಕು.

೮. ಸಾಬೂನು ಮಾಡುವುದು :

ಸಾಬೂನಿನ ರಚನೆಗೆ ತಕ್ಕ ಮಣ್ಣಿನ ಪರಿಶೀಲನೆ ನಡೆಯಬೇಕು. ಎಲ್ಲೆಲ್ಲಿ ಆ ಮಣ್ಣು ಇದೆಯೋ ಗೊತ್ತಾಗಬೇಕು. ಅದನ್ನು ಸಾಬೂನು ಮಾಡುವವರು ಉಚಿತವಾಗಿ ಉಪಯೋಗಿಸಲು ಅವಕಾಶವಿರಬೇಕು. ಅದಕ್ಕೆ ಯಾವ ತೆರಿಗೆ ಅಥವಾ ಸುಂಕವೂ ಇರಬಾರದು. ಈ ಸವುಳು ಮಣ್ಣನ್ನು ಕೆರೆದು ಹಾಕುವುದರಿಂದ ಭೂಮಿ ಉತ್ತಮಗೊಳ್ಳುತ್ತದೆಯೆಂಬುದನ್ನು ನೆನಪಿಡಬೇಕು. ಸವುಳು ಮಣ್ಣಿನ

ಕ್ಷಾರ ಜಲವನ್ನೂ, ತಿನ್ನಲು ಯೋಗ್ಯವಲ್ಲದ ಎಣ್ಣೆಗಳನ್ನೂ ಹಳ್ಳಿಗಳಲ್ಲಿ ಸಾಬೂನು ಮಾಡಲು ಉಪಯೋಗಿಸಬೇಕು.

೯. ದೀಪ :

ಬೇವು, ಪಾರ್ಡಿ, ಹಿಪ್ಪೆ, ಹೋಂಗೆ ಮುಂತಾದ ಸೇವನೆಗೆ ಯೋಗ್ಯವಲ್ಲದ ಎಣ್ಣೆಗಳಿಗೆ ಈಗ ಉಪಯೋಗ ಬಹಳ ಕಡಿಮೆ. ಅವನ್ನು ದೀಪಕ್ಕಾಗಿ ಬಳಸಬೇಕು. ದೀಪದ ವಿಷಯದಲ್ಲಿ ಪ್ರತಿ ಗ್ರಾಮವೂ ಸ್ವಾವಲಂಬಿಯಾಗಿರುವಂತೆ ಪ್ರಯತ್ನಿಸಬೇಕು. ಅಖಿಲ ಭಾರತ ಗ್ರಾಮೋದ್ಯೋಗ ಸಂಘದವರು ತಯಾರಿಸಿದ 'ಮಗನ್ ದೀಪ' ದಂಥ ವನಸ್ಪತಿ ತೈಲದ ದೀಪಗಳನ್ನು ಅಲ್ಲಲ್ಲಿ ಪ್ರದರ್ಶಿಸಬೇಕು. ಸ್ಥಳೀಯ ಕೆಲಗಾರರು ಇವನ್ನು ಮಾಡಲು ಪ್ರೋತ್ಸಾಹಿಸಬೇಕು.

೧೦. ಕಾಗದ ಮಾಡುವುದು :

೧. ಕಾಗದ ಮಾಡಲು ಬೇಕಾದ ಸಾಮಗ್ರಿ ಸ್ಥಳದಲ್ಲಿಯೇ ಸಿಗುವ ಕಡೆ ಸರಕಾರ ಈ ಕೈಗಾರಿಕೆಯನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಸ್ಥಳದಲ್ಲಿ ಸಿಗುವ ಕಚ್ಚಾ ಸಾಮಗ್ರಿಯ ಪರಿಶೀಲನೆಯನ್ನು ಒಬ್ಬ ತಜ್ಞನಿಂದ ಮಾಡಿಸಬೇಕು.

೨. ಕಾಗದ ಮಾಡಲು ಬೇಕಾಗುವ ರಾಸಾಯನಿಕ ಪದಾರ್ಥಗಳನ್ನು ಸಹಕಾರ ಸಂಘಗಳು ಈ ಕೈಗಾರಿಕೆಯ ಕೇಂದ್ರಗಳಿಗೆ ನಿಗದಿಯಾದ ಬೆಲೆಗೆ ಒದಗಿಸಬೇಕು.

೩. ಇಂಥ ಎಲ್ಲಾ ಕೈಗಾರಿಕೆಗಳಿಗೂ ಅಗತ್ಯವಾಗುವ ಯಂತ್ರೋಪಕರಣಗಳನ್ನು ಮಾಡಲು ಒಂದು ಕೇಂದ್ರ ಉದ್ಯೋಗ ಮಂದಿರವಿರಬೇಕು. ಆಧುನಿಕ ಉಪಕರಣಗಳನ್ನು ಸಂಘಗಳು ಕೆಲಸಗಾರರಿಗೆ ಒದಗಿಸಬೇಕು.

೪. ಕಾಗದ ಮಾಡಲು ಉಪಯೋಗವಾಗುವ ಕಛೇರಿಯ ಹಳೇ ಕಾಗದ ಪತ್ರ, ಚಿಂದಿ ಕಾಗದ, ಸರಕಾರಿ ಅಡವಿಗಳಲ್ಲಿರುವ ಹುಲ್ಲು ಇವನ್ನು ಕಾಗದದ ಕೈಗಾರಿಕೆಯ ಕೇಂದ್ರಗಳಿಗಾಗಿ ಮೀಸಲಾಗಿಡಬೇಕು. ಸಂಘಗಳ ಮೂಲಕವೇ ಒದಗಿಸಬೇಕು. ಅದೇ ರೀತಿ ಕೇಂದ್ರಗಳು ಮಾಡಿದ ಕಾಗದವನ್ನು ಈ ಸಂಘಗಳ ಮೂಲಕವೇ ಸರಕಾರ ತನ್ನ ಕಚೇರಿ ಕಾಗದ ಪತ್ರಗಳಿಗೆ ಬಳಸಲು ಕೊಳ್ಳಬೇಕು. ಕೈಗಾರಿಕೆಗೆ ನಾಲ್ಕು ಕಾಸು ಗಿಟ್ಟುವಂತೆ ಧಾರಣೆ ಕಟ್ಟಬೇಕು.

೫. ತರಬೇತು– ಈ ಕೇಂದ್ರಗಳಿಗೆ ಬೇಕಾದ ಶಿಕ್ಷಕರನ್ನು ಪ್ರಾಂತೀಯ ಶಿಕ್ಷಣ ಕೇಂದ್ರದಲ್ಲಿ ತರಬೇತು ಮಾಡಬೇಕು.

೬. ಕೈ ಕಾಗದದ ಸಾಗಾಣಿಕೆಗೆ ರೈಲಿನಲ್ಲಿ ಮೊದಲ ಅವಕಾಶ ಕೊಡುವಂತೆ ವ್ಯವಸ್ಥೆ ಮಾಡಬೇಕು. ಹೆಚ್ಚಿನ ಸುಂಕ,ತೆರಿಗೆ ಯಾವುದನ್ನೂ ಅದಕ್ಕೆ ಹಾಕಬಾರದು.

೧೧. ಕುಂಬಾರಗೆಲಸ :

೧. ಇದಕ್ಕೆ ಮೊಟ್ಟಮೊದಲು ಮಾಡಬೇಕಾದುದು ಆ ಪ್ರಾಂತದ ಜೇಡಿ ಮಣ್ಣಿನ ಪರಿಶೀಲನೆ, ಪರೀಕ್ಷೆ, ಸರಕಾರ ಇದನ್ನು ಮಾಡಬೇಕು.

೨. ಜೇಡಿಮಣ್ಣನ್ನು ಕಲೆಸುವುದೂ ಒಂದು ಕಲೆ. ಅದಕ್ಕೆ ರಸಾಯನ ಶಾಸ್ತ್ರ ಜ್ಞಾನವೂ ಬೇಕು. ಆದುದರಿಂದ ಸಹಕಾರಸಂಘ, ಸೆರೆಮನೆ ಇಂಥ ಮಧ್ಯಪ್ರದೇಶಗಳಲ್ಲಿ ಇದನ್ನು ಮಾಡಬೇಕು. ಆಮೇಲೆ ಆ ಮಣ್ಣನ್ನು ಬೇರೆ ಬೇರೆ ಕುಂಬಾರರಿಗೆ ಕೊಡಬೇಕು. ಈಗ ಕೆಲಸ ಮಾಡುತ್ತಿರುವ ಕುಂಬಾರರಿಗೇ ಮಣ್ಣನ್ನು ಶಾಸ್ತ್ರೀಯವಾಗಿ ಕಲೆಸುವ ಕಲೆಯನ್ನು ಕಲಿಸಿದರೂ ಸರಿಯೆ.

೩. ಉಳಿದ ಕೈಗಾರಿಕೆಗಳಿಗಿರುವ ಹಾಗೆ ಸಹಕಾರ ಸಂಘಗಳು ಸುಧಾರಿತ ಕುಂಬಾರನ ಚಕ್ರವನ್ನೂ ಮತ್ತು ಮಣ್ಣನ್ನೂ ಒದಗಿಸಬೇಕು.

೪. ಕೆಲವು ಗಡಿಗೆ–ಮಡಕೆಗಳನ್ನು ನಯ ಮಾಡಿ ಸುಡುವುದನ್ನು ಒಟ್ಟಾಗಿ ಮಾಡಬೇಕು. ಮಣ್ಣನ್ನು ಕಲೆಸುವುದು, ಸುಡುವುದು, ನಯ ಮಾಡುವುದು ಇತ್ಯಾದಿ ಪರಸ್ಪರ ಸಹಕಾರದಿಂದ ನಡೆಯಬೇಕು. ಹೆಚ್ಚು ಶಾಖ ಬೇಕಾಗದ ಪಾತ್ರೆಗಳನ್ನು ಸುಡಲು ಉತ್ತಮ ಸಲಕರಣೆಗಳನ್ನು ಒದಗಿಸಬೇಕು. ಸರಿಯಾಗಿ ಕಟ್ಟಿದ ಕುಲುಮೆಯಲ್ಲಿ ಉರವಲಿನ ವೆಚ್ಚ ಕಡಮೆ.

ಹೆಚ್ಚು ಇಟ್ಟಿಗೆ ಸುಡಲು ಬೇಕಾದ ದೊಡ್ಡ ಕುಲಿಮೆಗಳನ್ನು ಸಹಕಾರ ರೀತಿಯಲ್ಲಿ ಏರ್ಪಡಿಸಬೇಕು. ಹೆಂಚು ಹಾಗು ಇಟ್ಟಿಗೆಗಳ ಆಕಾರವನ್ನು ಸುಧಾರಿಸ ಬೇಕು.

೫. ಕುಂಬಾರರಿಗೆ ಆ ವಿದ್ಯೆಯ ಎಲ್ಲಾ ಅಂಶಗಳಲ್ಲಿಯೂ ಅಲ್ಪ ಕಾಲದ ಶಿಕ್ಷಣ ಸಿಗಬೇಕು; ಉದಾ–ಮಣ್ಣು ಕಲೆಸುವುದು, ಉತ್ತಮ ರೀತಿಯ ಮಾದರಿ ಗಳ ರಚನೆ, ಸುಡುವುದು, ನಯ ಮಾಡುವುದು.

೧೨. ನೈರ್ಮಲ್ಯ – ಗೊಬ್ಬರ :

೧. ಹಳ್ಳಿಗಳಲ್ಲಿ ಎಂಥ ಕಕ್ಕಸುಗಳಿರಬೇಕು ಎಂಬುದನ್ನು ಬೇರೆಬೇರೆ ಪ್ರಯೋಗ ಮಾಡಿ ನಿರ್ಧರಿಸಬೇಕು. ಹಲವು ಬಗೆಯ ಕಕ್ಕಸುಗಳು ಅನುಕೂಲವಾಗಿ ಕಾಣಬಹುದು. ಹಳ್ಳಿಗಳನ್ನು ನಿರ್ಮಲವಾಗಿಡಲು ಈ ಕಕ್ಕಸು ಪ್ರಯೋಗಗಳು ಅಗತ್ಯ. ಬೈರಿಗೆ–ಗುಂಡಿ ಮೂತ್ರಿಗಳನ್ನು ಹಳ್ಳಿಯಲ್ಲಿ ನಾಲ್ಕಾರು ಕಡೆ ಮಾಡು ವುದು ಒಳ್ಳೆಯದು.

೨. ಮಲಮೂತ್ರಗಳನ್ನು ಗೊಬ್ಬರವಾಗಿ ಮಾಡಲು ಖಾಸಗಿ ಗುತ್ತಿಗೆ ದಾರರಿಗೆ ಗುತ್ತಿಗೆ ಕೊಡಬೇಕು, ಅವರು ಸಿದ್ಧ ಮಾಡಿದ ಗೊಬ್ಬರಕ್ಕೆ ತಕ್ಕಂತೆ ಅವರಿಗೆ ಪ್ರೋತ್ಸಾಹ ಧನವನ್ನು ಕೊಟ್ಟು ಆಕರ್ಷಿಸಬೇಕು. ಲಾಭ ಸಿಗದಿದ್ದರೆ ಯಾರೂ ಕೆಲಸ ಮಾಡರು. ಈ ಪದ್ಧತಿ ಬೆಳೆಯುವವರೆಗೆ ಕೆಲವು ಕಾಲ ಸಹಾಯ ಕೊಡಬೇಕು.

೩. ಹಳ್ಳಿಯ ನೈರ್ಮಲ್ಯದ ದೃಷ್ಟಿಯಿಂದ ಊರಿನೊಳಗೆ, ವಾಸದ ಮನೆ ಗಳಲ್ಲಿಯೇ ದನ ಕಟ್ಟುವ ಪದ್ಧತಿಯನ್ನು ಪರಿಶೀಲಿಸಬೇಕು. ಗೋಶಾಲೆ–ನಂದಿ

ಶಾಲೆ, ಆದರ ವ್ಯವಸ್ಥಾಪಕರು ಏರ್ಪಾಡಾಗದೆ ಈ ಸಮಸ್ಯೆ ಹರಿಯದು. ಇದು ಒಂದು ದಿನದಲ್ಲಿ ಆಗುವ ಕೆಲಸವಲ್ಲ.

ಹೊಸದಾಗಿ ಹಳ್ಳಿಯನ್ನು ಕಟ್ಟುವಲ್ಲಿ, ಊರನ್ನು ಬೆಳೆಸುವಾಗ ವಾಸದ ಮನೆಗಳಿಗೆ ದೂರವಾಗಿ ಗೋಶಾಲೆಯನ್ನು ಕಟ್ಟಬೇಕು. ಗ್ರಾಮ ನೈರ್ಮಲ್ಯ ದೃಷ್ಟಿಯಿಂದ ಕೆಲವರು – ಊರಿಗೆಲ್ಲಾ ಒಂದೇ ನಂದಿಶಾಲೆ ಗೋಶಾಲೆ, ಇದರ ನೈರ್ಮಲ್ಯವೇ ಅಲ್ಲಿ ಪ್ರಧಾನ.

೧೫. ಪ್ರಜಾತಂತ್ರ

ಮೂಲತಃ ಭರತಖಂಡ ಗಣರಾಜ್ಯ. ಒಂದೊಂದು ಹಳ್ಳಿಯೂ ತನ್ನ ಆಡಳಿತವನ್ನು ತಾನೇ ನಡೆಸುತ್ತಿದ್ದ ಗ್ರಾಮರಾಜ್ಯವಾಗಿತ್ತು. ಸಾಮಾನ್ಯವಾಗಿ ಸಮಾಜದಲ್ಲಿ ಕಾಣಬರುವ ಸಾಧಾರಣ ಜನರನ್ನ ಆಧಾರವಾಗಿಟ್ಟುಕೊಂಡು ಭರತ ಖಂಡ ತನ್ನ ರಾಜ್ಯಪದ್ಧತಿಯನ್ನು ರಚಿಸಿತು.

ಮಾನವ ಸಮಾಜದಲ್ಲಿ ಸಮಸ್ತ ಕಾರ್ಯಕಲಾಪದಲ್ಲಿಯೂ ಎರಡು ದೃಷ್ಟಿ ಇರುತ್ತವೆ : ಒಂದು ದೀರ್ಘ ದೃಷ್ಟಿ, ಇನ್ನೊಂದು ತತ್ಕಾಲದ ದೃಷ್ಟಿ–ಸದ್ಯ ಫಲದ್ದು. ನಮ್ಮಲ್ಲಿ ಅನೇಕರಿಗೆ ದೀರ್ಘದೃಷ್ಟಿ ಸಾಧ್ಯವಿಲ್ಲ. ದೀರ್ಘದೃಷ್ಟಿ ಯೆಂದರೆ ಮಾಡಿದ ಕೆಲಸದ ಫಲ ಕಣ್ಣಿಗೆ ಕಾಣಲು, ಕೈಗೆ ಸಿಗಲು ಬಹಳ ಕಾಲ ಬೇಕು. ಜನರು ಅಷ್ಟುಕಾಲ ಕಾಯಲೊಲ್ಲರು. ನಮಗೆಲ್ಲ ತತ್ಕಾಕಾಲದ ದೃಷ್ಟಿಯೇ–ಚೆನ್ನಾಗಿ ತಿಂದು ತೇಗಿ ಸುಖವಾಗಿರೋಣ ಎಂಬುದು. ನೂರರಲ್ಲಿ ತೊಂಬ ತ್ತೊಂಬತ್ತು ಜನರದು ಈ ದೃಷ್ಟಿ. ಆದರೆ ಇಡೀ ಸಮಾಜದ ಹಿತಕ್ಕಾಗಿ ಕೆಲವು ಕೆಲಸಗಳನ್ನು ಮಾಡಲೇಬೇಕು. ಇದಕ್ಕೆ ದೀರ್ಘದೃಷ್ಟಿ ಅಗತ್ಯ. ಪ್ರಜಾ ತಂತ್ರ ರೂಪಿಸುವುದು ಇದನ್ನೇ. ಆಡಳಿತ ಸಫಲವಾಗಿ, ಅನೇಕ ಜನರ ಹಿತ ಸಾಧನೆಯಾಗಬೇಕಾದರೆ ಸರಕಾರ ದೀರ್ಘದೃಷ್ಟಿಯುಳ್ಳವರ ಕೈಯಲ್ಲಿರಬೇಕು. ಕೇವಲ ತತ್ಕಾಲದ ದೃಷ್ಟಿ ಇರುವಂಥ ಜನರಿಗೆ ಸರಕಾರ ವಶವಾದರೆ ಪರಿಣಾಮ ಭಯಂಕರ. ಅವರ ಮಂದದೃಷ್ಟಿ ಯುದ್ಧಗಳಿಗೆ ಕಾರಣವಾಗುತ್ತದೆ.

ಈ ರೀತಿ ವಿಚಾರ ಮಾಡಿದರೆ ಅಮೆರಿಕಾ, ಇಂಗ್ಲೆಂಡುಗಳು ಪ್ರಜಾತಂತ್ರ ಗಳೇ ಅಲ್ಲ. ಅಲ್ಲಿರುವುದು ಪೂರಾ ನಿರಂಕುಶಾಧಿಕಾರ. ಯುದ್ಧ ಕಾಲದಲ್ಲಿ ಈ ದೇಶಗಳಲ್ಲಿ ಎಂಥ ರಾಜ್ಯವಿತ್ತು? ಪ್ರಜಾತಂತ್ರವೆ ? ಸರ್ವಾಧಿಕಾರವೆ? ಬಹಿರಂಗ ವಾಗಿಯೆ ಸರ್ವಾಧಿಕಾರ ಸ್ಥಾಪಿತವಾಗಿತ್ತು. ಅಕಸ್ಮಾತ್ತಾಗಿ ಹಾಗೆ ಆಗಲಿಲ್ಲ. ಹಾಗೆ ಆಗಲೇಬೇಕಿತ್ತು. ಈ ದೇಶಗಳಲ್ಲಿ ಉತ್ಪಾದನಾವಿಧಾನವು ಕೇಂದ್ರಿತ ವಾದುದು. ಕೇಂದ್ರೀಯ ನಿಯಂತ್ರಣ. ಸೈನಿಕತೆ ಅದರ ಅನಿವಾರ್ಯ ಪರಿಣಾಮ. ಅದರಿಂದ ಸರ್ವಾಧಿಕಾರ ಬಂದೇ ತೀರಬೇಕು. ಆರ್ಥಿಕ ಕ್ಷೇತ್ರದಲ್ಲಿ ಸರ್ವ ಮಾನ್ಯ, ರಾಜಕೀಯದಲ್ಲಿ ಮಾತ್ರ ಪ್ರಜಾಧಿಕಾರ ಸಾಧ್ಯವಿಲ್ಲ. ಇದು ಹುಲಿ–ಮೇಕೆಯ ನ್ಯಾಯ. ಇಂಥ ಪ್ರಜಾಧಿಕಾರ ಬರೀ ಕಪಟ. ಆರ್ಥಿಕ ಕ್ಷೇತ್ರ ದಲ್ಲಿ ಪ್ರಜಾತಂತ್ರ ಬರಬೇಕೆಂದರೆ ಹಳ್ಳಿಗಳಲ್ಲಿ ವೈಯಕ್ತಿಕ ಉತ್ಪಾದನೆಯ ಪದ್ಧತಿಯಿರಬೇಕು.

ನೀರಾವರಿ, ರಸ್ತೆ ಮುಂತಾದ ದೊಡ್ಡ ಕೆಲಸಗಳೂ ನಡೆಯಬೇಕಲ್ಲ. ಅದಕ್ಕೆ ಸಮಾಜದಲ್ಲಿ ದೀರ್ಘದೃಷ್ಟಿಯಿರುವವರನ್ನು ಆರಿಸಿ ನೇಮಿಸಬೇಕು. ಮಂತ್ರಿಗಳು ಸರಕಾರಿ ಅಧಿಕಾರಿಗಳು ದೀರ್ಘದೃಷ್ಟಿಯುಳ್ಳವರಾಗಿರಬೇಕು. "ಎಷ್ಟು ಲಾಭ ಬರುತ್ತದೆ?" ಎಂದು ಕೇಳುವವರು ಆ ಜವಾಬದಾರಿ ಸ್ಥಾನಗಳಿಗೆ ತಕ್ಕವರಲ್ಲ. ದೀರ್ಘದೃಷ್ಟಿಗೆ 'ಲಾಭವೆಷ್ಟು?' ಎಂಬುದಲ್ಲ ಅಳತೆ. ಜನತೆಯ ಅಗತ್ಯಗಳನ್ನು ತೃಪ್ತಿಗೊಳಿಸುತ್ತದೆಯೆ ಎಂಬುದು ಹಾಕಬೇಕಾದ ಪ್ರಶ್ನೆ. ಸರಕಾರವು ವ್ಯಾಪಾರಿ ಸಂಸ್ಥೆಯಲ್ಲ; ಹಣ ಮಾಡುವ ಸಂಸ್ಥೆಯೂ ಅಲ್ಲ, ಅಧಿಕಾರಿ ವರ್ಗದ ಕಾರಖಾನೆಯೂ ಅಲ್ಲ. ಸರಕಾರ ಇರುವುದು ಜನಸೇವೆಗಾಗಿ. ಜನರ ಅವಶ್ಯಕತೆಗಳನ್ನು ಪೂರ್ಣಗೊಳಿಸಿದರೆ ಎಷ್ಟು ವೆಚ್ಚವಾದರೂ ಸರಿಯೆ ಆ ಸೇವೆ ಸಲ್ಲಿಸಲೇಬೇಕಲ್ಲ. ಇದು ಮುಖ್ಯ ತತ್ವ. ಇದನ್ನು ನೆನಪಿಡಬೇಕು. ಖಾಸಗಿ ಹಣಕಾಸಿಗೂ ಸಾರ್ವಜನಿಕ (ರಾಷ್ಟ್ರೀಯ) ಹಣಕಾಸಿಗೂ ಇದೇ ಭೇದ. ಸಾರ್ವಜನಿಕ ಹಣಕಾಸಿನದು ದೀರ್ಘದೃಷ್ಟಿ. ಪ್ರಜಾತಂತ್ರಕ್ಕಾಗಿ ಯೋಜನೆ ಮಾಡುವಾಗ ಪ್ರತಿಯೊಬ್ಬ ವ್ಯಕ್ತಿಯೂ ಅದರಲ್ಲಿ ತನ್ನ ಪಾತ್ರವೇನೆಂಬುದನ್ನು ಅರಿಯುವಂತೆ ಮಾಡಬೇಕು.

ಕೆಲಸಗಾರರು :

ಇದನ್ನು ಮಾಡುವಾಗ ಬಹಳ ಮುಖ್ಯವಾದುದು ಮಾಡುವ ಕೆಲಸಗಾರರಲ್ಲಿ 'ಸ್ವಾರ್ಥ'ವಿರಬಾರದು ಎಂಬುದು. ಸ್ವಾರ್ಥವಿದ್ದರೆ ಲಕ್ಷಗಟ್ಟಲೆ ಜನರ ಶ್ರಮವನ್ನು ಅವರು ದುರುಪಯೋಗಪಡಿಸುತ್ತಾರೆ. ಅದೇ ಅಪಾಯ. ಇದಕ್ಕಾಗಿಯೆ ಕಾಂಗ್ರೆಸು ಮಂತ್ರಿ ಮಂಡಲಗಳಲ್ಲಿ ಅನೇಕ ವಿಷಯಗಳ ವೆಚ್ಚವನ್ನು ತಗ್ಗಿಸಬೇಕೆನ್ನುವುದು ಹಿಂದಿನ ಮಂತ್ರಿಮಂಡಲಗಳು ೫೦೦ ರೂ ಸಂಬಳ ತೆಗೆದುಕೊಂಡವು. ಈಗ ಅವರ ಮಟ್ಟ ಏರಿದೆ; ಸಂಬಳವೂ ಹೆಚ್ಚಿದೆ ಎಂದರೆ 'ಸ್ವಾರ್ಥ' ಬಂತು ಅಂತ. ಇಲ್ಲಿ ಅಪಾಯವಿದೆ. ನಾವು ಹಳ್ಳಿಯ ಜೀವನದ ಮಟ್ಟವನ್ನು ಅನುಸರಿಸಬೇಕು.

ಪಟ್ಟಣಕ್ಕೆ ಐದಾರು ಮೈಲಿ ದೂರದ ಒಂದು ಹಳ್ಳಿಯಲ್ಲಿ ಒಬ್ಬ ಪಾದರಿಯನ್ನು ಒಮ್ಮೆ ಕಂಡೆ. ನಮ್ಮ ಮಂತ್ರಿಗಳ ಮನೆ ಇದ್ದ ಹಾಗಿತ್ತು ಅವನ ಮನೆ, ಒಂದು ಅರಮನೆ. ಸೊಗಸಾದ ಅಲಂಕಾರ ಬೇರೆ. ಆ ಕಾಡಿನಲ್ಲಿವಿದ್ಯುತ್ತನ್ನು ಹಾಕಿಸಿದ್ದ. ಬಾವಿಗೆ ಪಂಪು. ಪಟ್ಟಣಗಳ ರೀತಿಯ ಸ್ವಚ್ಛವಾದ ಕಕ್ಕಸು, ಇನ್ನೂ ಆಧುನಿಕ ಸಲಕರಣೆಗಳು. ಸುಮಾರು ೩೦೦ ಎಕರೆ ಸೊಗಸಾದ ಭೂಮಿ ಬೇರೆ. ಅಲ್ಲಿಗೆ ಅರ್ಧಮೈಲಿ ದೂರದಲ್ಲಿ ಕೆಲವು ಚಿಕ್ಕ ಚಿಕ್ಕ ಮಣ್ಣಿನ ಗುಡಿಸಿಲುಗಳನ್ನು ಕಟ್ಟಿಸಿದ್ದ – ಬಡಕುಟುಂಬಗಳಿಗಾಗಿ. ಒಂದೊಂದಕ್ಕೂ ಕೋಳಿ ಸಾಕಣೆಗೆ ಸ್ವಲ್ಪ ಸ್ಥಳ, ಹೊಲ ಬಿಟ್ಟಿದ್ದ. "ಬೇಕಾದಷ್ಟು ಹಣ ಸುರಿಯುತ್ತಿದ್ದೇವೆ.

ಆದರೆ ಹಳ್ಳಿಗಳಲ್ಲಿ ನಮ್ಮ ಕೆಲಸ ಪರಿಣಾಮಕಾರಿಯಾಗಿಲ್ಲ. ಜನ ನಮ್ಮ ಕೈಗೆ ಸಿಗುತ್ತಿಲ್ಲ. ಅದಕ್ಕೆ ಏನಾದರೂ ಒಂದು ಮಂತ್ರ ಹೇಳಿಕೊಡುತ್ತೀರಾ?" ಎಂದು ಆತ ನನ್ನನ್ನು ಕೇಳಿದ. ಅದಕ್ಕೇನು ಬಹಳ ಸುಲಭವಾದ ಮಂತ್ರ. ಪಶ್ಚಿಮ ದೇಶದಿಂದ ಬಂದಿದೀರಿ. ಇಲ್ಲಿನ ಸ್ಥಿತಿಗತಿ ನಿಮಗೆ ತಿಳಿಯದು. ಸದಾ ಹಣದ ಚಿಂತೆ. ಅದರಿಂದ ಬರುವ ದೊಡ್ಡಸ್ತಿಕೆಯ ಚಿಂತೆ. ಹಳ್ಳಿಯವರಿಗೆ ನಮ್ಮ ಈ ಉಡುಪನ್ನು ಕಂಡರೆ ಗೌರವ. ಪಂಚೆ ಎರಡು ಕಡೆ ಹರಿದಿದ್ದರೆ ಇನ್ನೂ ಹೆಚ್ಚು. ಮೈಮೇಲಿನ ಈ ಅಂಗಿಯನ್ನು ಕಿತ್ತೊಗೆದರೆ ನಮ್ಮ ಹಿಂದೆಯೇ ಬರುತ್ತಾರೆ. ಕೌಪೀನಧಾರಿಗಳಾದರೆ ನಮಸ್ಕಾರ ಮಾಡುತ್ತಾರೆ! ಈ ದೇಶದ ಬೆಲೆ-ಅಳತೆ ಅದು. ನಿಮಗೆ ಈ ಸ್ಥಿತಿ ತಿಳಿಯದು, ನಮ್ಮ ಜನರ ಸೇವೆ ಮಾಡಬಯಸಿದರೆ ಮೊದಲು ಈ ಅರಮನೆಯನ್ನು ಬಿಡಬೇಕು. ಇದು ಶೋಷಣೆಯ ಕುರುಹು. ಹಳ್ಳಿಯವರಿಗೆ ಇದರಿಂದ ಭಯ, ಸಂದೇಹ ಹುಟ್ಟುತ್ತವೆ. ಅವರಿಗಾಗಿ ನೀವು ಕಟ್ಟಿರುವ ಈ ಗುಡಿಸಿಲುಗಳಿಗೆ ೨೫೦ ರೂ. ವೆಚ್ಚವಾದರೆ ನೀವು ೧೨೫ ರೂ. ಗೆ ಗುಡಿಸಿಲು ಕಟ್ಟಿ ಕೊಳ್ಳಬೇಕು. ಹೀಗಾದರೆ ನೀವು ಹಳ್ಳಿಯವರ ಸೇವೆ ಮಾಡೀರಿ. ಹಾಗೆ ಮಾಡಿ ದರೆ ನಿಮಗೆ 'ಸ್ವಾರ್ಥವಿಲ್ಲ' ಎಂದು ಅವರಿಗೆ ಮನದಟ್ಟಾಗಿ ನಿಮ್ಮ ಮಾತು ಕೇಳಲು ಬರುತ್ತಾರೆ. ಇದೇ ಆ ಗುಟ್ಟು. ನಮ್ಮ ದೇಶ ಅನಾಗರಿಕ ದೇಶವಲ್ಲ. ನಮಗೆ ಒಂದು ಸಂಸ್ಕೃತಿಯಿದೆ. ಹಣವಲ್ಲ ಆಧಾರ. 'ಬ್ರಾಹ್ಮಣ ಸಂಸ್ಕೃತಿ' ನಮ್ಮದು. ಜನಿವಾರವಲ್ಲ ಬ್ರಾಹ್ಮಣ ಸಂಸ್ಕೃತಿಯ ಗುರುತು. ಸಾವಿರಾರು ರೂಪಾಯಿ ಸಂಬಳ ತರುವ ದೊಡ್ಡ ಅಧಿಕಾರಿಗಳಿಗೆ ಜನಿವಾರವಿದ್ದರೂ ಅವರು ಬ್ರಾಹ್ಮಣ ರಲ್ಲ ಮ್ಲೇಚ್ಛರು. ಗಾಂಧೀಜಿ ಅಮೆರಿಕಾಕ್ಕೆ ಹೋದರೆ ಕೋಟಿಗಟ್ಟಲೆ ಜನ ಸೇರಿ ಅವರನ್ನು ಸ್ವಾಗತಿಸುತ್ತಾರೆ. ಆದರೆ ಭಾರತದ ಜನಕೋಟಿಯ ಭಾವನೆ ಅವರ ಲ್ಲಿಲ್ಲ. ನಮ್ಮ ಜನರಿಗೆ ಗಾಂಧೀಜಿಯವರಲ್ಲಿ ಭಕ್ತಿ; ಏಕೆಂದರೆ, ಅವರಿಗೆ ಸೊತ್ತಿಲ್ಲ. ಸ್ವಂತದ್ದೇನೂ ಇಲ್ಲ. ಪ್ರಜಾಸರಕಾರಗಳಿಗೆ ನಿಜವಾದ ಅಧಿಕಾರ ತರುವುದು ಇದೇ. ಜನಗಳಲ್ಲಿ ವಿಶ್ವಾಸ ಮೂಡಿಸುವುದು ಇದೇ. ಈ ಯೋಜನೆ ಹಾಕಿ, ಜನ ಒಡ ನೆಯೇ ಒಪ್ಪುತ್ತಾರೆ. ಇದಕ್ಕೆ ಹಣವೂ ಹೆಚ್ಚು ಬೇಡ.

ನಮ್ಮನ್ನು ನಾವು ಪರಿವರ್ತಿಸಿಕೊಂಡು ಈ ಬಗೆಯ ಜೀವನ ಮಾರ್ಗವನ್ನು ಹಿಡಿದರೆ ಸಾಕು. ಇನ್ನೇನೂ ಬೇಡ. ಇದೇ ನಮಗೆ ಆರ್ಥಿಕ ಸ್ವರಾಜ್ಯವನ್ನು ಕೊಡುತ್ತದೆ. ಆ ಸ್ವರಾಜ್ಯದಲ್ಲಿ ಎಲ್ಲರಿಗೂ ಹೊಟ್ಟೆ ತುಂಬಾ ಅನ್ನ ಸಿಗುತ್ತದೆ.

ಬಡತನ ಇರುವ ದೇಶದಲ್ಲಿ ಮೊಟ್ಟಮೊದಲು ಎಲ್ಲರಿಗೂ ಅನ್ನ-ಬಟ್ಟೆ ಆಗಬೇಕು. ಆದುದರಿಂದ ನಮ್ಮ ಸಮಸ್ಯೆಗೆ ಉತ್ತರ ಬೇಸಾಯದಲ್ಲಿದೆ, ಜನರ ದೇಶಭಕ್ತಿಯನ್ನು ಪ್ರಚೋದಿಸಬೇಕಾಗಿಲ್ಲ. ಜನರ ಶ್ರಮಶಕ್ತಿಗೆ ಒಂದು ಅವಕಾಶ ಮಾಡಿಕೊಡಬೇಕು. ಪ್ರತಿಯೊಬ್ಬರಿಗೂ ಅನ್ನ-ಬಟ್ಟೆ ಒದಗಿಸಲೇಬೇಕು.

ಜಗತ್ತಿನ ಪ್ರತಿಕ್ರಿಯೆ :

ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಇದೊಂದೇ ದಾರಿ. ಚೀನಾಕ್ಕೊ ನಮಗೂ ಬಹಳ ನಿಕಟ ಸಂಬಂಧವಿದೆ. ನಾವೇನು ಅಟಂಬಾಂಬು ಮಾಡುತ್ತಿದ್ದೇವೆಯೆ ಈ ಸಂಬಂಧವಿರಲಿಕ್ಕೆ? ಬುದ್ಧ ಭಗವಾನ್ ನಿರ್ಮಿಸಿದ ಸಂಬಂಧ ಇದು. ನಮಗೆ ಬೇಕಾದುದು ಆ ಸಂಸ್ಕೃತಿ. ನಾವೂ ಜಗತ್ತಿನ ಒಂದು ಪ್ರಬಲ ರಾಷ್ಟ್ರವಾಗಬೇಕು. ಈ ಸಂಸ್ಕೃತಿಯ ತಳಹದಿಯ ಮೇಲೆ ಆ ಪ್ರಾಬಲ್ಯವನ್ನು ಕಟ್ಟಬೇಕು ನಾವು. ಅದಕ್ಕೆ ಹಳ್ಳಿಗಳನ್ನು ಮೊದಲು ಭದ್ರಗೊಳಿಸಿ, ಮೇಲೇರಬೇಕು. ನಮ್ಮ ಸಮಸ್ಯೆಗಳೇ ಅಲ್ಲ, ಇಡೀ ಜಗತ್ತಿನ ಸಮಸ್ಯೆಗಳ ಪರಿಹಾರಕ್ಕೂ ಇದೊಂದೇ ದಾರಿ. ನಾಯಕತನ ವಹಿಸಿಕೊಂಡವರು 'ಸ್ವಾರ್ಥ' ಬಿಡಬೇಕು. ಎಲ್ಲವನ್ನೂ ಬಿಡಬೇಕು. ಆಮೇಲೆ ಜನರ ಮುಂದೆ ಈ ಯೋಜನೆಯನ್ನು ಇಡಬೇಕು. ನಮ್ಮ ದೇಶಕ್ಕೆ ಅವರು ಸಲ್ಲಿಸಬಹುದಾದ ಕಾಣಿಕೆ ಇದೇ,

ಸರಕಾರದ ವಿರೋಧ :

ಪ್ರತಿನಿಧಿಗಳ ಮೂಲಕ ನಡೆದ ಪ್ರಜಾಸರಕಾರದಲ್ಲಿ ಕೆಲಸ ನಡೆಯಲು ವಿರೋಧವಿರಬೇಕು. ದಡಗಳಿರುವುದರಿಂದ ಹೊಳೆಯ ನೀರು ಉಕ್ಕದೆ ಹರಿಯುತ್ತದೆ. ಕಲ್ಲಿನ ದಡಗಳಾದರೆ ಮತ್ತೂ ಕ್ಷೇಮ. ಇಲ್ಲದಿದ್ದರೆ ದಡಗಳನ್ನು ಕೊರೆಯುತ್ತದೆ ನೀರು. ನದಿಯಲ್ಲಿ ಮಣ್ಣು ತುಂಬಿ ಅದರ ಪಾತ್ರವೇ ಬದಲಾಗುತ್ತದೆ. ನದಿಯ ನೀರಿಗೂ ದಡಗಳಿಗೂ ಸ್ಪರ್ಧೆಯೇನಿಲ್ಲ.

ಅದೇ ರೀತಿ, ಆಡಳಿತ ನಡೆಸುವವರಿಗೂ ಉಳಿದವರಿಗೂ ಸ್ಪರ್ಧೆಯಿರಬಾರದು; ಸಹಕಾರವಿರಬೇಕು. ಒಂದೇ ರೀತಿ ಹರಿಯಲು ನದಿಗೆ ಕಲ್ಲುದಡ ಅಗತ್ಯವಿದ್ದಂತೆ ದೇಶದ ಸರಕಾರ ವ್ಯವಸ್ಥಿತವಾಗಿ ನಡೆಯಲು ಅಧಿಕಾರ ವರ್ಗಕ್ಕೆ ಸೇರದ ಬೇರೆ ಜನ ಅದಕ್ಕೆ ಮಾರ್ಗದರ್ಶನ ಮಾಡಬೇಕು. ಇಂಗ್ಲೆಂಡಿಗೆ ತನ್ನ 'ಪಾರ್ಲಿಮೆಂಟ್' ಎಂದರೆ ಬಹಳ ಹೆಮ್ಮೆ. ಸರಕಾರ ಮಾಡಬೇಕೆನ್ನುವ ಕೆಲಸಗಳ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಪ್ರಕಟಿಸಿ ಮಂತ್ರಿ ಮಂಡಲವನ್ನು ನಿಗ್ರಹಿಸುವುದು, ಅದಕ್ಕಾಗಿ 'ಸರಕಾರದ ವೆಚ್ಚದಿಂದ ಸರ್ಕಾರದ ವಿರೋಧ ಪಕ್ಷವನ್ನು' ನಿರ್ಮಿಸುವುದು ಅಪರ ಪದ್ಧತಿ. ರಾಜಕೀಯ ಯೋಧರು ದ್ವಂದ್ವ ಯುದ್ಧ ಮಾಡುವ ಮಲ್ಲರಂಗ ಆ ಪಾರ್ಲಿಮೆಂಟು. ಸೋತವನು ಗೆದ್ದವನಿಗೆ ಸ್ಥಾನ ಬಿಡುತ್ತಾನೆ. ಪಾರ್ಲಿಮೆಂಟಿನ ವಾದವಿವಾದಗಳ ಭರಾಟೆಯ ಗಾಳಿಯಲ್ಲಿ ಇಂದು ವಿರೋಧ ಪಕ್ಷದಲ್ಲಿ ಕುಳಿತವರು ನಾಳೆ ಮಂತ್ರಿಮಂಡಲದಲ್ಲಿರಬಹುದು. ಬ್ರಿಟಿಷ್ ಪಾರ್ಲಿಮೆಂಟಿನ ವಿರೋಧ ಪಕ್ಷದ ಕೆಲಸ ಇದು. ಅವರ ಸ್ಪರ್ಧಾಮಯ ಆರ್ಥಿಕ ವಿಧಾನ ಅವರ ರಾಜಕೀಯವಲ್ಲಿಯೂ ಕಾಲು ಚಾಚಿ ಕುಳಿತಿದೆ.

ಮಂತ್ರಿಮಂಡಲದ ರಚನೆಯೇ ಆರ್ಥಿಕ ಕ್ಷೇತ್ರದಲ್ಲಿರುವ ಸಾಮ್ರಾಜ್ಯಶಾಹಿಯ ಕುರುಹು. ಕೇಂದ್ರೀಯ ಉದ್ಯೋಗಗಳಿಗೆ ನಾಲ್ಕೂ ಮೂಲೆಗಳಿಂದ ಕಚ್ಚಾಮಾಲು ಒದಗಬೇಕು. ಅವನ್ನು ಪೂರ್ಣ ಪದಾರ್ಥವಾಗಿ ಸಜ್ಜುಗೊಳಿಸಿ ಮತ್ತೆ ಇವರು ಜಗತ್ತಿನ ಮೂಲೆಮೂಲೆಗೂ ಕಳಿಸಬೇಕು. ಇದರಿಂದ ಹಣದ ಚಲಾವಣೆ, ಸಂಚಾರ ಸಾಧನಗಳು, ರಾಜಕೀಯಾಧಿಕಾರ ಅತ್ಯಗತ್ಯವಾಗುತ್ತವೆ. ಇದನ್ನು ಸಾಧಿಸಲು ಪರರಾಷ್ಟ್ರಗಳ ರಾಜಕೀಯ, ಹಣಕಾಸು, ಸೈನ್ಯ, ನೌಕೆ, ವಿಮಾನದಳ ಬಹಳ ಅವಶ್ಯಕವಾಗುತ್ತವೆ. ಆದುದರಿಂದ ಮಂತ್ರಿಮಂಡಲದಲ್ಲಿ ಆ ಶಾಖೆಗಳೇ ಬಹಳ ಮುಖ್ಯ.

ಸ್ಪರ್ಧೆ ಮತ್ತು ಸಾಮ್ರಾಜ್ಯವಾದ – ಎರಡಕ್ಕೂ ಹಿಂಸೆಯೇ ತಳಹದಿ, ನಾವು ಅಹಿಂಸೆಯನ್ನು ಅವಲಂಬಿಸುವುದಾದರೆ ನಮ್ಮ ರಾಜ್ಯದ ರಚನೆ ಹೇಗಿರಬೇಕು? ನಮ್ಮ ಸರಕಾರ ತಪ್ಪಿದಲ್ಲಿ ಅದನ್ನು ತಡೆದು ತಿದ್ದುವ ವಿರೋಧವೊಂದು ಬೇಕಲ್ಲಿ. ಆದರೆ ನಮಗೆ ಸ್ಪರ್ಧೆ ಬೇಡ, ಸಹಕಾರದ ಆರ್ಥಿಕ ರಚನೆ ಬೇಕು. ನಮ್ಮ 'ವಿರೋಧ' ಪಕ್ಷದ ಸದಸ್ಯರು ತಮ್ಮ ಪಾಲಿಗೆ ಅಧಿಕಾರ ಎಂದು ಬಂದೀತು ಎಂದು ಹಾತೊರೆಯುತ್ತಾ ಕೂಡರು. ಅಹಿಂಸೆ–ಸಹಕಾರಗಳ ಆರ್ಥಿಕ ವಿಧಾನದಲ್ಲಿ ವೈಯುಕ್ತಿಕ ಆಕಾಂಕ್ಷೆಗಳಿಗೆ ಎಡೆಯಿಲ್ಲ. ಮಂತ್ರಿಗಳನ್ನು ಕೆಳಗಿಳಿಸಿ ನಾವು ಅಲ್ಲಿಗೆ ಹೋಗಬೇಕು. ಎಂಬುದಲ್ಲ ನಮಧ್ಯೇಯ: ಮಂತ್ರಿಗಳು ನಮ್ಮನ್ನು ನೋಡಿ ನಡತೆಯನ್ನ ಕಲಿಯಲಿ ಎನ್ನುವ ಆದರ್ಶ ವ್ಯಕ್ತಿತ್ವ. ರಚನಾತ್ಮಕ ಕೆಲಸಗಾರರಿಗೆ ತಮ್ಮ ದೃಷ್ಟಾಂತ ಬಲದಿಂದ ಸರಕಾರ ಸರಿಯಾಗಿ ನಡೆಯುವಂತೆ ಮಾಡಬೇಕು. ಅಹಿಂಸಾತ್ಮಕ ಆರ್ಥಿಕ ವ್ಯವಸ್ಥೆಯಲ್ಲಿ ರಚನಾತ್ಮಕ ಕೆಲಸಗಾರರಿಗೆ ಈ ಮಹತ್ತರ ಜವಾಬದಾರಿ ಬರುತ್ತದೆ.

ಈ ರೀತಿ ಮಾರ್ಗದರ್ಶನ ಮಾಡಲು ರಚನಾತ್ಮಕ ಕೆಲಸಗಾರರದೊಂದು ಸುಸಂಘಟಿತ ಮಂಡಳಿ ಅಗತ್ಯ. ಅವರು ಮಾಡಿದ ಜನಸೇವೆಯೇ ಅವರ ಬಲ. ಅವರ ಕೆಲಸದ ಉತ್ತಮ ಗುಣವೇ ಅವರ ಅಧಿಕಾರ. ಇಂಥ ಮಂಡಲಿಯಿದ್ದರೆ ಮಂತ್ರಿಗಳು ಅವರಿಂದ ಸ್ಫೂರ್ತಿ ಪಡೆದಾರು. ಈ ಮಂಡಲಿ ಅವರಿಗೆ ಸೂಚನೆ, ಸಲಹೆ ಕೊಟ್ಟೀತು. ಇಂಥ ಜವಾಬದಾರಿಯ ಕೆಲಸವನ್ನು ನಡೆಸಲು ಈ ಗುಂಪಿನಲ್ಲಿ ತ್ಯಾಗಮಯರೂ, ಅನಾಸ್ತಕರೂ, ಜನಸೇವೆ – ಲೋಕಸಂಗ್ರಹವೊಂದೇ ತಮ್ಮ ಗುರಿ ಆದವರೂ ಇರಬೇಕು.

ಇಂಥ ರಾಜಕೀಯ ರಚನೆಯಲ್ಲಿ ಮಂತ್ರಿಗಳು ಸ್ವಾವಲಂಬನದ ಆರ್ಥಿಕ ವಿಧಾನಕ್ಕೆ ಮುಖ್ಯವಾದ ಶಾಖೆಗಳನ್ನು ವಹಿಸಿಕೊಂಡಾರು. ಆಗ ಆಡಳಿತ ಶಾಖೆಗಳಲ್ಲಿ – ಕೃಷಿ, ಭೂಸುಧಾರಣೆ, ಭೂಸಾರ ನಷ್ಟಕ್ಕೆ ತಡೆ, ಹೊಸದಾಗಿ ಭೂಮಿಯನ್ನು ಕೃಷಿ ಯೋಗ್ಯವಾಗಿ ಮಾಡುವುದು, ನೀರಾವರಿ ನದಿಗಳ ಯೋಜ

ಮಾನ್ಯ, ಕಾಡು, ಗ್ರಾಮೋದ್ಯೋಗ, ಖನಿಜ-ಭಾರಿ ಉದ್ಯೋಗಗಳು, ಆರೋಗ್ಯ, ಶಿಕ್ಷಣ, ಗೃಹಶಾಖೆಗಳು ಮುಖ್ಯವಾಗುತ್ತವೆ. ಪರರಾಷ್ಟ್ರ ನೀತಿ, ಅರ್ಥ, ರಕ್ಷಣೆಗಳಿಗೆ ಮಂತ್ರಿ ಮಂಡಲದಲ್ಲಿ ಸ್ಥಾನವನ್ನು ಕೊಡಬೇಕಾಗಿಯೆ ಇಲ್ಲ.

ಈ ಬಗೆಯ ರಾಜಕೀಯ ಸ್ವರೂಪದಲ್ಲಿ ಜನತೆಯನ್ನು ಶೋಷಣೆಗೆ ತುತ್ತಾಗದಂತೆ ತಡೆಯಲು ಈ ರಚನಾತ್ಮಕ ಕೆಲಸಗಾರರ ಗುಂಪು ರಕ್ಷಾಕವಚವಾಗಿ ಇರುತ್ತದೆ. ಈ ಪ್ರಕಾರ ನಡೆದ ಸರಕಾರ ಜನತೆಯ ವ್ಯವಹಾರಕ್ಕೆ ಪ್ರಾಧಾನ್ಯ ಕೊಟ್ಟು ಜನರ ಯೋಗಕ್ಷೇಮವನ್ನು ಸಾಧಿಸುತ್ತದೆ.

'ರಾಷ್ಟ್ರೀಕರಣ' ಎಂದರೆ ರಾಷ್ಟ್ರವು ಜನತೆಯ ಕೈಯಲ್ಲಿದೆ ಎಂದು ಅರ್ಥ. ಇದಕ್ಕೆ ಮೊದಲನೆ ಮೆಟ್ಟಲಾಗಿ ನಮ್ಮ ವ್ಯವಹಾರ - ನಿರ್ವಹಣದಲ್ಲಿ ಅನುಭವ ವಿಸ್ತಾರವಾಗಿ ಸಿಗಬೇಕು. ಹಳ್ಳಿಗಳಲ್ಲಿ ಚೆನ್ನಾಗಿ ಸಂಘಟಿಸಿದ ಪಂಚಾಯತಿಗಳ ಮೂಲಕ ಜನರು ತಮ್ಮ ತಮ್ಮ ಅವಶ್ಯಕತೆಗಳನ್ನು ತಾವೇ ಪೂರಯಿಸಕೊಳ್ಳ ಬೇಕು. ಹೀಗೆ ಅನುಭವ ಪಡೆದ ಜನರ ಗುಂಪಿನಿಂದ ಜಿಲ್ಲೆಗಳು ತಮ್ಮ ಆಡ ಳಿತಕ್ಕೆ, ವಿಧಾನ ಸಭೆಗೆ ಬೇಕಾದ ಜನರನ್ನು ಈ ಗುಂಪು ನೀಡಬಲ್ಲದು. ಹೀಗೆ ಸುವ್ಯಸ್ಥಿತವಾಗಿ ದೃಢ ಆಧಾರದ ಮೇಲೆ ಪ್ರಾಂತದ ಆಡಳಿತವನ್ನು ರಚಿಸಿದರೆ ಕೇಂದ್ರವನ್ನೂ ನಿಗ್ರಹಿಸಿ, ಗ್ರಾಮಸ್ಥರ ಹಿತಕ್ಕಾಗಿ ಅದು ದುಡಿಯುವಂತೆ ಮಾಡ ಬಹುದು.

ಇಂಥ ಅನುಭವಿ ದೇಶಭಕ್ತರ ಕೈಯಲ್ಲಿ ಆಡಳಿತವಿದ್ದರೆ, ಜನತೆಯ ಯೋಗ ಕ್ಷೇಮವೇ ಅವರ ಅಗ್ರಧರ್ಮ ಎಂಬ ವಿಶ್ವಾಸ ಜನರಿಗಿದ್ದರೆ, ಅದು ರಾಷ್ಟ್ರೀಯ ಸರಕಾರ. ಆಗ ರಾಷ್ಟ್ರೀಕರಣ ಮಾಡಿದರೂ ಜನತೆಯ ಹಿತಕ್ಕೆ ಆತಂಕವಿರದು.

ಈ ಬಗೆಯ ಗ್ರಾಮಗಳ ತಳಹದಿಯ ಮೇಲೆ ಕಟ್ಟಿದ, ಗ್ರಾಮಸ್ಥರಿಂದ ನಿಗ್ರ ಹಿತವಾದ, ಕೇಂದ್ರ ಸರಕಾರವಿಲ್ಲದಿದ್ದರೆ ಬರೀ 'ರಾಷ್ಟ್ರೀಕರಣ' ದಿಂದ ಬಡ ವರು ಭಾಗ್ಯವಂತರಿಂದ ಶೋಷಣೆಗೆ ಮತ್ತಷ್ಟು ಬಲಿಯಾದಾರು.

ಉದಾ : ವಿಮಾನ ಸಂಚಾರದ ವ್ಯವಸ್ಥೆಯನ್ನು ರಾಷ್ಟ್ರೀಕರಣ ಮಾಡುವ ಮಾತು ಎಲ್ಲೆಲ್ಲಿಯೂ ಹುಟ್ಟಿದೆ. ವಿಮಾನ ಪ್ರಯಾಣ ಹಳ್ಳಿಯವರಿಗೆ ಎಟುಕದ ಹಣ್ಣು. ಅವರಿಗೆ ಅದು ಅಗತ್ಯವೂ ಇಲ್ಲ, ಅವರು ಅದನ್ನು ಬಳಸುವುದೂ ಇಲ್ಲ. ಈಗ ಅವು ಭಾಗ್ಯವಂತರ ಸೊತ್ತು. ಅದನ್ನು ಬಳಸುವವರೂ ಅವರೇ. ಈಗ ಅದನ್ನು ರಾಷ್ಟ್ರೀಕರಣ ಮಾಡುವುದೆಂದರೆ, ಭಾಗ್ಯವಂತರ ಅನುಕೂಲಕ್ಕಾಗಿ. ಸರಕಾರ ತನ್ನ ಹಣ, ಬದ್ಧಿ, ವ್ಯವಸ್ಥೆಗಳನ್ನು ಉಪಯೋಗಿಸಬೇಕು. ವಿಮಾನ ನಿಲ್ದಾಣಗಳನ್ನು ಕಟ್ಟಬೇಕು, ಬೇರೆ ದಾರಿಗಳನ್ನೇ ಮಾಡಬೇಕು. ಈಗ ವಿಮಾನ ನಡಸುವ ಖಾಸಗಿ ಸಂಸ್ಥೆಗಳಿಗೆ ಇಂಥ ಅಗಾಧ ಕಾರ್ಯಗಳಿಗೆ ಸರಕಾರದ ಸರ್ವ ಸಹಾಯ ದೊರೆತರೆ ಬೆಣ್ಣೆ ಸಿಕ್ಕ ಹಾಗೆ. ಅವರಿಗೆ ಬೇಕಾದುದೂ ಅದೇ.

ಸರಕಾರದ ಹಣ ಜನತೆಯ ಅನುಕೂಲಕ್ಕಾಗಿ ವಿನಿಯೋಗವಾಗಬೇಕೇ ವಿನಾ ಈ ವಿಮಾನ ಮಾರ್ಗಗಳಿಗಾಗಿ ವೆಚ್ಚವಾಗಬಾರದು. ಇದುವರೆಗೆ ಮಾಡಿದಂತೆ ಖಾಸಗಿ ಜನ ಮಾಡುತ್ತ ಹೋಗಲಿ. ಹತ್ತು ಜನ ಭಾಗ್ಯವಂತರು ಇನ್ನೂ ಹತ್ತು ಜನ ಹಣಗಾರರನ್ನು ಸುಲಿದುಕೊಳ್ಳಲಿ. ನಿಜವಾದ ರಾಷ್ಟ್ರೀಯ ಸರಕಾರ ಬಂದಾಗ 'ರಾಷ್ಟ್ರೀಕರಣ'ದ ಪ್ರಸ್ತಾಪ ಬರಲಿ. ಈಗೇಕೆ?

೨೦ ರಾಷ್ಟ್ರೀಯ ಉದ್ಯೋಗಗಳು

ಉದ್ಯೋಗಗಳನ್ನು ಹೇಗೆ ರೂಪಿಸಬೇಕು, ಹೇಗೆ ನಡೆಸಬೇಕು ಎಂಬ ಪ್ರಶ್ನೆಗೆ ಬಂದೆವು. ಅರ್ಥಶಾಸ್ತ್ರದಲ್ಲಿ ನಾವು ನೆನಪಿಡಬೇಕಾದದು ಎರಡು ಮುಖ್ಯ ತತ್ವ – ಧನ ವಿಭಾಜನ.

ಕೇಂದ್ರೀಯ ಉದ್ಯೋಗಗಳು ಕೇಂದ್ರಾಪಗಮನ ಯಂತ್ರಗಳಿದ್ದ ಹಾಗೆ ಎಲ್ಲವೂ ಕೇಂದ್ರದಿಂದ ಹೊರಗೇ ಹರಿಯಬೇಕು. ಇದರಿಂದ ಕೆಲವೇ ಕೈಯಲ್ಲಿ ಐಶ್ವರ್ಯ ಸಂಗ್ರಹವಾಗುತ್ತದೆ. ಹಣವಾದರೂ ಕೇಂದ್ರಿತವಾಗಬಹುದು, ಅಧಿಕಾರವಾದರೂ ಆಗಬಹುದು. ವಿಕೇಂದ್ರಿತ ಉದ್ಯೋಗಗಳು ಸ್ವಾಭಾವಿಕವಾಗಿಯೇ ಐಶ್ವರ್ಯವನ್ನು ಹಂಚುತ್ತವೆ. ನಮ್ಮ ದೇಶದಲ್ಲಿ ಐಶ್ವರ್ಯ ಕೆಲವೇ ಕಡೆ ಕೇಂದ್ರಿತವಾಗಬಾರದು ಎನ್ನುವಂತಿದ್ದರೆ ಕೇಂದ್ರೀಯ ಉದ್ಯೋಗಗಳನ್ನು ಮೊದಲು ನಾಶ ಮಾಡಬೇಕು. ನಮ್ಮದು ಬಡ ದೇಶ. ನಮಗೆ ಬೇಕಾದುದು ಐಶ್ವರ್ಯದ ಹಂಚಿಕೆ. ಆದುದರಿಂದ ನಾವು ವಿಕೇಂದ್ರಿತ ಉದ್ಯೋಗಗಳನ್ನೇ ಅವಲಂಬಿಸಬೇಕು.

ಇದಕ್ಕೆ ಇನ್ನೊಂದು ಮಾರ್ಗವೂ ಇದೆ. ರಷ್ಯಾ ಅದನ್ನು ಮಾಡಿದೆ. ಮೊದಲು ಒಂದು ಕೇಂದ್ರದಲ್ಲಿ ಐಶ್ವರ್ಯವನ್ನು ಉತ್ಪತ್ತಿ ಮಾಡಿ, ಆಮೇಲೆ ಸರಕಾರದ ಮೂಲಕ ಅದನ್ನು ದೇಶದಲ್ಲಿ ಹಂಚುತ್ತೇವೆ ಎನ್ನುತ್ತಾರೆ. ಅಲ್ಲಿ ಕೇಂದ್ರಿತವಾಗುವುದು ಐಶ್ವರ್ಯವಲ್ಲ, ಅಧಿಕಾರ. ಐಶ್ವರ್ಯ ಉತ್ಪತ್ತಿಯಾದ ಮೇಲೆ ಅದನ್ನು ಹಂಚುವವರು ಯಾರು? ಅಧಿಕಾರವಿರುವವರು ತಾನೆ? ಆದುದರಿಂದ ಅಧಿಕಾರವಾಗಲಿ, ಐಶ್ವರ್ಯವಾಗಲಿ ಯಾವುದು ಕೇಂದ್ರಿತವಾದರೂ ಅಪಾಯವೇ. ಅಮೆರಿಕಾ, ಇಂಗ್ಲೆಂಡುಗಳಲ್ಲಿ ಐಶ್ವರ್ಯ ಕೇಂದ್ರಿತವಾಗಿದೆ. ರಷ್ಯಾದಲ್ಲಿ ಅಧಿಕಾರ ಕೇಂದ್ರಿತವಾಗಿದೆ. ಹಿಂದುಸ್ಥಾನ ಬಡದೇಶ. ಇಲ್ಲಿ ಐಶ್ವರ್ಯೋತ್ಪತ್ತಿಯೂ ಆಗಬೇಕು, ಉತ್ಪತ್ತಿ ಮಾಡುವ ಕ್ರಮದಲ್ಲಿಯೇ ಹಂಚಿಕೆಯೂ ಆಗಬೇಕು. ಎಲ್ಲಿ ನಮಗೆ ದಿನಬಳಕೆಯ ಪದಾರ್ಥಗಳ ಉತ್ಪತ್ತಿ ಬೇಕೋ ಅಲ್ಲಿ ಕೇಂದ್ರೀಯ ಉತ್ಪಾದನಾ ಕ್ರಮ ಸಲ್ಲದು, ಅದು ವರ್ಜ್ಯ.

ಕೇಂದ್ರಿಯ ಉದ್ಯೋಗಗಳ ಸ್ಥಾನ :

ಲಾಭದಾಸೆಯಿಲ್ಲದ ಜನ, ಐಶ್ವರ್ಯ ಸಂಗ್ರಹ ಮಾಡದ ಜನ ಇದ್ದಲ್ಲಿ ಕೇಂದ್ರಿಯ ಉದ್ಯೋಗಗಳಿರಬೇಕು. ಅಥವಾ ಕೇಂದ್ರಿಯ ಉದ್ಯೋಗಗಳಲ್ಲಿ

ಇರುವ ಐಶ್ವರ್ಯ ಸಂಗ್ರಹ ಗುಣವನ್ನು ಮೊಟಕು ಮಾಡಬೇಕು. ಹೇಗೆ ಮಾಡುವುದು? ಈ ಉದ್ಯೋಗಗಳೆಲ್ಲವೂ ಸೇವಾ ಪ್ರಧಾನವಾಗಬೇಕು, ವಿದ್ಯುತ್ ಸಾಗಾಣಿಕೆ, ಅಂಚೆ ತಂತಿ, ಸುದ್ದಿ-ಸಮಾಚಾರ, ರಸ್ತೆ ಮುಂತಾದುವೆಲ್ಲ ಸೇವಾ ಕಾರ್ಯವಾಗಬೇಕು. ನಿಸ್ವಾರ್ಥಿಗಳ ಸರಕಾರ ಅವನ್ನು ನಡೆಸಬೇಕು. ನಮಗೆ ಮೋಟಾರು, ವಿಮಾನ ಬೇಕು ಎಂದರೆ ಸರ್ಕಾರ ಅವನ್ನು ನಿರ್ಮಿಸಬೇಕು, ಸರಕಾರ ನಡೆಸುವ ಉದ್ಯೋಗಗಳಲ್ಲಿ ನಷ್ಟ ವ್ಯರ್ಥ ಹೆಚ್ಚು ಎನ್ನಬಹುದು. ಸ್ವಲ್ಪ ಮಟ್ಟಿಗೆ ವ್ಯರ್ಥವಾದರೂ ಚಿಂತೆಯಿಲ್ಲ. ಹಾಗಲ್ಲದೆ ಐಶ್ವರ್ಯ ಸಂಗ್ರಹವಾಗಲು ಅವಕಾಶ ಕೊಟ್ಟರೆ ಅಪಾರ ವ್ಯರ್ಥವಾಗುತ್ತದಲ್ಲ. ಈ ಯುದ್ಧಗಳೆಲ್ಲ ಐಶ್ವರ್ಯ-ಅಧಿಕಾರಗಳ ಸಂಗ್ರಹದ ಫಲ. ಅಧಿಕಾರ, ಐಶ್ವರ್ಯಗಳ ಸಂಗ್ರಹ ಕೇಂದ್ರೀಯ ಉತ್ಪಾದನೆಯ ಪರಿಣಾಮ. ಕಳೆದ ಕೆಲವು ವರ್ಷಗಳಲ್ಲಿ ಎಷ್ಟು ಐಶ್ವರ್ಯ ಹಾಳಾಯಿತೋ ನೋಡಿ,

ಅನಿವಾರ್ಯವಾದರೆ ಮಾತ್ರ, ಕೇಂದ್ರೀಯ ಉದ್ಯೋಗವಿರಲಿ. ಇಲ್ಲದಿದ್ದರೆ ಬೇಡ. ಇದು ವಿಷವಿದ್ದಂತೆ. ನೀವು ಕ್ವಿನಾಯಿನ್ ತೆದುಕೊಳ್ಳುತ್ತೀರಿ. ವೈದ್ಯರು ಹೇಳಿದ ರೀತಿ ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಂಡರೆ ವಿಷವೂ ಹಿತವೇ. ವಿಷದಂಥ ಕೇಂದ್ರೀಯ ಉದ್ಯೋಗವನ್ನು ಸ್ಥಾಪಿಸಲೇಬೇಕಾದ ಪಕ್ಷದಲ್ಲಿ, ಅದಕ್ಕೊಂದು ಕೆಂಪು ಚೀಟಿ ಅಂಟಿಸಿ ವೈದ್ಯರು ಹೇಳಿದಷ್ಟು, ಅದೇ ರೀತಿ, ತೆಗೆದುಕೊಳ್ಳಬಹುದು! ಇಲ್ಲದಿದ್ದರೆ ಆಪತ್ತು ಸಿದ್ಧ. ಕೇಂದ್ರೀಯ ಉದ್ಯೋಗಗಳು ಸ್ವಭಾವತಃ ಸಮಾಜ ಕಂಟಕಗಳು. ಆದುದರಿಂದ ಅವುಗಳ ವ್ಯಾಪ್ತಿಯನ್ನು ಪರಿಮಿತಿಗೊಳಿಸಬೇಕು, ಹೇಗೆ? ಸಮಾಜಕ್ಕೆ ಇದು ಬೇಕೇಬೇಕು ಎಂಬಂತಿದ್ದರೆ, ಆ ಉದ್ಯೋಗದ ಸ್ವಭಾವವೇ ಸರ್ವಸಾಮಾನ್ಯದ್ದಾದರೆ ಆಗ ಅದನ್ನು ಕೈಗೊಳ್ಳಿ. ಉದಾ : ನೀರಿನ ಸರಬರಾಜು. ಸರಕಾರವೆ ನೀರಿನ ಸರಬರಾಜು ಮಾಡಬೇಕು. ಹೀಗೆ ದೀರ್ಘದೃಷ್ಟಿಯ ಕೆಲಸಗಳನ್ನು ಸರಕಾರಕ್ಕೆ ವಹಿಸಬೇಕು.

ವೆಚ್ಚ-ಲಾಭ :

ಕೆಲವರು ಬೆಲೆಯ ಮಾತನ್ನು ಆಡುತ್ತಾರೆ. ಕೇಂದ್ರೀಯ ಉದ್ಯೋಗಗಳಾದರೆ ಉತ್ಪಾದನೆ ಅಗ್ಗವಾಗುತ್ತದೆ. ಆದುದರಿಂದ ಕೇಂದ್ರೀಯ ಉದ್ಯೋಗಗಳು ಉತ್ತಮ ಎನ್ನುತ್ತಾರೆ. ಯಾವಾಗಲೂ ಹೀಗೆ ಅಲ್ಲ. ರೈಲು, ಅಂಚೆತಂತಿ, ವಿದ್ಯುತ್, ನೀರಾವರಿ ಇಂಥವು ಸಹಜವಾಗಿಯೇ ಏಕಾಧಿಕಾರದಲ್ಲಿರಬೇಕು. ಇವು ಸಾರ್ವಜನಿಕ ಸೌಕರ್ಯಕ್ಕಾಗಿ ಲಾಭದೃಷ್ಟಿಯಿಲ್ಲದೆ ಸೇವಾರ್ಥ ನಡಸಲ್ಪಡಬೇಕು. ಸರಕಾರ ಇವನ್ನು ನಡೆಸಿದರೆ ಲಾಭದೃಷ್ಟಿಯಿಲ್ಲದೆ ಹೋಗುತ್ತದೆ. ಖಾಸಗಿಯವರು ಮಾಡಿದರೆ ಲಾಭವೇ ಮುಖ್ಯ.

ಖಾಸಗಿ ವ್ಯಕ್ತಿಗಳಿಗೆ ಲಾಭವೇ ಮುಖ್ಯೋದ್ದೇಶ. ಬೆಲೆ ಅಥವಾ ವೆಚ್ಚ

ಹೆಚ್ಚಾದರೆ ಲಾಭ ಕಡಮೆ. ಬೆಲೆ ಕಡಮೆಯಾದರೆ ಲಾಭ ಹೆಚ್ಚು. ಆದುದರಿಂದ ಕೇಂದ್ರೀಯ ಉದ್ಯೋಗಗಳಲ್ಲಿ ಸಾಧ್ಯವಾದಷ್ಟು ವೆಚ್ಚವನ್ನು ತಗ್ಗಿಸುತ್ತಾರೆ. ಇದಕ್ಕೆ ಸುಲಭವಾದ ಉಪಾಯ ಕಡಮೆ ಕೂಲಿ ಕೊಡುವುದು, ಕಚ್ಚಾ ಮಾಲನ್ನು ಅಗ್ಗವಾಗಿ ಕೊಳ್ಳುವುದು, ಮೇಲ್ವಿಚಾರಣೆಯ ವೆಚ್ಚವನ್ನು ತಗ್ಗಿಸುವುದು. ಕಡಮೆ ಕೂಲಿ ಅಗ್ಗದ ಮಾಲು ಆದರೆ ಆ ಉದ್ಯೋಗದ ವ್ಯವಸ್ಥಾಪಕ-ಮಾಲಿಕ ಭಾಗ್ಯವಂತನಾದ; ಉಳಿದವರು ಬಡವರಾದರು. ಐಶ್ವರ್ಯದ ವಿಷಮ ವಿಭಾಜನೆ ತಲೆತೋರಿಸುತ್ತದೆ.

ಗ್ರಾಮೋದ್ಯೋಗಗಳಲ್ಲಿ ಹೀಗಲ್ಲ. ಧಾರಣೆ ಹೆಚ್ಚಾದರೂ ಲಾಭದ ಮಾತಿಲ್ಲ. ಪ್ರತಿಯೊಬ್ಬರಿಗೂ ಸರಿಯಾದ ಪಾಲು ಸಿಗುತ್ತದೆ. ಆದುದರಿಂದ ಗ್ರಾಮೋದ್ಯೋಗಗಳಲ್ಲಿ ಧಾರಣೆ ಹೆಚ್ಚಾದರೂ ಚಿಂತಿಸಬೇಕಾಗಿಲ್ಲ. ನಾವು ಮಾಡಬೇಕಾದುದು ಒಂದು ಕಡೆ ಐಶ್ವರ್ಯ ಹೆಚ್ಚು. ಉಳಿದೆಲ್ಲ ಕಡೆ ಬರಿಗೈ ಆಗದಂತೆ ನೋಡಿಕೊಳ್ಳುವುದು.

ಬೆಲೆಯ ನಿಯಂತ್ರಣ :

ಬೆಲೆಯ ನಿಗದಿಯಲ್ಲಿ ಭಾರಿ ಉದ್ಯೋಗಗಳನ್ನೂ, ಅಲ್ಪೋದ್ಯೋಗಗಳನ್ನೂ ಒಂದೇ ರೀತಿ ಕಾಣಬಾರದು. ನಿಯಂತ್ರಣ ಮಾಡುವ ಮುನ್ನ ಆ ಉದ್ಯೋಗದ ಲಕ್ಷಣವೇನೆಂಬುದನ್ನು ಅರಿತುಕೊಳ್ಳಬೇಕು, ಎಲ್ಲಾ ಕ್ಷೇತ್ರಗಳಲ್ಲಿಯೂ ನಿಯಂತ್ರಣ ಒಳ್ಳೆಯದಲ್ಲ. ಒಂದು ಉದ್ಯೋಗವು ಸಮಾಜ ಕಂಟಕವಾಗಿದ್ದರೆ ಅದು ಭಾರಿ ಉದ್ಯೋಗಕ್ಕೆ ಯೋಗ್ಯವೆ ಅಲ್ಲವೆ ಎಂಬುದನ್ನು ನಿರ್ಧರಿಸುವುದು ಅದರ ಲಕ್ಷಣ. ಅದು ಸಮಾಜ ಕಂಟಕವೆ ಅಲ್ಲವೆ?

ಸ್ವಾಭಾವಿಕವಾಗಿಯೇ ಸರ್ವಮಾನ್ಯ ಹಾಗೂ ಏಕಾಧಿಕಾರದ ಲಕ್ಷಣದ ಉದ್ಯೋಗಗಳಿರುತ್ತವೆ. ಅಲ್ಲಿ ಹೇರಳವಾಗಿ ಬಂಡವಾಳವೂ ಬೇಕು. ಅಂಥವು ಕೇಂದ್ರೀಯ ಉದ್ಯೋಗಗಳಾಗಲಿ. ಉದಾ : ಕಲ್ಲಿದ್ದಲು, ಗಣಿಗಳು, ರೈಲು ಮುಂತಾದುವಕ್ಕೆ ಬಹಳ ಬಂಡವಾಳ ಬೇಕು, ಹೆಚ್ಚು ಜನ ಕೆಲಸಗಾರರು ಬೇಕು. ಅಂಥ ಉದ್ಯೋಗಗಳನ್ನು ಖಾಸಗಿ ಜನಕ್ಕೆ ಬಿಡಬಾರದು; ಸರಕಾರವೇ ನಡೆಸಬೇಕು.

ಉದ್ಯೋಗದಲ್ಲಿ ಪ್ರಜಾತಂತ್ರ :

ಬಟ್ಟೆ ಗಿರಣಿಗಳಲ್ಲಿ ಸಾವಿರಾರು ಜನ ನಿರಂಕುಶ ಯಜಮಾನನ ಕೈಕೆಳಗೆ ಕೆಲಸ ಮಾಡುತ್ತಾರೆ. ಆದುದರಿಂದ ಅವು ಪ್ರಜಾತಂತ್ರಕ್ಕೆ ವಿರುದ್ಧ. ಅವನು ಹೇಳಿದುದೇ ಶಾಸನ; ಅದನ್ನು ನಡೆಸಲೇಬೇಕು. ಇಂಥ ಅಸಾಮಾಜಿಕ ವ್ಯವಸ್ಥೆಗೆ ಪ್ರಜಾತಂತ್ರದಲ್ಲಿ ಎಡೆಯಿಲ್ಲ. ಎಲ್ಲೆಲ್ಲೂ ಶುದ್ಧ ಪ್ರಜಾತಂತ್ರವಿರಬೇಕು. ರಾಜಕೀಯ ದೃಷ್ಟಿಯಿಂದಲೂ ಕೇಂದ್ರೀಯ ಉದ್ಯೋಗಗಳು ಸರಿಯಿಲ್ಲ.

ನಮಗೆ ಬೇಕಾದುದು ಸಹಕಾರಿ – ಸಮಾಜ. ಸ್ಪರ್ಧೆ ಎಂದರೆ ಬಲಾಬಲಗಳ

ಹಿಂಸಾ ರೀತಿ. ಅದು ನಮಗೆ ಬೇಡ. ನಮ್ಮ ಗುರಿ ಸಹಕಾರ; ಸ್ಪರ್ಧೆಯು ವಿನಾಶನ. ಸುಮ್ಮನೆ ಧಾರಣೆ ನಿಗದಿ ಮಾಡಿದ ಮಾತ್ರಕ್ಕೇ ಸ್ಪರ್ಧೆ ಸಾಯದು.

ರೋಗಿಗಳ ಸ್ಥಿತಿಯನ್ನು ಪರೀಕ್ಷಿಸಿ ವೈದ್ಯ ಅತ್ಯಲ್ಪ ಪ್ರಮಾಣದಲ್ಲಿ ವಿಷವನ್ನೆ ಔಷಧವಾಗಿ ಕೊಡುವಂತೆ ಪ್ರತಿಯೊಂದು ಉದ್ಯೋಗವನ್ನೂ ಪರೀಕ್ಷಿಸಿ, ಅದನ್ನು ಕೇಂದ್ರೀಕರಿಸಿದರೆ ಒಳ್ಳೆಯದೋ ಕೆಟ್ಟುದೋ ನೋಡಬೇಕು. ಕೇಂದ್ರಿಕರಣ ಬೇಡ ಎಂದರೆ ಯಂತ್ರವೇ ಬೇಡ ಎಂದಲ್ಲ. ಮನುಷ್ಯನು ಯಂತ್ರದ ಕೈ ಗೊಂಬೆ, ಅಡಿಯಾಳು ಆಗಬಾರದು, ಅಷ್ಟೇ. ಯಂತ್ರ ಮನುಷ್ಯನ ಕೈ ಮೀರಿದರೆ ಹಿಂಸೆ ಖಂಡಿತ.

ಹಿಂಸೆ – ಶಾಂತಿ :

ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ಬಯಕೆ–ಪೂರಯಿಕೆಗಳ ತತ್ವವನ್ನು ಓದುತ್ತೇವೆ. ಆದರೆ ವಾಸ್ತವ ಜಗತ್ತಿನಲ್ಲಿ ಅದರಲ್ಲಿಯೂ ಸ್ಪರ್ಧಾಮಯ ಲೋಕದಲ್ಲಿ, ಅಂಥ ನಿಯಮ ಯಾವುದೂ ಕಾಣಬರುತ್ತಿಲ್ಲ. ಒಂದು ಯಂತ್ರವಿದ್ದರೆ ಅದರ ಶಕ್ತಿಯಿದ್ದಷ್ಟೂ ಅದು ಉತ್ಪತ್ತಿ ಮಾಡಬೇಕು. ಉದಾ : ಒಂದು ಚಪ್ಪಲಿ ಕಾರಖಾನೆ. ೩೦೦ ಜೊತೆ ಚಪ್ಪಲಿಗಳನ್ನು ಜನ ಬಯಸುತ್ತಾರ. ಆದರೆ ೫೦೦ ಜೊತೆ ಚಪ್ಪಲಿಗಳನ್ನು ಮಾಡಿದರೇನೆ ಕಾರಖಾನೆಗೆ ಲಾಭ ಸಿಗುವುದು. ಉತ್ಪಾದನದ ವೆಚ್ಚ ಕಡಮೆಯಾಗಬೇಕಾದರೆ ೫೦೦ ಜೊತೆ ಮೆಟ್ಟನ್ನು ಮಾಡಲೇ ಬೇಕು; ೫೦೦ಕ್ಕೆ ಗಿರಾಕಿ ಇರಲಿ ಇಲ್ಲದಿರಲಿ. ಕಾರಖಾನೆ ಒಡೆಯನಿಗೆ ಬೇಕಾದುದು ಲಾಭ. ಆದುದರಿಂದ ಆದಷ್ಟೂ ಉತ್ಪಾದನದ ವೆಚ್ಚ ಕಡಮೆಯಿರಬೇಕೆಂದು ಅವನ ಪ್ರಯತ್ನ. ಗಿರಾಕಿಯಿರಲಿ ಬಿಡಲಿ ೫೦೦ಜೊತೆ ಮೆಟ್ಟನ್ನು ಅವನು ಮಾಡಿಸಿಯೆ ಮಾಡಿಸುತ್ತಾನೆ. ಆಗ ಅವನ ವೆಚ್ಚ ತಳಕ್ಕೆ ಬರುತ್ತದೆ. ಆಮೇಲೆ ಅವಕ್ಕೆ ಗಿರಾಕಿಯನ್ನು ಹುಡುಕುತ್ತಾನೆ. ಹೀಗೆ ಯಂತ್ರದ ವೇಗ ಮತ್ತು ಶಕ್ತಿಗಳಿಗೆ ಮನುಷ್ಯ ಗುಲಾಮನಾಗುತ್ತಾನೆ. ಬಯಕೆ–ಬೇಡಿಕೆಗಳ ಗೊಡವೆಯೆ ಇಲ್ಲ. ಆಗ ಪೇಟೆಯ ಬೇಟೆ, ಗಿರಾಕಿಗಳ ಶೋಧನೆ ನಡೆಯಬೇಕು ಈ ಹೆಚ್ಚಿನ ಜೊತೆಗಳಿಗೆ. ಅದಕ್ಕಾಗಿ ಯುದ್ಧ. ಮೊದಲು ಉತ್ಪಾದನೆ, ಆಮೇಲೆ ಕೈಯಲ್ಲಿ ಕತ್ತಿ, ಬಾಯಲ್ಲಿ ವ್ಯಾಪಾರ – ಹೀಗೆ ಗಿರಾಕಿಗಳನ್ನು ಹುಡುಕುವುದು. ಕೊಳ್ಳುತ್ತೀಯೋ ಕೊಲ್ಲಲೋ? ಯುದ್ಧಗಳಿಗೆಲ್ಲ ಈ ಕೇಂದ್ರೀಯ ಉದ್ಯೋಗಗಳೇ ಕಾರಣ ಎಂಬುದು ಸ್ಪಷ್ಟ. ಆದುದರಿಂದ ಈ ಭಾರಿ ಉದ್ಯೋಗಗಳಿಗೆ ಒಂದು ಮಿತಿಯನ್ನು ಕಲ್ಪಿಸಬೇಕಾದುದು ಅಗತ್ಯ.

ಚರ್ಮ ಹದಮಾಡುವ ಕೈಗಾರಿಕೆಯಂಥದರಲ್ಲಿ ಬೃಹತ್ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಇಂಥ ಕೈಗಾರಿಕೆಗಳೂ ಇವೆ. ಅಲ್ಲಿ ಅದನ್ನು ಉಪಯೋಗಿಸೋಣ. ಆದರೆ ಖಾಸಗಿ ಒಡೆತನದಲ್ಲಿ ಬೇಡ. ಕ್ರೋಮ್ ಚರ್ಮ ಬೇಕಾದರೆ ಸಹಕಾರ ಸಂಘಗಳ ಮೂಲಕ ಮಾಡಿ ಚಮ್ಮಾರರಿಗೆ ಚರ್ಮವನ್ನು

ಮೂಲಕ್ರಿಯೆಕ್ಕೆ ಕೊಡೋಣ.

ಇದೇ ರೀತಿ ವೈಯುಕ್ತಿತವಾಗಿ ಅಥವಾ ಚಿಕ್ಕ ಪ್ರಮಾಣದಲ್ಲಿ ಮಾಡಬಹುದಾದವೂ ಎಷ್ಟೋ ಇವೆ. ಉದಾ : ೧೬೦೦ ಡಿಗ್ರಿ ಶಾಖದ ಭಟ್ಟಿಯನ್ನು ಬಂಡವಾಳ, ವಿದ್ಯುತ್ತನ್ನು ಇಲ್ಲದೆ ಕಟ್ಟಲಾಗುವುದಿಲ್ಲ. ಅದು ಕೇಂದ್ರಿತ ವಿಧಾನ. ವಿದ್ಯುತ್ತನ್ನು ಬಳಸೋಣ, ಆದರೆ ಲಾಭಕ್ಕಾಗಿ ಅಲ್ಲ. ಸಮಾಜವನ್ನು ಶೋಷಣೆ ಮಾಡಲು ಇದೊಂದು ಸಾಧನವಾಗಬಾರದು.

೨೧. ಆಡಳಿತದ ಕೆಲಸ

ಮನುಷ್ಯನ ಕಾರ್ಯಕಲಾಪಗಳಲ್ಲಿ ಒಂದು ದೀರ್ಘದೃಷ್ಟಿ, ಇನ್ನೊಂದು ತಾತ್ಕಾಲಿಕ ದೃಷ್ಟಿ ಇರುತ್ತವೆ ಎಂದು ನೋಡಿದೇವೆ. ವ್ಯಕ್ತಿಗೆ ಸಾಧಾರಣ ವಾಗಿ ತನಗೆ ಸದ್ಯ ಸಿಗುವ ಲಾಭದ ದೃಷ್ಟಿಯೇ ಹೆಚ್ಚು. ತನ್ನ ಕಾಲವಾದ ಮೇಲೆ ಫಲ ಕೊಡುವ ಕೆಲಸದಲ್ಲಿ ಅವನಿಗೆ ಆಸಕ್ತಿ ಕಡಮೆ. ನಾಡಿದ್ದು ಬರುವ ಒಂದಾಣೆಗಿಂತ ನಾಳೆ-ಇವೊತ್ತೇ ಮೂರು ಕಾಸು ಬಂದರೆ, ಅವನಿಗೆ ಅದೇ ತೃಪ್ತಿ. ಆದುದರಿಂದ ಇಡೀ ಸಮಾಜದ ಹಿತಕ್ಕಾಗಿ ದೀರ್ಘಾಲೋಚನೆ ಮಾಡಲು ಕೆಲವರನ್ನಾದರೂ ಪ್ರತ್ಯೇಕವಾಗಿ ನೇಮಿಸುವುದು ಅಗತ್ಯವಾಗುತ್ತದೆ. ಇದೇ ರಾಷ್ಟ್ರೀಯ ಸರಕಾರದ ಕೆಲಸ.

ಸಾಧಾರಣ ಮನುಷ್ಯನ ಶಕ್ತಿ-ಸಾಮರ್ಥ್ಯಗಳಿಗೆ ಎಲ್ಲಾ ಕೆಲಸಗಳನ್ನೂ ಮಾಡಲು ಸಾಧ್ಯವಿಲ್ಲ. ಆದರೆ ಆ ಕೆಲಸ ಅಗತ್ಯ. ಅಂಥ ಕೆಲಸಗಳೆಲ್ಲ ಸರ ಕಾರದ ಪಾಲಿಗೆ. ಸರಕಾರಕ್ಕೆ ಜನಬಲ-ಧನಬಲ ಎರಡೂ ಅಪಾರ. ಸಂಶೋಧನೆ, ಪ್ರಯೋಗ, ಜ್ಞಾನ ಪ್ರಚಾರಗಳನ್ನು ವೈಯಕ್ತಿಕವಾಗಿ ಒಬ್ಬ ರೈತನಾಗಲಿ, ಗ್ರಾಮೋದ್ಯೋಗಿಯಾಗಲಿ ಮಾಡಲಾರ.

ಇದುವರೆಗೆ ಸರಕಾರದ್ದಾಗಲಿ, ಸಾರ್ವಜನಿಕರದ್ದಾಗಲಿ ಶಕ್ತಿ, ಸಾಮರ್ಥ್ಯ ಉತ್ಸಾಹ-ಬಲ ಎಲ್ಲವೂ ಗಿರಣಿ-ಕಾರ್ಖಾನೆ ಪದಾರ್ಥಗಳನ್ನು ಮಾರುವುದ ರಲ್ಲಿಯೇ ತೊಡಗಿದೆ. ಇನ್ನು ಮುಂದೆ ಗ್ರಾಮೋದ್ಯೋಗದ ಆಧಾರದ ಮೇಲೆ ಗ್ರಾಮಸ್ವಾವಲಂಬನೆಯನ್ನು ನಿರ್ಮಿಸಲು ಈ ಶಕ್ತಿಯೆಲ್ಲವೂ ಉಪಯೋಗವಾಗ ಬೇಕು. ಈಗ ಹಳ್ಳಿಯವರಿಗೆ ಇರುವ ತೊಂದರೆ, ಅಡ್ಡಿ-ಆತಂಕಗಳನ್ನೆಲ್ಲ ನಿಶ್ಚಯಪೂರ್ವಕ ಪ್ರಯತ್ನ ಮಾಡಿ ನಿವಾರಿಸಬೇಕು.

ನೀರಾವರಿ :

ಎಲ್ಲಾ ಹಳ್ಳಿಗಳಿಗೂ ನೀರಾವರಿಯ ಅನುಕೂಲತೆ ಬೇಕು. ಇದನ್ನು ಎಷ್ಟು ಒತ್ತಿ ಹೇಳಿದರೂ ಕಡಮೆಯೆ. ಕೃಷಿಯ ಪ್ರಗತಿಗೆ ಇದೇ ಆಧಾರ. ಇದರ ಹೊರತು ಕೃಷಿ ಬರೀ ಜೂಜಾಟ. ಬಾವಿಗಳನ್ನು ತೋಡಿಸುವುದು, ಕೆರೆಗಳನ್ನು ಆಳ-ಅಗಲ ಮಾಡುವುದು, ಕಾಲುವೆ ತೋಡುವುದು ಮುಂತಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಭತ್ತದ ಗಿರಣಿ, ಹಿಟ್ಟಿನ ಗಿರಣಿಗಳಲ್ಲಿರುವ ಇಂಜಿನುಗಳನ್ನು ಸರಕಾರ ತೆಗೆದುಕೊಂಡು ಕೊಳವೆ ಬಾವಿ, ಸುರಂಗ ಬಾವಿ

ಗಳಿಂದ ನೀರೆತ್ತಲು ಉಪಯೋಗಿಸಬಹುದು. ನೀರಿನ ಅನುಕೂಲವಿಲ್ಲದೆ ಗೊಬ್ಬರ ಹಾಕಿದರೆ ಪ್ರಯೋಜನವಿಲ್ಲ. ನೀರಿಲ್ಲದಿದ್ದರೆ ಗೊಬ್ಬರದಿಂದ ಅಪಾಯ ವಾಗುತ್ತದೆ.

ಭೂ ವ್ಯವಸ್ಥೆ :

ಸಾಗುವಳಿ ಭೂಮಿಯನ್ನು ಹೆಚ್ಚಿಸಬೇಕು. ಹುಲುಸು ಮಾಡಲೂ ಬೇಕು. ನೆಲ ಕೊಚ್ಚಿಹೋಗದಂತೆ ತಡೆಯಲು ಅಡ್ಡಕಟ್ಟೆ ಹಾಕಿ ನೀರು ನಿಂತು ನೆಲ ಹುದಲಾಗದಂತೆ ಕಾಲುವೆ ತೋಡಿ, ಮೆಟ್ಟಲು ಕಟ್ಟಿ ನೆಲದ ಹುಲುಸನ್ನು ಕಾಯಬೇಕು. ಏನೇ ಮಾಡಿದರೂ, ಜನಕ್ಕೆ ದನಕ್ಕೆ ಅನ್ನ-ಮೇವು ಒದಗಿಸಶ ವುದು ಭೂಮಿಯೇ, ಮತ್ತಾವುದೂ ಅಲ್ಲ. ಭೂಮಿಯ ಸಾರ ಕಡಮೆಯಾದರೆ ಬೆಳೆಯೂ ಹೀನವಾಗುತ್ತದೆ. ಅದುದರಿಂದ ಜನರ ಅರೋಗ್ಯ ಕೆಡುತ್ತದೆ. ಆದ ದರಿಂದಲೇ ಆಹಾರಶಾಸ್ತ್ರ ಪಂಡಿತರು ಆರೋಗ್ಯಕ್ಕೂ ಕೃಷಿಗೂ ಬಿಡದ ಗಂಟು ಎನ್ನುವುದು.

ಬಿಹಾರ ಮೊದಲಾದ ಪ್ರದೇಶಗಳಲ್ಲಿ ಮೊದಲು ಭತ್ತ ಮುಂತಾದ ಧಾನ್ಯ ಗಳನ್ನು ಬೆಳೆಯುತ್ತಿದ್ದ ನೆಲದಲ್ಲಿ ಈಗ ವ್ಯಾಪಾರದ ಬೆಳೆಯಾದ ಕಬ್ಬು, ಹೊಗೆ ಸೊಪ್ಪು, ದೊಡ್ಡ ಹತ್ತಿಗಳನ್ನು ಬೆಳೆಯುತ್ತಿದ್ದಾರೆ. ಹಣ ಹೆಚ್ಚು ಬರುವ ದಾರಿ ಹುಡುಕಿದ್ದಾರೆ. ಅದೇ ರೀತಿ ಮಲಬಾರಿನಲ್ಲಿ ಸಾವಿರ ಸಾವಿರ ಎಕರೆ ಭತ್ತದ ಗದ್ದೆಯಲ್ಲಿ ಈಗ ತೆಂಗಿನ ತೋಟ ಬೆಳೆದಿದೆ. ಈ ತೆಂಗಿನಕಾಯಿ ಎಣ್ಣೆ ಗಿರಣಿಗಳಿಗೆ ಸರಬರಾಜಾಗುತ್ತದೆ. ಆ ಎಣ್ಣೆಯಿಂದ ಆಗುವುದು ಸಾಬೂನು. ಮೊದಲು ಗದ್ದೆ ಮಾಡಿ ತನ್ನ ಮನೆಯ ಅಕ್ಕಿಯನ್ನು ತಿನ್ನುತ್ತಿದ್ದ ಬೇಸಾಯ ಗಾರ, ಈಗ ಬ್ರೆಜಿಲ್ ಗಿರಣಿ ಅಕ್ಕಿಯನ್ನು ತಿಂದು ಕಾಯಿಲೆ ಬೀಳುತ್ತಾನೆ. ರೈತರು ಪ್ರಾಥಮಿಕ ಆವಶ್ಯಕ ಬೆಳೆಗಳನ್ನು ಬೆಳೆಯುವಂತೆ ಮಾಡಬೇಕಾದುದು ಸರಕಾರದ ಕರ್ತವ್ಯ. ಅನ್ನ-ಬಟ್ಟೆಗಳ ಉತ್ಪತ್ತಿ ಸಾಕಷ್ಟಾಗಿ ಹೊಲ ಮಿಕ್ಕರೆ ಆಗ ಅದನ್ನು ವ್ಯಾಪಾರದ ಬೆಳೆಗಳಿಗೆ ಉಪಯೋಗಿಸಬಹುದು. ಉತ್ತಮವಾದ ಭತ್ತದ ಗದ್ದೆಗಳು ವಾಣಿಜ್ಯ ಬೆಳೆಯ ತೋಟಗಳಾಗಿ, ಇತ್ತ ಜನ ಹೊಟ್ಟೆಗಿಲ್ಲದೆ ಸಾಯುವಂಥ ಸ್ಥಿತಿ ಬಂದಿರುವುದು ಸರಕಾರದ ಕರ್ತವ್ಯಲೋಪದ ಅಪರಾಧದಿಂದ ಎಂಬುದನ್ನು ಹೇಳಬೇಕೇ ! ಒಂದು ಯೋಜನೆಮಾಡಿ ಇಂಥಿಂಥ ಬೆಳೆ ಬೆಳೆಯ ಬೇಕೆಂದು ಲೈಸನ್ಸ್ ಪದ್ಧತಿಯನ್ನು ರೂಢಿಗೆ ತರಬೇಕು.

ಸಂಶೋಧನೆ :

ವ್ಯವಸಾಯದ ಸಂಶೋಧನೆಯೆಲ್ಲಾ ಆಹಾರದ ಬೆಳೆಯನ್ನೂ, ಗ್ರಾಮೋ ದ್ಯೋಗದ ಮೂಲವಸ್ತುವನ್ನೂ ಅಭಿವೃದ್ಧಿಗೊಳಿಸುವುದಕ್ಕಾಗಿ ಮೀಸಲಾಗಿರ ಬೇಕು. ಹಣದ ಬೆಳೆಯನ್ನು ಪ್ರೋತ್ಸಾಹಿಸಲಾಗದು. ಹೊಗೆಸೊಪ್ಪು, ಮರಗಬ್ಬು,

ದೊಡ್ಡ ಹತ್ತಿಗಳ ಸಂಶೋಧನೆ ಅಗತ್ಯವಲ್ಲ,
ಬಾಡಿಗೆ ಬಂಕ ಮೊದಲು ಮಾನ್ಯ :

ಈಗ ಗಿರಣಿ ಪದಾರ್ಥಗಳಿಗೇ ಪಕ್ಷಪಾತ ತೋರುತ್ತಿದ್ದಾರೆ. ರಿಯಾಯಿತಿ ಬಾಡಿಗೆ, ಸಾಗಾಣಿಕೆಯ ಮೊದಲ ಮಾನ್ಯ ಗಿರಣಿಗಳಿಗೆ. ಗ್ರಾಮೋದ್ಯೋಗದ ಕೈಕಾಗದ, ಎಣ್ಣೆ ದೀಪ ಮುಂತಾದವನ್ನು ರೈಲಿನಲ್ಲಿ ಕಣ್ಣೆತ್ತಿಯೇ ನೋಡರು. ಇದರಿಂದ ಆ ಉದ್ಯೋಗಗಳಲ್ಲಿ ಪದಾರ್ಥ ಮುಂದೆ ಸಾಗದೆ ನಿಂತುಬಿಡುತ್ತದೆ. ಯುದ್ಧ ಕಾಲದಲ್ಲಿ ಗ್ರಾಮೋದ್ಯೋಗಗಳಿಗೆ ಒಳ್ಳೆಯ ಅವಕಾಶ. ಆಗ ಅವನ್ನು ಬೆಳೆಯಗೊಡದಂತೆ ರೈಲಿನ ಧೋರಣೆ ಹಿಸುಕಿಹಾಕಿತು. ಎಲ್ಲಾ ವಿಷಯಗಳಲ್ಲಿ ಹೇಗೋ ಇದರಲ್ಲಿಯೂ ಹಾಗೇ. ಗ್ರಾಮೋದ್ಯೋಗದ ಬಗ್ಗೆ ಧೋರಣೆ ಬದಲಾಗಬೇಕು. ಇವಕ್ಕೇ ಪ್ರಥಮಾವಕಾಶ ಸಲ್ಲಬೇಕು. ಗ್ರಾಮೋದ್ಯೋಗ ಗಳಿಗೆ ಪೌರಸಭೆಯ ಸುಂಕ, ವಿಶೇಷ ತೆರಿಗೆ ಮುಂತಾದವನ್ನು ಹಾಕಬಾರದು.

ಗೋಸಂವರ್ಧನ :

ಸರಕಾರ ಗೋಸಂವರ್ಧನ ಕಾರ್ಯವನ್ನು ಇನ್ನೂ ಹೆಚ್ಚಾಗಿ ಕೈಗೊಳ್ಳ ಬೇಕು. ಎಲ್ಲೆಲ್ಲಿ ಸ್ಥಳೀಯ ತಳಿ ಇದೆಯೋ ಅಲ್ಲಿ ಅದನ್ನು ಕಾಪಾಡಿ ವೃದ್ಧಿ ಗೊಳಿಸುವ ಪ್ರಯತ್ನ ನಡೆಯಬೇಕು. ಅಗತ್ಯವಿದ್ದ ಕಡೆ ಬೀಜದ ಹೋರಿ ಗಳನ್ನು ಕಾಪಾಡಲು ಪ್ರೋತ್ಸಾಹ ನೀಡಬೇಕು. ಗೋ ಸೇವಾ ಸಂಘದ ಮೂಲಕ ಈ ಕೆಲಸ ನಡೆದರೆ ಒಳಿತು.

ಸಾಗಾಣಿಕೆ – ರಸ್ತೆ :

ಹಳ್ಳಿಗಳಲ್ಲಿ ಮೋಟಾರು ಓಡುವ ರಸ್ತೆಗಳಿಗೆಲ್ಲ ಟಾರು ಬಳಿಯಬೇಕು. ಇದರ ವೆಚ್ಚ ಮೋಟಾರು ಒಡೆಯರಿಂದ ಬರಬೇಕು. ಈ ಬಗೆಯ ರಸ್ತೆಗಳ ನಿರ್ಮಾಣದ, ಅವುಗಳ ವ್ಯವಸ್ಥೆಯ ವೆಚ್ಚವೆಲ್ಲವೂ ಹುಟ್ಟುವಳಿಯಾಗುವಂತೆ ಮೋಟಾರುಗಳ ಮೇಲೆ, ಪೆಟ್ರೋಲಿನ ಮೇಲೆ ತೆರಿಗೆ, ಸುಂಕ ಹಾಕಬೇಕು. ಟಾರು ಹಾಕದ ರಸ್ತೆಗಳಲ್ಲಿ ಮೋಟಾರು ಓಡಲು ಬಿಡಬಾರದು. ವಿಶೇಷ ಅಪ್ಪಣೆಯ ಮೇಲೆ ಗಂಟೆಗೆ ೫ ಮೈಲಿ ವೇಗದಲ್ಲಿ ಹೋಗಲು ಅವಕಾಶ ಕೊಡಬಹುದು.

ಅರಣ್ಯ :

ಅರಣ್ಯ ಸಂರಕ್ಷಣೆಯ ವಿಧಾನವನ್ನು ಸರಕಾರ ಬದಲಿಸಲೇಬೇಕು. ಕಾಡಿನಲ್ಲಿ ಹುಟ್ಟುವಳಿಯಾಗುವ ತೇಗ, ಅರಗು ಇತ್ಯಾದಿಗಳನ್ನು ಜನರು ಉಪಯೋಗಿಸ ಬಹುದಾದ ರೂಪದಲ್ಲಿ ಒದಗಿಸಬೇಕು, ಅಡವಿಯ ಸುತ್ತ ಇರುವ ಹಳ್ಳಿಗಳ ಜನರ ಅವಶ್ಯಕತೆಗಳನ್ನು ಗಮನಿಸಿ ಅರಣ್ಯ ಯೋಜನೆ ಮಾಡಬೇಕು. ಮುಖ್ಯ ವಾಗಿ ಕಾಡು ಎರಡು ವಿಧ : ೧. ತೇಗದ ಕಾಡು; ೨ ಸೌದೆ-ಹುಲ್ಲು ಬೆಳೆವ ಅಡವಿ. ತೇಗದ ಕಾಡನ್ನು ದೀರ್ಘಕಾಲ ಯೋಜನೆಗಳಿಂದ ವೃದ್ಧಿ ಮಾಡಬೇಕು. ಎರೆ

ಡನೆ ಬಗೆಯ ಅಡವಿಗಳನ್ನು ಜನರ ಉಪಯೋಗಕ್ಕೆ ಉಚಿತವಾಗಿಯೋ, ಅತಿ ಸುಲಭದರಲ್ಲಿಯೋ ಕೊಡಬೇಕು. ತಾಳೆಬೆಲ್ಲ, ಕೈಕಾಗದ, ಮಣ್ಣಿನ ಪಾತ್ರೆ ಇತ್ಯಾದಿ ಗ್ರಾಮೋದ್ಯೋಗಗಳಿಗೆ ಬಹಳ ಸುಲಭ ದರದಲ್ಲಿ ಸೌದೆ-ಹುಲ್ಲು ದೊರೆತರೆ ಅವು ಬೆಳೆಯಬಲ್ಲವು. ಇಲ್ಲದಿದ್ದರೆ ಇಲ್ಲ.

ಶಿಕ್ಷಣ ಕೇಂದ್ರಗಳು :

ಅಲ್ಲಲ್ಲಿ ಭಾಷೆಯ ಪ್ರಕಾರ ಶಿಕ್ಷಣ ಕೇಂದ್ರಗಳಾಗಬೇಕು ಅಲ್ಲಿ :

೧. ಜಿಲ್ಲಾ ಪ್ರಯೋಗ - ಪ್ರದರ್ಶನ ಕೇಂದ್ರಗಳ ಸಹಕಾರದಿಂದ ಆ ಪ್ರಾಂತದ ಗ್ರಾಮೋದ್ಯೋಗಗಳಿಗೆ ಅಗತ್ಯವಾದ ಕ್ರಮ-ವಿಧಾನಗಳ ಸಂಶೋಧನೆ ನಡೆಯಬೇಕು.

೨. ಗ್ರಾಮೋದ್ಯೋಗಗಳ ಬಗ್ಗೆ ಪ್ರಾಂತೀಯ ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸಬೇಕು.

೩. ಗ್ರಾಮೋದ್ಯೋಗದ ಪ್ರದರ್ಶನವನ್ನು ನಡೆಸಬೇಕು.

೪. ಭತ್ತ ಸುಲಿಯುವ ಕಲ್ಲು, ಎತ್ತು ತಿರುವುವ ಬೀಸುವಕಲ್ಲು, ಚಿಕ್ಕ ಸಕ್ಕರೆ ಯಂತ್ರ, ಮೂಳೆ ಪುಡಿ ಮಾಡುವ ಯಂತ್ರ ಇತ್ಯಾದಿ ಉಪಕರಣಗಳನ್ನು ಒದಗಿಸುವ ಕರ್ಮಾಲಯ ಅಥವಾ ಉದ್ಯೋಗಮಂದಿರ ನಡೆಯಬೇಕು.

೫. ಜಿಲ್ಲಾ ಪ್ರದರ್ಶನ ಕೇಂದ್ರಗಳಿಗೆ, ಸಹಕಾರ ಸಂಘಗಳಿಗೆ ಕೆಲಸಗಾರರನ್ನು, ಗ್ರಾಮಸೇವಕರನ್ನು ತರಬೇತು ಮಾಡಬೇಕು.

೨೨. ಜೀವನ ಶಿಕ್ಷಣ

ವಿಶ್ಲೇಷಣ ಮಾಡಿ ಮಾಡಿ ನೋಡಿದರೆ, ಎಲ್ಲಕ್ಕೂ ಶಿಕ್ಷಣವೇ ಆದಿಮೂಲ ಎಂದು ತಿಳಿದುಬರುತ್ತದೆ. ಜನರೆಲ್ಲರೂ ಸಾಮಾನ್ಯವಾಗಿ ಒಂದೇ ದೃಷ್ಟಿಯಿಂದ ಜೀವನವನ್ನು ನಿರೀಕ್ಷಿಸುವಂತೆ ಶಿಕ್ಷಣ ಕೊಟ್ಟರೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ. ಜೀವನದ ಎಲ್ಲಾ ಕ್ಷೇತ್ರಗಳ ಬಾಗಿಲನ್ನೂ ತೆರೆಯುವ ಬೀಗದ ಕೈ ಶಿಕ್ಷಣ.

ಶಿಕ್ಷಣದ ಅರ್ಥ :

ಶಿಕ್ಷಣ ನಮ್ಮನ್ನು ಜೀವನಕ್ಕೆ ಅಣಿಮಾಡಬೇಕು, ಉತ್ತಮ ಪೌರರು ಉತ್ತಮ ಮಾತಾಪಿತೃಗಳು, ಉತ್ತಮ ಪತಿಪತ್ನಿಯರು ಆಗಿ ಮಾಡಬೇಕು. ಅಂದರೆ ಶಿಕ್ಷಣವು ತೊಟ್ಟಿಲಿನಿಂದ ಚಟ್ಟದವರೆಗೂ ನಡೆಯಬೇಕು. ಮಗುವಾಗಿ ತೊಟ್ಟಿಲಲ್ಲಿ ಬಿದ್ದಾಗಿನಿಂದ ಹೆಣವಾಗಿ ಚಿಟ್ಟವೇರುವತನಕ ಶಿಕ್ಷಣ ಅವ್ಯಾಹತವಾಗಿ ನಡೆಯಬೇಕು. ಬಾಳಿನಲ್ಲಿ ಹಲವಾರು ಪರಿವರ್ತನೆಗಳಾಗುತ್ತವೆ. ಸ್ವಲ್ಪವೂ ಗಾಸಿಗೊಳ್ಳದಂತೆ ಅವನ್ನೆಲ್ಲ ನಾವು ದಾಟಬೇಕು. ಹಾಗಲ್ಲದೆ ದೊಂಬರ ವಿದ್ಯೆಯಂತೆ, ಕೆಲವು ಲಾಗಗಳನ್ನು, ಯುಕ್ತಿಗಳನ್ನು ಮಾತ್ರವೇ ಕಲಿಸಿದರೆ ನಾವು ಕಂಡು ಕೇಳಿ ಅರಿಯದ ಪ್ರಸಂಗಗಳಲ್ಲಿ ಹತವೀರ್ಯರಾಗುತ್ತೇವೆ. ಶಿಕ್ಷಣ ನಮ್ಮ ಮೆದುಳಿನಲ್ಲಿ ಅಂಕಿ ಅಂಶಗಳನ್ನು ಕೂರಿ ತುರುಕಬಾರದು. ಜೀವನದ ಬಗ್ಗೆ ಒಂದು ದೃಷ್ಟಿಯನ್ನು ಒಂದು ಮನೋಧರ್ಮವನ್ನು ನೀಡಬೇಕು.

ಶಿಕ್ಷಣ ಪದ್ಧತಿಗೆ ಆಧಾರವಾಗಿ ಒಂದು ತತ್ವವಿರಬೇಕು. ವ್ಯಕ್ತಿಯ ಉತ್ತಮ ಗುಣಗಳ ವಿಕಾಸವೇ ಅದರ ಗುರಿಯಾಗಿರಬೇಕು. ಆದುದರಿಂದ ಶಿಕ್ಷಣ ಬರೀ ಮಾತಲ್ಲ, ಬಹಳ ದೊಡ್ಡ ಜವಾಬುದಾರಿ. ಚೆನ್ನಾಗಿ ವಿಚಾರ ಮಾಡದೆ, ಸಿದ್ಧತೆ ಮಾಡಿಕೊಳ್ಳದೆ ಶಿಕ್ಷಣವನ್ನು ಪ್ರಾರಂಭಿಸಬಾರದು.

ದುರ್ದೈವದಿಂದ, ಬರೀ ಓದು-ಬರಹವನ್ನೆ ವಿದ್ಯೆ ಎನ್ನುವ ಕಾಲ ಬಂದಿದೆ. ಇದಕ್ಕಿಂತ ಬೇರೆ ಆಭಾಸವಿಲ್ಲ. ಸಂಸ್ಕೃತಿಯನ್ನು ಗಳಿಸಲು ಓದು-ಬರಹವೂ ಒಂದು ಸಾಧನ. ಆದರೆ ಅದೊಂದೇ ಸಾಧನವೂ ಅಲ್ಲ, ಮುಖ್ಯವಾದ ಸಾಧನವೂ ಅಲ್ಲ.

ಉದ್ದೇಶ್ಯಪೂರ್ಣ ಶಿಕ್ಷಣ :

ಅನೇಕ ದೇಶಗಳಲ್ಲಿ ಶಿಕ್ಷಣಕ್ಕೊಂದು ಗುರಿ, ಉದ್ದೇಶ ಇದೆ, ಔದ್ಯೋಗಿಕ ದೇಶಗಳಲ್ಲಿ ಉದ್ಯೋಗಪತಿಗಳು ಶಿಕ್ಷಣ ತಮ್ಮ ಉದ್ಯೋಗಗಳಿಗೆ ಕೆಲಸಗಾರರನ್ನು

ಒದಗಿಸುವ ಏರ್ಪಾಡು ಎಂದು ತಿಳಿಯುತ್ತಾರೆ. ಸಮಾಜವಾದದ ದೇಶಗಳಲ್ಲಿ ಶಿಕ್ಷಣಕ್ಕೂ ಪದಾರ್ಥಗಳ ಉತ್ಪಾದನೆಗೂ ತಳುಕು. ಸೇನಾ ಪ್ರಧಾನ ದೇಶಗಳಲ್ಲಿ ಶಿಕ್ಷಣವೆಂದರೆ ಸಂಕುಚಿತ ದೇಶಭಕ್ತಿಯ ಪ್ರೇರಣೆ.

ಪೂರ್ವ ದೇಶದ ಪದ್ಧತಿ :

ನಮ್ಮ ದೇಶದಲ್ಲಿ ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸವೆಂದರೆ ಜೀವನದ ಸಿದ್ಧತೆ. ವಿದ್ಯಾರ್ಥಿ ತನಗೆ ಬೇಕಾದ ಗುರುವನ್ನು ಆರಿಸಿಕೊಂಡು ಆ ಗುರುವಿನ ಕಣ್ಣೆದುರಿಗೇ ಅವರ ಆಶೀರ್ವಾದ ಪಡೆದು ನಿತ್ಯಜೀವನವನ್ನು ನಡೆಸುತ್ತಿದ್ದ ಆಧ್ಯಾತ್ಮ ವಿದ್ಯೆಯೇ ಅಲ್ಲ. ಎಲ್ಲಾ ವಿದ್ಯೆಗಳಲ್ಲಿಯೂ ಹೀಗೇ. ಗುರುವಿಗೆ ಶಿಕ್ಷಣ ಒಂದು ವೃತ್ತಿಯಾಗಿರ ಲಿಲ್ಲ. ಮಕ್ಕಳನ್ನು ತಂದೆ ನೋಡಿಕೊಳ್ಳುವ ಹಾಗೆ ಶಿಷ್ಯರನ್ನು ನೋಡಿಕೊಳ್ಳು ತ್ತಿದ್ದರು. ಗುರು ತನ್ನ ಜೀವನವನ್ನು ನಡೆಸುತ್ತಿದ್ದರೆ ಶಿಷ್ಯರು ಆ ಜೀವನದಿಂದ. ತಮಗೆ ಅರ್ಥವಾದಷ್ಟು ಜೀವನರಹಸ್ಯವನ್ನು ಅರಿತುಕೊಳ್ಳುತ್ತಿದ್ದರು. ಯೇಸು ತನ್ನ ಶಿಷ್ಯರನ್ನಾರಿಸಿಕೊಂಡು 'ನನ್ನಹಿಂದೆ ಬನ್ನಿ' ಎಂದಾಗ ಅವರಿಗೆ ಓದಲು ಒಂದು ಪುಸ್ತಕಗಳ ಪಟ್ಟಿಯನ್ನು ಕೊಡಲಿಲ್ಲ. ತಮ್ಮ ಗುರುವಿನ ಹೆಜ್ಜೆಯನ್ನು ಅವರು ಹಿಂಬಾಲಿಸಬೇಕು. ಅದು ನಮ್ಮ ಶಿಕಣ ಪದ್ಧತಿ.

ನಿಜವಾದ ಆರ್ಥಿಕ ಮೌಲ್ಯ :

ಪಾಶ್ಚಿಮಾತ್ಯ ವ್ಯಾಪಾರದ ಸಂಪರ್ಕದಿಂದ ನಾವು ಬಂಗಾರದ ಪೂಜೆ ಮಾಡ ತೊಡಗಿದ್ದೇವೆ. ನಮ್ಮ ಸಂಸ್ಕೃತಿ-ಸ್ವಧರ್ಮ ಎಲ್ಲಾ ಹಣದ ಅಳತೆಯಲ್ಲಿ ಸೋತಿವೆ. ನಮಗೀಗ ಮಾನವತೆಯೆಲ್ಲ ಬೇಕಾದುದು, ಬಂಗಾರ. ಸಂಸ್ಕೃತಿಯ ಲಕ್ಷಣಗಳೆಲ್ಲಾ ನಶಿಸಿ ಪಶ್ಚಿಮದ ವರ್ತಕತನದ ನಾಗರಿಕತೆ ಬಂದಿದೆ. ಪ್ರಥಮ ತತ್ವಗಳನ್ನು ಪ್ರಥಮ ದಲ್ಲಿ ಎಣಿಸದ ಯಾವ ಶಿಕ್ಷಣ ಪದ್ಧತಿಯೂ ನಮಗೆ ಗಮನಾರ್ಹವಲ್ಲ. ಜನತೆಗೆ ಶಿಕ್ಷಣ ಕೊಡುವ ಸರ್ವಪ್ರಯತ್ನವೂ ನಿಜವಾದ ಆರ್ಥಿಕ, ಸಾಮಾಜಿಕ. ಸಾಂಪತ್ತಿಕ ಮೌಲ್ಯಗಳನ್ನು ಅರಿಯಲು ಕಲಿಸಬೇಕು.

ಜೀವನದ ವೈವಿಧ್ಯ :

ಮನುಷ್ಯ ನಾನಾ ಮುಖದ ಜೀವಿ. ಅವನ ಬಾಳಿಗೆ ಗೆರೆ ಎಳೆದು ತುಂಡು ತುಂಡಾಗಿ ಮಾಡಿ ಈ ಭಾಗ ಇಷ್ಟು ಎಂದು ಹೇಳುವಂತಿಲ್ಲ. ಈ ಭಾಗವನ್ನು ಬೆಳೆಸೋಣ ಎನ್ನಲಾಗದು. ಶಾರೀರಿಕ, ನೈತಿಕ, ಆಧ್ಯಾತ್ಮಿಕ ಅಂಶಗಳನ್ನು ಕೈಬಿಟ್ಟು ಬರೀ ಬೌದ್ಧಿಕ ವಿಕಾಸವನ್ನೇ ಗಮನಿಸಿದರೆ ವಿಕೃತ ವ್ಯಕ್ತಿಗಳಾಗುತ್ತಾರೆ. ನಿಜವಾದ ಶಿಕ್ಷಣ ನಮ್ಮ ಗುರಿಯಾದರೆ ಇವೆಲ್ಲ ಅಂಶಗಳನ್ನೂ ಏಕಕಾಲದಲ್ಲಿ ಬೆಳೆಸಬೇಕು. ಶಾರೀರಿಕ, ಸಾಮಾಜಿಕ, ಬೌದ್ಧಿಕ, ಆಧ್ಯಾತ್ಮಿಕ – ಎಲ್ಲ ದರಲ್ಲಿಯೂ ವ್ಯಕ್ತಿ ಬೆಳೆಯಬೇಕು. ಅವನು ಜೀವನೋಪಾಯಕ್ಕಾಗಿ ಒಂದು ವೃತ್ತಿ ಯನ್ನು ಕಲಿಯಬೇಕು, ಜನರನ್ನು, ಜೀವನವನ್ನು ಅಳೆಯುವ ಶಕ್ತಿಯನ್ನು ಪಡೆಯ

ಬೇಕು. ಇವೆಲ್ಲವನ್ನೂ ಸಾಧಿಸಲು ಪ್ರಯತ್ನಿಸದಿದ್ದರೆ ಅದು ಶಿಕ್ಷಣವೇ ಅಲ್ಲ.

ನಾವು ಮಾಡಿದ ಪ್ರತಿಯೊಂದು ಕರ್ಮವೂ ನಮ್ಮ ಮೇಲೆ ಒಂದು ಗುರುತು ಮಾಡಿಯೇ ತೀರುತ್ತದೆ. ಅದನ್ನು ಅಳಿಸಲು ಸಾಧ್ಯವಿಲ್ಲ. ನಮ್ಮ ಕೆಲಸ, ಆಟ, ವಿನೋದ, ವಿಶ್ರಾಂತಿ ಎಲ್ಲವನ್ನೂ ಎಚ್ಚರಿಕೆಯಿಂದ ಮಾಡಬೇಕು. ಆಗ ಅದರ ಸಾಮಾಜಿಕ ಪ್ರತಿಕ್ರಿಯೆ ಆರೋಗ್ಯವಂತವಾಗಿದ್ದೀತು. ಕರ್ಮಶಿಕ್ಷಣವೇ ಮನುಷ್ಯ ಜೀವನದ ಬಹುಭಾಗಕ್ಕೆ ಹೊಂದಿದುದು. ನಮ್ಮ ಕಾಲವೆಲ್ಲ ಹೆಚ್ಚಾಗಿ ನಮ್ಮ ಗುಣ, ಕೌಶಲ ವೃದ್ಧಿಯಾಗುವಂತೆ, ನಮ್ಮ ಜೀವನ ತುಂಬಿ ಬರುವಂತೆ ಯೋಜನೆ ಮಾಡಿದರೆ ಅಷ್ಟುಮಟ್ಟಿಗೆ ರಾಷ್ಟ್ರವೂ ಅಭಿವೃದ್ಧಿಗೊಳ್ಳುತ್ತದೆ. ಯೋಗ್ಯವಾದ ಕೆಲಸ ನಮ್ಮ ಜೀವನದ ಆದರ್ಶವನ್ನು ಆಚರಣೆಗೆ ತರಲು ಸಹಾಯಕವಾಗಿರಬೇಕು. ಬರೀ ಗಂಟೆ – ಜಾಗಟೆ, ಧೂಪ – ದೀಪ – ಆರತಿಗಳಲ್ಲಿ ಪರ್ಯಾವಸಾನವಾಗುವ ಧರ್ಮ ಟೊಳ್ಳು. ಧರ್ಮ ನಮ್ಮ ಜೀವನದ ಪ್ರತಿಯೊಂದು ಕರ್ಮವನ್ನೂ ಪ್ರತಿಯೊಂದು ಗಳಿಗೆಯನ್ನೂ ಆವರಿಸದಿದ್ದರೆ ಅದು ಬರೀ ಬರಡು. ವ್ಯಕ್ತಿಯನ್ನೂ, ಜನಾಂಗವನ್ನೂ ಬೆಳೆಸುವುದರಲ್ಲಿ ಕೆಲಸ ಎಷ್ಟು ಮುಖ್ಯ ಸಾಧನವೆಂಬುದನ್ನು ಕೆಲಸ ಎಂಬ ಪ್ರಕರಣದಲ್ಲಿ ಓದಿದೇವೆ. ವ್ಯಕ್ತಿ ವಿಕಾಸದಲ್ಲಿ ಕೆಲಸ ಅಂಥ ಪ್ರಬಲ ಶಕ್ತಿಯಾದರೆ ಮಗುವಿನ ಬೆಳವಣಿಗೆಗೆ ನಾವು ಅದನ್ನು ಉಪಯೋಗಿಸಬೇಡವೆ?

ನಮ್ಮ ಪ್ರಯತ್ನಗಳೆಲ್ಲ ಹಳ್ಳಿಗಳಲ್ಲಿ ನಡೆಯಬೇಕು. ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ನಾಲ್ಕು ವರ್ಷ ಕೈಬಿಟ್ಟರೂ ರಾಷ್ಟ್ರಕ್ಕೇನೂ ನಷ್ಟವಾಗದು. ಈಗಲೇ ನಮಗೆ ತಲೆಭಾರವಾಗಿದೆ. ಬೇಕಾದುದಕ್ಕಿಂತ ಹೆಚ್ಚು ಜನ ಪದವೀಧರರಿದ್ದಾರೆ. ಇವರು ಪಡೆದ ಶಿಕ್ಷಣ ನಮಗೆ ಆಗತ್ಯವಾದುದಲ್ಲ. ಆದುದರಿಂದ ಇವರು ನಿರುದ್ಯೋಗಿಗಳಾಗಿ ಕುಳಿತಿದಾರೆ. ಇಲ್ಲದಿದ್ದರೆ ಇವರಿಗೆ ಮಾಡಲು ಕೆಲಸ ಸಿಗುತ್ತಿರಲಿಲ್ಲವೆ? ನಮ್ಮ ಹಳ್ಳಿಗಳು ಹೆಚ್ಚು ಸಮರ್ಥವೂ, ಪ್ರಯೋಜನಕರವೂ ಆಗುವಂತೆ ಮಾಡಬೇಕಾಗಿಲ್ಲ. ಆಕಾಶವಾಣಿ, ಚಲನಚಿತ್ರಗಳಿಂದ ಸ್ವಲ್ಪ ಸಹಾಯವಾದೀತೋ ಏನೋ. ಆದರೆ ಶಿಕ್ಷಣದ ಪ್ರಧಾನ ಸಾಧನಗಳಲ್ಲ ಅವು. ಅವಕ್ಕಾಗಿ ನಾವು ವೆಚ್ಚ ಮಾಡುವ ಹಣ ಬಹಳ ಹೆಚ್ಚು. ಬಹಳ ತಾರತಮ್ಯವಿದೆ. ಹಳ್ಳಿಯೊಳಗಿರುವುದನ್ನೆ ವೃದ್ಧಿಗೊಳಿಸಬೇಕು. ಎಲ್ಲಿಂದಲೋ ತಂದು ಅವರ ಮೇಲೆ ಹೇರಿದರೆ ಆಗದು. ಹೊರಗಿನಿಂದ ತಂದುದನ್ನು ಕೃತಕ ಸಾಧನಗಳಿಂದ ಬೆಳೆಸಬೇಕಾಗುತ್ತದೆ. ಆದರೆ ಒಳಗಿನಿಂದ ಬೆಳೆದುಬಂದುದು ನಿಜವಾದ ಸಂಸ್ಕೃತಿಯನ್ನು ವಿಕಾಸಗೊಳಿಸಿ ಮನುಷ್ಯ–ಮನುಷ್ಯನನ್ನು, ಹಳ್ಳಿಹಳ್ಳಿಯನ್ನು ಕಡೆಗೆ ಇಡೀ ದೇಶವನ್ನೂ ಒಂದಾಗಿ ಒಗ್ಗಟ್ಟಾಗಿ ಕಟ್ಟುತ್ತದೆ.

ಇದಕ್ಕಾಗಿ ಎಂಥ ವ್ಯವಸ್ಥೆ ಇರಬೇಕು ಎಂಬುದು ಬಹಳ ಮುಖ್ಯವಲ್ಲ. ಸಂಸ್ಥೆಗಳು ಎಷ್ಟೇ ಮುಖ್ಯವಾದರೂ ಅವಕ್ಕೇ ಜೋತುಬಿದ್ದರೆ ವ್ಯಕ್ತಿಪ್ರಭಾವ ವನ್ನು ಕಳೆದುಕೊಳ್ಳುತ್ತೇವೆ. ಕಡೆಗೆ ಸಂಸ್ಥೆ ಕಲ್ಲಾಗುತ್ತದೆ. ಅಪಾರ ಧನವನ್ನು ನುಂಗುತ್ತದೆ. ಉಳಿದಕಡೆ ಮಾಡಿದಂತೆ ಶಿಕ್ಷಣದಲ್ಲಿಯೂ ಕೇಂದ್ರೀಕರಣ ಮಾಡಿದರೆ ದೂರದಲ್ಲಿರುವವರು ಯಾರೋ ಯಜಮಾನ್ಯ ಮಾಡುವಂತಾಗುತ್ತದೆ. ಅದರಿಂದ ಏನೋ ಕೃತ್ರಿಮತೆ, ಕಾಠಿಣ್ಯತಲೆದೋರಿ ಶಿಕ್ಷಣಕ್ಕೇ ಸಂಚಕಾರವಾಗುತ್ತದೆ. ಹಳ್ಳಿಯ ಶಿಕ್ಷಕ ತನ್ನ ನೆರೆಹೊರೆಯುವರ ಕಣ್ಣೆದಿರಿನಲ್ಲಿಯೇ ಕೆಲಸ ಮಾಡುವುದು ಒಳಿತು. ಆದುದರಿಂದ ಆಯಾ ಹಳ್ಳಿಯೇ ತನ್ನ ಶಿಕ್ಷಣದ ವೆಚ್ಚವನ್ನು ವಹಿಸುವುದು ಸರಿ, ಹಳ್ಳಿಯ ವಿದ್ಯಾಮಂದಿರಕ್ಕೆ ಹೊಲವನ್ನು ಬಿಟ್ಟುಕೊಡಲಿ. ಈ ಪದ್ಧತಿಗೆ ಕೇಂದ್ರದ ಮೇಲ್ವಿಚಾರಣೆಯೂ ಸಲಹೆಯೂ ದೊರತರೆ ನಮ್ಮ ದೇಶಕ್ಕೆ ಒಳ್ಳೆಯ ಮಾದರಿ ಯಾಗಬಹುದು. ಸ್ಥಳದವರ ಅಭಿಪ್ರಾಯಕ್ಕೆ ಅಧೀನ. ಅದರ ವ್ಯವಸ್ಥೆ ಈಗಿರುವ ಹಾಗೆ ವರ್ಷಕ್ಕೊಂದು ಸಲ ವಿದ್ಯಾಧಿಕಾರಿಯ ಪರೀಕ್ಷೆಗೆ ಸಿದ್ಧವಾಗಿದ್ದರಾಯಿತು ಶಿಕ್ಷಕ. ಅದು ಮುಗಿದ ಮೇಲೆ ಯಾವ ಚಿಂತೆಯೂ ಇಲ್ಲ. ಇದರಿಂದ ಪ್ರಗತಿ ಯಾಗದು. ಕ್ರಮವಾದ ಕೆಲಸವೂ ಆಗದು. ಪ್ರತಿಯೊಂದು ಪಾಠಶಾಲೆಯೂ ಸಂಸ್ಕೃತಿ ಕೇಂದ್ರವಾಗಬೇಕು. ಹೊರಗಣ ಪ್ರಪಂಚಕ್ಕೂ ಹಳ್ಳಿಗೂ ಮಧ್ಯಬಿಂದು ವಾಗಬೇಕು. ಇದರಲ್ಲಿ ಒಂದು ಬಾಧಕವಿದೆ; ತನ್ನ ಸಾಮಾಜಿಕ ಕರ್ತವ್ಯವನ್ನೇ ಮುಖ್ಯವಾಗಿ ಮಾಡಿಕೊಂಡು ಶಿಕ್ಷಕನು ಮಕ್ಕಳ ಪ್ರಗತಿಯನ್ನು ಅಸಡ್ಡೆ ಮಾಡ ಬಹುದು. ಸಾಮಾಜಿಕ ಅಂಶ ಪಾಠಶಾಲೆಯ ಮುಖ್ಯ ಫಲವಲ್ಲ. ಪ್ರಾಸಂಗಿಕ ಫಲ. ಮಾನವ ಸ್ವಭಾವವನ್ನು ನಂಬಿ ಆತ್ಮವಿಶ್ವಾಸದಿಂದ ಆದರ್ಶದ ಧ್ರುವತಾರೆ ಯನ್ನು ಲಕ್ಷ್ಯವಾಗಿಟ್ಟು ನಡೆಯುವಾಗ ಚಿಲ್ಲರೆ ಅಂಶಗಳಲ್ಲಿ ಭಿನ್ನಾಪ್ರಾಯ ಹಲವಿರ ಬಹುದು. ಈ ವೈವಿಧ್ಯ ಕಂಡರೂ ನಿಜವಾದ ಸಂಸ್ಕೃತಿಯನ್ನು ಬೆಳಸಿ, ಪ್ರಾಮಾಣಿಕ ವಾದ ಮೌಲ್ಯಗಳನ್ನ ನಿರ್ಮಿಸಿ ಭದ್ರವಾದ ಏಕತೆಯನ್ನು ಪಡೆಯಬಹದು.

ಒಂದು ಯೋಜನೆ :

ನಿಜವಾದ ಶಿಕ್ಷಣ ಹೇಗಿರಬೇಕು ಎಂದು ಈಚೆಗೆ ಬಹಳ ಚರ್ಚೆ ನಡೆದಿದೆ. ಶಿಕ್ಷಣ ಸ್ವಾವಲಂಬಿಯಾಗಿರಬೇಕೆಂದು ಗಾಂಧೀಜಿ ಹೇಳುತ್ತಾರೆ. ಶಿಕ್ಷಣವೆಂದರೆ ಮಗುವಿನ ದೇಹ, ಮನಸ್ಸು ಮತ್ತು ಆತ್ಮಗಳಲ್ಲಿ ಇರುವ ಉತ್ತಮೋತ್ತಮ ಶಕ್ತಿಗಳನ್ನು ಸಮಗ್ರವಾಗಿ ವಿಕಸನಗೊಳಿಸುವುದು. ಅಕ್ಷರ ಪರಿಚಯ ಶಿಕ್ಷಣದ ಅಂತವೂ ಅಲ್ಲ, ಆದಿಯೂ ಅಲ್ಲ. ಶಿಕ್ಷಣ ಪಡೆಯಲು ಅಕ್ಷರ ಜ್ಞಾನವೂ ಒಂದು ಸಾಧನ. ಆದರೆ ಬರೀ ಅಕ್ಷರ ಜ್ಞಾನವೇ ವಿದ್ಯೆಯಲ್ಲ. ಆದುದರಿಂದ

ಶಿಕ್ಷಣಕ್ಕೆ ಮೊದಲಿಟ್ಟ ಗಳಿಗೆಯಿಂದಲೂ ಏನಾದರೂ ಉತ್ಪತ್ತಿ ಮಾಡು ವಂತೆ ಮಗುವಿಗೆ ಒಂದು ಕೈಗಾರಿಕೆಯನ್ನು ಕಲಿಸುವುದೇ ಶಿಕ್ಷಣದ ನಾಂದಿ ಎನ್ನು ತ್ತೇನೆ. ಪ್ರತಿಯೊಂದು ಪಾಠಶಾಲೆಯೂ ಸ್ವಾವಲಂಬಿಯಾಗಬೇಕು. ಅಲ್ಲಿ ಉತ್ಪತ್ತಿಯಾದುದನ್ನು ತಂದೆ-ತಾಯಿಗಳು, ಸಮಾಜ ಮತ್ತು ಸರಕಾರ ತೆಗೆದು ಕೊಳ್ಳಬೇಕು.

ಇಂಥ ಶಿಕ್ಷಣ ಪದ್ಧತಿಯಲ್ಲಿ ಮನಸ್ಸು ಮತ್ತು ಆತ್ಮಗಳ ಅತ್ಯುತ್ತಮ ವಿಕಾಸ ಸಾಧ್ಯವೆಂದು ನನ್ನ ಮತ. ಆದರೆ ಈಗ ಕಲಿಸುವಂತೆ ಯಾಂತ್ರಿಕವಾಗಿ ಕೈಗಾರಿಕೆ ಯನ್ನು ಕಲಿಸಬಾರದು. ಶಾಸ್ತ್ರೀಯವಾಗಿ ಕಲಿಸಬೇಕು. ಪ್ರತಿಯೊಂದು ಕ್ರಮದ ಬಗ್ಗೆಯೂ ಮಗುವಿಗೆ ಇದೇಕೆ, ಇದೆಲ್ಲಿಯದು ಎಂಬ ವಿವರಗಳು ತಿಳಿಯಬೇಕು. ಆತ್ಮವಿಶ್ವಾಸವಿಲ್ಲದೆ ನಾನಿದನ್ನು ಬರೆಯುತ್ತಿಲ್ಲ. ನನಗೆ ಅನುಭವವಿದೆ. ಕೆಲಸ ಗಾರರಿಗೆ ನೂಲುವ ಶಿಕ್ಷಣ ಕೊಡುವಲ್ಲೆಲ್ಲ ಈ ಪದ್ಧತಿಯನ್ನೇ ಅನುಸರಿಸು ತ್ತಿದ್ದಾರೆ. ಈ ಪ್ರಕಾರ ನಾನೇ ಮೆಟ್ಟು ಹೊಲೆಯುವುದನ್ನೂ, ನೂಲುವುದನ್ನೂ ಕಲಿಸಿದೇನೆ. ಒಳ್ಳೆಯ ಫಲ ಬಂದಿದೆ. ಇದರಲ್ಲಿ ಇತಿಹಾಸ, ಭೂಗೋಳಗಳ ಜ್ಞಾನವಿಲ್ಲದಿಲ್ಲ. ಓದು ಬರಹದ ಮೂಲಕ ಕಲಿಸುವುದಕ್ಕಿಂತ ಹತ್ತರಷ್ಟು ಹೆಚ್ಚಾಗಿ ಕಲಿಸಬಹುದು ಈ ರೀತಿಯಲ್ಲಿ. ಅಕ್ಷರಗಳನ್ನು ಆಮೇಲೆ ಕಲಿಸಬಹುದು ಮಗುವಿನ ಅಭಿರುಚಿ ಬೆಳೆದ ಮೇಲೆ. ಈ ಸೂಚನೆ ಕ್ರಾಂತಿಕಾರಿ. ಆದರೆ ಇದರಿಂದ ಅಪಾರ ಶ್ರಮ ಉಳಿಯುತ್ತದೆ. ಹೆಚ್ಚು ಕಾಲದಲ್ಲಿ ಈಗ ಕಲಿಯು ವುದನ್ನು ಹುಡುಗ ಒಂದೇ ವರ್ಷದಲ್ಲಿ ಕಲಿಯುತ್ತಾನೆ.

ನನ್ನ ಮಟ್ಟಿಗೆ ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ. ಇಂಗ್ಲೀಷೊಂದನ್ನು ಬಿಟ್ಟರೆ ಇದು ಹೈಸ್ಕೂಲಿಗೆ ಸಮವಾಗಬೇಕು. ನಮ್ಮ ದೇಶದ ಪದವೀಧರರೆಲ್ಲ ಒಮ್ಮೆಲೇ ತಾವು ಓದಿದುದನ್ನೆಲ್ಲಾ ಮರೆತರೆ ಹಲವು ಲಕ್ಷಜನರ ಆ ಆಕಸ್ಮಿಕ ವಿಸ್ಮೃತಿಯಿಂದ ಆಗುವ ಪರಿಣಾಮಕ್ಕಿಂತ ನಮ್ಮ ಮೂವತ್ತು ಕೋಟಿ ಜನರನ್ನು ಕವಿದಿರುವ ಅಜ್ಞಾನಾಂಧಕಾರದ ಪರಿಣಾಮ ಘೋರತರವಾದುದು. ನಮ್ಮ ಕೋಟ್ಯಾಂತರ ಗ್ರಾಮಸ್ಥರ ಅಜ್ಞಾನಕ್ಕೆ ಅವರ ಅನಕ್ಷರತೆಯೊಂದು ಅಳತೆಯ ಅಲ್ಲ.

ಮಕ್ಕಳ ಶಿಕ್ಷಣ ಮೊದಮೊದಲ ಹಂತಗಳಲ್ಲಿ ಸ್ವಾವಲಂಬಿಯಾಗುವುದು ಸಾಧ್ಯವೇ ಇಲ್ಲ. ಅವರು ಮಾಡಿದ ಪದಾರ್ಥಕ್ಕೆ ಬೆಲೆ ಬಾರದು. ಅದನ್ನು ಸರಕಾರವೆ ತೆಗೆದುಕೊಂಡರೂ ಸುಮ್ಮನೆ ನಷ್ಟವನ್ನು ತುಂಬಿ ಕೊಟ್ಟಂತೆ. ಶಿಕ್ಷಣ ಸ್ವಾವಲಂಬಿಯಾಗಿದೆ ಎಂದು ನಾವು ಆತ್ಮವಂಚನೆ ಮಾಡಿಕೊಳ್ಳಲು ಒಂದು ಅವ ಕಾಶ, ಸ್ವಾವಲಂಬನವೆಂದರೆ ಮಗು ಆಯಾ ವರ್ಷ ಮಾಡಿದ ಪದಾರ್ಥಗಳಿಂದ ಆಯಾ ವರ್ಷದ ವೆಚ್ಚ ಬರಬೇಕು ಎಂದು ಗಾಂಧೀಜಿ ಹೇಳಲಿಲ್ಲ. ಇದು ಬಹಳ

ಸಂಕುಚಿತ ಹಣದ ದೃಷ್ಟಿ. ಸಾರ್ಥಕವಾಗಲಾರದು. ಸ್ವಾವಲಂಬನದ ಅರ್ಥ ವಿಶಾಲವಾಗಿದೆ. ಪಾಠಶಾಲೆಯಲ್ಲಿ ಮಗು ಮಾಡಿದ ಪದಾರ್ಥಗಳ ಬೆಲೆಯೊಂದೇ ಅಲ್ಲ, ಮುಂದೆ ಸುಶಿಕ್ಷಿತ ಪೌರನಾದಾಗ ಅವನು ಮಾಡುವ ಸೇವೆಯೂ ಗಣನೀಯವೇ. ಈಗ ಹಳ್ಳಿಗಳಲ್ಲಿ ಮಗುವಿಗೆ ಸಿಗುವ ಅಕ್ಷರ ಶಿಕ್ಷಣವೂ ಅತ್ಯಲ್ಪ. ಕೆಲವು ವರ್ಷಗಳಾದ ಮೇಲೆ ಮತ್ತೆ ಅನಕ್ಷರಸ್ಥವಾಗುತ್ತದೆ. ಅದಕ್ಕೆ ವಿದ್ಯೆ ಕಲಿಸಲು ಕಳೆದ ಕಾಲ, ಕೊಟ್ಟ ಹಣ ಎಲ್ಲವೂ ವ್ಯರ್ಥವಾಗುತ್ತದೆ. ಆ ಕಾಲ ಮತ್ತು ಹಣಗಳನ್ನು ಸರಿಯಾಗಿ ವಿನಿಯೋಗಿಸಿದ್ದರೆ ಆಯಾ ತರಗತಿಯಲ್ಲಿ ಉತ್ಪತ್ತಿ ಮಾಡಿದ ಪದಾರ್ಥ ಆ ತರಗತಿಯ ವೆಚ್ಚಕ್ಕೆ ಸಾಲದಿದ್ದರೂ ಒಟ್ಟು ಏಳು ವರ್ಷಗಳಲ್ಲಿ ಇಡೀ ತರಗತಿಗಳ ಉತ್ಪತ್ತಿ ಶಿಕ್ಷಕರ ವೆಚ್ಚಕ್ಕೆ ಸಾಕಾಗುತ್ತದೆ. ಮೊದಲ ಮೂರು ವರ್ಷ ಬರೀ ನಷ್ಟ, ಆಮೇಲೆ ಮೂರು ವರ್ಷ ಅಲ್ಲಿಗಲ್ಲಿಗೆ; ಮಗುವಿಗೆ ಸರಿಯಾದ ತರಬೇತು ದೊರೆತರೆ ಕಡೆಯ ಎರಡು ವರ್ಷಗಳಲ್ಲಿ ಲಾಭ ಬಂದು ಮೊದಲಿನ ಎರಡು ವರ್ಷಗಳ ನಷ್ಟವನ್ನು ಸರಿದೂಗಿಸುತ್ತದೆ. ಇದಕ್ಕಿಂತ ಹೆಚ್ಚಾಗಿ, ಒಬ್ಬ ಒಳ್ಳೆಯ ಪೌರ ತರಬೇತಾದನೆಂದರೆ ನಿರ್ಮಾಣ ಕಾರ್ಯಗಳಿಗಾಗಿ ಸರಕಾರ ಮಾಡುವ ಎಲ್ಲ ವೆಚ್ಚಗಳಿಗಿಂತ ಲಾಭಕರವಾಗುತ್ತದೆ. ಸ್ಥಳದಲ್ಲಿಯೇ ಗಿರಾಕಿಯಿರುವ ಕೈಗಾರಿಕೆಗಳನ್ನು ಉದಾ: ನೂಲುವುದು, ಬಣ್ಣಹಾಕುವುದು, ನೇಯುವುದು, ಚಾಪೆ-ಬುಟ್ಟಿ ಹೆಣೆಯುವುದು, ಮಡಿಕೆ ಮಾಡುವುದು, ಮೆಟ್ಟು ಹೊಲಿಯುವುದು, ಮರಗೆಲಸ, ಹಿತ್ತಾಳೆ-ತಾಮ್ರದ ಕೆಲಸ, ಕಾಗದ ಮಾಡುವುದು, ಬೆಲ್ಲ ಮಾಡುವುದು, ಎಣ್ಣೆ ಗಾಣವಾಡುವುದು, ಜೇನು ಸಾಕಣೆ ಮುಂತಾದುವನ್ನು ಕಲಿಸಿದರೆ ಉತ್ಪನ್ನವಾದ ಪದಾರ್ಥಗಳನ್ನು ಮಾರುವ ಸಮಸ್ಯೆಯೂ ಹೆಚ್ಚಾಗಿ ಇರದು. ಒಬ್ಬ ಉದ್ಯೋಗಿಯ ಬಳಿ ಕೆಲಸ ಕಲಿಯುವ ಶಿಷ್ಯ ಪ್ರಾರಂಭದಲ್ಲಿ ಏನೂ ಗಳಿಸುವುದಿಲ್ಲ. ಕೆಲವು ದಿನ ಬರಿದೇ. ಸ್ವಲ್ಪ ಕಾಲದ ಮೇಲೆ ಕೊಂಚ ಉತ್ಪತ್ತಿಮಾಡುತ್ತಾನೆ. ಆಮೇಲೆ ಸಂಪಾದನೆ. ಈ ಪ್ರಾರಂಭದ ಶಿಕ್ಷಣಕ್ಕಾಗಿ ಸರಕಾರ ಹಣವನ್ನು ಒದಗಿಸಬೇಕು. ಅಥವಾ ಜನರೇ ಅದಕ್ಕಾಗಿ ಹೊಲವನ್ನೋ ತೋಟವನ್ನೋ ಬಿಟ್ಟುಕೊಡಬೇಕು. ಬ್ರಿಟಿಷರು ಬಂದು ಹೊಸ ಬಗೆಯ ತೆರಿಗೆಗಳನ್ನು ಹಾಕಿ ನಮ್ಮ ಪಾಠಶಾಲೆಗಳನ್ನು ಮುರಿಯುವವರೆಗೆ ನಮ್ಮಲ್ಲಿ ಹೀಗೇ ನಡೆದಿತ್ತು. ಏನೇ ಇರಲಿ, ಮಕ್ಕಳ ಶಿಕ್ಷಣ ಸರಕಾರದ ಹೊಣೆ. ನಮ್ಮನ್ನು ಈಗ ಕಾಡುತ್ತಿರುವ ಸಮಸ್ಯೆ ಸಹಜವಾದುದಲ್ಲ, ರಾಜಕೀಯದಿಂದ ಹುಟ್ಟಿ ಬಂದ ಹಣದ ಸಮಸ್ಯೆ. ಅದನ್ನು ರಾಜಕೀಯವಾಗಿಯೇ ತಿದ್ದಬೇಕು. ಅನಿವಾರ್ಯವೆಂದು ಕೈಕಟ್ಟಿ ಕೂತರಾಗದು. ಶಿಕ್ಷಕನಿಗೆ ಪೂರ್ಣ ತರಬೇತು ಆಗಿರಬೇಕು. ಅವರಿಗೆ ಕನಿಷ್ಠ ರೂ. ೨೫ ನ್ನಾದರೂ ಕೊಡಬೇಕು. ಪಾಠಶಾಲೆಯ ವೇಳೆ, ಅಧ್ಯಯನ ಕಾಲ ಹಳ್ಳಿಯ ಋತುಮಾನದಂತೆ. ಸುಗ್ಗಿಯಲ್ಲಿ, ಹೊಲಗೆಲಸ

ಹೆಚ್ಚಾಗಿರುವ ದಿನಗಳಲ್ಲಿ ತರಗತಿಗಳಿರಬೇಕಾಗಿಲ್ಲ.

ಯೋಜನೆಯ ಸಾಮಾನ್ಯ ರೂಪರೇಖೆ:

ವರ್ಧಾಯೋಜನೆ ಅಥವಾ ಮೂಲಶಿಕ್ಷಣ ಎನಿಸಿಕೊಂಡ ಈ ಪದ್ಧತಿ ಎಂಟು ವರ್ಷದ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ೭ ರಿಂದ ೧೪ ವರ್ಷಗಳವರೆಗೆ ಎಲ್ಲಾ ಹುಡುಗ ಹುಡುಗಿಯರಿಗೂ ಕೊಡಲೇಬೇಕೆಂದು ವಿಧಿಸುತ್ತದೆ. ಶಿಕ್ಷಣ ಮಾಧ್ಯಮ ನೂಲುವಿಕೆಯಂಥ ಒಂದು ಕೈಗಾರಿಕೆ. ಅದರ ಸುತ್ತ ಉಳಿದ ವಿಷಯ ಗಳೆಲ್ಲವೂ ಬರುತ್ತವೆ. ಮಗುವಿನ ನಿತ್ಯಜೀವನ, ಕೈಗಾರಿಕೆಯ ಸಮನ್ವಯ, ಪ್ರಾಕೃತಿಕ-ಸಾಮಾಜಿಕ ವಾತಾವರಣ ಎಲ್ಲವೂ ಸಮಗ್ರ ಜ್ಞಾನದ ಸಮನ್ವಯಕ್ಕೆ, ಸಮಯಕ್ಕೆ ಬಿಂದುಗಳು. ಈಗಿನ ಗುರಿ ಇಂಗ್ಲೀಷಿಲ್ಲದ ಮೆಟ್ರಿಕುಲೇಷನ್ ಮಟ್ಟ. ಮಗುವಿಗೆ ರೇಖಾಚಿತ್ರಣ ಬರುವವರೆಗೆ ಬರವಣಿಗೆಯನ್ನು ಕಲಿಸುವುದಿಲ್ಲ. ೧೪ ವರ್ಷಕ್ಕೆಲ್ಲಾ ಕುಶಲರಾದ ಕೆಲಸಗಾರರನ್ನು ಅಣಿಮಾಡುವ ಗುರಿಯಲ್ಲ; ಯಾವು ದಾದರೂ ವೃತ್ತಿಯನ್ನು ಹಿಡಿದರೆ ಅದನ್ನು ಸರಿಯಾಗಿ ನಿರ್ವಹಿಸುವಷ್ಟು ಸಿದ್ಧತೆ ಯಿರಬೇಕು ಎಂಬುದು ಉದ್ದೇಶ.

ಈ ವಿಧಾನದ ಮುಖ್ಯ ಸಿದ್ಧಾಂತ ವೃತ್ತಿಶಿಕ್ಷಣದಲ್ಲಿಯೇ, ಅದರ ಮೂಲ ಕವೇ, ಬುದ್ಧಿಯ ವಿಕಾಸವೂ ಆಗಬೇಕು ಎಂಬುದು. ಈಗಿನ ಪದ್ಧತಿ ಬೌದ್ಧಿಕ ಶಿಕ್ಷಣಕ್ಕೆ ಮಹತ್ವವನ್ನು ಕೊಟ್ಟು ವೃತ್ತಿಶಿಕ್ಷಣವನ್ನು ಅದಕ್ಕೆ ಜೋಡಿಸುತ್ತದೆ. ಹೀಗೆ ಬೌದ್ಧಿಕ ಶಿಕ್ಷಣಕ್ಕೆ ಪ್ರಥಮ ಸ್ಥಾನ ಕೊಟ್ಟಾಗ ಮಗುವಿನ ಕೈಕಾಲು ಕಟ್ಟಿ ಹಾಕಿದಂತಾಗಿ ಅದು ಅವ್ಯವಹಾರಿಯಾಗುತ್ತದೆ. ಚಿಕ್ಕಂದಿನಲ್ಲಿ ಕಳೆದುಕೊಂಡ ಕೈ ಕಾಲು ಮುಂದೆ ಎಷ್ಟೇ ಸಾಹಸಪಟ್ಟರೂ ಬಾರದು. ಅನುಭವದ ಆಧಾರವಿಲ್ಲದ ಬರೀ ಕಲಿವು ಗಿಳಿಪಾಠವಾಗುತ್ತದೆ. ಜ್ಞಾಪಕ ಶಕ್ತಿಯ ವೃದ್ಧಿಯ ತರಬೇತು ಆಗುತ್ತದೆ. ಅದರಿಂದ ವ್ಯಕ್ತಿತ್ವವಾಗಲಿ, ಸ್ಫೂರ್ತಿಯಾಗಲಿ– (Initiative) ಅಭಿಕ್ರಮ ಶಕ್ತಿಯಾಗಲಿ ಬೆಳೆಯದು.

ಪರೀಕ್ಷೆಗಳು:

ಈ ಪದ್ಧತಿಯಲ್ಲಿ ಪರೀಕ್ಷೆಯ ಪ್ರಯಾಸ ವಿದ್ಯಾರ್ಥಿಗಳಿಗಲ್ಲ, ಶಿಕ್ಷಕರಿಗೇ, ೨೪ ಗಂಟೆಯೂ ವಿದ್ಯಾರ್ಥಿಯ ಜೀವನವು ಗುರುಗಳ ಮೇಲ್ವಿಚಾರಣೆಯಲ್ಲಿಯೆ ಇರುವುದರಿಂದ ಮಕ್ಕಳ ಗೃಹಜೀವನಕ್ಕೂ, ಗ್ರಾಮಜೀವನಕ್ಕೂ, ಶಿಕ್ಷಕನಿಗೂ ನಿಕಟ ಸಂಬಂಧ ಬೆಳೆಯುತ್ತದೆ. ಮನೆಯಲ್ಲಿ, ಹಳ್ಳಿಯಲ್ಲಿ ಶಿಕ್ಷಕನ ಕೆಲಸದ ಪ್ರತಿಬಿಂಬ ಕಾಣಬರುತ್ತದೆ.

ಹೆಂಗಸರ ಪಾಲು:

ಮಗುವಿನ ಸಹಜವಾದ ದೈಹಿಕ ವಿಕಾಸವನ್ನು ನಾವು ಅನುಸರಿಸಬೇಕು. ಬುದ್ಧಿ, ನೀತಿ, ಆತ್ಮ – ಎಲ್ಲದರಲ್ಲೂ ನಾವು ಅದನ್ನು ಅನುಸರಿಸಬೇಕು. ಮೊದಲು ಮಗು ಆಕಾರ, ಬಣ್ಣ, ಚಲನವಲನಗಳಲ್ಲಿ ಆಸಕ್ತಿಗೊಳ್ಳುತ್ತದೆ. ಆಮೇಲೆ ಹೀಗೇಕೆ ಇವೆ, ಇವು ಏನು ಎಂದು ಕುತೂಹಲ ಪಡುತ್ತದೆ. ತರುವಾಯ ತಾನು ಬಯಸಿದ ರೀತಿಯಲ್ಲಿ ಏಕಿರಬಾರದು ಇವೆಲ್ಲ ಎಂದು ಯೋಚಿಸಿ ಹಾಗೆ ಪ್ರಯೋಗ ಮಾಡುತ್ತದೆ. ಹೀಗೆ ಮೊದಲು ಆಟ, ಆಮೇಲೆ ನಿರೀಕ್ಷೆ–ಪರೀಕ್ಷೆ, ತರುವಾಯ ರಚನೆ. ಪ್ರತಿಯೊಂದು ಮಗುವಿನ ಉತ್ತಮೋತ್ತಮ ವಿಕಾಸವಾಗಬೇಕು ಎಂದರೆ ಬೆಳವಣಿಗೆಯ ಈ ಮೂರು ಮನೋಧರ್ಮಗಳಿಗೂ ಪುಷ್ಟಿಕೊಡಬೇಕು. ಇವನ್ನು ಮಾಡಲು ಶಿಕ್ಷಕನಿಗೆ ಶಿಶು ಮನೋಧರ್ಮ ಅರ್ಥವಾಗಿ ಅದರಲ್ಲಿ ತಾನು ಪ್ರವೇಶ ಮಾಡುವ ಶಕ್ತಿಬೇಕು. ಸ್ವಾಭಾವಿಕವಾಗಿಯೂ, ನೈಸರ್ಗಿಕವಾಗಿಯೂ ಹೆಂಗಸರು ಸಾಧಾರಣವಾಗಿ ಈ ಮೊದಲನೆ ಹಂತದ ಮಕ್ಕಳನ್ನು ಚೆನ್ನಾಗಿ ಅರಿತುಕೊಳ್ಳ ಬಲ್ಲರು. ಹೆಂಗಸರಲ್ಲಿ ವಿದ್ಯಾಭ್ಯಾಸವಿಲ್ಲದುದರಿಂದ ನಮ್ಮ ಶಿಕ್ಷಣ ಪದ್ಧತಿ ಬಹಳ ಕುಂಠಿತವಾಗಿದೆ. ಮಗುವನ್ನು ಬೆಳೆಸುವ ತಕ್ಕ ಶಿಕ್ಷಣ ತಾಯಿಗಿಲ್ಲ. ವಿದ್ಯಾವತಿಯರು ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡಲು ಬರುತ್ತಿಲ್ಲ. ನಮ್ಮ ಪಾಠಶಾಲೆಗಳನ್ನು ಸುಧಾರಿಸಬೇಕೆಂದರೆ ಮೊದಲು ನಮ್ಮ ಹುಡುಗಿಯರಿಗೆ, ಯುವತಿಯರಿಗೆ ಶಿಕ್ಷಣವಾಗಬೇಕು. ಅವರೇ ಮುಂದಿನ ತಲೆಮಾರುಗಳ ಸಹಜ ಸಂರಕ್ಷಕಿಯರು. ಅಲ್ಲಿ ಪ್ರಾರಂಭಮಾಡದೆ ಗಂಡಸರೇ ಎಷ್ಟು ಯೋಜನೆ ಮಾಡಿದರೂ ವ್ಯರ್ಥವಾಗುತ್ತದೆ. ಮಗುವಿನ ಮೇಲೆ ಪ್ರಭಾವ ಬೀಳುವ ವಯಸ್ಸು ದಾಟಿದ ಮೇಲೆಯೆ ಗಂಡಸಿನ ಪ್ರವೇಶ. ಎಂಟು ವರ್ಷದೊಳಗಿನ ಮಕ್ಕಳ ಪಾಠಶಾಲೆಗಳೆಲ್ಲ ಹೆಂಗಸರ ಕೈಯಲ್ಲೇ ಇರಬೇಕು. ಸಾಧಾರಣವಾಗಿ, ಎಲ್ಲೋ ಅಪವಾದವಾಗಿ ಹೊರತು ಗಂಡಸರು ಈ ಶಾಲೆಗಳಲ್ಲಿ ಇರಲೇಬಾರದು.

ಮಗುವಿನ ಬೆಳವಣಿಗೆಯ ಎರಡನೆ ಹಂತದಲ್ಲಿ ವಿದ್ಯಾರ್ಥಿಗಳ ವಿಚಾರ ಶಕ್ತಿಯನ್ನು ಪ್ರಚೋದನೆಮಾಡಿ ಸನ್ನಿವೇಶದ ಏಕೆ, ಹೇಗೆಗಳಿಗೆ ಉತ್ತರಕೊಡುವ ವ್ಯಕ್ತಿಗಳು ಬೇಕು. ನ್ಯೂಯಾರ್ಕಿನಲ್ಲಿ ಲೇಬರ್ ಯೂನಿಯನ್ ಫೆಡರೇಷನ್‌ರವರು ನಡೆಸುತ್ತಿದ್ದ ಒಂದು ಶಾಲೆಗೆ ನಾನು ಹೋಗಿದ್ದೆ. ಅಲ್ಲಿ ಇಡೀ ಸಮಾಜವೇ ಒಂದು ಕುಟುಂಬವಾಗಿ ಬಾಳುತ್ತಿತ್ತು. ಆಹಾರದ ಉತ್ಪತ್ತಿಯಲ್ಲಿ, ಉಳಿದ ಕೌಟುಂಬಿಕ ಕಾರ್ಯಗಳಲ್ಲಿ ಮಕ್ಕಳು ಭಾಗವಹಿಸುತ್ತಿದ್ದರು. ಪಾಠಶಾಲೆಯದೇ ಒಂದು ಗೋಶಾಲೆ. ಒಬ್ಬ ಶಿಕ್ಷಕ ಅದನ್ನು ನೋಡಿಕೊಳ್ಳುತ್ತಿದ್ದ. ಕೆಲವರು ಹುಡುಗರು ಅವನಿಗೆ ಸಹಾಯ ಮಾಡುತ್ತಿದ್ದರು. 'ಅರ್ಥಶಾಸ್ತ್ರ ತರಗತಿ' ಯ ಹಿಂದಕ್ಕೆ ಹೋಗಿ ಕುಳಿತೆ. ವಿದ್ಯಾರ್ಥಿಗಳು ೧೧ ವರ್ಷದ ಕೆಳಗಿನವರು. ವಿಷಯ

'ಒಂದು ಹಸುವನ್ನು ಕೊಳ್ಳುವುದು.' ಹತ್ತು ವರ್ಷದ ಹುಡುಗನೊಬ್ಬ ತರಗತಿ ಯನ್ನು ನಡೆಸಿದ. ಶಿಕ್ಷಕ ನನ್ನ ಜೊತೆಗೆ ಹಿಂದೆ ಬಂದು ಕುಳಿತ. ಗೋಶಾಲೆಯ ವ್ಯವಸ್ಥಾಪಕನ ಜೊತೆಯಲ್ಲಿ ಪಕ್ಕದ ಸಂತೆಗೆ ಒಂದು ಹಸುವನ್ನು ಕೊಳ್ಳಲು ಹೋಗಿದ್ದಾಗ ತನಗಾದ ಅನುಭವವನ್ನು ಆ ಹುಡುಗ ವಿವರಿಸಿದ. ಹೀಗಿತ್ತು ತರಗತಿ: "ನಾವಿಬ್ಬರೂ ಸಂತೆಗೆ ಹಸುವನ್ನು ಕೊಳ್ಳಲು ಹೋದೆವು. ನಮ್ಮ ಹಸುಗಳು ಕೊಡುವ ಹಾಲು ನಮಗೆಲ್ಲರಿಗೂ ಸಾಲುವುದಿಲ್ಲ." "ಸಂತೆ ಎಂದರೇನು" ಎಂದು ಕೇಳಿದ ಒಬ್ಬ ಹುಡುಗ. "ಪದಾರ್ಥಗಳನ್ನು ಮಾರುವ ಸ್ಥಳ. ಅಲ್ಲಿ ನಿಗಧಿ ಬೆಲೆ ಇಲ್ಲ. ಹೆಚ್ಚು ಬೆಲೆ ಕೊಟ್ಟವರಿಗೆ ಪದಾರ್ಥ ಸಿಗುತ್ತದೆ. ಪದಾರ್ಥಗಳನ್ನು ಹರಾಜು ಮಾಡುತ್ತಾರೆ." "ಅಂದರೆ?" ಮತ್ತೊಂದು ಪ್ರಶ್ನೆ. ಅದಕ್ಕೆ ವಿವರಣೆ, "ಒಬ್ಬೊಬ್ಬರು ಒಂದೊಂದು ಬೆಲೆಗೆ ಏಕೆ ಕೇಳುತ್ತಾರೆ" ಎಂಬುದು ಇನ್ನೊಬ್ಬನ ಪ್ರಶ್ನೆ. ಆ ಹುಡುಗ ಹೇಳಿದ, "ಮೊಟ್ಟ ಮೊದಲು ೭೫ರೂ,ಗೆ ಬೆಲೆ ಪ್ರಾರಂಭ. ಕಡೆಗೆ ನಾವು ೧೨೫ರೂ. ಹೇಳಿ ತೆಗೆದುಕೊಂಡೆವು. ನಮ್ಮದೇ ಕಡೆಯ ಸವಾಲು." "ಕಡೆಯ ಸವಾಲು ಎಂದರೇನು?" "ಮೊದಲು ೭೫ ಹೇಳಿದನಲ್ಲ ಒಬ್ಬ. ಇನ್ನೊಬ್ಬ ಸ್ವಲ್ಪ ಹೆಚ್ಚು ಹೇಳಿದ. ಹೀಗೆ ಒಬ್ಬೊಬ್ಬರೂ ಹೆಚ್ಚು ಬೆಲೆ ಹೇಳಿ, ಇನ್ನಾದರೂ ಇದೀರೋ ಹೆಚ್ಚು ಕೊಡುವವರು ಎಂದು ಸವಾಲು ಹಾಕುತ್ತಾನೆ. ನಾವು ೧೨೫ ರೂ. ಹೇಳಿದ ಮೇಲೆ ಯಾರೂ ಮರು ಸವಾಲು ಹಾಕಲಿಲ್ಲ. ಆದುದರಿಂದ ಹಸು ನಮಗೆ ಬಂತು." "೧೨೫ಕ್ಕೆ ಹೆಚ್ಚಾಗಿ ಯಾರೂ ಏಕೆ ಕೇಳಲಿಲ್ಲ?" ಆ ಹುಡುಗ ವಿವರವಾಗಿ ಹೇಳಿದ, "ಹರಾಜಿಗೆ ಮೊದಲೇ ಆ ಹಸುವಿನ ವಿವರಣಾ ಪತ್ರಿಕೆಯನ್ನು ನೋಡಿದರು. ವರ್ಷಕ್ಕೆ ಎಷ್ಟು ಹಾಲು ಕೊಡುತ್ತದೆ, ಅದರ ತಿಂಡಿಯ ವೆಚ್ಚ ಎಷ್ಟು, ಉಳಿದ ವೆಚ್ಚ ಏನು? ಇದಕ್ಕೆ ಇಷ್ಟು ಬೆಲೆ ಕೊಟ್ಟರೆ ಅದು ಕೊಡುವ ಹಾಲಿಗೆ ಸರಿ ಹೋಗುತ್ತದೆ ಎಂದು ತೀರ್ಮಾನಿಸಿಕೊಂಡಿದ್ದರು. ಈ ಲೆಕ್ಕವನ್ನು ಮುಟ್ಟಿದ ಮೇಲೆ ಯಾರೂ ಹೆಚ್ಚಿಗೆ ಕೇಳರು." ಈ ರೀತಿ ಮಕ್ಕಳು ಈ ವಿವರಗಳನ್ನು ಅರಿತುಕೊಳ್ಳಲು ಕಳೆದ ಒಂದು ಗಂಟೆಯ ಕಾಲ ದೊಡ್ಡ ಅರ್ಥಶಾಸ್ತ್ರವೇತ್ತರ ಸೂತ್ರಗಳ ಬಾಯಿಪಾಠ ಮಾಡುವುದಕ್ಕಿಂತ ಹೆಚ್ಚು ವಿಚಾರ ಪ್ರಚೋದಕವೂ, ಬೋಧಪ್ರದವೂ ಆಗಿತ್ತು. ತತ್ವಕ್ಕೆ ಅನುಭವ ಜೊತೆಯಾದರೆ, ಅನುಭವದಿಂದ ತತ್ವ ತಿಳಿದರೆ ಮುಂದಿನ ಹೆಜ್ಜೆ—ಸ್ವಂತ ರಚನೆ, ಕಲ್ಪನೆ.

ಈಗಿನ ಪದ್ಧತಿಯಲ್ಲಿ ಪ್ರತಿಭಾವಂತರೂ ಕಲ್ಪನಾಚತುರರೂ ಹುಟ್ಟುವುದು ಸಾಧ್ಯವಿಲ್ಲ. ನಮ್ಮ ವಿಶ್ವವಿದ್ಯಾಲಯಗಳ ಪದವೀಧರರು ಕೂಡ ಈ ಮಟ್ಟ ರನೆಯ ಹಂತಕ್ಕೆ ಬಂದಿಲ್ಲ. ಈ ದೋಷದಿಂದಲೇ ನಾವು ತೇಜೋಹೀನರಾಗಿದೇವೆ. ನಮ್ಮನ್ನು ಗುಮಾಸ್ತೆಗಳಾಗಿ ಮಾಡಲು ಬಂದುದು ಈ ವಿದ್ಯೆ. ಅದಕೆ

ವಿಚಾರ-ಕಲ್ಪನೆ ಏಕೆ? ಈ ಹಂತಕ್ಕೆ ಸ್ವಲ್ಪ ಅಭಿಕ್ರಮ, ಹೆಚ್ಚು ಆತ್ಮವಿಶ್ವಾಸ ಬೇಕು. ಇಲ್ಲಿ ಶಿಕ್ಷಕರು ಮಾಡಬೇಕಾದುದು ಪಕ್ಕದಲ್ಲಿ ನಿಂತು ನಿರೀಕ್ಷಿಸುವುದು, ಸಲಹೆ ಮಾಡುವುದು.

ಕಲಾದೃಷ್ಟಿಯಿಲ್ಲದ ವೃತ್ತಿ-ಶಿಕ್ಷಣ ಅಥವಾ ಶಿಕ್ಷಣ ಅಪೂರ್ಣ. ಶಿಕ್ಷಣಕ್ಕೂ ಕಲೆಗೂ ನಿಕಟ ಸಂಬಂಧ. ಕವೀಂದ್ರ ರವೀಂದ್ರರು ಈ ಅಂಶಕ್ಕೆ ಹೆಚ್ಚು ಗಮನ ಕೊಟ್ಟರು. ಪ್ರತಿಯೊಂದು ಗ್ರಾಮಶಾಲೆಯಲ್ಲಿಯೂ ಜನಪದ ಗೀತೆ, ಸಂಗೀತ, ಚಿತ್ರಕಲೆಗಳಿಗೆ ಒಂದು ಮುಖ್ಯ ಸ್ಥಾನವಿರಲೇ ಬೇಕು. ಮೂಲೋದ್ಯೋಗವೊಂದು ಮಾಧ್ಯಮವಾಗಿ, ಕಲೆ ಅದಕ್ಕೆ ಅಂಗವಾಗಿ ಒಂದು ಪಾಠಶಾಲೆಯನ್ನು ನಡೆಸಿದರೆ ಆ ಪಾಠಕ್ರಮ ಎಷ್ಟೇ ಸರಳ, ಸುಲಭ ಆಗಿರಲಿ ಗುಣವಂತರಾದ, ದೃಢಶೀಲರಾದ ಸ್ತ್ರೀಪುರುಷರು ಅಲ್ಲಿ ರೂಪುಗೊಂಡಾರು. ಸುಖಭೋಗದ ಆಸೆಗೆ ಪರಕೀಯರ ಕಾಲಿಗೆ ಬಿದ್ದು ಹೊರಳಾಡದೆ, ಸ್ವತಂತ್ರವಾಗಿ ಎದೆಸೆಟೆದು, ತಲೆಯೆತ್ತಿ ನಿಂತು ಜನತೆಯ ಜೀವನದಲ್ಲಿ ಬೆರೆತು ಕಷ್ಟ ಸಹಿಸಿಯಾರು. ಇಂಥ ದೃಢಧೀರ ಜನಾಂಗವನ್ನು ನಿರ್ಮಿಸಲು ನಮ್ಮ ಸರ್ವಶಕ್ತಿಯನ್ನು ವಿನಿಯೋಗಿಸದಿದ್ದರೆ, ಜನತೆಯ ಸಂಸ್ಕೃತಿಯ ಆಧಾರದ ಮೇಲೆ ರಾಷ್ಟ್ರವನ್ನು ಕಟ್ಟದಿದ್ದರೆ, ಬರೀ ಕಂಬ ಛಾವಣಿ ಕಟ್ಟಿ ಏನು ಲಾಭ? ತನ್ನದೇ ಆದ ಸಂಸ್ಕೃತಿಯಲ್ಲಿ ಬೆಳೆದುಬಾರದ ಯಾವ ರಾಷ್ಟ್ರವೂ ಮುಂಬರಿದು, ಜನಾಂಗಗಳ ನಡುವೆ ನಿಲ್ಲಬಾರದು. ಎರವಲು ಪುಕ್ಕದಿಂದ ಹಾರಲು ಬಂದೀತೆ? ಸಾಹಿತ್ಯ, ಸಂಗೀತ ಮತ್ತು ಕಲೆಗಳಿಗೆ ನಮ್ಮದೇ ಕಾಣಿಕೆ ಸಲ್ಲಬೇಕು.

ಗಾಂಧೀಜಿ ಹೇಳಿದಂತೆ ಉನ್ನತ ಶಿಕ್ಷಣ (ಕಾಲೇಜು) ತನ್ನ ವೆಚ್ಚವನ್ನು ತಾನೇ ನಿರ್ವಹಿಸಬೇಕು. ತನ್ನ ಹೊಲದಿಂದ ತಾನು ನಿರ್ವಹಿಸಲಾರದ ವ್ಯವಸಾಯ ಕಾಲೇಜು ವ್ಯರ್ಥ, ಅದರ ಹೆಸರಿಗೇ ಕಳಂಕ. ಎಲ್ಲ ವೃತ್ತಿ ಶಿಕ್ಷಣ ಶಾಲೆಗಳೂ, ಯಂತ್ರವಿಜ್ಞಾನ ಶಾಲೆಗಳೂ ಅಷ್ಟೇ; ತಮ್ಮ ವೆಚ್ಚವನ್ನು ತಾವೇ ಗಳಿಸಬೇಕು.

೨೩. ಸಂಘ ಜೀವನ-ಸಹಜೀವನ

ಇಲ್ಲಿಯವರೆಗೆ ವ್ಯಕ್ತಿಯ ನಿತ್ಯಜೀವನದ ಆರ್ಥಿಕ ವಿಚಾರವನ್ನೇ ಮುಖ್ಯವಾಗಿ ಚರ್ಚಿಸಿದೇವೆ. ಈ ಪ್ರಕರಣದಲ್ಲಿ ಸಮಾಜದ ಅಂಗವಾಗಿ ಅವನು ನಡೆಸುವ ಸಹ ಜೀವನವನ್ನು ಚರ್ಚಿಸೋಣ. ಮಾನವ ಜೀವನ ನಿಸರ್ಗದ ಒಂದು ಅಂಶ. ಈ ವಿಶ್ವದ ಬದುಕಿನಲ್ಲಿ ಒಬ್ಬೊಬ್ಬ ವ್ಯಕ್ತಿಯ ಜೀವನ ಒಂದು ನೀರು ಗುಳ್ಳೆ. ಈ ಹಿನ್ನೆಲೆಯಲ್ಲಿ ನಮ್ಮ ನಿತ್ಯ ಜೀವನವನ್ನು ಅರಿತುಕೊಳ್ಳಬೇಕು.

ವ್ಯಕ್ತಿಯ ಜೀವನವನ್ನಷ್ಟೇ ನೋಡಿದರೆ ಅದು ತತ್ಕಾಲದ್ದು. ಅದಕ್ಕೆ ಅದೇ ಗುರಿ. ಆದರೆ ಒಬ್ಬನ ಬದುಕು ಹಲವರ ಬಾಳಿನೊಳಕ್ಕೆ ಚಾಚಿಕೊಂಡಿ ರುತ್ತದೆ. ಮನುಷ್ಯ ತನ್ನ ಮನಸ್ಸಿಗೆ ಬಂದ ಹಾಗೆ ನಡೆಯಲಾರ. ಇತರರ ಯೋಗಕ್ಷೇಮದ ದೃಷ್ಟಿಯಿಂದ ಅವನ ನಡೆನುಡಿ ಸಂಯಮಿತವಾಗಬೇಕು, ಆದು ದರಿಂದ ಪ್ರತಿಯೊಬ್ಬ ವ್ಯಕ್ತಿಯ ನಡತೆ, ಅವನ ಅಭ್ಯಾಸ, ಅವನ ಆರೋಗ್ಯ, ಅವನ ವಸತಿ ಎಲ್ಲವೂ ಸುತ್ತಲಿನ ಸನ್ನಿವೇಶಕ್ಕೆ ಸಂಬಂಧಿಸಿವೆ.

ಈ ದೃಷ್ಟಿಯಿಂದ ಜನರು ಸಂಘಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ಸ್ಥೂಲವಾಗಿ ನಿರ್ಧರಿಸಬೇಕು. ಹಿಂದುಸ್ಥಾನದಲ್ಲಿ ನಮ್ಮ ವಸತಿಗಳೆಂದರೆ ಕೆಲವು ಮನೆಗಳ ಅಥವಾ ಗುಡಿಸಿಲುಗಳ ಗುಂಪು. ಅಲ್ಲೊಂದು ಇಲ್ಲೊಂದು ಗೊಂಚಲು. ಇವೇ ನಮ್ಮ ಹಳ್ಳಿಗಳು. ಆದುದರಿಂದ ನಮ್ಮ ಗ್ರಾಮಜೀವನವನ್ನು ಈ ನಿಟ್ಟಿ ನಿಂದ ಪರಿಶೀಲಿಸಬೇಕು.

ಒಂದು ಉದಾಹರಣೆ : ಮನುಷ್ಯ ತಿನ್ನುವುದು ತನ್ನ ದೇಹದ ಸವೆತವನ್ನು ತುಂಬಲಿಕ್ಕೆ, ದೇಹಕ್ಕೆ ಶಕ್ತಿ ಕೊಡಲಿಕ್ಕೆ, ರೋಗರುಜಿನಗಳನ್ನು ತಡೆಯುವಷ್ಟು ವೀರ್ಯವರ್ಧನಕ್ಕೆ. ನಾವು ತಿಂದುದರಲ್ಲಿ ದೇಹ ತನಗ ಬೇಕಾದುದನ್ನು ತೆಗೆದು ಕೊಂಡು, ತೆಗೆದುಕೊಳ್ಳದುದನ್ನು ಪ್ರಕೃತಿಗೇ ಹಿಂದಕ್ಕೆ ಕೊಡುತ್ತದೆ. ಹಾಗೆ ಹಿಂದಕ್ಕೆ ಕೊಟ್ಟುದನ್ನು ಪ್ರಕೃತಿ ಜೀರ್ಣಿಸಿಕೊಳ್ಳುವಂತೆ ಕೊಡಬೇಕು. ಇತರ ಮನುಷ್ಯರಿಗೆ ಹಿಂಸೆಯಾಗದಂತೆ ಕೊಡಬೇಕು. ಹೀಗೆ ಒಂದೊಂದು ಪ್ರಶ್ನೆಗೂ ಎರಡೆರಡು ಮುಖ ಇವೆ. ಇಲ್ಲಿ ಅದನ್ನು ಪರಿಶೀಲಿಸೋಣ. ಆದುದ ರಿಂದ ಈ ಪ್ರಕರಣದಲ್ಲಿ ನೈರ್ಮಲ್ಯ, ಆರೋಗ್ಯ, ವಸತಿ ಮುಂತಾದವು ಗಳ ಬಗ್ಗೆ ನಾನಾ ಅಂಶಗಳನ್ನು ಸ್ಥೂಲವಾಗಿ ಗಮನಿಸೋಣ. ಆಮೇಲೆ ಹಳ್ಳಿಯಲ್ಲಿ ಪರಸ್ಪರ ಸಂಬಂಧ. ಈಗಾಗಲೇ ನಾವು ಚರ್ಚಿಸಿರುವ ಆರ್ಥಿಕ

ರಚನೆ ಹಾಗಿರಲಿ, ಸಾಮಾಜಿಕ–ರಾಜಕೀಯದಲ್ಲಿ ಒಂದು ಸುಸಂಘಟಿತ ವಸ್ತುವಿನಂತೆ ಸುಗಮವಾಗಿ ಗ್ರಾಮಜೀವನ ಹೇಗೆ ನಡೆದೀತೋ ನೋಡೋಣ. ಈ ಗ್ರಾಮಗಳೇ ಸ್ವರಾಜ್ಯದ ತಳಹದಿ. ಆಡಳಿತ, ಪ್ರಜಾಪ್ರಭುತ್ವಗಳ ಜವಾಬದಾರಿಯನ್ನು ನಿರ್ವಹಿಸಲು ಬೇಕಾದ ಅನುಭವಕ್ಕೆ ಇವೇ ಶಿಕ್ಷಣ ರಂಗ. ಇಲ್ಲೇ ಆ ತರಬೇತು. ಆದುದರಿಂದ ಈ ಗ್ರಾಮ ಸಂಸ್ಥೆಗಳ ಮಹತ್ವವನ್ನು ಒತ್ತಿ ಹೇಳಬೇಕಾದುದು ಅಗತ್ಯ.

ಗ್ರಾಮ ಸಂಸ್ಥೆಯನ್ನು ಸರಿಯಾಗಿ ರೂಪಿಸಿದರೆ, ಅದರದೇ ಒಂದು ಪ್ರತ್ಯೇಕ ಸಂಸ್ಕೃತಿ ಬೆಳೆದೀತು. ವ್ಯಕ್ತಿಯ ವ್ಯಕ್ತಿತ್ವವಿದ್ದಂತೆ ಸಂಘದ ಸಮಷ್ಟಿ ವ್ಯಕ್ತಿತ್ವ ಅದರಲ್ಲಿ ಕಂಡುಬಂದೀತು. ಗ್ರಾಮ ಜೀವನದ ಈ ಅಂಶಗಳು ನಮ್ಮನ್ನು ಶಾಶ್ವತತೆಯ ಸಮೀಪಕ್ಕೆ ಒಯ್ದಾವು. ಮಾನವ ಜೀವನಕ್ಕೆ ಹೆಚ್ಚಿನ ಆಯುಸ್ಸೆಂದರೆ ನೂರು ವರ್ಷ. ಆದರೆ ಗ್ರಾಮ ಸಂಸ್ಕೃತಿಯ ಈ ಸಂಸ್ಥೆಗಳಿಗೆ ಸದಾ ಕಾಲ ಆಯುಸ್ಸು. ನಾವು ಬೆಳೆಸುವ ಸಂಸ್ಕೃತಿಗೆ ಮನುಷ್ಯ ಸ್ವಭಾವವೊಂದೇ ಆಧಾರವಲ್ಲ; ಈ ಗ್ರಂಥದಲ್ಲಿ ಮೊದಲಿನಿಂದ ಕೊನೆಯವರೆಗೆ ವಿವರಿಸಿರುವ ಮನೋಧರ್ಮವೂ ಆಧಾರವೇ. ನಿತ್ಯಜೀವನಕ್ಕೆ ಸತ್ಯ ಮತ್ತು ಅಹಿಂಸೆಗಳನ್ನು ಹೊಂದಿಸುವುದು ಹೇಗೆ ಎಂಬುದೇ ಇಲ್ಲಿ ವಿಚಾರ. ಪ್ರತಿಯೊಂದು ಅಂಶದಲ್ಲಿಯೂ ಈ ಮನೋಧರ್ಮವನ್ನು ಎಚ್ಚರದಿಂದ ಕಾಪಾಡಿಕೊಂಡರೆ ಈ ತತ್ವಗಳ ಆಧಾರದ ಮೇಲೆ ಸಮಾಜವನ್ನು ಕಟ್ಟಬಹುದು.

ನೈರ್ಮಲ್ಯ :

ವೈಯಕ್ತಿಕ ಶುಚಿ, ರೂಢಿ–ಸಂಪ್ರದಾಯಗಳ ಮೂಲಕ ಹಳ್ಳಿಗಳಲ್ಲಿ ಉತ್ತಮ ರೀತಿಯ ವೈಯಕ್ತಿಕ ಶುಚಿ ಕಂಡು ಬರುತ್ತದೆ. ಆಧುನಿಕ ಮಾಯೆಯಿಂದ ಈ ಕೆಲವು ಒಳ್ಳೆಯ ರೂಢಿಗಳು ದುರ್ದೈವವಶಾತ್ ಬಿಟ್ಟುಹೋಗುತ್ತಿವೆ. ಆದುದರಿಂದ ಹಳೆಯ ಕಾಲದ ವೈಯಕ್ತಿಕ ಶುಚಿಯ ಪದ್ಧತಿಗಳನ್ನೆಲ್ಲ ಮತ್ತೆ ಉಜ್ಜೀವನಗೊಳಿಸಬೇಕು. ಅಗತ್ಯವಿದ್ದರೆ ಹೊಸ ಪದ್ಧತಿಗಳನ್ನು ಮೊದಲಿಡಬಹುದು.

ಸಾಮೂಹಿಕ ಶುಚಿ :

ನಮ್ಮ ಹಳ್ಳಿಯ ಜೀವನದಲ್ಲಿ ಇದೇ ಬಹಳ ಅಭಾವ. ಹಳ್ಳಿಯ ಓಣಿ, ಬೀದಿ, ಬಯಲು, ಕೆರೆಯೇರಿ ಎಲ್ಲವೂ ಶೌಚ ಸ್ಥಳಗಳೇ. ಜನರು ಓಡಾಡುವ ಸ್ಥಳ ಎಂಬುದನ್ನೂ ಲಕ್ಷಿಸದೆ ಹಳ್ಳಿಯ ಜನ ಎಲ್ಲೆಂದರಲ್ಲಿಯೇ, ವಿವೇಕವಿಲ್ಲದೆ ಶೌಚ ಮಾಡುತ್ತಾರೆ. ಕುಡಿಯುವ ನೀರನ್ನೂ ಹೊಲಸು ಮಾಡುತ್ತಾರೆ. ಆದರೆ ಈ ತಪ್ಪೆಲ್ಲವೂ ಗ್ರಾಮಸ್ಥರದೇ ಅಲ್ಲ. ಹಳ್ಳಿಗಳಲ್ಲಿ ಮೂತ್ರಿಗಳೂ ಇಲ್ಲ. ಶೌಚಕೂಪಗಳೂ ಇಲ್ಲ. ಮನೆಗಳೆಲ್ಲ ಚಿಕ್ಕವಾಗಿ ಇಂಥ ಸೌಕರ್ಯಗಳಿಗೆ

ಸ್ವಲ್ಪವೂ ಸ್ಥಳವಿಲ್ಲದಂತೆ ಒತ್ತಾಗಿರುತ್ತವೆ. ಆದುದರಿಂದ ಸಾಮೂಹಿಕವಾದ ಮೂತ್ರಿಗಳನ್ನೂ ಶೌಚಕೂಪಗಳನ್ನೂ ಸ್ನಾನಗೃಹಗಳನ್ನೂ ಕಟ್ಟುವುದು ಮತ್ತು ಸರಿಯಾಗಿ ನೋಡಿಕೊಳ್ಳುವುದು ಅತ್ಯಗತ್ಯ. ಊರಿನ ಕಸ, ಮಲಮೂತ್ರ ಎಲ್ಲ ವನ್ನೂ ಗೊಬ್ಬರ ಮಾಡುವ ಒಂದು ವ್ಯವಸ್ಥೆ–ಯೋಜನೆ ಬೇಕು. ನೈರ್ಮಲ್ಯ ದೃಷ್ಟಿಯಿಂದಲೂ ಗ್ರಾಮದ ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದಲೂ ಇಂಥ ಕಾರ್ಯ ಕ್ರಮ ಅತ್ಯಗತ್ಯ. ಸಾಮೂಹಿಕ ಶುಚಿಯ ವಿವರಗಳಿವು :

ಅ. ಸುಲಭವಾದ ಚರಂಡಿಗಳು, ಬಯಲು ಚರಂಡಿಗಳಾದರೂ ಸರಿ. ಆಗಾಗ ಕ್ಲುಪ್ತವಾಗಿ ಅವನ್ನು ಸ್ಥಳದಲ್ಲಿಯೇ ಸಿಗುವ ಕ್ರಿಮಿನಾಶಕ ಪದಾರ್ಥಗಳಿಂದ ತೊಳೆಯುವುದು.

ಆ. ಕೈ ತೋಟಗಳಿಗೆ, ಹಣ್ಣಿನಗಿಡಗಳಿಗೆ ಚರಂಡಿಯ ನೀರನ್ನು ಹರಿಯಿ ಸುವುದು. ಶೌಚಕುಟಿಗಳನ್ನು ಏರ್ಪಡಿಸುವುದು.

ಇ. ಕಸವನ್ನು ಕೂಡಿಹಾಕಿ ಗೊಬ್ಬರ ಮಾಡುವುದು.

ಈ. ಹಳ್ಳಿಯ ಬಾವಿ, ದಾರಿ, ಕೆರೆ, ಬಯಲುಗಳನ್ನು ಚೊಕ್ಕಟವಾಗಿ ಹೊಲಸಾಗದಂತೆ ನೋಡಿಕೊಳ್ಳುವುದು.

ಉ. ಸಾರ್ವಜನಿಕರಿಗಾಗಿ ಚಿಕ್ಕ ತೋಟಗಳನ್ನು ಏರ್ಪಡಿಸುವುದು; ಮಕ್ಕಳ ಆಟದ ಬಯಲು, ಅಲ್ಲಲ್ಲಿ ಶುಚಿಯಾದ ತೆರವು ನೆಲ.

ಆರೋಗ್ಯ :

೧. ಗ್ರಾಮದ ಆಹಾರಶಾಸ್ತ್ರ :

ಹಳ್ಳಿಗಳಲ್ಲಿ ಆಹಾರಲೋಪವೇ ಹೆಚ್ಚು. ಹಳ್ಳಿಗಳಲ್ಲಿಯೇ ಬೆಳೆಯುವ ಬೇರೆ ಬೇರೆ ಆಹಾರ ಪದಾರ್ಥಗಳ ಪೌಷ್ಟಿಕ ಅಂಶಗಳ ಜ್ಞಾನವನ್ನು ಹಳ್ಳಿಯವರಿಗೆ ನೀಡ ಬೇಕು. ಸಂಪೂರ್ಣ ಆಹಾರದ ಅರ್ಥವನ್ನೂ ಹಳ್ಳಿಯ ಪರಿಸ್ಥಿತಿಯಲ್ಲಿ ಎಲ್ಲಾ ಪೌಷ್ಟಿಕ ಅಂಶಗಳೂ ಇರುವ ಸಂಪೂರ್ಣ ಆಹಾರವನ್ನು ಹೇಗೆ ಒದಗಿಸಿಕೊಳ್ಳಬೇಕೆಂಬುದನ್ನೂ ತಿಳಿಸಬೇಕು. ಆರೋಗ್ಯ ಶಾಖೆ ಈ ಪ್ರಚಾರವನ್ನು ಬಿರುಸಾಗಿ ಮಾಡಬೇಕು, ಮೊಟ್ಟಮೊದಲು ಭತ್ತದ ಗಿರಣಿಗಳನ್ನು ಮುಚ್ಚಬೇಕು.

೨. ಕುಡಿಯುವ ನೀರು :

ಕುಡಿಯಲು ಸ್ವಚ್ಛವಾದ ನೀರನ್ನು ಒದಗಿಸಬೇಕಾದುದು ಅಗತ್ಯ. ಹಳ್ಳಿಗಳಲ್ಲಿ ಇನ್ನೂ ಎಷ್ಟೋ ಬಾವಿಗಳು ಬೇಕು. ಹಳೆಯವನ್ನು ಸರಿಪಡಿಸಬೇಕು. ಕೆಲವು ಕಡೆ ನಿರ್ಮಲವಾದ ಕೆರೆಗಳನ್ನು ಕುಡಿಯುವ ನೀರಿಗಾಗಿ ಬಳಸಬಹುದು. ಈ ಕೆಲಸ ಮೊಟ್ಟಮೊದಲು ಮಾಡಬೇಕಾದುದು.

೩. ಮುಂಜಾಗರೂಕತೆ :

ರೋಗರುಜಿನಗಳ ಬಗ್ಗೆ ಮುಂಜಾಗರೂಕತೆಯ ಕಾರ್ಯಕ್ರಮಕ್ಕೇ ಹೆಚ್ಚು

ಗಮನ ಕೊಟ್ಟು, ರೋಗವನ್ನು ಗುಣಪಡಿಸುವ ಔಷಧಕ್ಕೆ ಕಡಮೆ ಗಮನ ಕೊಡಬೇಕು. ಎಂದರೆ, ವೈಯಕ್ತಿಕ-ಸಾಮೂಹಿಕ ಸಂಪೂರ್ಣಾಹಾರ, ಗ್ರಾಮ ನೈರ್ಮಲ್ಯ, ವ್ಯಾಯಾಮ–ವಿಶ್ರಾಂತಿ, ಆರೋಗ್ಯಪ್ರದ ಜೀವನ ಪದ್ಧತಿ.

ಸಾಮಾನ್ಯ ಕಾಯಿಲೆ ಸುಲಭ ಚಿಕಿತ್ಸೆ :

ಹಳ್ಳಿಯಲ್ಲಿ ಸಾಮಾನ್ಯವಾದ ಕಾಯಿಲೆಗಳ ಪರಿಹಾರ ಕ್ರಮವನ್ನೂ ಮುಂಜಾಗರೂಕತೆಯ ವಿವರಗಳನ್ನೂ ತಿಳಿಸಬೇಕು. ಸುಲಭ ಚಿಕಿತ್ಸೆ, ನಿಸರ್ಗೋಪಚಾರಗಳನ್ನು ಕಲಿಸಬೇಕು. ಹಳ್ಳಿಗಳಲ್ಲಿ ದೊರೆಯುವ ಗಿಡಮೂಲಿಕೆಗಳ ಗುಣಗಳನ್ನು ತಿಳಿಸಬೇಕು. ಸುಲಭವಾದ ಕ್ರಿಮಿನಾಶಕಗಳ ಉಪಯೋಗ ತಿಳಿದಿರಬೇಕು. ಅವನ್ನು ಒದಗಿಸಬೆ ಕು. ವಿಷಮೂಲಿಕೆಗಳ ಪ್ರಯೋಜನವನ್ನು ಆರೋಗ್ಯ ಶಾಖೆ ಸಂಶೋಧಿಸಿ ತಿಳಿಸಬೇಕು.

೫. ವ್ಯಾಯಾಮ ವಿಶ್ರಾಂತಿ :

ಬಯಲಿನಲ್ಲಿ ವ್ಯಾಯಾಮಕ್ಕೂ ವಿಶ್ರಾಂತಿಗೂ ತಕ್ಕ ಸ್ಥಳವನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ಒದಗಿಸಬೇಕು. ಸೂರ್ಯ ನಮಸ್ಕಾರ, ಆಸನ ಸಾಮೂಹಿಕ ಆಟಗಳನ್ನು ಪ್ರೋತ್ಸಾಹಿಸಬೇಕು.

ವಸತಿ :

ಆರೋಗ್ಯಕರ, ಉತ್ತಮ ಗೃಹ ನಿರ್ಮಾಣ ಬಹಳ ಮುಖ್ಯ ಅಂಶ. ಹಳ್ಳಿಯ ಮನೆಗಳು ಅನಾರೋಗ್ಯಕರ, ಬಹಳ ಒತ್ತು. ಯಾವ ಯೋಜನೆಯನ್ನೂ ಅನುಸರಿಸಿ ಅದನ್ನು ಕಟ್ಟಿಲ್ಲ. ಇದನ್ನು ಬದಲಿಸಿ ಆರೋಗ್ಯ-ನಿರ್ಮಾಣ ಶಾಖೆಗಳ ನೆರವಿನಿಂದ ಗ್ರಾಮಪಂಚಾಯಿತಿಯೇ ಒಂದು ಯೋಜನೆ ಸಿದ್ಧಪಡಿಸಬೇಕು. ಅದರಲ್ಲಿ ಈ ಅಂಶಗಳಿರಬೇಕು.

ಅ. ಊರಿನ ವಿಸ್ತರಣಕ್ಕೆ ಸ್ಥಳ ಮಾಡಿ ಊರೊಳಗಿನ ಇರುಕನ್ನು ಕಡಮೆ ಮಾಡಬೇಕು.

ಆ. ಇನ್ನು ಮುಂದೆ ಸಹಕಾರಪದ್ಧತಿಯಂತೆ ಮನೆಗಳನ್ನು ಕಟ್ಟಬೇಕು.

ಇ. ಪ್ರಚಾರ ಮಾಡಿ ಇರುವ ಮನೆಗಳನ್ನು ಉತ್ತಮಪಡಿಸಬೇಕು.

ಈ. ಮನೆಗಳಿಗೂ ಓಣಿಗಳಿಗೂ ಚರಂಡಿಗಳನ್ನು ಮಾಡಬೇಕು. ಮನೆಗಳಿಗೆ ಇಂಗುಬಚ್ಚಲನ್ನು ತೋಡಬೇಕು. ಅದನ್ನು ೩–೪ ತಿಂಗಳಿಗೊಮ್ಮೆ ಚೊಕ್ಕಟ ಮಾಡಬೇಕು. ಓಣಿಗಳಿಗೆ ಕಾಲುವೆ ತೋಡಿದರೆ ಸಾಕು. ಅದನ್ನೂ ತಿಂಗಳಿಗೊಮ್ಮೆ ಸ್ವಚ್ಛ ಮಾಡಬೇಕು. ಕ್ರಿಮಿನಾಶಕಗಳನ್ನು ಬಳಸಿ ಶುಚಿ ಮಾಡಬೇಕು. ಚರಂಡಿಯ ನೀರನ್ನು ಕಾಯಿಪಲ್ಯ, ಗಿಡಗಳನ್ನು ಬೆಳೆಸಲು ಉಪಯೋಗಿಸಬೇಕು.

ಉ. ಹಳ್ಳಿಗಳಲ್ಲಿ ಮನೆಗಳು ಒತ್ತಾಗಿ ಗುಂಪಾಗಿ ಇರುವುದರಿಂದ ಹೊರ

ಗಡೆ ಶೌಚಕೂಪಗಳನ್ನೂ, ಬಟ್ಟೆ ಒಗೆಯಲು, ಮೈ ತೊಳೆಯಲು ಸ್ಥಳಗಳನ್ನೂ ಏರ್ಪಡಿಸಬೇಕು.

ಊ. ಊರಿನಲ್ಲಿ ನೀರು ನಿಲ್ಲುವ ಗುಂಡಿ ಹೊಂಡಗಳೆಲ್ಲವನ್ನೂ ಮುಚ್ಚಬೇಕು. ಇಲ್ಲದಿದ್ದರೆ ಮಲೇರಿಯಾ ಬರುವ ಸಂಭವವಿದೆ.

ಎ. ಊರಿನಲ್ಲಿ ಬೀದಿ, ರಸ್ತೆಗಳನ್ನು ಯೋಜನಾನುಸಾರ ಮಾಡುವುದು.

ಏ. ಹಳ್ಳಿಯ ಪರಿಸ್ಥಿತಿಗೆ ಹೊಂದುವ ಮಾದರಿ ಮನೆಗಳನ್ನು ಕಟ್ಟಿ ಆರೋಗ್ಯಶಾಲೆ-ನಿರ್ಮಾಣ ಶಾಖೆಗಳವರು ಪ್ರದರ್ಶಿಸಬೇಕು.

ಐ. ಗ್ರಾಮ ನೈರ್ಮಲ್ಯಕ್ಕೆ ಅವಕಾಶವಿಲ್ಲದ ಹಳ್ಳಿಗಳನ್ನು ಪೂರಾ ಬೇರೆ ಪ್ರದೇಶಕ್ಕೇ ಕ್ರಮವಾಗಿ ಬದಲಿಸಬೇಕು.

ಒ. ಮುಂದೆ ಕಟ್ಟುವ ಎಲ್ಲಾ ವಸತಿ-ಯೋಜನೆಗಳಲ್ಲೂ ಹರಿಜನರಿಗೇ ಬೇರೆ ಕೇರಿ ಕಟ್ಟುವುದನ್ನು ತಪ್ಪಿಸಬೇಕು.

ಗ್ರಾಮ ಸಂಘಟನೆ-ಸಂಸ್ಥೆ:

ಗ್ರಾಮ ಸಂಘಟನೆಯನ್ನು ಮೂರು ಸಂಸ್ಥೆಗಳ ಮೂಲಕ ಮಾಡಬಹುದು:

೧. ಗ್ರಾಮ ಸ್ವರಾಜ್ಯದ ಪದ್ಧತಿಯಲ್ಲಿ ಗ್ರಾಮದ ಆಡಳಿತಕ್ಕಾಗಿ ಒಂದು ಗ್ರಾಮ ಪಂಚಾಯತಿ;

೨. ಗ್ರಾಮದ ಆರ್ಥಿಕ ವ್ಯವಸ್ಥೆಗಾಗಿ ಒಂದು ವಿವಿಧೋದ್ದೇಶದ ಸಮಗ್ರ ಸಹಕಾರಸಂಘ;

೩. ಗ್ರಾಮಾಭಿವೃದ್ಧಿಯ ಕಾರ್ಯವನ್ನು ಜನಶಕ್ತಿಯಿಂದ ನಡೆಸಲು ಒಂದು ಗ್ರಾಮ ಸೇವಾ ಸಂಘ.

೧. ಗ್ರಾಮ ಪಂಚಾಯತಿ:–

ವಯಸ್ಕರ ಮತದಾನದಿಂದ ಆರಿಸಿದ ಗ್ರಾಮ ಪಂಚಾಯತಿ ಹಳ್ಳಿಹಳ್ಳಿಯಲ್ಲೂ ಅಥವಾ ಹಳ್ಳಿಗಳ ಗುಂಪಿಗೊಂದರಂತೆ ಇರಬೇಕು. ಇದಕ್ಕಾಗಿ ಹಳ್ಳಿಯಲ್ಲಿ ವಿಭಾಗಗಳನ್ನು ಮಾಡಬಹುದು. ರಸ್ತೆ, ನೀರಿನ ವ್ಯವಸ್ಥೆ, ಶಿಕ್ಷಣ, ರೋಗಿಗಳ ಚಿಕಿತ್ಸೆ, ನೈರ್ಮಲ್ಯ, ಒಂದು ಮಿತಿಯೊಳಗೆ ನ್ಯಾಯದ ಏರ್ಪಾಟು ಈ ಮುಂತಾದ ಸೇವಾಕಾರ್ಯವೆಲ್ಲ ಪಂಚಾಯಿತಿಗೆ ಸೇರಿದುದೇ. ಪ್ರತಿಯೊಂದು ಹಳ್ಳಿಯಲ್ಲಿ ಈ ಸೇವಾಕಾರ್ಯ ನಡೆಯಲೇ ಬೇಕು. ಹಳ್ಳಿಯ ಕಂದಾಯದಲ್ಲಿ ಇದಕ್ಕಾಗಿ ತೆಗೆದಿಟ್ಟ ಹಣ ಈ ಸೇವಾಕಾರ್ಯಕ್ಕೆ ಸಾಲದಿದ್ದರೆ ಉಳಿದುದನ್ನು ಸರಕಾರ ಕೊಡಬೇಕು. ಇದರ ಜೊತೆಗೆ ಇನ್ನೊಂದು ರೀತಿಯ ಸೇವೆ - ಸ್ವಲ್ಪ ಭಾಗ ಸ್ಥಳದ ಜನರಿಂದ, ಸ್ವಲ್ಪಭಾಗ ಸರಕಾರದಿಂದ ಹಣದ ವ್ಯವಸ್ಥೆಯಾಗಿ ನಡೆಯಬೇಕು. ಪುಸ್ತಕ ಭಂಡಾರ, ಗ್ರಾಮಭವನ, ಪ್ರದರ್ಶನ ಇತ್ಯಾದಿ,

ಒಂದು ಕ್ಷೇತ್ರದ ಎಲ್ಲಾ ಪಂಚಾಯತಿಗಳೂ ಸೇರಿ ಒಂದು ಕೇಂದ್ರ

ಪಂಚಾಯತಿ ಇರಬೇಕು. ಗ್ರಾಮ ಪಂಚಾಯತಿಗಳ ಈ ವಿವಿಧ ಸೇವಾ ಕಾರ್ಯಗಳನ್ನು ಪರಸ್ಪರ ಹೊಂದಿಸಿ ಕೇಂದ್ರ ಪಂಚಾಯತಿಯು ಗ್ರಾಮ ಪಂಚಾಯತಿ ಗಳಿಗೆ ಮಾರ್ಗದರ್ಶನ ಮಾಡುತ್ತ, ಅವುಗಳ ಲೆಕ್ಕಗಳನ್ನು, ಕೆಲಸವನ್ನು ಪರಿ ಶೀಲಿಸಬೇಕು. ಕೇಂದ್ರ ಪಂಚಾಯತಿ ದೊಡ್ಡ ಚಿಕಿತ್ಸಾಲಯವನ್ನೂ ಉತ್ತಮ ಮೂಲಶಿಕ್ಷಣ ಶಾಲೆಯನ್ನೂ ನಡೆಸಬೇಕು. ಕೇಂದ್ರ ಪಂಚಾಯತಿಗೆ ಒಬ್ಬ ಅಸಿಸ್ಟೆಂಟ್ ಇಂಜನೀಯರ್ ಇರಬೇಕು. ಅವರು ನಿರ್ಮಾಣ ಕಾರ್ಯಗಳ ಅಂದಾಜು ಪಟ್ಟಿ ಮಾಡಿ ಕೆಲಸಗಳನ್ನು ನಡೆಸಬೇಕು. ಎಲ್ಲಾ ಪಂಚಾಯತಿಗಳ ಪ್ರತಿನಿಧಿ ಗಳು ಸೇರಿ ಕೇಂದ್ರ ಪಂಚಾಯತಿ. ಇದಕ್ಕೆ ಪಂಚಾಯತಿಗಳಿಂದ ಆದಾಯದ ಪಾಲೂ, ಸರಕಾರದ ಸಹಾಯ ಧನವೂ ಸಿಗಬೇಕು.

ವಿ. ಸೂ:– ಗ್ರಾಮ ಪಂಚಾಯತಿಗಳು ಬರೀ ಆಡಳಿತ ಸಂಸ್ಥೆಗಳಾಗಿರ ಬಾರದು. ಗ್ರಾಮಸ್ಥರನ್ನು ಜವಾಬದಾರರನ್ನಾಗಿ ಮಾಡಲು ಪ್ರತಿಯೊಬ್ಬ ವಯಸ್ಕರರಿಗೂ ಅವನ ಹಕ್ಕು ಬಾಧ್ಯತೆಗಳನ್ನೂ ತಿಳಿಸಿ ತರಬೇತು ಮಾಡಬೇಕು. ಜೂಜು ಮುಂತಾದ ದುರಭ್ಯಾಸಗಳನ್ನು ಹೋಗಲಾಡಿಸಲು ಸಮಾಜದ ಅಂಧ ಸಂಪ್ರದಾಯಗಳನ್ನು, ದುರಾಚಾರಗಳನ್ನು ನೀಗಲು, ಅಸ್ಪೃಶ್ಯತಾ ನಿವಾರಣೆ ಮಾಡಲು ಸಮಾಜ ಸುಧಾರಣೆಯ ಕೆಲಸ ಮಾಡಬೇಕು.

ಹರಿಜನರೂ ಆದಿವಾಸಿಗಳೂ ಬಹುಕಾಲದಿಂದ ಹಿಂದುಳಿದಿದ್ದಾರೆ. ಅವರನ್ನು ಮೇಲೆತ್ತಲು ವಿಶೇಷ ಪ್ರಯತ್ನ ನಡೆಯಬೇಕು. ಹೆಂಗಸರ ದುರವಸ್ಥೆ ಇನ್ನೂ ಕಷ್ಟತರ ಸಮಸ್ಯೆ. ಒಂದು ಸಂಸ್ಥೆ, ಒಂದು ಶಾಖೆ ಇದನ್ನು ನಿರ್ವಹಿಸಲಾರದು. ಹಳೆಯ ದುರಭಿಮಾನಗಳನ್ನು ನೀಗಿ ಸಾಮಾಜಿಕ ಚೇತನವನ್ನು ಎಚ್ಚರಿಸುವ ಕೆಲಸ ಇದು. ಈ ಕೆಲಸಕ್ಕೆ ವಿಶೇಷ ಗಮನ ಕೊಡಬೇಕು. ವ್ಯವಹಾರನುಭವ, ಗೃಹ ವಿಜ್ಞಾನದ ಪರಿಚಯ ಇರುವ ಹೆಂಗಸರು ಈ ಕೆಲಸಕ್ಕೆ ಉಪಯುಕ್ತರು.

೨. ವಿವಿಧೋದ್ದೇಶ ಸಹಕಾರ ಸಂಘ :

ರಾಜಕೀಯಕ್ಕೆ ಮತ್ತು ಆಡಳಿತಕ್ಕೆ ಪಂಚಾಯತಿಯಿದ್ದ ಹಾಗೆ ಹಳ್ಳಿಯ ಆರ್ಥಿಕ ವ್ಯವಸ್ಥೆಗೆ ವಿವಿದ್ಧೋದ್ದೇಶ ಸಹಕಾರ ಸಂಘ. ಆ ಸಂಘ ಈ ಕೆಲಸ ಗಳನ್ನು ನಿರ್ವಹಿಸಬೇಕು.

೧. ಹಳ್ಳಿಯಲ್ಲಿ ಬೆಳೆದ ಧಾನ್ಯವನ್ನೆಲ್ಲ ಕೂಡಿಹಾಕಿ ತೆಗೆದಿಡುವುದು;

೨. ಆಹಾರವಸ್ತುಗಳನ್ನು ಸಿದ್ಧಮಾಡುವುದು;

೩. ಹಳ್ಳಿಯಲ್ಲಿ ಬೆಳೆದ ಪದಾರ್ಥಗಳ, ಹೊರಗಿನಿಂದ ತರಿಸಿದ ಪದಾರ್ಥಗಳ ಯೋಗ್ಯ ವಿತರಣ;

೪. ಕೃಷಿ – ಗ್ರಾಮೋದ್ಯೋಗದ ಉಪಕರಣಗಳ ಸಂಗ್ರಹ – ಮಾರಾಟ;

೫. ಸ್ಥಳೀಯ ಉದ್ಯೋಗಗಳಿಗಾಗಿ ಹತ್ತಿ, ಉಣ್ಣೆ, ಲೋಹಗಳಂಥ ಮೂಲ ವಸ್ತುಗಳ ಸಂಗ್ರಹ, ಮಾರಾಟ;
೬. ಹಳ್ಳಿಯಲ್ಲಿ ತಯಾರಾದ ಪದಾರ್ಥಗಳ ಮಾರಾಟ;
೭. ಹಳ್ಳಿಯ ಅಗತ್ಯಗಳಿಗೆ ಆಗಿ ಮಿಕ್ಕ ಹೆಚ್ಚಿನ ಬೆಳೆಯನ್ನು ಹೊರಗಿನ ಪದಾರ್ಥಗಳನ್ನು ತರಿಸಲು ಮಾಡಿದ ವಿನಿಮಯ;
೮. ಇಡೀ ಹಳ್ಳಿಗೆ ಲಾಭಕರವಾಗುವಂತೆ ಬೇರೆ ಬೇರೆ ಗ್ರಾಮೋದ್ಯೋಗ ಸಹಕಾರ ಸಂಘಗಳ ಸಮನ್ವಯ. ಜನರೆಲ್ಲರಿಗೂ ಕೈತುಂಬಾ ಕೆಲಸವಿರುವಂತೆ ವ್ಯವಸ್ಥೆ. ಊರಿನಲ್ಲಿ ನಿರುದ್ಯೋಗ, ಅರೆಬರೆ ಉದ್ಯೋಗ ಇರಬಾರದು;
೯. ಕಲಾಶಿಕ್ಷಣ ಪಡೆದ ಹೊಸಹೊಸ ತಜ್ಞರನ್ನು ಹಳ್ಳಿಗಳಿಗೆ ಕಳಿಸಿ ಅಲ್ಲಿನ ಕಸಬುದಾರರು ತಮ್ಮ ಕೆಲಸವನ್ನು ಉತ್ತಮಪಡಿಸಲು ಶಿಕ್ಷಣಕೊಡಿಸಬೇಕು. ಆ ಶಿಕ್ಷಣದ ವೆಚ್ಚವನ್ನು ಸರಕಾರ ವಹಿಸಬೇಕು;
೧೦. ಒಂದೊಂದು ಕ್ಷೇತ್ರಕ್ಕೂ ಒಬ್ಬ ಪೂರ್ಣ ತರಬೇತಾದ ಸಹಕಾರ ಸಂಘಗಳ ಅಧಿಕಾರಿ ಇರಬೇಕು;
೧೧. ಹಳ್ಳಿಗಳಿಗೆ ಬೇಕಾದ ಜ್ಞಾನದ ವಿಚಾರದ ಪರಿಚಯ.

೩. ಗ್ರಾಮ ಸೇವಾ ಸಂಘಗಳು:

ಗ್ರಾಮ ಪಂಚಾಯಿತಿ, ವಿವಿಧೋದ್ದೇಶ ಸಹಕಾರ ಸಂಘ ಎರಡೂ ಸೇರಿ ಕೆಲಸ ಮಾಡುವಾಗ ಗ್ರಾಮ ಸೇವಾ ಸಂಘಕ್ಕೇನು ಕೆಲಸ ಎಂದು ಕೇಳಬಹುದು. ಇವೆರಡನ್ನೂ ಚುನಾಯಿತರಾದ ಕೆಲವರು ಮಾತ್ರವೇ ನಡೆಸುತ್ತಾರೆ, ಅವರನ್ನು ಚುನಾಯಿಸಿದ ಉಳಿದ ಜನರೆಲ್ಲ, ಅವರಿಗೇನಾದರೂ ರಚನಾತ್ಮಕ ಕೆಲಸವನ್ನು ಕೊಡದಿದ್ದರೆ, ಸುಮ್ಮನೆ ಪಂಚಾಯಿತಿ–ಸಹಕಾರ ಸಂಘಗಳ ಕೆಲಸವನ್ನು ನೋಡುತ್ತ ಕೊಡಬೇಕಾಗುತ್ತದೆ. ಅವೆರಡೂ ಸಂಸ್ಥೆಗಳು ತಮ್ಮ ಕೆಲಸವನ್ನು ನಿರ್ವಹಿಸಲು ತಕ್ಕ ಬೆಂಬಲ ಕೊಡಲು ಗ್ರಾಮ ಸೇವಾ ಸಂಸ್ಥೆ. ಇವು ಸ್ವತಂತ್ರ ಸಂಸ್ಥೆಗಳು. ಅವಕ್ಕೆ ಸ್ವತಂತ್ರನಿಯಮ, ಹಣಕಾಸು. ಸರಕಾರ ಅವಕ್ಕೆ ಧನ ಸಹಾಯ ಮಾಡಬಹುದು. ಆದರೆ ಅವುಗಳ ಸ್ವಾತಂತ್ರ್ಯವನ್ನು ಮೊಟಕು ಮಾಡಬಾರದು. ಗ್ರಾಮ ನೈರ್ಮಲ್ಯ ಕಾರ್ಯಕ್ಕೆ, ಜಾತ್ರೆ–ಪರಿಷೆಗಳ ವ್ಯವಸ್ಥೆಗೆ, ಊರಿನ ಕಾವಲಿಗೆ, ಅಂಟುರೋಗ–ಪ್ರವಾಹಬಾಧೆ ಮುಂತಾದುದು ಬಂದಾಗ ಈ ಗ್ರಾಮ ಸೇವಾ ಸಂಘ ಸ್ವಯಂ ಸೇವಕರನ್ನು ತಯಾರು ಮಾಡುತ್ತದೆ. ಪಂಚಾಯಿತಿ, ಸಹಕಾರ ಸಂಘ, ಸರಕಾರಗಳಲ್ಲಿ ನೌಕರಿಮಾಡುವ ಒಬ್ಬೊಬ್ಬನಿಗೂ ಹತ್ತಾರು ಜನ ಸ್ವಯಂ ಸೇವಕರು ಬೇಕು. ಅವರನ್ನು ಒದಗಿಸುವುದು ಗ್ರಾಮ ಸೇವಾ ಸಂಘದ ಕೆಲಸ.

ಗ್ರಾಮ ಸಂಘಟನೆಗೆ ಮೇಲಿನ ಮೂರು ಸಂಸ್ಥೆಗಳು ಸಾಧನ ಎಂದಿದೇವೆ. ಗ್ರಾಮ ಸಂಘಟನೆಯ ಮುಖ್ಯೋದ್ದೇಶ್ಯ – ಅನ್ನ, ಬಟ್ಟೆ ಮುಂತಾದವುಗಳಲ್ಲಿ

ಸ್ವಾವಲಂಬನೆ, ಸ್ವಸಾಮರ್ಥ್ಯ ಸ್ವಸಂರಕ್ಷಣೆಗಳು ಗ್ರಾಮ ಜೀವನದ ತಳಹದಿಯಾಗುವಂತೆ ಕ್ರಾಂತಿಮಯ ಪ್ರಜಾತಂತ್ರ ಪದ್ಧತಿಯಿಂದ ಮಾಡುವುದು.

ಗ್ರಾಮ ಸಂಸ್ಕೃತಿ :

ಇದು ಬಹಳ ಔದಾಸೀನ್ಯಕ್ಕೆ ಗುರಿಯಾದ ವಸ್ತು. ಗ್ರಾಮ ಸಂಸ್ಕೃತಿಯು ಗಾಢವಾದ ಪ್ರಭಾವವಿಲ್ಲದಿದ್ದರೆ ಗ್ರಾಮ ಸ್ವಾವಲಂಬನ, ಸ್ವಪರಿಪಾಲನೆ ಎರಡೂ ದೃಢವಾಗವು. ಅವಾಸ್ತವದಾಗುತ್ತದೆ. ಕಾಲಪುರುಷನ ಗದಾಘಾತಕ್ಕೆ ಮಣಿಯದ ದೃಢವಾದ ಗ್ರಾಮ ಸಂಸ್ಕೃತಿಯೊಂದನ್ನು ಭಾರತ ಸೃಷ್ಟಿಸಿಕೊಂಡಿದೆ. ಅದನ್ನು ಮತ್ತೆ ಸ್ಥಾಪಿಸಿ, ಬೆಳೆಸಬೇಕು. ಹಳ್ಳಿಯ ಹೆಂಗಸರಲ್ಲಿ ಈ ಸಂಸ್ಕೃತಿ ಇನ್ನೂ ಜೀವಂತವಾಗಿದೆ. ಅದರಿಂದಲೇ ಗ್ರಾಮಜೀವನಕ್ಕೆ ಶಕ್ತಿ-ಸೌಂದರ್ಯ ಬಂದಿವೆ. ಜೀವನದ ಅನುಭವ, ಜೀವನದ ಸಮಸ್ಯೆಗಳ ವ್ಯಾವಹಾರಿಕ ಜ್ಞಾನಗಳಲ್ಲಿ ಪದವೀಧರನಾದ ಮೊಮ್ಮಗನಿಗಿಂತ ಹಳ್ಳಿಯ ಅಡುಗೂಲಜ್ಜಿಯೇ ಮೇಲು ಎಂದು ಹೇಳುವುದುಂಟು. ಗ್ರಾಮ ಸಂಸ್ಕೃತಿ ವರ್ಧನಕ್ಕೆ ಈ ಸೂಚನೆಗಳು:

೧. ಗ್ರಾಮ ಸಂಪ್ರದಾಯ ರೂಢಿಗಳು, ಗ್ರಾಮ ಸಂಸ್ಥೆಗಳು, ಸ್ಥಳ ಪುರಾಣ – ಇವುಗಳ ಅಭ್ಯಾಸ.

೨. ಹಳ್ಳಿಯ ಪದಗಳು, ಹಳ್ಳಿಯ ದಂತಕಥೆಗಳು, ಹಳ್ಳಿಯ ಕಲೆ ಇವುಗಳ ಅಧ್ಯಯನ.

೩. ಗ್ರಾಮಕಲೆ, ಗ್ರಾಮೋದ್ಯೋಗಗಳ ಪುನರುಜ್ಜೀವನ.

೪. ಭಜನೆ, ಕೀರ್ತನೆ, ಕಥೆ, ನಾಟಕಗಳ ಏರ್ಪಾಡು; ತನ್ಮೂಲಕ ಶಿಕ್ಷಣ.

೫. ಜಾತಿಭೇದಗಳಿಲ್ಲದೆ ಗ್ರಾಮದ ಐಕ್ಯಮತದ ಬೆಳವಣಿಗೆಗೆ ಹಳ್ಳಿಯ ಜಾತ್ರೆ-ಪರಿಷೆ, ಹಬ್ಬ-ಹರಿದಿನಗಳ ವ್ಯವಸ್ಥೆ. ಪರಸ್ಪರರ ಹಬ್ಬಗಳಲ್ಲಿ, ಜಾತ್ರೆಗಳಲ್ಲಿ ಬೇರೆ-ಬೇರೆ ಗುಂಪಿನ ಜನ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು.

೬. ಗ್ರಾಮ ಪುಸ್ತಕ ಭಂಡಾರ, ಗ್ರಾಮ ವಸ್ತು ಸಂಗ್ರಹಾಲಯ, ಗ್ರಾಮ ವ್ಯಾಸಂಗಗೋಷ್ಠಿಗಳ ಏರ್ಪಾಡು.

೭. ಆಟಗಳು, ನಾಟಕ, ಕೋಲಾಟ, ಯಾತ್ರೆ-ಪ್ರವಾಸಗಳಂಥ ಆರೋಗ್ಯಕರ ಮನರಂಜನೆಯ ಏರ್ಪಾಟು.

ಗ್ರಾಮ ಸಂಸ್ಕೃತಿಯ ಪುನರುಜ್ಜೀವನ ಕಾರ್ಯ ರಚನಾತ್ಮಕವಾಗಿದ್ದು, ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹಳ್ಳಿಯವರಿಗೆ ಉನ್ನತ ಗುಣಗಳನ್ನು ಕಲಿಸುವಂಥದಾಗಿರಬೇಕು.

೨೪. ಒಂದು ಯೋಜನೆ

ಶಾಶ್ವತ ವ್ಯವಸ್ಥೆಯನ್ನು ಏರ್ಪಡಿಸಲು ಅಗತ್ಯವಾದ ಹಲವಾರು ಅಂಶಗಳನ್ನು ಇಲ್ಲಿಯವರೆಗೆ ನೋಡಿದೇವೆ. ದೇಶವನ್ನು ಯಾವ ರೀತಿ ರಚಿಸಬೇಕೋ ಸ್ಥೂಲವಾಗಿ ಹೆಗ್ಗುರುತನ್ನು ಹೇಳಿದೇವೆ.

ಈ ಗುರಿಯನ್ನು ಸಾಧಿಸಲು ನಮಗೆ ಒಂದು ಪ್ರಯೋಗ ಕ್ಷೇತ್ರ ಬೇಕು, ಅಲ್ಲಿ ಕೆಲಸಗಾರರು ತರಬೇತಾಗುತ್ತಾರೆ. ಆದ್ದರಿಂದ ಕೆಲವು ಹಳ್ಳಿಗಳನ್ನು ಆರಿಸಿ, ಅಲ್ಲಿ ಸರ್ವತೋಮುಖವಾಗಿ ಇಲ್ಲಿಯವರೆಗೆ ವಿಚಾರ ಮಾಡಿದ ರೀತಿಯಲ್ಲಿ ಕೆಲಸ ನಡೆಸಬೇಕು. ಇದಕ್ಕಾಗಿ ಕೆಲವು ಸಂಸ್ಥೆಗಳನ್ನು ಸ್ಥಾಪಿಸಬೇಕು. ಪ್ರತಿಯೊಂದೂ ಸ್ವತಂತ್ರ ಪ್ರಜಾರಾಜ್ಯ ಪದ್ಧತಿಯಿಂದ ಗ್ರಾಮ ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕು. ಒಂದು ಸಾಮಾನ್ಯ ಯೋಜನೆಯಂತೆ ಕೆಲಸ ಮಾಡುವ ಸಂಸ್ಥೆಗಳನ್ನು 'ಲೋಕ ಸೇವಕ ಸಂಘ' ಎನ್ನಬಹುದು.

ಈ ಸಂಘಗಳು ಪುಷ್ಟಿಗೊಂಡರೆ ಆಡಳಿತ ಯಾವ ರೀತಿ ನಡೆಯಬೇಕೆಂದು ಸರಕಾರಕ್ಕೆ ಮಾರ್ಗದರ್ಶನ ಮಾಡಬಲ್ಲವು; ಸರಕಾರಕ್ಕೆ ಅಂಕುಶ-ವಿರೋಧ ಪಕ್ಷವಾಗಿ ಇರಬಲ್ಲವು.

ಸ್ಪರ್ಧಾಮಯ ಆರ್ಥಿಕ ವ್ಯವಸ್ಥೆಯಲ್ಲಿ ಸರಕಾರದ ಆಡಳಿತವನ್ನು ವಿರೋಧ ಪಕ್ಷ ತಡೆಗಟ್ಟಿ ದಾರಿಗೆ ತರುತ್ತದೆ. ಸತ್ಯ ಅಹಿಂಸೆಗಳ ಮೇಲೆ ಕಟ್ಟಿದ ಆರ್ಥಿಕ ವ್ಯವಸ್ಥೆಯಲ್ಲಿ ಅಂಥ ವಿರೋಧ ಪಕ್ಷ ಇರಬಾರದು. ನಾವು ಮಾಡುವ ಕೆಲಸವನ್ನು ಸರಕಾರ ಗಮನಿಸುವಂತೆ ಅವರ ದೃಷ್ಟಿ ಸೆಳೆದು, ನಮ್ಮ ಯೋಜನೆಗಳನ್ನೆ ಅವರು ಅನುಸರಿಸುವಂತೆ ಮಾಡಬೇಕು. ಮೊದಲು ಈ ಸಂಸ್ಥೆ ಬೇರೆ ಬೇರೆ ಕೇಂದ್ರಗಳಲ್ಲಿ ಪ್ರಾರಂಭವಾದೀತು. ಕಡೆಗೆ ಎಲ್ಲವೂ ಒಟ್ಟು ಸೇರಿ ಲೋಕ ಸೇವಕ ಸಂಘ ಆದಾವು. ಈಗ ಈ ಜನಶಕ್ತಿ ಅಜೇಯವಾಗುತ್ತದೆ. ಸರಕಾರ ಅದನ್ನು ಅಸಡ್ಡೆ ಮಾಡಲಾರದು. ಆಗ ರಾಷ್ಟ್ರದ ವಿಧಾನ ಸಭೆಗಳಲ್ಲಿ ಈ ಸಂಘದ ಧೋರಣೆಗೆ ಸಾಕಷ್ಟು ಮನ್ನಣೆ ದೊರೆತೀತು.

ಆ ಸಂಘಕ್ಕೆ ಒಂದು ರೂಪು ಹೀಗಿರಬೇಕು:

ಕಾರ್ಯ ಸಮಿತಿ:

ಅಧ್ಯಕ್ಷ, ಕಾರ್ಯದರ್ಶಿಗಳ ಸಮೇತ ಒಂಬತ್ತು ಜನರದು ಒಂದು ಕಾರ್ಯ ಸಮಿತಿ. ಅಧ್ಯಕ್ಷ, ಕಾರ್ಯದರ್ಶಿಗಳಲ್ಲದೆ ಉಳಿದ ಸದಸ್ಯರು ಬೇರೆ ಬೇರೆ ಶಾಖೆ

ಗಳನ್ನು ವಹಿಸಿಕೊಳ್ಳುತ್ತಾರೆ. ಅವರೇ ಶಾಖಾ ಸಂಚಾಲಕರು. ಶಾಖೆಗಳು: ೧. ಆರೋಗ್ಯ ೨. ಶಿಕ್ಷಣ ೩. ಅರ್ಥವ್ಯವಸ್ಥೆ ೪. ರಾಜಕೀಯ ೫. ಸಾಮಾಜಿಕ ೬. ಪ್ರಕಟಣೆ

ಸಂಚಾಲಕರ ಸಭೆ:

ಕಾರ್ಯಸಮಿತಿಯಲ್ಲಿ ತಮ್ಮ ತಮ್ಮ ಶಾಖೆಯ ರೀತಿ ನೀತಿಯನ್ನು ಸಂಚಾಲಕರು ರೂಪಿಸಿಕೊಳ್ಳುತ್ತಾರೆ. ಆಯಾ ಶಾಖೆಯಲ್ಲಿ ಒಂದು ಪ್ರತ್ಯೇಕ ಸಮಿತಿ. ಅದರ ಮೂಲಕ ಸಂಚಾಲಕನು ಆ ಶಾಖೆಯ ಕೆಲಸವನ್ನು ನಡೆಸುತ್ತಾನೆ. ಆ ಸಮಿತಿಯಲ್ಲಿ ಬೇರೆ ಬೇರೆ ಕಾರ್ಯ ವಿಭಾಗದ ತಜ್ಞರು ಇರುತ್ತಾರೆ.

ಉದಾ: ಆರೋಗ್ಯ ಸಮಿತಿಯಲ್ಲಿ ಆಹಾರ ಶಾಖೆಯ ಕಾರ್ಯದರ್ಶಿ, ಮಕ್ಕಳ ಯೋಗಕ್ಷೇಮದ ಕಾರ್ಯದರ್ಶಿ ಇತ್ಯಾದಿ ಇರುತ್ತಾರೆ. ಈ ಕಾರ್ಯದರ್ಶಿಗಳೆಲ್ಲ ಸೇರಿ ಸಂಚಾಲಕ ಸಭೆ. ಅದಕ್ಕೆ ಸಂಚಾಲಕರು ಅಧ್ಯಕ್ಷರು.

ಕಾರ್ಯದರ್ಶಿಗಳ ಸಮಿತಿ:

ಕಾರ್ಯದರ್ಶಿಗಳ ಸಮಿತಿಗೆ ಆಧಾರ ಪ್ರಾಂತಿಯ ತಜ್ಞರ ಮಂಡಲಿಗಳು. ಆಹಾರ ಸಮಿತಿಗೆ ಆಹಾರ ಶಾಖಾ ಕಾರ್ಯದರ್ಶಿ ಅಧ್ಯಕ್ಷ. ಲೋಕ ಸೇವಕ ಸಂಘದ ಆಹಾರ ಶಾಸ್ತ್ರಜ್ಞರು ಸದಸ್ಯರು. ದೇಶದ ಎಲ್ಲಾ ಕಡೆಗಳಿಂದ ಅವರು ಬರುತ್ತಾರೆ. ವಿಚಾರ ವಿನಿಮಯಕ್ಕೆ ಅವಕಾಶವಾಗುತ್ತದೆ.

ಎಲ್ಲಾ ಪ್ರಾಂತಗಳಲ್ಲೂ ಇಂಥ ಮಂಡಲಿಗಳು ಕೆಲಸ ಮಾಡುತ್ತಿರುತ್ತವೆ. ಹೀಗೆ ಇಡೀ ದೇಶಗಳಲ್ಲಿ ಈ ಸಂಸ್ಥೆ ಏಕಪ್ರಕಾರವಾಗಿ ಕೆಲಸ ಮಾಡುತ್ತವೆ.

ಸಕಲ ಸಂಚಾಲಕರ ಸಭೆ:

ಲೋಕ ಸೇವಾ ಸಂಘದ ಕಾರ್ಯಸಮಿತಿ ಎಲ್ಲಾ ಪ್ರಾಂತಗಳ ಸಂಚಾಲಕರ ಸದಸ್ಯರನ್ನು ನೆರೆಯಿಸುತ್ತದೆ. ಅಲ್ಲಿ ಸಾಮಾನ್ಯ ನೀತಿಯನ್ನು ನಿರ್ಧರಿಸುತ್ತಾರೆ. ಹೀಗೆಯೇ ತಜ್ಞರ ಮಂಡಲಿಗಳೂ, ಕಾರ್ಯದರ್ಶಿಗಳ ಸಭೆಗಳೂ ನಡೆದು ವಿಚಾರ ವಿನಿಮಯವಾಗುತ್ತದೆ.

ಶಿಕ್ಷಣ:

ತಾಲೀಮಿ ಸಂಘಗಳು ಪೂರ್ವ–ಮೂಲಶಿಕ್ಷಣ, ಮೂಲ ಶಿಕ್ಷಣತರಗತಿಗಳನ್ನು ನಡೆಸುತ್ತವೆ. ಇನ್ನೊಂದು ಗುಂಪು ಹಿಂದೂಸ್ಥಾನಿ ಪ್ರಚಾರ ನಡೆಸುತ್ತದೆ. ಇನ್ನೊಂದು ಗುಂಪು ಉತ್ತರ–ಮೂಲಶಿಕ್ಷಣದ ವಿದ್ಯಾಪೀಠಗಳನ್ನು ನಡೆಸಿ ಉದ್ಯೋಗ–ವೃತ್ತಿ ಶಿಕ್ಷಣವನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಕೊಟ್ಟೀತು. ಸಂಶೋಧನೆ ನಡೆಸೀತು. ಈ ವಿದ್ಯಾಪೀಠಗಳು ತರುಣರನ್ನು ಯೋಗ್ಯ ರೀತಿಯಲ್ಲಿ ತರಬೇತು ಮಾಡಿ ರಚನಾತ್ಮಕ ಕಾರ್ಯದಲ್ಲಿ ಅವರನ್ನು ತೊಡಗಿಸಲು ಸಹಾಯ ಮಾಡುತ್ತವೆ. ಈ ವಿದ್ಯಾಪೀಠಗಳಿಗೆ ಆಧಾರ ತಾಲೀಮೀ ಸಂಘಗಳು.

ಆರ್ಥಿಕ ವಿಭಾಗ :

ಆರ್ಥಿಕ ವಿಭಾಗದಲ್ಲಿ ವ್ಯವಸಾಯ ಶಾಖೆ, ಗ್ರಾಮೋದ್ಯೋಗ, ವಿವಿಧೋದ್ದೇಶ ಸಹಕಾರ ಸಂಘಗಳು, ರಾಜಕೀಯ ಶಾಖೆ, ಪ್ರಚಾರ ಶಾಖೆ ಇರುತ್ತವೆ.

ವ್ಯವಸಾಯ ಶಾಖೆಯಲ್ಲಿ ಕೃಷಿಯ ಸ್ವಸಂಪೂರ್ಣತೆ, ವೃತ್ತಿ ಸಂಬಂಧ ಎರಡಕ್ಕೂ ಸಂಬಂಧಿಸಿದ ವಿಷಯಗಳಿವೆ. ಮೊದಲನೆಯದರಲ್ಲಿ ದಿನಬಳಕೆಯ ಬೆಳೆ, ಕಾಯಿಪಲ್ಯ, ಹಣ್ಣುಹಂಪಲು ಇತ್ಯಾದಿ. ಎರಡನೆಯದರಲ್ಲಿ ಹಣ ತೆಗೆವ ಬೆಳೆಗಳು.

ಪಶುಪಾಲನಾ ಶಾಖೆಯಲ್ಲಿ ಗೋಸಂವರ್ಧನ, ಕುರಿ ಸಾಕಣೆ, ಇವಕ್ಕೆ ಸಂಬಂಧಿಸಿದಂತೆ ರೇಶಿಮೆ ಕೆಲಸ, ಮೀನುಸಾಕಣೆ. ಇದರಲ್ಲಿಯೇ ಕ್ಷೀರೋತ್ಪತ್ತಿ ವಿಭಾಜನ. ಇದಕ್ಕೊಂದು ಉಪ ಉತ್ಪತ್ತಿ ವಿಭಾಗ: ಕೊಂಬಿನ ಕೆಲಸ, ಚರ್ಮದ ಕೆಲಸ, ಗೋಂದು-ವಜ್ರಸರಿ ಇತ್ಯಾದಿಗಳಿಗಾಗಿ.

ಗ್ರಾಮೋದ್ಯೋಗಗಳಲ್ಲಿ ಮೊದಲು ವ್ಯವಸಾಯ ಶಾಖೆಗೆ ಸಂಬಂಧಿಸಿದ ಹಾಗೆ ಆಹಾರದ ಕೈಗಾರಿಕೆ, ಇನ್ನೊಂದು ಭಾಗ ಬಟ್ಟೆ, ಸಾಬೂನು, ಕಾಗದ, ಗಡಿಗೆ-ಮಡಕೆ, ಚರ್ಮದ ಸಾಮಾನು ಇತ್ಯಾದಿ ದಿನಬಳಕೆಯ ಪದಾರ್ಥಗಳದು.

ವಿವಿಧೋದ್ದೇಶ ಸಹಕಾರ ಸಂಘಗಳು ಉತ್ಪತ್ತಿ ಮಾಡುವವರಿಗೂ, ಬಳಸುವವರಿಗೂ ನಡುವಿನ ಸೇತುವೆ. ಹಂಚಿಕೆಯೂ ಅದರ ಕೆಲಸವೇ. ಮೂಲ ವಸ್ತುವನ್ನು ಉತ್ಪಾದಕರಿಗೆ ಒದಗಿಸಿ, ಅವರು ಸಿದ್ಧ ಮಾಡಿದ ಪದಾರ್ಥವನ್ನು ಸಂಗ್ರಹಿಸಿ ಮಾರಾಟ ಮಾಡಬೇಕು. ಧನ ಸಹಾಯಕ್ಕಿಂತ ಹೆಚ್ಚಾಗಿ ಪರಿಶ್ರಮ ಸಹಾಯ ಹೆಚ್ಚು ಮಾಡಬೇಕು.

ರಾಜಕೀಯ ವಿಭಾಗ ಜನರ ಆರ್ಥಿಕ ಕಾರ್ಯಕಲಾಪಗಳಿಗೂ ಸರಕಾರಕ್ಕೂ ನಡುವಿನ ಸೂತ್ರ. ಈ ಶಾಖೆಯ ಕಾರ್ಯದರ್ಶಿ ಸರಕಾರಕ್ಕೂ ಜನರಿಗೂ ಸಂಪರ್ಕ ತರುವ ಮಧ್ಯವರ್ತಿ. ಪ್ರಾಂತೀಯ, ಕೇಂದ್ರ ಸರಕಾರಗಳನ್ನು ಕಂಡು ಜನರ ಕಲ್ಯಾಣಕ್ಕಾಗಿ ಮಹೋದ್ಯೋಗಗಳೆಲ್ಲ ಸರಿಯಾಗಿ ನಿಯಂತ್ರಣವಾಗುವಂತೆ, ರಾಷ್ಟ್ರೀಯ ಆಡಳಿತ ವರ್ಗ ಸರಿಯಾಗಿ ಕೆಲಸ ಮಾಡುವಂತೆ ಪ್ರಯತ್ನಿಸುತ್ತಾನೆ.

ಈ ಶಾಖೆಯ ಇನ್ನೊಂದು ಭಾಗ ಪ್ರಚಾರದ್ದು. ವಿದ್ಯಾಪೀಠದ ಸಂಶೋಧನ ಶಾಖೆಯವರು ಸಂಗ್ರಹಿಸಿದ ಜ್ಞಾನವನ್ನೂ ಜನರಿಗೆ ಉಪಯೋಗವಾಗುವ ಅಂಕಿ ಅಂಶಗಳನ್ನೂ ಇವರು ಪ್ರಚಾರ ಮಾಡುತ್ತಾರೆ. ಪ್ರಕಟನಾ ಶಾಖೆಯೊಂದಿಗೆ ಕೆಲಸ ನಡೆಸುತ್ತಾರೆ.

ರಾಜಕೀಯ ವಿಭಾಗ :

ಇದರಲ್ಲಿ ಗ್ರಾಮ ಪಂಚಾಯಿತಿಗಳ ಇತರ ರಾಜಕೀಯ ಸಂಸ್ಥೆಗಳ ಸಂಘಟನೆಗೆ ಒಂದು ಶಾಖೆಯಿರುತ್ತವೆ. ಇನ್ನೊಂದು ಕೇಂದ್ರ-ಪ್ರದೇಶ ಸರಕಾರಗಳ

ಸಂಪರ್ಕಶಾಖೆ. ಆರ್ಥಿಕ ವಿಭಾಗದ ಸಂಪರ್ಕ ಶಾಖಾಧಿಕಾರಿಯ ಜೊತೆಗೂಡಿ ಕೆಲಸ ಮಾಡುತ್ತದೆ ಈ ಶಾಖೆ.

ಸಾಮಾಜಿಕ ವಿಭಾಗ:-

ಅದರಲ್ಲಿ ೧. ಜಾತಿಗಳ ಸೌಹಾರ್ದ; ೨. ಹರಿಜನರ, ಹಿಂದುಳಿದವರ ಉದ್ಧಾರ; ೩. ಕೃಷಿ ಕೂಲಿಕಾರರ, ಉಳಿದ ಕೆಲಸಗಾರರ ಸಂಘಟನೆ; ೪. ಯುವ ಜನರ, ಸ್ವಯಂಸೇವಕರ ಶಿಕ್ಷಣ; ೫. ಸ್ತ್ರೀಯರ ಕುಂದು ಕೊರತೆಗಳ ನಿವಾರಣೆ – ಇಷ್ಟು ಶಾಖೆಗಳು.

ಪ್ರಕಟನೆಃ

ಶಾಶ್ವತೋಪಯೋಗದ ಪುಸ್ತಕಗಳನ್ನು ಈ ಶಾಖೆ ಪ್ರಕಟಿಸುತ್ತದೆ. ಪಠ್ಯ ಪುಸ್ತಕ, ನಿದರ್ಶನ ಗ್ರಂಥಗಳನ್ನೂ, ಬೇರೆ ಬೇರೆ ಕಾರ್ಯಕ್ರಮಗಳನ್ನು ಪೋಣಿಸುವ ಪತ್ರಿಕೆಗಳನ್ನೂ ಪ್ರಕಟಿಸುತ್ತದೆ.

ಕೊನೆ ಮಾತು:

ಇದು ಬಹಳ ವಿಸ್ತಾರವಾದ ಯೋಜನೆ ಎನಿಸೀತು. ಕೃತಿಯಲ್ಲಿ ಇದು ಬಹಳ ಸುಲಭ. ಒಂದೊಂದು ಲೋಕಸೇವಕ ಸಂಘವು ೨೫–೩೦ ಸಾವಿರ ಜನ ವಸತಿಯ ೧೫–೨೦ ಹಳ್ಳಿಗಳನ್ನು ತನ್ನ ಕಾರ್ಯ ಕ್ಷೇತ್ರವಾಗಿ ಮಾಡಿಕೊಳ್ಳುತ್ತದೆ. ಮೇಲೆ ಹೇಳಿದ ಎಲ್ಲಾ ಕಾರ್ಯಕ್ರಮಗಳನ್ನೂ ನಡೆಸಿ ಪಡೆದ ಅನುಭವ ಸಾರ್ವಜನಿಕ ಕಾರ್ಯದಲ್ಲಿ ಶಿಕ್ಷಣವಾದೀತು. ಸರಕಾರಕ್ಕೂ ಒಂದು ಮಾದರಿಯಾಗಿ, ನಿಜವಾದ ಸ್ವರಾಜ್ಯವನ್ನು ಜನತೆಗೆ ಒದಗಿಸಲು ದಾರಿ ಮಾಡೀತು.

ಲೋಕ ಸೇವಕ ಸಂಘದ ಸದಸ್ಯರ ಪ್ರತಿಜ್ಞಾಪತ್ರ

೧, ಲೋಕಸೇವಕ ಸಂಘದ ನಿಯಮಾವಳಿಯನ್ನು ಓದಿ ನಾನು ಅದರ ಸದಸ್ಯನಾಗಬಯಸುತ್ತೇನೆ. ದೈವಕೃಪೆಯಿದ್ದರೆ ಯಥಾಶಕ್ತಿ ಯಥಾಮತಿ ಸಂಘದ ಉದ್ದೇಶ್ಯ ಸಾಧನೆಗಾಗಿ, ಹಳ್ಳಿಯ ಬಡವರ ದುಃಖ ನಿವಾರಣೆ – ಸೇವೆಗಾಗಿ ದುಡಿಯುತ್ತೇನೆ.

೨. ಸಂಘದ ಧ್ಯೇಯಗಳಿಗೆ ಅನುಗುಣವಾಗಿ ನಡೆಯಲು ಸರ್ವ ಶಕ್ತಿಯಿಂದಲೂ ಯತ್ನಿಸುತ್ತೇನೆ.

೩. ಸಹಾಯ, ಸಹಕಾರ ದೊರೆತಲೆಲ್ಲ ರಾಜಕೀಯ ಭೇದಗಳನ್ನೂ ಗಮನಿಸಿದೆ ನನ್ನ ಕರ್ತವ್ಯವನ್ನು ನಿರ್ವಹಿಸುತ್ತೇನೆ.

೪. ಲೋಕಸೇವಕ ಸಂಘ ಅಪ್ಪಣೆ ಮಾಡದ ಹೊರತು ನಾನು ರಾಜಕೀಯದಲ್ಲಿ ಪ್ರವೇಶಿಸುವುದಿಲ್ಲ. ವಿಧಾನ ಸಭೆಗೆ ಸದಸ್ಯನಾಗೆಂದರೆ ಲೋಕ ಸೇವಕ ಸಂಘ ಕೊಡುವ ವೇತನದಲ್ಲಿ ಜೀವನವನ್ನು ನಿರ್ವಹಿಸಿ ಉಳಿದುದನ್ನು ಸಂಘಕ್ಕೆ ಕೊಡುತ್ತೇನೆ.

೫. ಸ್ವಯಂ ನೂತ ದಾರದ್ದೋ ಅಥವಾ ಚರಖಾ ಸಂಘದಿಂದ ಪ್ರಮಾಣಿತವಾದದ್ದೋ ಖಾದಿಯನ್ನೇ ಧರಿಸುತ್ತೇನೆ. ಉಳಿದ ವಸ್ತುಗಳ ಬದಲು ಗ್ರಾಮೋದ್ಯೋಗದ ವಸ್ತುಗಳನ್ನೇ ಬಳಸುತ್ತೇನೆ. ಮದ್ಯಪಾನ ಮಾಡೆ. ಅಸ್ಪೃಶ್ಯತೆಯನ್ನು ವೈಯಕ್ತಿಕವಾಗಿ ನನ್ನ ಕುಟುಂಬದಲ್ಲಿ ತ್ಯಜಿಸುತ್ತೇನೆ. ಅಂತರ್ಜಾತೀಯ ಸೌಹಾರ್ದದಲ್ಲಿ ನನಗೆ ವಿಶ್ವಾಸವಿದೆ. ಸರ್ವಧರ್ಮಗಳಲ್ಲಿಯೂ ಆದರವಿದೆ. ಸಮಾನಾವಕಾಶ ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಸಮಾನ ಗೌರವ ಸಿಗಬೇಕೆಂಬುದಕ್ಕೆ ನನ್ನ ಒಪ್ಪಿಗೆ.

ರುಜು—

ಹೀಗೆ ಸುವ್ಯವಸ್ಥಿತವಾದ ಲೋಕಸೇವಕ ಸಂಘಗಳು ದೇಶದಲ್ಲೆಲ್ಲಾ ಹರಡಿ ಸಾರ್ವಜನಿಕ ಜೀವನಕ್ಕೆ ಕಳೆತುಂಬುತ್ತವೆ. ರಾಷ್ಟ್ರೀಯ ಕ್ಷೇತ್ರದಲ್ಲಿ ವಿಸ್ತಾರವಾದ ಭಾರಗಳನ್ನು ಹೊರಲು ರಾಜಕಾರಣಿಗಳಿಗೆ ಇಲ್ಲಿ ತರಬೇತು ಸಿಗುತ್ತದೆ.

ಇಂಥ ಸಂಸ್ಥೆಯನ್ನು ಕಟ್ಟಿ ಸತ್ಯ, ಅಹಿಂಸೆಗಳ ಸಮಾಜವನ್ನು ರಚಿಸಲು ದೇಶ ಸಂಕಲ್ಪಿಸದಿದ್ದರೆ ನಮ್ಮ ಆರ್ಥಿಕ, ಸಾಮಾಜಿಕ, ರಾಜಕೀಯ ಜೀವನದಲ್ಲಿ ಸ್ಥಿರತೆ, ಶಾಶ್ವತತೆ ಸಾಧ್ಯವಿಲ್ಲ. ಈಗಿನ ಸ್ಪರ್ಧೆ, ಕೇಂದ್ರೀಯ ಉದ್ಯೋಗಗಳ ಸಮಾಜ ಹಲಕೆಲವು ವರ್ಗಗಳಿಗೊಮ್ಮೆ ಭಯಂಕರ ಸ್ಫೋಟನೆಗಳನ್ನು ತರುತ್ತದೆ. ರಾಷ್ಟ್ರಗಳು ಒಂದು ಗುರಿಯ ಕಡೆ ಸಾಗಬೇಕೆಂದರೆ ಈ ಆಸ್ಫೋಟನೆಗಳು ನಿಲ್ಲಬೇಕು. ಆಗ ರಾಷ್ಟ್ರಗಳಲ್ಲಿ ಶಾಂತಿ, ವ್ಯಕ್ತಿಗಳಿಗೆ ಅಭಿವೃದ್ಧಿ ಸಾಧ್ಯ.

ಇಂಥ ರಾಜ್ಯದಲ್ಲಿ ಮಾತ್ರ ಪ್ರಾಮಾಣಿಕತೆ, ದುರ್ಬಲರಿಗೆ ಅಭಯ, ಸಾಮಾನ್ಯನಿಗೆ ನ್ಯಾಯ ದೊರೆತೀತು. ಅಲ್ಲಿ ಬಲವೇ ನ್ಯಾಯವಾಗದು; ಶೋಷಣೆ ಮತ್ತು ವಂಚನೆಗೆ ಪ್ರೋತ್ಸಾಹವಿರದು. ಆ ಸಮಾಜದಲ್ಲಿ ಅನ್ಯಾಯಾರ್ಜಿತ ಧನದ ಹಂಬಲವಿರದು; ವಂಚಕ–ಶೋಷಕರ ಸೆಳೆತವೂ ಇರದು. ಮನುಷ್ಯನನ್ನು ಪಶುತನದಿಂದ ಮೇಲೆತ್ತಿ ಮಾನವನನ್ನಾಗಿ ಮಾಡಿ ಸ್ಥಿರ ಸಂಸ್ಕೃತಿಯನ್ನು ರೂಪಿಸಿ ಊರ್ಧ್ವಗತಿಯನ್ನು ಸಾಧಿಸೀತು. ಇದಕ್ಕೆ ಆತ್ಮಸಂಯಮ, ಆತ್ಮನಿಗ್ರಹ ಬಹಳ ಬೇಕು. ಇವೆರಡೂ ಒದಗಿ ಬಂದು ಶಾಶ್ವತ ಅರ್ಥವ್ಯವಸ್ಥೆಯಾಗುವಂತಾದೀತೆಂದು ಆಶಿಸೋಣ. ★

ಡಾ॥ ಜೆ. ಸಿ. ಕುಮಾರಪ್ಪನವರ ಕೃತಿ ಶ್ರೇಣಿಗಳು

PRINCIPLES

1. Why The Village Movement?
2. Economy Of Permanance
3. Gandhian Economic Thought
4. Gandhian Way Of Life
5. Public Finance And Our Poverty
6. Survey Of Indian Public Debt
7. Clive to Keynes
8. Organisation And Accounts Of Relief Work
9. An Overall Plan For Rural Development
10. Unitary Basis For A Non-violent Democracy
11. Currency Infaltion

TRAVELS

12. Peoples' China–What I Saw And Learnt
13. Report Of Agriculture & Cottage Industries In Japan
14. A Peep Behind The Iron Curtain
15. Lessons From Europe

SURVEYS

16. An Economic Survey Of Maltar Taluka (1930)
17. Report Of The Industrial Survey Committee Of C. P. & Berar (1939)
18. A Flan For Economic Development Of North West Frontier (1940)
19. Report Of The Congress Agrarian Reforms Committee (1946)

RELIGION

20. Practice And Precept Of Jesus
21. Christianity – Its Economy And Way Of Life

ESSAYS

22. Philosophy Of Work And Other Essays
23. Gandhian Economy And Other Essays
24. Blood Money
25. Cow In An Economy
26. Banishing War
27. Planning For The People, By The People
28. Non-violent Economy And World Peace.

ಅಶಾಶ್ವತ ಆರ್ಥಿಕ ಮೌಲ್ಯಗಳು ಹಾಗೂ ಅತಿ ತಾತ್ಕಾಲಿಕ ಆರ್ಥಿಕ ನೀತಿಗಳಿಂದಾಗಿ ನಮ್ಮ ದೇಶದ ಜನಜೀವನದಲ್ಲಿ ತುಮುಲ ಉಂಟಾಗಿರುವ ಇಂದಿನ ಪರಿಸ್ಥಿತಿಯಲ್ಲಿ "ಶಾಶ್ವತ ಅರ್ಥಶಾಸ್ತ್ರ" ಒಂದು ನೆಲೆ ದೊರಕಿಸಿಕೊಡಲು ಪ್ರಯತ್ನಿಸುತ್ತದೆ. ಬದಲಾವಣೆಯನ್ನು ಕುರಿತು ಎಷ್ಟೇ ಮಾತನಾಡಿದರೂ, ಎಷ್ಟೇ ವಿವಿಧ ಬಗೆಯ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಇವೆಲ್ಲವುಗಳಿಗೆ ಆಧಾರವಾಗಿ ಶಾಶ್ವತವಾಗಿ ನಿಲ್ಲುವ ಕೆಲ ಮೌಲ್ಯಗಳು ಇದ್ದೇ ತೀರ ಬೇಕಾಗುತ್ತದೆ. ಅದನ್ನು ಮರೆತು ಬೇರೆ ಯಾವುದೇ ಪ್ರಕಾರದ ಆರ್ಥಿಕ ನೀತಿಯನ್ನು ರೂಪಿಸಲು ಪ್ರಯತ್ನಿಸುವುದು ಮರೆ ಮರಳುಗಾಡಿನಲ್ಲಿ ಮನೆ ಕಟ್ಟಿದಂತೆ. ಕುಮಾರಪ್ಪನವರಿಂದ ಪ್ರತಿಪಾದಿಸಲ್ಪಟ್ಟಿರುವ ಶಾಶ್ವತ ಅರ್ಥಶಾಸ್ತ್ರದ ಸೂತ್ರಗಳು ಪ್ರಕೃತಿ ನಿಯಮಗಳನ್ನು ಆಧರಿಸಿರುವಂಥವು. ಪ್ರಕೃತಿಯೊಂದಿಗೆ ಸಮರಸವಾಗುವ ರೀತಿಯಲ್ಲಿ ಆರ್ಥಿಕ ಚಟುವಟಿಕೆಗಳಿರಬೇಕು ಮತ್ತು ಪ್ರಕೃತಿಯನ್ನು ಪೋಷಿಸುವಂತಿರಬೇಕು ಎಂದು ಇಚ್ಛೆಪಡುತ್ತಾರೆ ಡಾ॥ ಕುಮಾರಪ್ಪ. ಪರಿಸರದ ರಕ್ಷಣೆಯ ಬಗ್ಗೆ ಜನಜಾಗೃತಿ ಉಂಟಾಗುತ್ತಿರುವಾಗ, ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ದೇಶದಲ್ಲಿ ಮುಕ್ತದ್ವಾರ ದೊರೆತು ದೇಶಿಯ ಉದ್ಯೋಗಗಳು ನಾಶ ಹೊಂದುವ ಪರಿಸ್ಥಿತಿ ಬಂದಿರುವಾಗ, ಸಹಜಕೃಷಿ ಮತ್ತು ಸಾವಯುವ ಕೃಷಿ ಜನಪ್ರಿಯಗೊಳ್ಳುತ್ತಿರುವಾಗ "ಶಾಶ್ವತ ಅರ್ಥಶಾಸ್ತ್ರ" ಬಹಳ ಉಪಯುಕ್ತವೂ, ಮಾರ್ಗದರ್ಶಕವೂ ಆಗಿ ಒದಗಿಬರುತ್ತದೆ.